ಸಂಡೂರಿನ ವೀರಶೈವ ಸಮುದಾಯದ ಆಚರಣೆಗಳು

(ಜಾನಪದದಲ್ಲಿ ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್) ಪದವಿಯ ಆಂಶಿಕ ಅವಶ್ಯಕತೆಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿ ಕಿರು ಪ್ರಬಂಧ)

ಸಂಶೋಧಕಿ
ಜಿ. ಹೇಮಲತ

ಮಾರ್ಗದರ್ಶಕರು
ಡಾ. ಮಂಜುನಾಥ ಬೇವಿನಕಟ್ಟಿ

ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

೨೦೦೫-೦೬

ಸಂಡೂರಿನ ವೀರಶೈವ ಸಮುದಾಯದ ಆಚರಣೆಗಳು

(ಜಾನಪದದಲ್ಲಿ ಮಾಸ್ಟರ್ ಆಫ್ ಫಿಲಾಸಫಿ (ಎಂ,ಫಿಲ್) ಪದವಿಯ ಆಂಶಿಕ ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಕಿರು ಪ್ರಬಂಧ)

ಸಂಶೋಧಕಿ

ಜಿ.ಹೇಮಲತ

ಮಾರ್ಗದರ್ಶಕರು

ಡಾ.ಮಂಜುನಾಥ ಬೇವಿನಕಟ್ಟಿ

ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೦೫-೦೬

ಕೃತಜ್ಞತೆ

ನಂದಿಹಳ್ಳಿಯ ಸ್ನಾತಕೋತ್ತರ ಕೇಂದ್ರದಲ್ಲಿ ಕನ್ನಡ ಪದವಿ ಮುಗಿಸಿಕೊಂಡ ಮೇಲೆ ನನ್ನೂರಾದ ಸಂಡೂರಿಗೆ ಹೋದೆ. ನಮ್ಮ ಸಂಡೂರಿನಲ್ಲಿ ನಡೆಯುವ ವೀರಶೈವ ಸಮುದಾಯದ ಆಚರಣೆಗಳ ಬಗ್ಗೆ ಜನಪದ ಸಂಸ್ಕೃತಿ ಎಲ್ಲವೂ ನನ್ನ ಮನಸ್ಸನ್ನು ಆಕರ್ಷಿಸಿದವು. ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್ ಮಾಡುವ ಅವಕಾಶ ದೊರೆತಾಗ ಅದಕ್ಕೊಂದು ಆಕಾರ ಪ್ರಾಪ್ತವಾಯಿತೆಂದು ಹೇಳಬೇಕು. ಈ ಪದವಿಗೆ ಅವಕಾಶ ಮಾಡಿಕೊಟ್ಟಂತ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ.ಹೆಚ್.ಜೆ.ಲಕ್ಕಪ್ಪಗೌಡ ಅವರಿಗೆ, ಕುಲಸಚಿವರಾದ ಡಾ.ಕೆ.ವಿ.ನಾರಾಯಣ ಹಾಗೂ ಅಧ್ಯಯನಾಂಗದ ನಿರ್ದೇಶಕರಾದ ಡಾ.ಕರೀಗೌಡ ಬೀಚನಹಳ್ಳಿ ಅವರಿಗೆ ನಾನು ಕೃತಜ್ಞಳಾಗಿದ್ದೇನೆ.

ಜಾನಪದ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ.ಮಂಜುನಾಥ ಬೇವಿನಕಟ್ಟಿಯವರ ಬೆಲೆಯುಳ್ಳ ಮಾರ್ಗದರ್ಶನ, ಜಾನಪದ ಅಧ್ಯಯನಗಳ ಶಿಸ್ತು ಈ ಕಿರು ಪ್ರಬಂಧದುದ್ದಕ್ಕೂ ಕೆಲಸಮಾಡಿದೆ. ಅವರ ಸೌಜನ್ಯತೆಗೆ ನನ್ನ ಕೃತಜ್ಞತೆಗಳು.

ಇದೇ ವಿಭಾಗದ ಪ್ರಾಧ್ಯಾಪಕರಾದ ಡಾ.ಸ.ಚಿ.ರಮೇಶ, ಉಪನ್ಯಾಸಕರಾದ ಡಾ.ಮೊಗಳ್ಳಿ ಗಣೇಶ್, ಡಾ.ಹೆಬ್ಬಾಲೆ ಕೆ.ನಾಗೇಶ್, ಡಾ.ಸಿ.ಟಿ.ಗುರುಪ್ರಸಾದ್ ಮತ್ತು ಡಾ.ಹರಿಶ್ಚಂದ್ರ ದಿಗ್ಸಂಗಿಕರ್ ಇವರಿಗೂ ನನ್ನ ಕೃತಜ್ಞತೆಗಳು.

ನನ್ನ ವಿದ್ಯಾಭ್ಯಾಸಕ್ಕೆ ಸದಾ ಶ್ರಮಿಸುತ್ತಿರುವ ನನ್ನ ಪ್ರೀತಿಯ ತಂದೆ ತಾಯಿಗಳಾದ ಜಿ.ಚನ್ನಬಸಪ್ಪ ಮತ್ತು ತಾಯಿ ಪ್ರಮೀಳ ಅವರಿಗೆ ಹೃತ್ಪೂರ್ವಕ ಕೃತಜ್ಞತೆಗಳು. ಹಾಗೆಯೇ ಅಣ್ಣನಾದ ಡಾ.ರವಿಶಂಕರ್ ಅವರಿಗೂ ನನ್ನ ಕೃತಜ್ಞತೆಗಳು ನನ್ನ ಪತಿಯವರಾದ ಶ್ರೀ ನಾಗರಾಜ್, ಮೆಕಾನಿಕಲ್ ಇಂಜಿನಿಯರ್, ಬೆಂಗಳೂರು ಅವರಿಗೂ ಹೃತ್ಪೂರ್ವಕ ಕೃತಜ್ಞತೆಗಳು, ನನ್ನ ಈ ಪ್ರಬಂಧಕ್ಕೆ ಸಹಾಯಮಾಡಿದ ದೊಡ್ಡಮ್ಮನವರಾದ ಶ್ರೀಮತಿ ಜಯಮ್ಮ ಹಾಗೂ ದೊಡ್ಡಪ್ಪನವರಾದ ಸ್ವತಂತ್ರ್ಯ ಹೋರಾಟಗಾರರಾದ ಸನ್ಮಾನ್ಯ ಶ್ರೀ ಎಂ.ಬಿ.ಚಂದ್ರಶೇಖರ್ ಅವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು ಹಾಗೆಯೇ ಸದಾ ನನ್ನ ಏಳಿಗೆಯನ್ನು ಬಯಸುತ್ತಿರುವ ಅಕ್ಕ ಬಾವನವರಾದ ಲತ, ಸರ್ವೇಶ್ ಅವರಿಗೆ ನನ್ನ ಕೃತಜ್ಞತೆಗಳು.

ಜಾನಪದ ಅಧ್ಯಯನದ ಹಿರಿಯ ವಿದ್ಯಾರ್ಥಿ ಶ್ರೀ ಎಸ್.ಕೊಟ್ರೇಶ್ ಅವರಿಗೆ ನನ್ನ ವಂದನೆಗಳು.

ಡಿ.ಟಿ.ಪಿ.ಮಾಡಿಕೊಟ್ಟ ಅನ್ನಪೂರ್ಣ ಎನ್.ಕಮ್ಮಾರ ಅವರಿಗೂ ನನ್ನ ವಂದನೆಗಳು. ಅಂದವಾಗಿ ಬೈಡಿಂಗ್ ಮಾಡಿಕೊಟ್ಟ ಕ್ರಿಯೇಟರ್ ಪ್ರಿಂಟರ್ಸ್, ಹೊಸಪೇಟೆ ಇವರಿಗೂ ಹೃತ್ಪೂರ್ವಕ ಕೃತಜ್ಞತೆಗಳು.

ಸಂಶೋಧಕರ ಪ್ರಮಾಣ ಪತ್ರ

ಕನ್ನಡ ವಿಶ್ವವಿದ್ಯಾಲಯದ ಜಾನಪದ ವಿಭಾಗದ ಪ್ರವಾಚಕರಾದ ಡಾ. ಮಂಜುನಾಥ ಬೇವಿನಕಟ್ಟಿ ಅವರ ಮಾರ್ಗದರ್ಶನದಲ್ಲಿ 'ಸಂಡೂರಿನ ವೀರಶೈವ ಸಮುದಾಯದ ಆಚರಣೆಗಳು' ಎಂಬ ವಿಷಯವನ್ನು ಕುರಿತು ಸಂಶೋಧನೆ ಮಾಡಿದುದರ ಫಲ ಈ ಕಿರು ಪ್ರಬಂಧ. ೨೦೦೫-೨೦೦೬ನೇ ಶೈಕ್ಷಣಿಕ ಸಾಲಿನ ಕನ್ನಡ ವಿಶ್ವವಿದ್ಯಾಲಯದ ಎಂ,ಫಿಲ್ ಪದವಿಗಾಗಿ ಸಿದ್ಧಪಡಿಸಲಾಗಿದೆ. ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಜಿ. ಹೇಮಲತ.

ಜಿ. ಹೇಮಲತ
ಸಂಶೋಧಕಿ
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ : ೧೫.೦೬.೨೦೦೬
ಸ್ಥಳ : ವಿದ್ಯಾರಣ್ಯ

ಮಾರ್ಗದರ್ಶಕರ ಪ್ರಮಾಣ ಪತ್ರ

ಜಿ.ಹೇಮಲತ ಇವರು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ **'ಸಂಡೂರಿನ ವೀರಶೈವ ಸಮುದಾಯದ ಆಚರಣೆಗಳು'** ಎಂಬ ಕಿರು ಪ್ರಬಂಧವನ್ನು ಸಿದ್ಧಪಡಿಸಿದ್ದಾರೆ. ೨೦೦೫-೨೦೦೬ನೇ ಶೈಕ್ಷಣಿಕ ಸಾಲಿನ ಎಂ,ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದಾರೆ. ಈ ಕಿರು ಪ್ರಬಂಧವನ್ನು ಭಾಗಶಃವಾಗಲಿ, ಪೂರ್ಣಗಾಗಿ ಆಗಲಿ ಬೇರಾವುದೇ ಉದ್ದೇಶ ಅಥವಾ ಯಾವುದೇ ಪದವಿಗಾಗಿ ಈ ಹಿಂದೆ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ.ಮಂಜುನಾಥ ಬೇವಿನಕಟ್ಟಿ
ಮಾರ್ಗದರ್ಶಕರು ಮತ್ತು ಪ್ರಾಧ್ಯಾಪಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ : ೧೫.೦೬.೨೦೦೬
ಸ್ಥಳ : ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ - ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಜಾನಪದ ಇಂದು ವೈಜ್ಞಾನಿಕ ಹಾಗೂ ಸಾಂಸ್ಕೃತಿಕ ನೆಲೆಗಳಲ್ಲಿ ಶಿಸ್ತಿನಿಂದ ಅಧ್ಯಯನಕ್ಕೆ ಒಳಗಾಗಿದೆ. ನಾಡಿನಾದ್ಯಂತ ಲಭ್ಯವಿರುವ ಜನಾಂಗ, ಆಚರಣೆ, ಸಂಸ್ಕೃತಿ, ಭಾಷೆಗಳನ್ನು ಕುರಿತು ಅಧ್ಯಯನವಾದಂತೆ ಒಂದು ಪ್ರದೇಶದ ವದಂತಿ ಐತಿಹ್ಯಗಳನ್ನು ಕುರಿತು ಹಲವು ನಿಟ್ಟಿನಲ್ಲಿ ಅಧ್ಯಯನ ಮಾಡುವುದರ ಮೂಲಕ ತನ್ನ ವ್ಯಾಪ್ತಿಯನ್ನು ಹಿಗ್ಗಿಸಿಕೊಂಡಿದೆ. ಹೀಗಾಗಿ ಜಾನಪದ ಅಧ್ಯಯನ ಕ್ಷೇತ್ರಕ್ಕೆ ಒಳಗಾಗದ ವಿಷಯವೇ ಇಲ್ಲ ಎನ್ನುವಷ್ಟರ ಮಟ್ಟಿಗೆ ಬೆಳೆದು ನಿಂತಿದೆ. ಆಕಾಶ-ಜಾನಪದ, ಮಳೆ-ಜಾನಪದ, ಕೃಷಿ-ಜಾನಪದ, ಉಡುಗೆ, ತೊಡುಗೆ-ಜಾನಪದ ಹಬ್ಬ-ಆಚರಣೆಗಳ ಜಾನಪದ ಎಂದಿತ್ಯಾದಿ ಶೀರ್ಷಿಕೆಗಳಲ್ಲಿ ಸಮಗ್ರ ಹಾಗೂ ಪ್ರೌಢವಾಗಿ ಅಧ್ಯಯನಗಳು ನಡೆದಿವೆ ಇದರಿಂದ ಒಂದು ಪ್ರದೇಶದ ಜಾನಪದೀಯರ ಬದುಕಿನ ವೈವಿಧ್ಯತೆಗಳನ್ನು ಗುರುತಿಸಲು ಸಾಧ್ಯವೂ ಆಗಿದೆ. ಇಷ್ಟೆಲ್ಲಾ ಅಧ್ಯಯನಗಳು ನಡೆದರೂ ಇನ್ನು ಆಗಬೇಕಾದ ಕೆಲಸ ಸಾಕಷ್ಟಿವೆ. ಅನೇಕ ಸಣ್ಣಪುಟ್ಟ ವಿಷಯಗಳು ಅಧ್ಯಯನ ಯೋಗ್ಯವಾದ ಚರಿತ್ರೆಯನ್ನು ತನ್ನ ಒಡಲಲ್ಲಿ ಇರಿಸಿಕೊಂಡಿರುತ್ತದೆ. ಅಂತಹವುಗಳಲ್ಲಿ ಸಂಡೂರಿನ ವೀರಶೈವ ಸಮುದಾಯದ ಆಚರಣೆಗಳು ಒಂದು.

ಕೇವಲ ಕಥೆ, ಗಾದೆ, ಒಗಟು, ಗೀತೆಗಳ ಮೂಲಕ ಸಂಸ್ಕೃತಿಯನ್ನು ಕಟ್ಟಿಕೊಡುವ ಪ್ರಯತ್ನಗಳನ್ನು ಮಾಡುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಜಾನಪದದ ಪ್ರತಿಯೊಂದು ಅಂಶಗಳನ್ನಿಟ್ಟುಕೊಂಡು ಅಧ್ಯಯನ ಮಾಡುತ್ತಿದ್ದಾರೆ. ಜಾನಪದವನ್ನು ಅನ್ಯಜ್ಞಾನ ಶಿಸ್ತುಗಳ ಮುಖೇನ ಅಧ್ಯಯನಕ್ಕೆ ಒಳಪಡಿಸುತ್ತಿದ್ದಾರೆ. ಅಲಕ್ಷಿತ ವಿಷಯಗಳನ್ನು ಮುನ್ನೆಲೆಗೆ ತರುತ್ತಿದ್ದಾರೆ.

ಸಂಡೂರಿನ ಬಗ್ಗೆ ಮಹಾತ್ಮ ಗಾಂಧೀಜಿಯವರು ಅದರ ಸೌಂದರ್ಯಕ್ಕೆ ಮಾರುಹೋಗಿ ಮರುಭೂಮಿಯಲ್ಲಿಯ ಒಯಾಸಿಸ್ ಎಂದು ಉದ್ಗಾರ ಮಾಡಿದ್ದಾರೆ. ಸಂಡೂರು ತಾಲೂಕು ಮಲೆಗಳಲ್ಲಿ ಹಬ್ಬಿದ್ದು ಅಲ್ಪಸ್ವಲ್ಪ ಕಾಡಿನ ಹಸಿರಿನಿಂದ ಕಂಗೊಳಿಸುತ್ತಿದೆ. ಹಲವಾರು ಪವಿತ್ರ ತೀರ್ಥಗಳಿಂದ,

ಖನಿಜ, ಜಲ, ಕೊಳ್ಳಗಳಿಂದ ತನ್ನ ಸೌಂದರ್ಯವನ್ನು ಹೆಚ್ಚಿಸಿಕೊಂಡಿದೆ. ಸಂಡೂರಿನ ಬಗ್ಗೆ ಭವ್ಯವಾದ ಪರಂಪರೆ ಮತ್ತು ಇತಿಹಾಸವಿದೆ.

ವೀರಶೈವರು ಎಂಬ ಹೆಸರಿನಿಂದ ಗುರುತಿಸುವ ಜನಾಂಗಗಳನ್ನು ಕರ್ನಾಟಕದಾದ್ಯಂತ ಇಂದು ಕಾಣಬಹುದು. ಇವರು ಕೆಲವೆಡೆ ವಿರಳವಾಗಿಯೂ ಮತ್ತು ಕೆಲವೆಡೆ ದಟ್ಟವಾಗಿಯೂ ವಾಸಿಸಿದ್ದಾರೆ. ಬಳ್ಳಾರಿ, ಮೈಸೂರು, ಶಿವಮೊಗ್ಗ, ಚಿಕ್ಕಮಂಗಳೂರು, ಚಿತ್ರದುರ್ಗ, ರಾಯಚೂರು, ಬೆಳಗಾವಿ, ಉಡುಪಿ, ದಾವಣಗೇರಿ, ಕೊಪ್ಪಳ, ಮಂಡ್ಯ, ಬೆಂಗಳೂರು ಮತ್ತು ತುಮಕೂರು ಜಿಲ್ಲೆಗಳ ಕೆಲ ಪ್ರದೇಶಗಳಲ್ಲಿ ಇವರು ದಟ್ಟವಾಗಿಯೇ ಇದ್ದಾರೆ. ಕರ್ನಾಟಕದ ವೀರಶೈವ ಜನಾಂಗದವರು ಇಂದು ತಮ್ಮ ಜೀವನ ವೃತ್ತಿಗಾಗಿ ವಿವಿಧ ಕ್ಷೇತ್ರಗಳನ್ನು ಅವಲಂಬಿಸಿದ್ದಾರೆ. ಹೆಚ್ಚಾಗಿ ಕೃಷಿಯನ್ನು ಅವಲಂಬಿಸಿದ ಭೂಮಾಲಿಕರು ಇದ್ದಾರೆ. ಆರ್ಥಿಕವಾಗಿ ತಕ್ಕಮಟ್ಟಿಗೆ ಇದ್ದಾರೆ. ಅಲ್ಲದೆ ಕೆಲವರು ಸರ್ಕಾರದ ಉನ್ನತ ವಲಯಗಳಲ್ಲಿ, ಸಿನಿಮಾ ಕ್ಷೇತ್ರಗಳಲ್ಲಿ, ವಾಣಿಜ್ಯ ಉದ್ಯಮಗಳಲ್ಲೂ ಹಾಗೂ ರಾಜಕೀಯದಲ್ಲೂ ಇಂದು ವೀರಶೈವ ಜನಾಂಗದವರನ್ನು ಕಾಣಬಹುದು.

ಬಳ್ಳಾರಿ ಜಿಲ್ಲೆಯ ಸಂಡೂರಿನಲ್ಲಿ ವಾಸಿಸುವ ವೀರಶೈವ ಸಮುದಾಯದವರನ್ನು ದೃಷ್ಟಿಯಲ್ಲಿರಿಸಿಕೊಂಡು ಪ್ರಸ್ತುತ ಅಧ್ಯಯನವನ್ನು ಮಾಡುತ್ತಿದ್ದೇನೆ. ಸಂಡೂರಿನಲ್ಲಿ ಇರುವಂತಹ ವೀರಶೈವ ಸಮುದಾಯಕ್ಕೆ ಸೇರಿರುವಂತಹ ಪಂಚಾಚಾರ್ಯ, ಸಾಧು ಲಿಂಗಾಯತ, ಬಣಜಿಗ ಶೆಟ್ರು, ಅಯ್ಯನವರು ಇವರ ಆಚರಣೆಗಳ ಬಗ್ಗೆ ಈ ಅಧ್ಯಯನ ಮಾಡಲು ಉದ್ದೇಶಿಸಲಾಗಿದೆ. ಇವರು ಇಂದು ವಿವಿಧ ವೃತ್ತಿಗಳನ್ನು ಅವಲಂಬಿಸಿದ್ದಾರೆ. ಕೃಷಿಯಲ್ಲಿ ಮತ್ತು ವ್ಯಾಪಾರ ಕ್ಷೇತ್ರದಲ್ಲಿ ಹೆಚ್ಚು ಪ್ರಬಲರಾಗಿದ್ದಾರೆ. ಇನ್ನು ಕೆಲವರು ಸರ್ಕಾರದ ವಲಯಗಳಲ್ಲೂ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ವೀರಶೈವ ಸಮುದಾಯದವರೂ ಮತ್ತು ಇತರೆ ಜನಾಂಗದವರಿಗೂ ಆಚರಣೆಗಳಲ್ಲಿ ಅನೇಕ ವ್ಯತ್ಯಾಸಗಳು ಕಂಡುಬರುತ್ತಿವೆ.

ಭಾರತದ ಸಾಂಪ್ರದಾಯಿಕ ಸಮಾಜಗಳಲ್ಲಿ ಸಮುದಾಯಗಳನ್ನು ಕಾಣುತ್ತೇವೆ. ವಿವಿಧ ಜನ, ವರ್ಗಗಳು, ಆದಿವಾಸಿಗಳು ನಾನಾ ಜಾತಿ ಸಮುದಾಯಗಳು ಮತ್ತು ಒಂದು ನಿಶ್ಚಿತ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಕೆಲವು ಸಮಾನ ನೆಲೆಗಳನ್ನು ಕೇಂದ್ರೀಕೃತಗೊಂಡ ಹಲವು ಸಮುದಾಯಗಳು ವಿಶಿಷ್ಟ ಸಾಂಸ್ಕೃತಿಕ ಸಂದರ್ಭಗಳಲ್ಲಿ ಅನೇಕ ಆಚರಣೆಗಳಲ್ಲಿ ಬದಲಾವಣೆಗಳನ್ನು ಕಾಣುತ್ತೇವೆ. ಒಂದು ಸಮುದಾಯ ತನ್ನ ಆಚರಣೆಗಳ ಚೌಕಟ್ಟಿನೊಳಗೆ ವಿಕಾಸದ ಸಾಧ್ಯಸಾಧ್ಯತೆಗೆ ಕಾರಣವಾಗಿರುತ್ತದೆ. ಇವರ ಆಚರಣೆಗಳ ವಿಧಿ-ನಿಷೇಧಗಳು ಅಗೋಚರ ನಿಯಾಮಾವಳಿಗಳು ಜಾರಿಯಲ್ಲಿದ್ದು, ಅಂತಹ

ಸಮುದಾಯದ ಚಹರೆಯನ್ನು ನಿಯಂತ್ರಿಸುತ್ತದೆ. ಇದೇ ಕಾರಣಕ್ಕಾಗಿ ಒಂದು ಜಾತಿ ಸಮುದಾಯದ ವಿಕಾಸದ ಹಾದಿಯಲ್ಲಿ ತನ್ನ ಸಾಂಸ್ಕೃತಿಕತೆಯನ್ನು ರಕ್ಷಿಸಬೇಕೆನ್ನುವ ಸ್ವಸಮರ್ಥನೆ ಅತ್ಯಂತ ಪ್ರಬಲ ಪ್ರವೃತ್ತಿಯಾಗಿಯೇ ಕಾಣುತ್ತದೆ. ಆದರೆ ಸಮುದಾಯದ ವೈಚಾರಿಕತೆಯಲ್ಲಿ ವಿಕಾಸ ಮಾತ್ರ ಇಂತಹ ನಿಲುವುಗಳನ್ನು ಸ್ಫೋಟಿಸುತ್ತಲೇ ಇರುತ್ತದೆ. ಸ್ವರಕ್ಷಣೆಯಲ್ಲಿ ಒಂದು ಜಾತಿ ಸಮುದಾಯದ ಬೌದ್ಧಿಕ ದಿಗಂತವನ್ನು ಸಂಕುಚಿತಗೊಳಿಸಲೆತ್ನಿಸುವುದು. ಅಲ್ಲೆಲ್ಲ ವೈಚಾರಿಕತೆಯ ಸಂಕುಚಿತತೆಯನ್ನು ಮೀರಿ ಸಮುದಾಯವನ್ನು ಮುನ್ನಡೆಸಬಹುದು.

ಭಾರತದ ಜಾತಿ ಸಮುದಾಯಗಳು ಇಂತಹ ಹೊಡೆತಕ್ಕೆ ಕಾಲದಿಂದ ಕಾಲಕ್ಕೆ ಬದಲಾಗುತ್ತಲೇ ಬಂದಿವೆ. ಕಾಲದ ಅನಿವಾರ್ಯದ ಫಲವಾಗಿ ಒಂದು ನಾಡಿನ ಸೈದ್ಧಾಂತಿಕ ಬೆಳವಣಿಗೆಗೆ ಇಂತಹ ಸಮುದಾಯಗಳು ಸ್ಪಂದಿಸುತ್ತಲೇ ಬಂದಿವೆ. ಅನೇಕ ಧರ್ಮಗಳಿಂದ ಮತ್ತು ಆಚರಣೆಗಳಿಂದ ತಮ್ಮ ಅಧಿಕಾರಗಳನ್ನು ಕಳೆದುಕೊಂಡು ಭಾರತದ ಸಮುದಾಯಗಳು ಅನೇಕ ಸೈದ್ಧಾಂತಿಕ ಹೋರಾಟಗಳಿಗೆ ತಮ್ಮನ್ನು ಧಾರಾಳವಾಗಿ ತೆರೆದುಕೊಂಡಿವೆ. ಈ ನಾಡಿನಲ್ಲಿ ಹುಟ್ಟಿದ ಭಕ್ತಿ ಪರಂಪರೆಯ ಪ್ರಭಾವ ಮತ್ತು ಒತ್ತಡಗಳನ್ನು ಮೀರಿ ಇಂತಹ ಸಮುದಾಯಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿವೆ. ಅಂತಹ ಸಮುದಾಯಗಳಲ್ಲಿ ವೀರಶೈವ ಸಮುದಾಯವೂ ಒಂದಾಗಿದೆ. ಕರ್ನಾಟಕದಲ್ಲಿ ಇವರ ವೃತ್ತಿಯಾದಂತಹ ವ್ಯವಸಾಯಕ್ಕೆ ವಿಶಿಷ್ಟ ಸ್ಥಾನ-ಮಾನಗಳಿವೆ. ವೀರಶೈವರ ಆರ್ಥಿಕ ಮತ್ತು ಸಂಸ್ಕೃತಿಯ ಸಮಾನತೆಯ ಜೊತೆಗೆ ಸಂಪತ್ತಿನ ಸಮಾನ ಹಂಚಿಕೆಯ ಪರವಾದ ಮಾನವೀಯ ಒಲವುಗಳನ್ನು ಇದು ಪ್ರಕಟಿಸುತ್ತದೆ.

ಈ ಸಮುದಾಯದ ಅಧ್ಯಯನವೆಂದರೆ ಒಂದು ನಾಡಿನ ಆಚರಣೆಗಳ ಅಧ್ಯಯನವೆಂದೇ ಹೇಳಬಹುದು. ಈ ಅಧ್ಯಯನ ವೀರಶೈವ ಸಮುದಾಯದ ಆಚರಣೆ ಮತ್ತು ಸಾಂಸ್ಕೃತಿಕತೆಗಳನ್ನು ಕುರಿತು ಹೆಚ್ಚು ಗಮನಕೊಡಲಾಗಿದೆ ಎಂದು ಹೇಳಬಯಸುತ್ತೇವೆ.

ಈ ಸಮುದಾಯದ ಆಚಾರ, ವಿಚಾರ, ನಂಬಿಕೆ, ಆಚರಣೆ, ರೂಢಿ ಸಂಪ್ರದಾಯ, ಧರ್ಮ, ದೇವರುಗಳು, ವಿಧಿ-ನಿಷೇಧಗಳು ದಿನ ನಿತ್ಯ ಸಮಾಜದಲ್ಲಿ ಬದಲಾಗುತ್ತಿರುವ ಆಚರಣೆಗಳು ಈ ಸಮುದಾಯದ ಮಹತ್ವದ ಹಂತಗಳಾಗಿವೆ. ಹಲವು ವಿಶಿಷ್ಟ ಅಂಶಗಳನ್ನು ಹೊಂದಿರುವ ಜನಪದರ ಸಂಸ್ಕೃತಿಯ ಅಧ್ಯಯನದ ಉದ್ದೇಶ ವೀರಶೈವರ ಆಚರಣೆಗಳನ್ನು ಗುರುತಿಸುವ ಸಲುವಾಗಿ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಒಟ್ಟಿನಲ್ಲಿ ನಮ್ಮ ಜ್ಞಾನ ಪರಂಪರೆಗೆ ಹೊಸ ಬಗೆಯ ಸೇರ್ಪಡೆ ಎನ್ನುವುದು ನನ್ನ ನಂಬಿಕೆಯಾಗಿದೆ.

ಕರ್ನಾಟಕದಲ್ಲಿ ಈ ಸಮುದಾಯದವರನ್ನು ಎಲ್ಲ ಕಡೆ ನೋಡಬಹುದು. ಆದರೆ ಸಂಡೂರಿನ ವೀರಶೈವ ಸಮುದಾಯವನ್ನು ಅನುಲಕ್ಷಿಸಿ ಈ ಅಧ್ಯಯನವನ್ನು ಮಾಡಲಾಗಿದೆ. ಒಂದು ಸಮುದಾಯದ ಜೀವನ ವಿಧಾನ, ಆಚರಣೆಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

ಈ ಅಧ್ಯಯನದಲ್ಲಿ ವೀರಶೈವ ಸಮುದಾಯದ ಆಚರಣೆಗಳ ಮಹತ್ವವನ್ನು ಹೇಳಲಾಗಿದೆ. ಪ್ರಧಾನ ಆಚರಣೆಗಳನ್ನು ನಿರಾಕರಿಸಿದ ವಸ್ತುಗಳಿಂದಲೇ ಒಂದು ಸಂಸ್ಕೃತಿಯನ್ನು ರೂಪಿಸಿಕೊಳ್ಳುವ ಲಕ್ಷಣವನ್ನು ವೀರಶೈವ ಪರಂಪರೆ ತಿಳಿಸುತ್ತದೆ. ಸಂಸ್ಕೃತಿಯ ರೂಢೀಕರಣದಲ್ಲಿ ಇದರ ತಾತ್ವಿಕ ಪ್ರಧಾನ ಧಾರೆಗಳಿಗೆ ಸವಾಲುಗಳಂತಿವೆ. ವೀರಶೈವ ಪರಂಪರೆಯಲ್ಲಿ ಈ ತರಹದ ವೈರುಧ್ಯಗಳನ್ನು ಗಂಭೀರವಾಗಿ ಪರಿಗಣಿಸುವ ಅಗತ್ಯವಿದೆ.

ಸಂಗ್ರಹಿಸಲಾದ ಮಾಹಿತಿಗಳನ್ನು ವರ್ಗೀಕರಿಸಿಕೊಂಡು ವಿಷಯ ಮಂಡನೆ ಮಾಡುವಾಗ ವಿವರಣಾತ್ಮಕವಾದ ಕ್ರಮವನ್ನು ಅನುಸರಿಸಲಾಗಿದೆ.

ಅಧ್ಯಯನದ ಆಕರಗಳು

ಪ್ರಸ್ತುತ ಅಧ್ಯಯನಕ್ಕೆ ಎರಡು ರೀತಿಯ ಆಕರಗಳನ್ನು ಪ್ರಮುಖವಾಗಿ ಬಳಸಿಕೊಳ್ಳಲಾಗಿದೆ.

೦೧. ಕ್ಷೇತ್ರಕಾರ್ಯ ಮಾಹಿತಿಗಳು.

೦೨. ಲಿಖಿತ ಆಕಾರಗಳು

೦೧. ಕ್ಷೇತ್ರ ಕಾರ್ಯ ಮಾಹಿತಿಗಳು

ಈ ಪ್ರಬಂಧಕ್ಕೆ ಬೇಕಾದ ಪ್ರಾಥಮಿಕ ಮಾಹಿತಿಗಳನ್ನು ವ್ಯಾಪಕವಾದ ಕ್ಷೇತ್ರ ಕಾರ್ಯದಿಂದ ಸಂಗ್ರಹಿಸಿಕೊಳ್ಳಲಾಗಿದೆ. ಪ್ರಬಂಧದ ವ್ಯಾಪ್ತಿಯನ್ನು ಬಳ್ಳಾರಿ ಜಿಲ್ಲೆಯ ಸಂಡೂರಿಗೆ ಸೀಮೀತಗೊಳಿಸಲಾಗಿದೆ. ಮಾಹಿತಿಗಳನ್ನು ಸಂಗ್ರಹಿಸುವಾಗ ಆದಷ್ಟು ವಿವರವಾಗಿ ಕ್ಷೇತ್ರಕಾರ್ಯದ ಎಲ್ಲ ವಿಧಿವಿಧಾನಗಳನ್ನು ಅನುಸರಿಸಿ ಸಂಗ್ರಹಿಸಲಾಗಿದೆ. ಮುಖ್ಯವಾಗಿ ಪ್ರಶ್ನಾವಳಿ, ಸಂದರ್ಶನ ಮತ್ತು ಅವಲೋಕನ ವಿಧಾನಗಳನ್ನು ಬಳಸಿ, ಕ್ಷೇತ್ರಕಾರ್ಯವನ್ನು ಮಾಡಲಾಗಿದೆ.

೦೨. ಲಿಖಿತ ಆಕರಗಳು

ಸಂಡೂರಿನ ವೀರಶೈವ ಆಚರಣೆಗೆ ಸಂಬಂಧಪಟ್ಟಂತೆ ಪೂರಕ ಮಾಹಿತಿಗಳನ್ನು ಈಗಾಲೇ ಪ್ರಕಟವಾಗಿರುವ ಕೃತಿಗಳು, ಗೆಸ್ಸೆಟಿಯರ್‌ಗಳು, ಶಾಸನಗಳು, ಇತರ ಹಳೆಯ ಕಡತಗಳಿಂದ

ಸಂಗ್ರಹಿಸಲಾಗಿದ್ದು ಪ್ರಸ್ತುತ ಪ್ರಬಂಧದ ನಿರೂಪಣೆಗೆ ಅವನ್ನು ಅಗತ್ಯವಿದ್ದಲ್ಲಿ ಬಳಸಿಕೊಳ್ಳಲಾಗಿದೆ.

ಪ್ರಸ್ತುತ ಪ್ರಬಂಧದ ಹಲವು ಆರು ಅಧ್ಯಯನಗಳಾಗಿವೆ. ಪ್ರತಿಯೊಂದು ಅಧ್ಯಯನವು ಹೆಚ್ಚಾಗಿ ಕ್ಷೇತ್ರಕಾರ್ಯದ ಮಾಹಿತಿಗಳನ್ನು ಒಳಗೊಂಡಿದ್ದು ಅದತ್ಯವಿದ್ದಲ್ಲಿ ವಿಶ್ಲೇಷಣೆಯನ್ನು ಕೈಗೊಳ್ಳಲಾಗಿದೆ. ಆದಷ್ಟು ಅಧ್ಯಯನವನ್ನು ಸಮಗ್ರವಾದ ರೀತಿಯಲ್ಲಿ ಮಾಡಲು ಪ್ರಯತ್ನಿಸಲಾಗಿದೆ. ಇದೊಂದು ಕ್ಷೇತ್ರಕಾರ್ಯ ಆಧಾರಿತ ಅಧ್ಯಯನವಾಗಿದೆ. ಈ ಕ್ಷೇತ್ರದಲ್ಲಿ ಇದೊಂದು ಮೊದಲ ಪ್ರಯತ್ನವಾಗಿದ್ದು ವಿಶ್ಲೇಷಣೆಗಿಂತ ಮಾಹಿತಿಗಳನ್ನು ದಾಖಲಿಸಲು ಹೆಚ್ಚಿನ ಆದ್ಯತೆಯನ್ನು ನೀಡಲಾಗಿದೆ.

ಅಧ್ಯಾಯ - ೨

ಸಂಡೂರು ಪರಿಚಯ

ಸಂಡೂರು ಹಲವು ಸಮುದಾಯಗಳಿಂದ ಕೂಡಿದೆ. ಈ ಸಮುದಾಯಗಳಲ್ಲಿ ವೀರಶೈವ ಸಮುದಾಯದ ಆಚರಣೆಗಳ ಬಗ್ಗೆ ಇಲ್ಲಿ ಅಧ್ಯಯನ ನಡೆಸಲಾಗಿದೆ.

ಮಹಾತ್ಮ ಗಾಂಧೀಜಿಯವರು ಸಂಡೂರನ್ನು ನೋಡಿ ಅದರ ಸೌಂದರ್ಯಕ್ಕೆ ಮಾರುಹೋಗಿ 'ಮರುಭೂಮಿಯಲ್ಲಿಯ ಒಯಾಸಿಸ್' ಎಂದು ಉದ್ಗಾರ ತೆಗೆದರು. ಸಂಡೂರು ತಾಲೂಕು ಮಲೆಗಳಲ್ಲಿ ಹಬ್ಬಿದ್ದು ಅಲ್ಪ ಸ್ವಲ್ಪ ಕಾಡಿನ ಹಸಿರಿನಿಂದ ಕಂಗೊಳಿಸುತ್ತಿದೆ. ಹಲವಾರು ಪವಿತ್ರ ತೀರ್ಥಗಳಿಂದ ಖನಿಜ, ಜಲ, ಕೊಳ್ಳಗಳಿಂದ ತನ್ನ ಸೌಂದರ್ಯವನ್ನು ಹೆಚ್ಚಿಸಿಕೊಂಡಿದೆ. 'ಸೆಪ್ಟಂಬರ್ ತಿಂಗಳಲ್ಲಿ ಸಂಡೂರನ್ನು ನೋಡಿ' ವಿದೇಶಿ ಪ್ರವಾಸಿಗನೊಬ್ಬ ಹೇಳಿದ ಮಾತಿದು. ಇಂಥ ಸೌಂದರ್ಯದ ಕಿರುನಾಡಿಗೆ ಪ್ರಾಚೀನ ಇತಿಹಾಸವಿದೆ. ಭವ್ಯ ಪರಂಪರೆಯಿದೆ.

'ಸಂಡೂರು' ಸ್ಥಳನಾಮ ವಿವೇಚನೆ

'ಸಂಡೂರು' ಸ್ಥಳನಾಮದ ಉತ್ಪತ್ತಿ ಹೇಗಾಯಿತು ಎಂಬುದರ ಬಗ್ಗೆ ಹಲವಾರು ಅಭಿಪ್ರಾಯಗಳನ್ನು ಕಾಣಬಹುದು. ಸಂಡೂರು 'ಸ್ಕಂದಪುರಿ' ಎಂಬ ಹೆಸರಿದ್ದು ಮುಂದೆ ಅದೇ 'ಸಂಡೂರು' ಆಯಿತೆಂದು ಕೆಲವರು ಹೇಳಿದರೆ, 'ಸಂದೂರು' ನಿಂದ ಸಂಡೂರಾಯಿತೆಂದು ಕೆಲವರು ಹೇಳುತ್ತಾರೆ. ಸಂದುಗಳಿಂದ ಕಿರಿದಾದ ಓಣಿಗಳಿಂದ ಸಂಡೂರು ಕೂಡಿರುವುದರಿಂದ ಈ ಊರಿಗೆ 'ಸಂದೂರು' ಎಂಬ ಹೆಸರಾಯಿತೆಂದು ಕೆಲವರು ಹೇಳುತ್ತಾರೆ. ಮತ್ತೆ ಕೆಲವರು ಈ ಊರಿಗೆ ಕಣಿವೆಗಳ ಮೂಲಕ ಪ್ರವೇಶವಿರುವುದರಿಂದ ಸಂದೂರು ಎಂಬ ಹೆಸರು ಬಂದಿದ್ದು ಬ್ರಿಟೀಷರ ಇಂಗ್ಲೀಷ್ ಭಾಷೆಯಿಂದಾಗಿ ''ಸಂಡೂರು'' ಆಯಿತೆಂದು ಹೇಳುತ್ತಾರೆ.

ಕ್ರಿ.ಶ.೧೨೦೬ರ ಶಾಸನದಲ್ಲಿ ಈ ಊರನ್ನು ಸ್ಪಷ್ಟವಾಗಿ 'ಸಂಡೂರು' ಎಂದು ಕರೆಯಲಾಗಿದೆ. ನಿಜನಿಷ್ಪತ್ತಿಯನ್ನು ಕುರಿತು ವಿವೇಚಿಸಿದಾಗ 'ಸಂಡೂರು' ಎಂಬುದು ದೇವತೆಯ ಹೆಸರಿನಿಂದಾಗಿ ಬಂದುದು. ಕುಮಾರಸ್ವಾಮಿ ದೇವಾಲಯದ ಪಕ್ಕದಲ್ಲಿರುವ ಪಾರ್ವತಿ ದೇವಾಲಯವು ಕುಮಾರಸ್ವಾಮಿ ದೇವಾಲಯಕ್ಕಿಂತಲೂ ಪ್ರಾಚೀನವಾದುದು. ಇದನ್ನು ಕ್ರಿ.ಶ.೪-೫ನೇ ಶತಮಾನದಲ್ಲಿ ಕಟ್ಟಲ್ಪಟ್ಟಿರಬೇಕು. ಈ ದೇವಾಲಯದ ಹೆಬ್ಬಾಗಿಲದ ಗೋಡೆಯ ಮೇಲಿನ ಶಾಸನದ ಅಕ್ಷರಗಳನ್ನು ಕದಂಬರ ಕಾಲದಲ್ಲಿ ಬಳಸುತ್ತಿದ್ದ ಅಕ್ಷರಗಳನ್ನು ಹೋಲುತ್ತವೆ. ಇಷ್ಟು ಪ್ರಾಚೀನವಾದ ಈ ದೇವತೆಯ ಮೂಲ ಹೆಸರು ''ಚಂಡಿ'' ಇರಬೇಕು. ಈ ದೇವಾಲಯದ ಗೋಪುರದ ಮೇಲೆ ಚಂಡಿಯ ಸವೆದ ಮೂರ್ತಿ ಸ್ಪಷ್ಟವಾಗಿ ಇಂದಿಗೂ ಎದ್ದು ಕಾಣುತ್ತದೆ. ಈ 'ಚಂಡಿ' ದೇವತೆಯಿಂದಾಗಿ ''ಸಂಡೂರು'' ಎಂಬ ಹೆಸರು ಬಂದಿದೆ. ಚಂಡಿ+ಊರು=ಚಂಡಿಯೂರು=ಚಂಡೂರು= ಸಂಡೂರು, ಇಲ್ಲಿ 'ಚ'ಕಾರ 'ಸ'ಕಾರವಾಗಿ ಚಂಡೂರು ಎಂಬುದು ಸಂಡೂರು ಆಯಿತು.

ಸಂಡೂರು ಪರಿಸರ

ಪ್ರಾಗೈತಿಹಾಸಿಕ ಕಾಲದಲ್ಲಿ ಮಾನವನ ವಾಸಸ್ಥಾನಕ್ಕೆ ಭೌಗೋಳಿಕ ಲಕ್ಷಣಗಳು ಮುಖ್ಯಕಾರಣಗಳಾಗಿದ್ದವು. ಈ ಕಾಲದಲ್ಲಿ ಮಾನವನು ನದಿ-ಹಳ್ಳಗಳ ಅಕ್ಕಪಕ್ಕದಲ್ಲಿ ಗುಡ್ಡಗಳಲ್ಲಿ ಮತ್ತು ಕಾಡುಗಳಲ್ಲಿ ವಾಸವಾಗಿದ್ದನು. ಐತಿಹಾಸಿಕ ಕಾಲದಲ್ಲಿ ಅನೇಕ ಅರಸು ಮನೆತನಗಳು ಉಗಮಗೊಂಡು, ಕಾಲ ಕ್ರಮೇಣ ಅಧಿಕಾರಕ್ಕೆ ಬಂದ ಸಾಮ್ರಾಟರು ಈ ಪ್ರದೇಶದ ಮೇಲೆ ತಮ್ಮ ಪ್ರಭುತ್ವವನ್ನು ಸ್ಥಾಪಿಸಿದರು.

ಸಂಡೂರು ಅನೇಕ ಬೆಟ್ಟಗಳಿಂದ ಕೂಡಿದ ಪ್ರದೇಶವಾಗಿದೆ. ಕೂಡ್ಲಿಗಿ, ಹಡಗಲಿ, ಹರಪನಹಳ್ಳಿ, ಗುಡಿಕೋಟೆ, ಕಂಪ್ಲಿ, ದರೋಜಿ, ಕುರುಗೋಡು, ಬಳ್ಳಾರಿ, ಮುಂತಾದ ಸ್ಥಳಗಳಲ್ಲಿ ದೊಡ್ಡ ದೊಡ್ಡ ಬೆಟ್ಟಗಳಿವೆ. ಸಂಡೂರು ಕುಮಾರಸ್ವಾಮಿ ಬೆಟ್ಟ, ರಾಮನಮಲೈ, ಮತ್ತು ಜಂಬುನಾಥಗಳಲ್ಲಿಯೂ ಎತ್ತರವಾದ ಶಿಖರಗಳನ್ನು ಹೊಂದಿದೆ. ಸಂಡೂರಿನ ಬೆಟ್ಟ ಸಾಲುಗಳಲ್ಲಿ ಪೂರ್ವಭಾಗದಲ್ಲಿ, ವಾಯುವ್ಯದಿಂದ ಆಗ್ನೇಯಕ್ಕೆ ನದಿಯಿಂದ-ದರೋಜಿ ಕೆರೆಯವರೆಗೆ ಹಬ್ಬಿರುವ ಸುಗ್ಗಲ ದೇವಿ ಬೆಟ್ಟದಲ್ಲಿ ತಾಮ್ರದ ಅದಿರು ಇರುವುದರಿಂದ ತಾಮ್ರ ಪರ್ವತವೆಂದು ಕರೆಯುತ್ತಾರೆ.

ಈ ಪ್ರದೇಶದಲ್ಲಿ ಮರಳು ಮಿಶ್ರಿತ ಕೆಂಪು ಮಣ್ಣು ಮತ್ತು ಫಲವತ್ತಾದ ಜೇಡಿಮಣ್ಣು ಹರಡಿದೆ.

ಗ್ರೆನಾಯಿಟ್, ಸಿಸ್ಟ, ಸ್ಯಾಂಡಸ್ಟೋನ್, ಜಾಸ್ಪರ್ ಮುಂತಾದ ಶಿಲೆಗಳು ಹಾಗೂ ಬೆಟ್ಟಗಳಲ್ಲಿ ಕಬ್ಬಿಣ, ಬಂಗಾರ, ಮತ್ತು ತಾಮ್ರದ ಅದುರಿನಿಂದ ಕೂಡಿದ ಶಿಲೆಗಳಿವೆ. ಸಂಡೂರು-ಕೂಡ್ಲಿಗಿ ಪ್ರದೇಶದಲ್ಲಿ ಅರಣ್ಯ ಹೆಚ್ಚಾಗಿದ್ದು ಉಳಿದ ಭಾಗಗಳಲ್ಲಿ ಅಲ್ಲಲ್ಲಿ ಕಂಡುಬರುತ್ತದೆ.

ಸಂಡೂರಿನ ಸಮೀಪ ಹಿರೇಬೆಣಕಲ್, ಹಂಪಿ ಪ್ರದೇಶದಲ್ಲಿ ಬೃಹತ್ ಶಿಲಾ ಗೋರಿಗಳಲ್ಲಿ ಕಬ್ಬಿಣದ ಉಪಕರಣಗಳು ದೊರೆತಿವೆ. ಇಲ್ಲಿ ಹೇರಳವಾಗಿರುವ ಗವಿವರ್ಣ ಚಿತ್ರಗಳಲ್ಲಿ ಈಟಿ, ಭರ್ಚಿ, ಬಾಣ ಮುತಾದವುಗಳು ಕಂಡು ಬರುವುದರಿಂದ ಕಬ್ಬಿಣದ ಆಯುಧಗಳನ್ನು ತಯಾರಿಸುತ್ತಿದ್ದರೆಂಬುದಕ್ಕೆ ಸಾಕ್ಷಿಯಾಗಿವೆ.

ದೇವಗಿರಿಯಿಂದ-ಹಂಪಿ-ಹೊಸಪೇಟೆ, ಬಳ್ಳಾರಿವರೆಗಿನ ಪ್ರದೇಶದಲ್ಲಿ ಕಬ್ಬಿಣದ ಅದಿರು ಹೇರಳವಾಗಿದೆ.

ಸಂಡೂರು ಬಳ್ಳಾರಿಯಿಂದ ೪೮ ಕಿ.ಮೀ. ಮತ್ತು ಬೆಂಗಳೂರು ನಗರದಿಂದ ವಾಯುವ್ಯದಲ್ಲಿ ಸುಮಾರು ೩೫೪ ಕಿ.ಮೀ.ದೂರದಲ್ಲಿದೆ. ಇಲ್ಲಿ ಪುರಸಬೆ ಇದೆ. ಇದು ಈ ಹಿಂದೆ ಘೋರ್ಪಡೆ ವಂಶದವರು ಆಳುತ್ತಿದ್ದ ಸಣ್ಣ ರಾಜ್ಯವಾದ ಸಂಡೂರು ಸಂಸ್ಥಾನದ ರಾಜಧಾನಿಯಾಗಿತ್ತು. ಹೈದರ್ ಅಲಿಯು ಇಲ್ಲಿ ಒಂದು ಕೋಟೆಯನ್ನು ಕಟ್ಟಿಸಿದನು. ಇಲ್ಲಿರುವ ವಿಠೋಬ ದೇವಾಲಯದಲ್ಲಿ, ಸುಂದರ ಕೆತ್ತನೆ ಮತ್ತು ಚಾವಣಿಯಿಂದ ಕೂಡಿದ ಗರ್ಭಗುಡಿಯಿದೆ. ರಾಜನ ಅರಮನೆಯು ಬಹಳ ಅಚ್ಚುಕಟ್ಟಾಗಿ ಕಟ್ಟಲಾದ ಆಧುನಿಕ ಕಟ್ಟಡ ಊರಿಗೆ ೧೨ ಕಿ.ಮೀ ದೂರದಲ್ಲಿರುವ ಕುಮಾರಸ್ವಾಮಿಯ ದೇವಾಲಯ ಸಮೂಹ ಮತ್ತು ಅದರ ಅಕ್ಕಪಕ್ಕದಲ್ಲಿ ಪಾರ್ವತಿ ದೇವಾಲಯ ಇದೆ. ಇವು ಕೇಂದ್ರ ಸರಕಾರದ ರಕ್ಷಣೆಗೆ ಒಳಪಟ್ಟಿರುವ ಸ್ಮಾರಕಗಳು, ಇವು ಕಾಡಿನ ಇಳಿಜಾರಿನಲ್ಲಿ ಕುಮರಿಯ ಹಿಂಭಾಗದಲ್ಲಿದ್ದು ರಮಣೀಯ ನೋಟವನ್ನು ಪ್ರದರ್ಶಿಸುತ್ತವೆ. ಚಾಲುಕ್ಯ ಶೈಲಿಗೆ ಸೇರಿದ ೮ನೇ ಶ.ದ.ಸ್ಮಾರಕ ಕುಮಾರಸ್ವಾಮಿ ದೇವಾಲಯವು ಕಲ್ಯಾಣಿ ಚಾಲುಕ್ಯರ ಶೈಲಿಯಲ್ಲಿದ್ದು ೧೧ನೇ ಶತಮಾನದಲ್ಲಿ ನಿರ್ಮಿತವಾದ ದೇಗುಲ. ಈ ದೇವಾಲಯದಲ್ಲಿ ಅನೇಕ ಮಾಸ್ತಿಕಲ್ಲುಗಳು ಮತ್ತು ಶಾಸನಗಳೂ ಇದ್ದು ಇವುಗಳಲ್ಲಿ ಒಂದು ಶಾಸನ ಕ್ರಿ.ಶ. ೧೨೦೬ಕ್ಕೆ ಸೇರಿದ್ದು ಹೊಯ್ಸಳ ಇಮ್ಮಡಿ ಬಲ್ಲಾಳನ ಕಾಲದ್ದಾಗಿದೆ. ಈ ದೇವಾಲಯಕ್ಕೆ ರಾಷ್ಟ್ರಕೂಟ ಮುಮ್ಮಡಿ ಕೃಷ್ಣನು ಹಿಂದೆ ಕೊಟ್ಟಿದ್ದ ದತ್ತಿಗಳ ವಿಷಯವನ್ನು ಈ ಶಾಶನ ತಿಳಿಸಿದೆ. ರಾಮನದುರ್ಗ ಅಥವಾ ರಾಮದುರ್ಗ ಎಂಬ ಬೆಟ್ಟದ ತಾಣವು, ಸಂಡೂರಿನಿಂದ ಸುಮಾರು ೧೬ ಕಿ.ಮೀ. ವಾಯುವ್ಯದಲ್ಲಿ ಮತ್ತು ಹೊಸಪೇಟೆಯಿಂದ ಆಗ್ನೇಯದಲ್ಲಿ ೨೦ ಕಿ.ಮೀ ದೂರದಲ್ಲಿದೆ. ಇಲ್ಲಿ ಕೋಟೆಯ ಅವಶೇಷಗಳಿವೆ. ಇಲ್ಲಿರುವ ರಾಮದೇವ ದೇವಾಲಯವನ್ನು ಕುಮಾರರಾಮನು ನಿರ್ಮಿಸಿದನೆಂದು

ಹೇಳುತ್ತಾರೆ. ೨ನೇಯ ಪ್ರಪಂಚ ಯುದ್ಧದಲ್ಲಿ ಸೇನಾ ತುಕಡಿಗಳು ಇಲ್ಲಿ ತಂಗಿದ್ದವು. ಇಲ್ಲಿ ಸುಂದರವಾದ ಸೌಧಗಳು ಮತ್ತು ಮಾವಿನ ತೋಟಗಳು ಇವೆ. ಇಲ್ಲಿಯ ಬೆಟ್ಟದ ಪಶ್ಚಿಮ ತಪ್ಪಲಲ್ಲಿ ಹೇಮಟೈಟ್ ಎಂಬ ಒಳ್ಳೆಯ ಅದಿರು ಇದೆ. ಇಲ್ಲಿ ಪ್ರವಾಸಿಗಳಿಗೆ ಬೇಕಾದ ಸೌಲಭ್ಯಗಳಿವೆ. ಹಿಂದಿನ ಸಂಡೂರು ರಾಜರ ನೆನಪಿನಲ್ಲಿ ಕಟ್ಟಲಾದ ಯಶವಂತಪುರ ಎಂಬ ಸುಂದರ ನಗರವು ಸುಮಾರು ೮ ಕಿ.ಮೀ ದೂರದ ವಾಯುವ್ಯದಲ್ಲಿದೆ. ಇಲ್ಲಿ ಮ್ಯಾಂಗನೀಸ್ ಮತ್ತು ಕಬ್ಬಿಣ ಅದುರು ಕಾರ್ಖಾನೆಯ ರಿಜಿಸ್ಟರ್ಡ್ ಕಚೇರಿ ಇದೆ.

ಸಂಡೂರು ಇತಿಹಾಸ ಶಿಲಾಯುಗದ ಮಾನವನಿಂದ ಪ್ರಾರಂಭವಾಗುತ್ತದೆ. ಶಿಲಾಯುಗದ ಮಾನವನಿಗೆ ಬೇಕಾಗುತ್ತಿದ್ದ ಕುಡಿಯುವ ನೀರು ಬೇಟೆಯಾಡಲು ಪ್ರಾಣಿಗಳು ಯಥೇಚ್ಛವಾಗಿ ಸಿಗುತ್ತಿದ್ದುದರಿಂದ ಶಿಲಾಯುಗದ ಮಾನವ ಇಲ್ಲಿ ವಾಸಿಸುತ್ತಿದ್ದ. ಜೋಗದ ಗುಡ್ಡದಲ್ಲಿ ಶಿಲಾಯುಗದ ಮಾನವ ಬದುಕಿದ ಬಗ್ಗೆ ಕುರುಹುಗಳು ದೊರತಿವೆ. ಇಲ್ಲಿ ಮೂಲತಃ ವಾಸವಾಗಿದ್ದ ಜನರು, ''ದ್ರಾವಿಡ ಜನಾಂಗ'' ವೇದ ಪೂರ್ವಕಾಲದಲ್ಲಿ ಬಳಕೆಯಿದ್ದ ''ಶಿಶ್ನಾರಾಧನೆ''ಯನ್ನು ನಡೆಸುತ್ತಿದ್ದ ಜನರು ಇಲ್ಲಿ ವಾಸವಾಗಿದ್ದರು. ಶಿಶ್ನಾರಾದನೆಯನ್ನು ನಿರೂಪಿಸುವ ಚಿತ್ರವನ್ನೊಳಗೊಂಡ ಕಲ್ಲು ನಂದಿ ಹಳ್ಳಿಯಲ್ಲಿ ದೊರೆತಿದೆ. ಈ ಶಿಶ್ನಾರಾಧನೆಯ ನಂತರದ ಹಂತದ ಊರ್ಧ್ವಮುಖ ಯೋನಿಪೀಠ ರಹಿತ ಲಿಂಗಗಳು ಕುಮಾರಸ್ವಾಮಿ ದೇವಾಲಯದ ಆವರಣದಲ್ಲಿವೆ.

ಸಂಡೂರಿನ ಇತಿಹಾಸ

ಪ್ರಾಗೈತಿಹಾಸಿಕ ಕಾಲದಿಂದ ಇಲ್ಲಿಯವರೆಗೆ ಈ ಪ್ರದೇಶ ಹಲವಾರು ರಾಜಕೀಯ ಸ್ಥಿತ್ಯಂತರಗಳನ್ನು ಕಂಡಿದೆ. ಉಪಲಬ್ಧ ಆಧಾರಗಳಿಂದ ಹೇಳುವುದಾದರೆ ಸಂಡೂರಿನ ಪ್ರದೇಶ ಸಿಂಧರು ಆಳುತ್ತಿದ್ದ ಸಿಂಧವಾಡಿ ೧೦೦೦ ವಿಭಾಗಕ್ಕೆ ಒಳಪಟ್ಟಿತ್ತು. ಸಿಂಧವಾಡಿ ೧೦೦೦ ವಿಭಾಗದ ಉಪವಿಭಾಗದ ಬಲ್ಲಕುಂದೆ ೩೦೦ರ ಉಪವಿಭಾಗದ ದೊರವಡಿ ೭೦ರಲ್ಲಿಯ ಒಂದು ಚಿಕ್ಕ ಗ್ರಾಮ ಈ ಸಂಡೂರು, ದೊರವಾಡಿ ೭೦ ವಿಭಾಗದ ಮುಖ್ಯ ಪಟ್ಟಣ ಇಂದಿನ 'ದರೋಜಿ' ಗ್ರಾಮ ಮುಂದೆ ಜರಮಲಿ ಪಾಳೆಯಗಾರರಿಗೆ ಸೇರಿದ ಒಂದು ಪಟ್ಟಣವಾಗಿತ್ತು. ಅನಂತರ ಘೋರ್ಪಡೆ ವಂಶದವರು ಇದನ್ನು ವಶಪಡಿಸಿಕೊಂಡ ಮೇಲೆ ಸಂಡೂರು ಸಂಸ್ಥಾನದ ರಾಜಧಾನಿಯಾಯಿತು.

ಈ ಪ್ರದೇಶ ಕ್ರಮವಾಗಿ ಚಕ್ರವರ್ತಿಗಳಾದ ನಂದರು, ಮೌರ್ಯರು, ಗುಪ್ತರು, ಶಾತವಾಹನರು,

ಕದಂಬರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಹೊಯ್ಸಳರು ಆಳಿದರು. ವಿಜಯ ನಗರ ಸಾಮ್ರಾಜ್ಯ ಸ್ಥಾಪನೆಗೆ ಪೂರ್ವದಲ್ಲಿ ಸಂಡೂರಿಗೆ ಸಮೀಪವಿರುವ ಹೊಸಮಲೆದುರ್ಗ (ರಾಮನದುರ್ಗ, ರಾಮಗಡ)ವು ಕಂಪಿಲರಾಯ ಮತ್ತು ಆತನ ಮಗ ಕುಮಾರರಾಮನಿಗೆ ರಾಜಧಾನಿಯಾಗಿತ್ತು. ಕಂಪಿಲರಾಯ ಮತ್ತು ಕುಮಾರರಾಮನ ಇತಿಹಾಸವೇ ಒಂದು ಬೃಹದ್ಗ್ರಂಥವಾಗಿರುತ್ತದೆ. ಕುಮಾರರಾಮನು ದೆಹಲಿ ಸುಲ್ತಾನನೊಂದಿಗೆ ಹೋರಾಡುತ್ತಾ ತನ್ನ ಪ್ರಾಣವನ್ನೇ ಕೊಡುತ್ತಾನೆ. ಈ ಯುದ್ಧದಲ್ಲಿ ಕಂಪಿಲರಾಯನೂ ಮರಣಿಸಿದ್ದರಿಂದ ಕಂಪಿಲ-ರಾಯನ ರಾಜ್ಯಹಾಳಾಗಿ ಹೋಯಿತು. ಮುಂದೆ ಕ್ರಿ.ಶ.೧೩೩೬ರಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೊಂಡ ಮೇಲೆ ಸಂಡೂರಿನ ಪ್ರದೇಶವೂ ಇವರ ಆಳ್ವಿಕೆಗೆ ಒಳಪಟ್ಟಿತು.

ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೊಂಡ ಮೇಲೆ ಸಂಡೂರಿನ ಪ್ರದೇಶವೂ ಇವರ ಆಳ್ವಿಕೆಗೆ ಒಳಪಟ್ಟಿತು. ವಿಜಯನಗರ ಸಾಮ್ರಾಜ್ಯ ಪತನವಾದ ಮೇಲೆ ಬಳ್ಳಾರಿ ಜಿಲ್ಲೆಯ ಪ್ರದೇಶವೆಲ್ಲ ಪಾಳೆಯಗಾರರಲ್ಲಿ ಹಂಚಿಹೋಯಿತು. ಆಗ ಸಂಡೂರಿನ ಪ್ರದೇಶ ಜರಿಮಲೆಯ ಪಾಳೆಯಗಾರರಿಗೆ ಸೇರಿತ್ತು. ಶಿವಾಜಿಯ ಸೇನಾನಿ ಸಂತಾಜಿ ಘೋರ್ಪಡೆಯ ವಂಶಸ್ಥನಾದ ಸಿದ್ದೋಜಿರಾವ್ ಘೋರ್ಪಡೆ ಕ್ರಿ.ಶ.೧೭೨೮ರಲ್ಲಿ ಜರಮಲೆ ಪಾಳೆಯಗಾರನಿಂದ ಸಂಡೂರು ಪ್ರದೇಶವನ್ನು ವಶಪಡಿಸಿಕೊಂಡನು. ಅಂದಿನಿಂದ ಘೋರ್ಪಡೆ ವಂಶದವರ ಆಳ್ವಿಕೆ ಇಲ್ಲಿ ಪ್ರಾರಂಭವಾಯಿತು. ಕ್ರಿ.ಶ.೧೭೭೫-೭೬ರಲ್ಲಿ ಸಂಡೂರು ಹೈದರಾಲಿಯ ಆಳ್ವಕೆಗೆ ಒಳಪಟ್ಟಿತ್ತಾದರು. ೧೭೯೨ರಲ್ಲಿ ಟಿಪ್ಪು ಸುಲ್ತಾನನಿಗೂ ಮತ್ತು ಬ್ರಿಟಿಷರ ಈಸ್ಟ್ ಇಂಡಿಯಾ ಕಂಪನಿಗೂ ನಡೆದ ಒಪ್ಪಂದದಂತೆ ಸಂಡೂರಿನ ಅಧಿಕಾರ ಪುನಃ ಘೋರ್ಪಡೆಯವರಿಗೆ ಲಭ್ಯವಾಯಿತು. ಕ್ರಿ.ಶ.೧೮೧೭ರಲ್ಲಿ ಬೆಸಿಸ್ ಒಪ್ಪಂದದ ಪ್ರಕಾರ ಸಂಡೂರು ಬ್ರಿಟಿಷರ ವಶವಾಗಿದ್ದು. ಕ್ರಿ.ಶ.೧೮೧೮ರಲ್ಲಿ ಪುನಃ ಸಂಡೂರಿನ ಅಧಿಕಾರವನ್ನು ಘೋರ್ಪಡೆ ವಂಶದವರಿಗೇ ವಹಿಸಿಕೊಡಲಾಯಿತು. ೧೯೨೮ರಲ್ಲಿ ಪಟ್ಟಕ್ಕೆ ಬಂದ ಯಶವಂತರಾವ್ ಹಿಂದೂರಾವ್ ಘೋರ್ಪಡೆಯವರೆ ಸಂಡೂರು ಸಂಸ್ಥಾನದ ಕೊನೆಯ ಅರಸರು, ಆಧುನಿಕ ಶಿಕ್ಷಣವನ್ನು ಪಡೆದುಕೊಂಡಿದ್ದ ಶ್ರೀಯುತರು ತಮ್ಮ ಸಂಸ್ಥಾನದ ಶ್ರೇಯಸ್ಸಿಗೆ ಶ್ರಮಿಸಿ ಹಲವಾರು ಸುಧಾರಣಾತ್ಮಕ ಕ್ರಮಗಳನ್ನು ಕೈಗೊಂಡರು. ಪ್ರಜೆಗಳಿಂದ ಆರಿಸಲ್ಪಟ್ಟ 'ಪ್ರಜಾಮಂಡಲಿ'ಯನ್ನು ಪ್ರಥಮವಾಗಿ ಪ್ರಾರಂಭಿಸಿದ ಶ್ರೇಯಸ್ಸು ಶ್ರೀ ಯಶವಂತ್‌ರಾವ್ ಘೋರ್ಪಡೆಯವರಿಗೆ ಸಲ್ಲುತ್ತದೆ. ಮೇಲು ಕೀಳು ಎನ್ನದೆ ಎಲ್ಲ ಜಾತಿವರಿಗೆ ದೇವಾಲಯಗಳಿಗೆ ಪ್ರವೇಶ ಕಲ್ಪಿಸಿ ಶರಣ ತತ್ವವನ್ನು ಜಾರಿಗೆ ತಂದು ಮಹಾತ್ಮ ಗಾಂಧಿಯವರಿಂದ ಹೊಗಳಿಸಿಕೊಂಡ ಕೀರ್ತಿ ಇವರದಾಗಿದೆ. ಒಟ್ಟಾರೆ ಹಲವಾರು ಜನ ಕಲ್ಯಾಣ

ಕಾರ್ಯಗಳನ್ನು ಕೈಗೊಂಡು ಜನಪ್ರಿಯ ಅರಸರಾಗಿ ಮೆರೆದರು. ಭಾರತವು ಸ್ವಾತಂತ್ರ್ಯ ಪಡೆದುಕೊಂಡಾಗ ಈ ಪುಟ್ಟ ಸಂಸ್ಥಾನವೂ ಭಾರತದಲ್ಲಿ ವಿಲೀನಗೊಂಡು ಕರ್ನಾಟಕ ರಾಜ್ಯದ ಬಳ್ಳಾರಿ ಜಿಲ್ಲೆಯ ತಾಲೂಕಿನ ಮುಖ್ಯ ಸ್ಥಳವಾಗಿ ಪರಿವರ್ತಿತವಾಯಿತು.

ಈ ಸಂಡೂರಿನಲ್ಲಿ ಅನೇಕ ಜನರು ಯಶವಂತ್‌ರಾವ್ ಘೋರ್ಪಡೆಯ ನಂತರ ಎಂ.ಎಲ್.ಎ.ಗಳಾಗಿ ಬಂದಂತವರು.

೦೧. ಡಾ. ನಾಗನಗೌಡ ೧೯೫೨-೫೭ (ಹೊಸಪೇಟೆ)

೦೨. ಶ್ರೀ ರಾಯನಗೌಡ ೧೯೫೭-೫೯ (ಬಳ್ಳಾರಿ)

೦೩. ಶ್ರೀ ಎಂ.ವೈ.ಘೋರ್ಪಡೆ ೧೯೫೯-೭೪ (ಸಂಡೂರು)

೦೪. ಶ್ರೀ ವಿರೂಜಿಲಾಡ್ ೧೯೭೪-೭೬

೦೫. ಶ್ರೀ ಸಿ.ರುದ್ರಪ್ಪ ೧೯೭೬-೮೦ (ಯಶವಂತನಗರ)

೦೬. ಶ್ರೀ ಯು.ಭೂಪತಿ ೧೯೮೧-೮೫ (ತೋರಣಗಲ್ಲು)

೦೭. ಶ್ರೀ ಎಂ.ವೈ.ಘೋರ್ಪಡೆ ೧೯೮೬-೨೦೦೪ (ಸಂಡೂರು)

೦೮. ಶ್ರೀ ಸಂತೋಷ್ ಲಾಡ್ ೨೦೦೪- (ಕೃಷ್ಣನಗರ)

ಎಂ.ವೈ.ಘೋರ್ಪಡೆ

ಮುರಾರಿರಾವ್ ಯಶವಂತ್‌ರಾವ್ ಘೋರ್ಪಡೆ ಇವರು ರಾಜಮನೆತನದವರು, ಇವರು ಡಿಸೆಂಬರ್ ೭, ೧೯೩೧ ಬೆಂಗಳೂರಿನಲ್ಲಿ ಜನಿಸಿದರು. ಇವರ ಬಾಲ್ಯ ವಿಧ್ಯಾಭ್ಯಾಸ ಸಂಡೂರಿನಲ್ಲಿ ಮಾಡಿದ್ದಾರೆ. ಇವರು ಪದವಿಯನ್ನು ಬೆಂಗಳೂರಿನಲ್ಲಿ ೧೯೫೧ರಲ್ಲಿ ಮುಗಿಸಿದ್ದಾರೆ. ಇವರು ಕಾಲೇಜಿನಲ್ಲಿ ಯುನಿಯನ್ ಪ್ರೆಸಿಡೆಂಟ್‌ಆಗಿದ್ದರು. ಮತ್ತು ಒಳ್ಳೆಯ ಭಾಷಣಕಾರರು ಆಗಿದ್ದರು. ಇವರ ಎಂ.ಎ., ಯಕಾನಾಮಿಕ್ಸ್ ಕೇಮ್‌ಬ್ರಿಜ್ ವಿಶ್ವವಿದ್ಯಾನಿಲಯದಲ್ಲಿ ೧೯೫೨ರಲ್ಲಿ ಮುಗಿಸಿದರು. ಅಲ್ಲಿಯು ಸಹ (ಕೇಮ್‌ಬ್ರಿಜ್ ವಿಶ್ವವಿದ್ಯಾಲಯದಲ್ಲಿ) ಪ್ರೆಸಿಡೆಂಟ್ ಆಗಿದ್ದರು. ಇವರ ತಂದೆ ಯಶವಂತ್‌ರಾವ್, ತಾಯಿ - ಸುಶೀಲಾದೇವಿ ಘೋರ್ಪಡೆ, ಘೋರ್ಪಡೆಯ ಹೆಂಡತಿ ಹೆಸರು- ಶ್ರೀಮತಿ ವಸುಂದರರಾವ್ ಘೋರ್ಪಡೆ, ಮಕ್ಕಳು ಅಜಯ್, ಸುಜಯ್, ಕಾರ್ತಿಕ್ ಘೋರ್ಪಡೆ ಮತ್ತು ಮಗಳು ಅನುರಾಧ.

ರಾಜಕೀಯ

ಎಂ.ವೈ.ಘೋರ್ಪಡೆಯವರು ಕಾಂಗ್ರೆಸ್ ಸಂಸ್ಥೆಯನ್ನು ೧೯೫೪ರಲ್ಲಿ ಸೇರಿದರು. ಇವರು ಹಳ್ಳಿಗಳ ಉದ್ಧಾರಕ್ಕಾಗಿ ಬಹಳ ಶ್ರಮಪಟ್ಟರು. ಸಂಡೂರು ಪಟ್ಟಣ ಪಂಚಾಯಿತಿಯ ಅಧ್ಯಕ್ಷರು ಮತ್ತು ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷರಾಗಿ ೧೯೫೮ರಲ್ಲಿ ಆಯ್ಕೆ ಆಗಿದ್ದರು. ಇವರು ಎಂ.ಎಲ್.ಎ. ವಿಧಾನಸಭಾ ಸ್ಥಾನಕ್ಕೆ ಮರುಚುನಾವಣೆಯಲ್ಲಿ ೧೯೫೯ರಲ್ಲಿ ಆಯ್ಕೆಯಾದರು, ಹಾಗೂ ೧೯೬೨, ೬೭, ೭೨,ರಲ್ಲಿ ವಿಧಾನ ಸಭೆಯಲ್ಲಿ ಎಂ.ಎಲ್.ಎ.ಗೆ ಸಂಡೂರಿನಿಂದಲೇ ಆಯ್ಕೆಯಾದರು. ಇವರು ಎಸ್ಟಿಮೇಟ್ ಕಮೀಟಿ ಮತ್ತು ಪಬ್ಲಿಕ್ ಅಂಡರ್ ಟೇಕಿಂಗ್ ಕಮೀಟಿಯ ಅಧ್ಯಕ್ಷರಾಗಿದ್ದರು. ೧೯೭೨ರಿಂದ ೭೭ರ ತನಕ ಇವರು ಹಣಕಾಸಿನ ಮಂತ್ರಿಯಾಗಿದ್ದರು. ಪಂಚಾಯತ್ ರಾಜ್ಯದ ಅಧ್ಯಯನದ ಬಗ್ಗೆ ಮುಖ್ಯಸ್ಥರು ಆಗಿದ್ದರು. ರಾಷ್ಟ್ರೀಯ ಯೋಜನಾ ಸದಸ್ಯರು ಆಗಿದ್ದರು. ೧೯೬೮ರಲ್ಲಿ ವೈಲ್ಡ್ ಲೈಫ್‌ಗೆ ಸದಸ್ಯರಾಗಿದ್ದರು.

ಇವರು ರಾಯಚೂರಿನಿಂದ ಲೋಕ ಸಭಾ ಸದಸ್ಯರು ಆಗಿದ್ದರು. ನಂತರ ೧೯೮೬ ರಲ್ಲಿ ಮತ್ತೆ ಸಂಡೂರಿನಿಂದ ವಿಧಾನಸಭಾ ಸದಸ್ಯರಾಗಿ ಆಯ್ಕೆಯಾದರು. ಇವರು ರೂರಲ್ ಡೆವೆಲೆಫ್‌ಮೆಂಟ್ ಮತ್ತು ಪಂಚಾಯಿತ್ ರಾಜ್ಯ ಇನ್‌ಫರ್‌ಮೇಶನ್ ಮತ್ತು ಪಬ್ಲಿಕ್ ಸಿಟಿ ಮಂತ್ರಿಗಳಾಗಿ ೧೯೯೦ರಲ್ಲಿ ಆಯ್ಕೆಯಾದರು.

ಇವರು ಆರ್ಥಿಕಯೋಜನೆ, ವಿಧ್ಯೆ, ಕೈಗಾರಿಕೆ, ಕೃಷಿ ಇವುಗಳ ಬಗ್ಗೆ ಹಾಗೂ ಗ್ರಾಮೀಣ ಅಭಿವೃದ್ಧಿಗೆ ಹೆಚ್ಚು ಆಸಕ್ತಿ ಇಟ್ಟಿದ್ದರು. ಇವರು ಆರ್ಥಿಕ ಮತ್ತು ರಾಜಕೀಯದ ಬಗ್ಗೆ ಅನೇಕ ಪುಸ್ತಕಗಳನ್ನು ಬರೆದಿದ್ದಾರೆ. ಇವರು ''ದಿ ಸಂಡೂರ್ ಮ್ಯಾಂಗನಿಸ್ ಮತ್ತು ಐರನ್‌ವೂರ್ಸ್ ಲಿಮಿಟೆಡ್''ಗೆ ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದರು. ಛಾಯಾಚಿತ್ರಗಳನ್ನು ತೆಗೆಯುವುದು ಅವರ ಮುಖ್ಯ ಹವ್ಯಾಸವಾಗಿತ್ತು. ಇವರಿಗೆ ಬ್ರಿಟನ್‌ನಲ್ಲಿ 'ರಾಯಲ್ ಪೋಟೋಗ್ರಾಫಿಕ್ ಸೋಸೈಟಿ ಆಫ್ ಗ್ರೇಟ್ ಬ್ರಿಟ್ (F.R.P.S)' ಎಂಬ ಸಂಸ್ಥೆಯಿಂದ ''ಫೆಲೋಶಿಫ್'' ಎಂಬ ಪ್ರಶಸ್ತಿಯನ್ನು ಕೊಟ್ಟಿದ್ದಾರೆ. ೧೯೮೫ರಲ್ಲಿ ''ಒಳ್ಳೆಯ ಛಾಯಗ್ರಾಹಕರು'' ಎಂಬ ಪ್ರಶಸ್ತಿ ದೊರಕಿತು, ಇವರು ಸನ್ ಲೈಟ್ ಅಂಡ್ ಶ್ಯಡೊಸ್ ಎನ್ನುವ ಪುಸ್ತಕವನ್ನು ೧೯೮೩ರಲ್ಲಿ ಇಂಗ್ಲೆಂಡ್‌ನಲ್ಲಿ ಇಂದಿರಾಗಾಂಧಿಯ ಮೂಲಕ ಬಿಡುಗಡೆ ಮಾಡಿದ್ದರು. ೧೯೬೫ರಲ್ಲಿ ಇವರು ಕೃಷಿ ಹೈಬ್ರಿಡ್ ಜೋಳವನ್ನು ಮೊದಲಬಾರಿಗೆ ಸಂಡೂರಿನಲ್ಲಿ ಅವರ ಹೊಲದಲ್ಲಿ ಬೆಳೆದರು. ಸಂಡೂರಿನಲ್ಲಿ ಇವರು ಆರೋಗ್ಯ ಮತ್ತು ಕಲ್ಯಾಣ ಮಂಟಪವನ್ನು ಕಟ್ಟಿಸಿಕೊಟ್ಟಿದ್ದಾರೆ. ೧೯೯೧ರಲ್ಲಿ ಇವರು ೫ ನೇ ಜಿಲ್ಲಾಮಟ್ಟದ ಕನ್ನಡ ಸಾಹಿತ್ಯ ಸಮ್ಮೇಳನವನ್ನು

ಡಾ.ಹಾಮಾನಾಯಕ್ ಅಧ್ಯಕ್ಷತೆಯಲ್ಲಿ ಸಂಡೂರಿನಲ್ಲಿ ನಡೆಸಿದರು. ಮತ್ತು ಒಳ್ಳೆಯ ಉಪಾಧ್ಯಾಯರಿಗೆ ಪ್ರಶಸ್ತಿಗಳನ್ನು ಕೊಟ್ಟರು. ಜನವರಿ ೩೧, ೧೯೭೪ರಲ್ಲಿ ನಂದಿಹಳ್ಳಿಯಲ್ಲಿ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರಕ್ಕೆ ಬುನಾದಿಯನ್ನು ಹಾಕಿದರು. ಸಂಡೂರಿನಲ್ಲಿ ಕರಕುಶಲ ಕೇಂದ್ರವನ್ನು ಶುರುಮಾಡಿದರು. ೧೯೭೩ರಲ್ಲಿ ತಾರಾನಗರದ ಹತ್ತಿರ ನಾರಿಹಳ್ಳ ಡ್ಯಾಮ್‌ಅನ್ನು ಕಟ್ಟಿಸಿದರು. ಈ ನಾರಿಹಳ್ಳದಿಂದ ಸಂಡೂರಿನ ಜನತೆಗೆ ನೀರಿನ ಅನುಕೂಲ ಮಾಡಿಸಿದರು. ಇವರು ೧೯೭೩ರಲ್ಲಿ ಹಣಕಾಸು ಮಂತ್ರಿಯಾಗಿದ್ದಾಗ ವೃದ್ಧಾಪ ವೇತನವನ್ನು ತಿಂಗಳಿಗೆ ಕೊಡುತ್ತಿದ್ದರು. ಮನೆಯಿಲ್ಲದವರಿಗೆ ಮನೆಯನ್ನು ಕಟ್ಟಿಸಿ ಕೊಟ್ಟಿದ್ದಾರೆ. ಸಂಡೂರಿನಲ್ಲಿ (ಎನ್.ಆರ್.ಎಸ್) ಸಂಡೂರ್ ರೆಸಿಡೆಂಟಿಯಲ್ ಸ್ಕೂಲ್ ಶುರುಮಾಡಿದರು. ಇವರು ಕಂಚಿ ಕಾಮಕೋಟಿ ಪೀಠದ ಚಂದ್ರಶೇಖರೇಂದ್ರ ಸರಸ್ವತಿ ಸ್ವಾಮೀಜಿಯ ಭಕ್ತರಾಗಿದ್ದರು. ವಿದ್ಯಾರಣ್ಯ ವಿದ್ಯಾಪೀಠ ಸಂಸ್ಕೃತ ಪಾಠಶಾಲೆಯನ್ನು ಹೊಸಪೇಟೆಯಲ್ಲಿ ಘೋರ್ಪಡೆಯವರೇ ಪ್ರಾರಂಭಿಸಿದರು. ೨೦೦೫ರಲ್ಲಿ ರಾಜಕೀಯದಿಂದ ನಿವೃತ್ತರಾದರು. ಇವರಿಗೆ ಮೈಸೂರು ವಿಶ್ವವಿದ್ಯಾಲಯದಿಂದ ಜನವರಿ ೨೦೦೬ರಲ್ಲಿ ಡಾಕ್ಟರೇಟ್ ಪದವಿಯನ್ನು ಕೊಟ್ಟು ಗೌರವಿಸಲಾಗಿದೆ.

ಸಂತೋಷ್ ಲಾಡ್

ಸಂಡೂರಿನಲ್ಲಿ ಇಂದು ಆಡಳಿತ ನಡೆಸುವವರು ಇವರೆ. ಬಡವರಿಗೆ ಬಮ್ಮಗಟ್ಟ, ಕೃಷ್ಣನಗರ, ವಿಟ್ಲಾಪುರ, ಬಂಡ್ರಿ, ಚೂರುನೂರು, ಪಾಪಿನಾಯಕನಹಳ್ಳಿಗಳಲ್ಲಿ ಸಾಮೂಹಿಕ ವಿವಾಹ ಮಾಡಿಸಿದ್ದಾರೆ. ತಮ್ಮ ಸ್ವಂತ ಕರ್ಚಿನಿಂದ ನೆರವೇರಿಸಿದ್ದಾರೆ. ಬಡವಿದ್ಯಾರ್ಥಿಗಳಿಗೆ ಉಚಿತ ಸಹಾಯ ಮನೆಕಟ್ಟಿಕೊಳ್ಳುವವರಿಗೆ ಸಿಮೆಂಟ್, ತಗಡು, ಇನ್ನು ಹಲವಾರು ಜನ ಉಪಯೋಗಿ ಕಾರ್ಯಕ್ರಮಗಳನ್ನು ಮಾಡುತ್ತಿದ್ದಾರೆ.

ತಂದೆ-ಶಿವೂಜಿಲಾಡ್, ತಾಯಿ-ಶೈಲಜಲಾಡ್, ಹೆಂಡತಿ-ಕೀರ್ತಿ,

ಆಧುನಿಕ ಯುಗದಲ್ಲಿ ಸಂಡೂರಿನ ಪರಿಸರಕ್ಕೆ ಕಾರಣವಾಗಿರುವ ಗಣಿಗಾರಿಕೆ

ಸಂಡೂರು ಒಂದು ಸುಂದರವಾದ ಪ್ರಕೃತಿ ಮತ್ತು ದೈವದತ್ತವಾಗಿ ವ್ಯಾಪಿಸಿದ ಖನಿಜ ನಿಕ್ಷೇಪಗಳಿಂದ ಕೂಡಿದ ಪ್ರದೇಶವಾಗಿದೆ. ದಟ್ಟವಾದ ಅರಣ್ಯ ಸಂಪತ್ತನ್ನು ಹೊಂದಿದ್ದು ಅದರಲ್ಲಿ ಅನೇಕ ಬೆಲೆ

ಬಾಳುವ ಮರಗಳು , ಔಷಧಿ ಸಸ್ಯಗಳು, ಕಾಡು ಪ್ರಾಣಿಗಳು, ಜನ ನಿಕ್ಷೇಪಗಳು ಹೇರಳವಾಗಿ ದೊರಕುತ್ತವೆ. ಇವುಗಳನ್ನೆಲ್ಲಾ ಕಾಪಾಡುವಂತೆ ಕಾಣುತ್ತಿರುವ ಮತ್ತು ಸಂಡೂರು ಸುತ್ತಲಿನ ಜನತೆಯ ಆರಾಧ್ಯದೇವ ಸ್ವಾಮಿ ಮಲ್ಲೈ ಶ್ರೀ ಕುಮಾರಸ್ವಾಮಿಯು ಇಲ್ಲಿ ಅವತರಿಸಿದ್ದಾನೆ. ಸಂಡೂರಿನ ಪರಿಸರದಲ್ಲಿನ ಜನತೆ ಮತ್ತು ಇದರ ಸುತ್ತಲೂ ನೆಲೆಸಿರುವ ಪ್ರದೇಶಗಳ ಜನರು ಸುಖಃ ಸಂಪತ್ತಿನಿಂದ ಕೂಡಿ ಬಾಳುತಿದ್ದಾರೆಂದರೆ ತಪ್ಪೇನಿಲ್ಲ ಎಂದು ಹೇಳಬಹುದಾಗಿದೆ. ಇದು ಆಧುನಿಕ ಯುಗದಲ್ಲಿನ ಸಂಡೂರಿನ ಪರಿಸರದ ಒಂದು ಪಕ್ಷಿ ನೋಟವಾಗಿದೆ. ಆದರೆ ಇದರ ಅಂತರಾಳದಲ್ಲಿ ಆಧುನಿಕ ಯುಗದಲ್ಲಿನ ಪರಿಸರವನ್ನು ಇಣುಕಿ ನೋಡಿದಾಗ ಇದರ ಮುಖವಾಡವೆ ಬೇರೆ ಕಾಣಸಿಗುತ್ತದೆ.

ಇನ್ನು ಸಂಡೂರಿನ ಆಡಳಿತವನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು.

೦೧. ಅಂತಮುಖಿ ಆಡಳಿತ

೦೨. ಬಹುಮುಖಿ ಆಡಳಿತ

೦೧. ಅಂತಮುಖಿ ಆಡಳಿತ

ಸಂಡೂರಿನ ಜನರು ರಾಜಮನೆತನದ ಆಳ್ವಿಕೆಗೆ ಒಳಪಟ್ಟಿದ್ದಾರೆ. ರಾಜಮನೆತನದವರಾದ ಶ್ರೀ ಯಶವಂತ್‌ರಾವ್ ಘೋರ್ಪಡೆಯಿಂದ ಇತ್ತೀಚಿನ ಯುವ ರಾಜಕಾರಣಿ ಶ್ರೀ ಸಂತೋಷ್‌ಲಾಡ್ ಶಾಸಕರು ಇವರವರೆಗೂ ಆಳ್ವಿಕೆ ನಡೆಯುತ್ತಲೇ ಇದೆ. ನಮಗೆ ತಿಳಿದಿರುವಂತೆ ಮತ್ತು ನಾ ಕಂಡಂತೆ ಸಂಡೂರಿನ ಜನಪ್ರಿಯ ರಾಜಕಾರಣಿ ಮತ್ತು ಮಹಾರಾಜರಾದ ಕರ್ನಾಟಕ ಸರ್ಕಾರದ ಮಾಜಿ ಸಚಿವರಾದ ಎಂ.ವೈ.ಘೋರ್ಪಡೆಯು ಈ ಪ್ರದೇಶದ ಅನೇಕ ಪ್ರದೇಶಗಳ ಒಡೆಯರು. ಇವರ ಅಧೀನದಲ್ಲಿರುವ ಖನಿಜಗಳ ನಿಕ್ಷೇಪಗಳು ಸೇ.೨೦೦೦ ಹೆಕ್ಟೇರ್ ಪ್ರದೇಶ ಹೊಂದಿದ ಇವರು ನೀಡಿರುವ ಅಂದರೆ ಸರ್ಕಾರಿ ಅಧೀನಕ್ಕೆ ದಾನವಾಗಿ ಕೊಟ್ಟಂತ ಗಣಿ ಪ್ರದೇಶ ಸೇ.೨೦೦೦ ಹೆಕ್ಟೇರ್ ಇರಬಹುದು. ಇದರಲ್ಲಿ ಅನೇಕ ಶ್ರೀಮಂತ ಗಣಿ ಮಾಲೀಕರು ಗೇಣಿರೂಪದಲ್ಲಿ ಉಪಯೋಗಿಸುತ್ತಿದ್ದಾರೆ.

ಸಂಡೂರಿನ ಖನಿಜ ಅದಿರು ಗಣಿಗಳ ಉಪಯೋಗ

೦೧. ಜನರ ಜೀವನ ನಿರ್ವಹಣೆ

೦೨. ವ್ಯಾಪಾರ ಸಮೃದ್ಧಿ

೦೩. ಆರ್ಥಿಕ ಸಂಪತ್ತು

೦೪. ವಿದೇಶೀ ವ್ಯಾಪರ ಸಂಪರ್ಕ

೦೫. ರಸ್ತೆ, ಸಾರಿಗೆ, ರೈಲ್ವೆ ಸಂಪರ್ಕ

೦೬. ಶಿಕ್ಷಣ

೦೭. ಸರ್ಕಾರಿ ಬೊಕ್ಕಸಕ್ಕೆ ಆದಾಯ

೦೧. ಜನರ ಜೀವನ ನಿರ್ವಹಣೆ

ಸ್ವತಂತ್ರ ಭಾರತದ ಇಂದಿನ ಪ್ರಜೆಗಳು ಮಳೆಯನ್ನು ಆಧರಿಸಿ ವ್ಯವಸಾಯಮಾಡುವುದು ತುಂಬಾನೇ ಕಷ್ಟವಾಗಿದೆ. ಇಲ್ಲಿನ ಜನರ ಉಪ ಕಸುಬು ವ್ಯವಸಾಯವಾಗಿ ರೂಪುಗೊಂಡಿದೆ. ಏಕೆಂದರೆ ಈ ಭಾಗದಲ್ಲಿ ಹೇರಳವಾಗಿ ದೊರೆಯುತ್ತಿರುವ ಖನಿಜ ಸಂಪತ್ತು ಇಂದಿನ ವರ್ಷಗಳಲ್ಲಿ ಈ ಭಾಗದಲ್ಲಿ ಸುಮಾರು ೨ ರಿಂದ ೪ ಲಕ್ಷ ಜನರು ಖನಿಜವನ್ನು ಅವಲಂಬಿಸಿ ಸುಖಃ ಜೀವನ ನಡೆಸುತ್ತಿದ್ದಾರೆ. ಮತ್ತು ಹೊರ ಜಿಲ್ಲಾ ರಾಜ್ಯಗಳಿಂದ ಜನರು ಜೀವನ ನಿರ್ವಹಣೆಗಾಗಿ ಇಂದು ಬರುತ್ತಿದ್ದಾರೆ. ನಾವು ಇದರಿಂದ ತಿಳಿಯಬಹುದಾಗಿದೆ. ಜನರಿಗೆ ಪ್ರದೇಶ ಕಾಮಧೇನು ಕಲ್ಪವೃಕ್ಷವಾಗಿದೆ ಎಂದರೆ ತಪ್ಪಾಗಲಾರದು.

೦೨. ವ್ಯಾಪಾರ ಸಂಮೃದ್ಧಿ

ಸಂಡೂರಿನ ಎಲ್ಲಾ ಜನರು ವ್ಯಾಪಾರಿಗಳಾಗಿ ರೂಪುಗೊಂಡರೆ ಇಲ್ಲಿ ಒಂದು ಸಣ್ಣ ಅಂಗಡಿಯಿಂದ ದೊಡ್ಡ ಅಂಗಡಿಯವರೆಗೂ ಪ್ರತಿದಿನ ಸುಮಾರು ಲಕ್ಷಗಟ್ಟಲೆ ವ್ಯಾಪಾರ ನಡೆಯುತ್ತಿದೆ. ಇದರಿಂದ ಇಲ್ಲಿನ ಸುತ್ತ ಮುತ್ತಲಿನ ಜನರು ವ್ಯಾಪಾರದಲ್ಲಿ ನಿಪುಣರಾಗಿದ್ದಾರೆ.

೦೩. ವಿದೇಶಿ ವ್ಯಾಪಾರ ಸಂಬಂಧ

ಸುಂಡೂರು ತಾಲೂಕಿನ ಖನಿಜ ಕಬ್ಬಿಣದ ಅದಿರಿಗೆ ವಿದೇಶದಲ್ಲಿ ಭಾರಿ ಬೇಡಿಕೆ ಇರುವುದರಿಂದ ಇದರ ಪ್ರಮಾಣ ಗುಣಮಟ್ಟದಾಗಿರುವುದರಿಂದ ವಿದೇಶಿ ಕೈಗಾರಿಕೋದ್ಯಮದವರು ದಿನೇ ದಿನೇ

ಸಂಡೂರಿನತ್ತ ಪ್ರಯಾಣ ಬೆಳೆಸುತಿದ್ದಾರೆ. ಇದರಿಂದ ಇಲ್ಲಿನ ಉದ್ಯಮಿಗಳೊಂದಿಗೆ ಸಂಪರ್ಕ ಉತ್ತಮವಾಗಿದೆ.

೦೪. ರಸ್ತೆ, ರೈಲ್ವೆ, ಸಾರಿಗೆ ಸಂಪರ್ಕ

ಇಲ್ಲಿಯ ಗಣಿಗಾರಿಕೆಯ ವಸ್ತುಗಳು ವಿದೇಶದಲ್ಲಿ ಬಾರಿ ಬೇಡಿಕೆ ಇರುವುದರಿಂದ ಇದನ್ನು ಸಾಗಿಸಲು ರಸ್ತೆಗಳ ಮೂಲಕ ಲಾರಿಗಳನ್ನು ರೈಲುಗಳನ್ನು ಉಪಯೋಗಿಸಿ ನಂತರ ವಿದೇಶಕ್ಕೆ ಹಡಗಿನ ಮೂಲಕ ಅಧಿರುಗಳನ್ನು ಸಾಗಿಸಲಾಗುತ್ತದೆ. ಇದರಿಂದ ಮಾರ್ಗ ಮಧ್ಯದಲ್ಲಿ ಜನ ಉಪಜೀವನ ನಡೆಯುತ್ತದೆ. ಹೇಗೆಂದರೆ ಸಾರಿಗೆಯಿಂದ ಅನೇಕ ರೀತಿಯ ವ್ಯಾಪಾರಿಗಳು ತಮ್ಮ ತಮ್ಮ ಮೂಲ ಅವಶ್ಯಕ ವಸ್ತುಗಳನ್ನು ಮಾರಾಟ ಮಾಡುತ್ತಾರೆ.

೦೬. ಶಿಕ್ಷಣ

ಇಷ್ಟೆಲ್ಲಾ ವ್ಯವಹಾರವನ್ನು ಹಾಗೂ ಗಣಿಗಳಲ್ಲಿ ಅತ್ಯಾಧುನಿಕ ಯಂತ್ರಗಳನ್ನು ಚಲಾಯಿಸುವುದಕ್ಕೆ ಕೆಲಸಕ್ಕೆ ತಕ್ಕಂತೆ ಶಿಕ್ಷಣ ಪಡೆಯುವುದು ಅವಶ್ಯಕ ಆದ್ದರಿಂದಲೇ ಇಲ್ಲಿ ಅನೇಕ ಶಿಕ್ಷಣ ಸಂಸ್ಥೆಗಳು ರೂಪಗೊಂಡಿವೆ. ಮತ್ತು ಪದವಿ ಶಿಕ್ಷಣ, ಕಾಲೇಜು, ಶಾಲಾ ವಿದ್ಯಾ ಸಂಸ್ಥೆಗಳು ಸರಾಗವಾಗಿ ನಡೆಯುತ್ತಿವೆ. ಮತ್ತು ಸಂಡೂರಿನ ನಂದಿಹಳ್ಳಿಯಲ್ಲಿ ಕನ್ನಡ ಸ್ನಾತಕೋತ್ತರ ಪದವಿ ವಿದ್ಯಾಲಯವಿದೆ. ಸಂಡೂರು ಹತ್ತಿರ ಯಶವಂತನಗರದಲ್ಲಿ ಡಿಪ್ಲಮೋ ಸಂಸ್ಥೆಯೂ ಇದೆ. ಇದರಿಂದ ಹೊರ ರಾಜ್ಯ ಮತ್ತು ಜಿಲ್ಲೆಗಳಿಂದ ವಿದ್ಯಾರ್ಥಿಗಳು ಹೆಚ್ಚಿನ ಶಿಕ್ಷಣ ಪಡೆಯಲು ಬರುತ್ತಿದ್ದಾರೆ.

೦೭. ಗಣಿಗಾರಿಕೆಯಿಂದ ಸರ್ಕಾರಕ್ಕೆ ಆದಾಯ ಹೆಚ್ಚಳ:

ಇಂದು ಕರ್ನಾಟಕ ರಾಜ್ಯದಲ್ಲಿ ಅತ್ಯಧಿಕ ತೆರಿಗೆಯನ್ನು ಸಲ್ಲಿಸುವ ಸಾಲಿನಲ್ಲಿ ಸಂಡೂರು ಎರಡನೇ ಸ್ಥಾನದಲ್ಲಿದೆ. ಮೊದಲು ಬೆಂಗಳೂರು ನಗರ, ನಂತರ ಸಂಡೂರು. ಒಂದು ತಿಂಗಳಿಗೆ ಸುಮಾರು ೩೦ರಿಂದ ೩೫ ಕೋಟಿ ಇತರ ಎಲ್ಲಾ ರೀತಿಯ ತೆರಿಗೆ ಸರ್ಕಾರಕ್ಕೆ ಹೋಗುತ್ತಿದೆ. ಇದರಿಂದ ಸರ್ಕಾರದ ಆಧಾಯ ಲಾಭದಾಯಕವಾಗಿದೆ. ಎಂದು ಹೇಳಬಹುದಾಗಿದೆ.

ಗಣಿಗಾರಿಕೆಯಿಂದಾಗುವ ಪರಿಣಾಮಗಳು

೦೧. ಜನರ ಆರೋಗ್ಯಕ್ಕೆ ಹಾನಿ

೦೨. ಅರಣ್ಯ ನಾಶ

೦೩. ಭೂ ಕಬಳಿಕೆ

೦೪. ಅನಿಯಮಿತವಾಗಿ ಗಣಿಯನ್ನು ಅಗೆಯುವುದು.

೦೫. ಕಳ್ಳ ಸಾಗಣಿಕೆ

೦೬. ಸಾರಿಗೆ ಅವ್ಯವಸ್ಥೆ

೦೭. ಸರ್ಕಾರಕ್ಕೆ ವಂಚನೆ

೦೮. ಆಡಳಿತಾಧಿಕಾರಿಗಳ ವಂಚನೆ.

೦೯. ಅನಕ್ಷರತೆ

೧೦. ಬಾಲ ಕಾರ್ಮಿಕ ಪದ್ಧತಿ

೦೧. ಅನಾರೋಗ್ಯ

ಅಧಿಕ ಗಣಿಗಾರಿಕೆಯಲ್ಲಿ ಜನರು ಕೆಲಸ ಮಾಡುವುದರಿಂದ ಆ ದೂಳಿನಿಂದ ಹಾಗೂ ಅಲರ್ಜಿಯಿಂದ ಅವರ ಆರೋಗ್ಯ ಕ್ಷೀಣಿಸುತ್ತಿದೆ. ಆದರೆ ಅವರ ಕೈಯಲ್ಲಿ ಅಧಿಕ ಹಣ ದೊರೆಯುವುದರಿಂದ ಅನೇಕ ದುಶ್ಚಟಗಳಿಗೆ ಬಲಿಯಾಗುತ್ತಾರೆ. ಕುಡಿತ, ಲೈಂಗಿಕ ಚಟುವಟಿಕೆ, ಅನೈತಿಕತೆ ಸ್ವಚ್ಛತೆ ಇಲ್ಲದೆ ಆಹಾರ ಸೇವನೆ, ಶುದ್ಧವಾದ ಗಾಳಿ ಇಲ್ಲದರಿಂದ ಇವರ ಆರೋಗ್ಯ ಕೆಡಲು ಕಾರಣವಾಗುತ್ತದೆ.

೦೨. ಅರಣ್ಯ ನಾಶ

ಅರಣ್ಯದಲ್ಲಿರುವ ಖನಿಜಾಂಶಗಳನ್ನು ಅಂದರೆ ಅದಿರನ್ನು ಹೊರತೆಗೆಯುವುದಕ್ಕಾಗಿ ಸಂಡೂರಿನಲ್ಲಿ ಇರುವಂತಹ ದಟ್ಟವಾದ ಅರಣ್ಯವನ್ನು ಇಂದು ಕಡಿದು ಹಾಳುಮಾಡುತ್ತಿದ್ದಾರೆ. ಇದರಿಂದ ಸರಿಯಾಗಿ ಮಳೆ ಬಾರದೇ ಹೋಗುತ್ತದೆ. ಈ ಕಾರಣದಿಂದ ರೈತನಿಗೆ ಬೆಳೆಯೂ ಸರಿಯಾಗಿ ಬರುವುದಿಲ್ಲ. ಅಲ್ಲಿನ

ಖನಿಜ ನಿಕ್ಷೇಪಗಳನ್ನು ತೆಗೆಯುವುದಕ್ಕಾಗಿ ಸಂಡೂರಿನ ಅರಣ್ಯ ಇಂದು ಸಂಪೂರ್ಣವಾಗಿ ನಾಶವಾಗುತ್ತಾ ಬಂದಿದೆ. ಅಷ್ಟೇ ಅಲ್ಲ ಇದರಿಂದ ಗಾಂಧೀಜಿಯವರು ಹೇಳಿದಂತ ಮಾತು ಕೂಡ ಇಂದು ಮರೆತು ಹೋಗುವ ಸಂದರ್ಭ ಉಂಟಾಗಿದೆ..

೦೩. ಭೂ ಕಬಳಿಕೆ:

ಸಂಡೂರಿನಲ್ಲಿರುವ ಖನಿಜ ಸಂಪತ್ತನ್ನು ಪಡೆಯುವುದಕ್ಕಾಗಿ ಸಂಡೂರಿನ ಅನೇಕ ಜನರು ಇಂದು ಸರ್ಕಾರಿ ಅಧೀನದಲ್ಲಿರುವ ಗಣಿ ಪ್ರದೇಶವನ್ನು ಪರವಾನಿಗೆ ಇಲ್ಲದೆ ಕಬಳಿಸಿ ಉಪಯೋಗಿಸುತ್ತಾರೆ. ಇದರಿಂದ ಸರ್ಕಾರಕ್ಕೆ ವಂಚನೆಯಾಗುತ್ತಿದೆ.

೦೪. ಅನಿಯಮಿತವಾಗಿ ಗಣಿಯನ್ನು ಅಗೆಯುವುದು:

ಆಧುನಿಕ ಯುಗದಲ್ಲಿ ಇಲ್ಲಿನ ಜನರು ದಿಢೀರನೆ ಶ್ರೀಮಂತನಾಗುವುದಕ್ಕಾಗಿ ಅನೇಕ ಜನರು ಆಹಾರವನ್ನು, ದಾನ್ಯಗಳನ್ನು ಬೆಳೆಯುವ ಹೊಲಗಳಿಂದ ಖನಿಜಾಂಶವನ್ನು ಸರ್ಕಾರಿ ಪರವಾನಿಗೆ ಇಲ್ಲದೆ ಅಕ್ರಮವಾಗಿ ನಡೆಸುತ್ತಿದ್ದಾರೆ. ಇದರಿಂದ ಉತ್ತಮ ಗುಣಮಟ್ಟದ ಖನಿಜಾಂಶ ದೊರಕದೇಹೋದಾಗ ಆ ಭೂಮಿಯನ್ನು ಆಳವಾಗಿ ಅಗೆಯುವುದರಿಂದ ಎಷ್ಟೋ ಸಾವಿರ ಹೆಕ್ಟೇರ್ ಪ್ರದೇಶ ಆಹಾರ ಬೆಳೆಯಲು ಉಪಯೋಗವಿಲ್ಲದಂತಾಗಿದೆ.

೦೫. ಕಳ್ಳ ಸಾಗಾಣಿಕೆ:

ಸಂಡೂರಿನ ಸುತ್ತಲೂ ಅದಿರನ್ನು ಸಾಗಾಣಿಕೆ ಮಾಡುವುದಕ್ಕೆ ಸರ್ಕಾರ ಅನುಮತಿ ನೀಡದೆ ಇದ್ದರೂ ಕೂಡ ಅಲ್ಲಿನ ಅದಿರನ್ನು ಅಧಿಕಾರಿಗಳ ಕಣ್ಣು ತಪ್ಪಿಸಿ ಸಾಗಾಣಿಕೆಯನ್ನು ಮಾಡುತ್ತಿದ್ದಾರೆ. ಇದು ಕಾನೂನಿಗೆ ಬಾಹಿರವಾದರೂ ಇಂತಹ ಕೆಲಸ ಮಾಡುತ್ತಾ ಇದ್ದಾರೆ. ಸಣ್ಣ ಪುಟ್ಟ ಶ್ರೀಮಂತರು ಲಾರಿ ಮಾಲಿಕರು ಮತ್ತು ಯುವಕರು ಅದಿರನ್ನು ಕಳ್ಳತನ ಮಾಡಿ ರಾತ್ರಿಯ ವೇಳೆಯಲ್ಲಿ ಬೇರೆಯವರಿಗೆ ಅರಣ್ಯಾಧಿಕಾರಿಗಳ ಕಣ್ಣು ತಪ್ಪಿಸಿ ತಮಗಿಷ್ಟ ಬಂದ ದರದಲ್ಲಿ ಮಾರಟ ಮಾಡುತ್ತಿದ್ದಾರೆ. ಅರಣ್ಯ ಪರವಾನಿಗೆಯಿಂದ ಹಿಡಿದು ಸರ್ಕಾರಕ್ಕೆ ತೆರಿಗೆಯವರೆಗೂ ವಂಚಿಸುತ್ತಾರೆ.

೦೬. ಸಾರಿಗೆ ಅವ್ಯವಸ್ಥೆ :

ಇಂದು ಅದಿರನ್ನು ಸಂಡೂರಿನ ಪ್ರದೇಶದಿಂದ ಕಾರ್ಖಾನೆಗಳಿಗೆ ಮತ್ತು ಹೊರ ಜಿಲ್ಲೆಗಳಿಗೆ ಮಿತಿಯಿಲ್ಲದೆ ಸಾಗಾಣಿಕೆಯನ್ನು ಮಾಡುವುದರಿಂದ ಹಾಗೂ ಲಾರಿಯ ತೂಕಕ್ಕಿಂತ ಹೆಚ್ಚಾಗಿ ತುಂಬುವುದರಿಂದ ಇಂದು ಇಲ್ಲಿನ ಸುತ್ತ ಮುತ್ತಲಿನ ರಸ್ತೆ ಹಾಳಾಗಿ ಹೋಗಿದೆ. ರಸ್ತೆಯ ಮಧ್ಯದಲ್ಲಿ ಅನೇಕ ಗುಂಡಿಗಳು ಬಿದ್ದಿವೆ. ಇದರಿಂದ ಸಾರ್ವಜನಿಕರಿಗೆ ಅನೇಕ ತೊಂದರೆಯಾಗುತ್ತಿದೆ. ಹಾಗೂ ರಸ್ತೆಯಲ್ಲಿ ಅಪಘಾತಗಳು ಉಂಟಾಗಲೂ ಕಾರಣ ಎನ್ನಬಹುದು.

೦೭. ತೆರಿಗೆಯ ವಂಚನೆ:

ಅಕ್ರಮ ಗಣಿಗಾರಿಕೆಯಿಂದ ಸರ್ಕಾರಕ್ಕೆ ಸಲ್ಲಬೇಕಾದ ತೆರಿಗೆಯನ್ನು ಅನೇಕ ಗಣಿ ಉದ್ಯಮಿಗಳು ವಂಚಿಸುತ್ತಿದ್ದಾರೆ. ಆದರೆ ಇಂದು ವಿಧಾನ ಸಭೆಯಲ್ಲಿ ದಿನೇ ಕಲಾಪಗಳು ಹೆಚ್ಚುತಿದ್ದು ಇಂದು ಸರ್ಕಾರದವರು ಅನೇಕ ಕ್ರಮಗಳನ್ನು ತೆಗೆದು ಕೊಳ್ಳುತ್ತಿದ್ದಾರೆ.

ಅಧಿಕಾರಿಗಳ ದೌರ್ಜನ್ಯ:

ಸಾರ್ವಜನಿಕರಿಗೆ ಮತ್ತು ಕಾರ್ಮಿಕ ವರ್ಗದವರಿಗೆ ಸರ್ಕಾರಿ ಅಧಿಕಾರಿಗಳಿಂದ ಕಿರುಕುಳ ಹೆಚ್ಚುತ್ತಿವೆ. ಅಂದರೆ ಲಂಚಕ್ಕಾಗಿ ಲಾರಿ ಚಾಲಕರನ್ನು ಪೋಲೀಸರು, ಸಾರಿಗೆ ಇಲಾಖೆಯವರು ದೌರ್ಜನ್ಯ ನಡೆಸುತ್ತಿದ್ದಾರೆ.

ಅನಕ್ಷರತೆ:

ಇಂದು ಹಣದ ಆಸೆಗಾಗಿ ಹಿರಿಯರು, ತಂದೆ, ತಾಯಂದಿರು ತಮ್ಮ ಮಕ್ಕಳನ್ನು ಚಿಕ್ಕ ವಯಸ್ಸಿನಲ್ಲೇ ಕೆಲಸಕ್ಕಾಗಿ ಕಳುಹಿಸುತ್ತಿದ್ದಾರೆ. ಇಂತಹ ಮಕ್ಕಳು ತಮ್ಮ ಉಜ್ವಲವಾದ ಭವಿಷ್ಯವನ್ನು ಅವರೇ ಹಾಳು ಮಾಡಿದಂತಾಗುತ್ತದೆ. ಇಂತಹ ಮಕ್ಕಳಿಗೆ ಶಿಕ್ಷದ ಸೌಲಭ್ಯವಂತೂ ಸಿಗುವುದೇ ಇಲ್ಲ.

ಈ ರೀತಿಯಾಗಿ ಸಂಡೂರಿನ ಪ್ರಕೃತಿ ಸೌಂದರ್ಯದ ನಡುವೆ ಅನೇಕ ದುರುಪಯೋಗಗಳು ನಡೆಯುತ್ತಲೇ ಇವೆ. ಒಟ್ಟಿನಲ್ಲಿ ಸಂಡೂರಿನ ಪರಿಸರ ಹಾಳಾಗಲು ಕಾರಣ ಇಲ್ಲಿನ ಮಿತಿಮೀರಿದ

ಗಣಿಗಾರಿಗೆ. ೧೯೪೭ರ ನಂತರ ಗಾಂಧೀಜಿಯವರು ಒಮ್ಮೆ ಸಂಡೂರಿಗೆ ಬೇಟಿ ನೀಡಿದಾಗ ಇಲ್ಲಿಯ ಸೌಂದರ್ಯವನ್ನು ನೋಡಿ ಅವರು "See Sandur in September" ಎಂದು ಹೇಳಿದ್ದರು. ಅಂದು ಈ ತಿಂಗಳಲ್ಲಿ ಎಲ್ಲಾ ಗಿಡ ಮರಗಳು ಚಿಗುರು ಒಡೆದು ನಿಂತಾಗ ಅಲ್ಲಿನ ಪ್ರಕೃತಿಯನ್ನು ಕುರಿತು ಹೇಳಿದ್ದರು. ಆದರೆ ಈಗಿನ ಪರಿಸರವನ್ನು ನೋಡಿದರೆ ಅವರ ಮಾತುಗಳು ಮಾತ್ರ ನೆನಪಾಗುತ್ತದೆ. ಆದರೆ ಅಲ್ಲಿನ ಪರಿಸರವನ್ನು ಅಂದಿನಂತೆ ನೋಡಲು ಆಗುವುದಿಲ್ಲ.

ಅಧ್ಯಾಯ - ೩

ವೀರಶೈವ ಧರ್ಮದ ಪರಿಚಯ

ವೀರಶೈವ ಧರ್ಮ ಶೈವಧರ್ಮದಂತೆ ನಿಸರ್ಗ ಸಹಜವಾಗಿ ಹುಟ್ಟಿ ಬಂದಿದೆ. ಮೂಲ ಸ್ಥಾಪಕನಾರು ಎಂಬುವದನ್ನು ತಿಳಿದುಕೊಳ್ಳುವ ಗೋಜಿಗೆ ಹೋಗದೆ ಅನುಭಾವಿಗಳ ಅನುಭವದಿಂದ ಹುಟ್ಟಿದೆ ಎಂದು ಭಾವಿಸಿದರೆ ತಪ್ಪೇನಿಲ್ಲ ಬೌದ್ಧ, ಜೈನ, ಕ್ರೈಸ್ತ, ಸಿಖ್ ಮತ್ತು ಮಹ್ಮದೀಯ ಧರ್ಮಗಳ ಹಾಗೆ ಅದು ಏಕ ವ್ಯಕ್ತಿಯಿಂದ ಸ್ಥಾಪಿತವಾದ ಧರ್ಮವಲ್ಲ ಎಂಬುದರಲ್ಲಿ ಮಾತ್ರ ಎಳ್ಳಷ್ಟೂ ಸಂಶಯವಿಲ್ಲ.

ಭಾರತದ ಸಂಸ್ಕೃತಿ ಧರ್ಮದ ರೂಪ ತಳೆದು ಸಾರ್ವತ್ರಿಕ ಸತ್ವದಿಂದ ವೀರಶೈವ ಧರ್ಮದ ಉಗಮಕ್ಕೆ ಅನುವು ಮಾಡಿಕೊಟ್ಟಿದೆ. ಈ ಧರ್ಮದಲ್ಲಿ ಸಾಧಕನು ದೇವರೇ ಆಗುತ್ತಾನೆ. ಈ ಕಾರಣದಿಂದಲೇ ಪಂಚಾಚಾರ್ಯರು ಬಸವಾದಿ ಪ್ರಥಮರು, ವಿರಕ್ತರು, ಶಿವಯೋಗಿಗಳು, ಶರಣರು ಕಾಲಕಾಲಕ್ಕೆ ಈ ಧರ್ಮದಲ್ಲಿ ಜನಿಸುತ್ತಲೇ ಬಂದಿದ್ದಾರೆ.

ವೀರಶೈವ ಧರ್ಮದಲ್ಲಿ ತನ್ನ ಸ್ವಸ್ವರೂಪ ಜ್ಞಾನ ಮಾಡಿಕೊಳ್ಳುವುದಕ್ಕಾಗಿ ಇಷ್ಟಲಿಂಗ ಅರ್ಚನೆ ಮೊದಲು ಪ್ರಾರಂಭವಾಯಿತು. ಅದನ್ನು ಅರ್ಪಿಸುತ್ತಾ ಅಂತರಂಗದ ಅರಿವನ್ನು ದರ್ಶನ ಮಾಡಿಕೊಂಡು ತನ್ನಲ್ಲಿರುವ ದೇವರಂತೆ ತಾನಾಗುವ ಘನ ಉದ್ದೇಶ ಹೊಂದಿದವನೇ ಲಿಂಗವಂತನೆಂದೆನಿಸಿಕೊಂಡನು. ಅಂದರೆ ವ್ಯಕ್ತಿತ್ವದ ಆತ್ಮ ವಿಕಾಸದ ಪರಿಪೂರ್ಣತೆಯನ್ನು ಸಾಧಿಸಿಕೊಳ್ಳುವುದೇ ವೀರಶೈವ ಧರ್ಮದ ಗುರಿ. ಅದಕ್ಕೆ ವೀರಶೈವರಿಗೆ ಲಿಂಗವಂತ ಎಂದು ಹೇಳಲಾಗಿದೆ.

ಈ ವೀರಶೈವ ಧರ್ಮ ಜೀವಂತ ಪ್ರವಾಹವಿದಂತೆ, ಹರಿಯುವ ನದಿ ಎಲ್ಲಾಕಾಲಕ್ಕೂ ಎಲ್ಲಾ ಮಾರ್ಗದಲ್ಲಿಯೂ ಒಂದೇ ಸಮನಾಗಿ ಪ್ರವಹಿಸುವದು ಸಾಧ್ಯವಿಲ್ಲ. ರಭಸವಾಗಿ, ಸೌಮ್ಯವಾಗಿ, ಗುಪ್ತಗಾಮಿನಿಯಾಗಿ ಹರಿಯುತ್ತದೆ. ೧೨ನೇ ಶತಮಾನದವರೆಗೆ ಸುಪ್ತವಾಗಿ ಗುಪ್ತವಾಗಿ ಹರಿದು ಬಂದಂತೆ ಕಾಣುವ ವೀರಶೈವ ಧರ್ಮ ಬಸವಾದಿ ಪ್ರಮಥರ ಕಾಲದಲ್ಲಿ ಜನರ, ಜನರಿಂದ, ಜನರಿಗಾಗಿ ಧರ್ಮ ಎನ್ನುವ ಹೊಸರೂಪ ಧರಿಸಿ ಉಚ್ಛ್ರಾಯಸ್ಥಿತಿ ತಲುಪಿತು. ವಿಶ್ವದ ಸಕಲ ಜೀವಿಗಳಿಗೆ ಸಮತೆಯನ್ನು ಬೋಧಿಸಿ ಧರ್ಮದ ದ್ವಾರವನ್ನು ತೆಗೆದಿರಿಸಿತು. ಮುಂದೆ ಸುಮಾರು ೩೦೦ ವರ್ಷ ಸುಪ್ತವಾಗಿದ್ದ

ಧರ್ಮ ೧೫ನೇ ಶತಮಾನದ ವಿಜಯನಗರದ ಅರಸ ಪ್ರೌಢದೇವರಾಯನ ಕಾಲಕ್ಕೆ ಮತ್ತೆ ಪುನರುತ್ಥಾನ ಪಡೆಯಿತು. ಪುನಃ ನೂರೊಂದು ವಿರಕ್ತರು ಉದಯಿಸಿ ತೋಂಟದ ಶ್ರೀ ಸಿದ್ಧಲಿಂಗೇಶ್ವರರ ಮುಖಂಡತ್ವದಲ್ಲಿ ವೀರಶೈವ ಧರ್ಮವನ್ನು ತೇಜೋಜ್ವಲವಾಗಿ ಬೆಳಗಿದರು. ಅಂದಿನಿಂದ ಇಂದಿನವರೆಗೆ ಅದು ಸಮಪಾತಳಿಯಲ್ಲಿ ಪ್ರವಹಿಸುತ್ತಿದೆ ಎಂದು ಹೇಳಬಹುದು.

ಭಕ್ತಿಯನ್ನೇ ಮೂಲ ಮತ್ತು ಮಾರ್ಗ ಸೂತ್ರವನ್ನಾಗಿಸಿಕೊಂಡಿರುವ ಶೈವ ಧರ್ಮ ಬಹಳ ಪ್ರಾಚೀನವಾದುದು ಇದು ಹನ್ನೆರಡನೆಯ ಶತಮಾನದಲ್ಲಿ ಪುನಶ್ಚೇತನಗೊಂಡು ಪರಿಷ್ಕರಣೆಗೂ ಒಳಗಾಯಿತು. ಹೀಗೆ ಪರಿಷ್ಕರಣೆಗೊಂಡ ಶೈವ ಪಂಥವನ್ನು 'ವೀರ ಶೈವ ಧರ್ಮ' ಎಂದು ಕರೆಯಲಾಗುತ್ತದೆ.

ಪ್ರಾಚೀನ ಸಂಸ್ಕೃತ ಸಾಹಿತ್ಯದಿಂದ ವೀರಶೈವದ ಬಗ್ಗೆ ಮಾಹಿತಿಗಳು ಅಷ್ಟಾಗಿ ತಿಳಿದುಬಂದಿಲ್ಲ. ಅದು ಇತ್ತೀಚಿನದೆಂದು ದಾರ್ಶನಿಕರು ಅಭಿಪ್ರಾಯಪಡುತ್ತಾರೆ. ೧೨ನೇ ಶತಮಾನದ ನಂತರ ಈ ಮತ ಪ್ರವರ್ತಕರಿಂದ ಕನ್ನಡದಲ್ಲಿ ಸಾಕಷ್ಟು ಸಾಹಿತ್ಯ ರಚನೆಯಾಗಿದ್ದು ಬೆಳಕಿಗೆ ಬಂದಿದೆ. ವೀರಶೈವ ಧರ್ಮ ಅತ್ಯಂತ ಪ್ರಾಚೀನವಾದ ಧರ್ಮ ಆದರೂ ಅದನ್ನು ಆಧರಿಸಿ ರೂಪಿತವಾಗಿರುವ ಧರ್ಮಗ್ರಂಥಗಳು ದೊರೆಯದೆ ಇರುವುದರಿಂದ ನಿಗದಿತ ಕಾಲಮಾನವನ್ನು ಗೊತ್ತುಪಡಿಸುವುದು ಕಷ್ಟಕರ ಸಂಗತಿಯಾಗಿದೆ. ಬಸವಣ್ಣನವರ ಕಾಲದಲ್ಲಿ ಈ ಮತಕ್ಕೆ ಹೆಚ್ಚಿನ ಪ್ರಾಶಸ್ತ್ಯ ದೊರೆಯಿತು. ವೀರಶೈವ ಮತ್ತು ಜಗದ್ವಿಖ್ಯಾತಿಯನ್ನು ಪಡೆದು ಲೋಕತಮಾನ್ಯವಾಯಿತು.

ವೀರಶೈವ ಮತವು ಕೆಲವು ಮಹತ್ವಪೂರ್ಣ ತತ್ವಗಳು ಮಹಾಭಾರತ ಕಾಲದ ಪಾಶುಪತ ಪಂಥದ ತತ್ವಗಳನ್ನು ಹೋಲುತ್ತಿರುವಂತೆ ಕಾಣಬರುತ್ತದೆ. ಅಗ್ನಿ ಪೂಜೆ, ಪಂಚಸೂತಕ, ಜಾತೀಯ ಭಾವನೆ ಇತ್ಯಾದಿಗಳನ್ನು ವೀರಶೈವವು ನಿರಾಕರಿಸಿರುವುದು ಶಾಸನಗಳಲ್ಲಿ ಉಲ್ಲೇಖವಾಗಿರುವಂತೆ 'ಕಾಳ ಮುಖ' ಎಂಬ ಶೈವಧರ್ಮದ ಒಂದು ಶಾಖೆ ಬಸವಣ್ಣನವರಿಗಿಂತ ಹಲವು ಶತಮಾನಗಳ ಪೂರ್ವದಲ್ಲಿ ಅಸ್ತಿತ್ವದಲ್ಲಿದೆ. ಅನಂತರವೂ ಕಾಳಾ ಮುಖ ಆಚಾರ್ಯರ ಭವ್ಯ ಪರಂಪರೆ ಮತ್ತು ಅವರ ವಿದ್ವತ್ತು ಅರಸು ಮನೆತನಗಳ ಮೇಲೆ ಹಾಗೂ ಜನತೆಯ ಮೇಲೆ ಅವರು ಬೀರಿದ್ದ ಪ್ರಭಾವ ಇತ್ಯಾದಿಗಳನ್ನು ಅನೇಕ ಕನ್ನಡ ಶಾಸನಗಳು ಬಣ್ಣಿಸಿವೆ. ಅಂದಿನ ಕಾಳಾಮುಖ ಮಠಗಳು ವೀರಶೈವ ಮಠಗಳಾಗಿ ಒಂಭತ್ತನೆಯ ಶತಮಾನಕ್ಕೆ ಪೂರ್ವದಲ್ಲಿ ಪರಿವರ್ತನೆಗೊಳಲ್ಪಟ್ಟವು.

ಭರತ ಖಂಡದಲ್ಲಿ ವಿಶೇಷವಾಗಿ ಶಿವಭಕ್ತಿಯನ್ನು ಪ್ರಚಾರಕ್ಕೆ ತಂದವರು ಈ ಪೂಜ್ಯಪಾದರೇ ಆಗಿದ್ದಾರೆ. ಶ್ರೀ ಸೋಮನಾಥಾದಿ ಪಂಚಶಿವಲಿಂಗಗಳಿಂದ ದಿವ್ಯ ದೇಹಧಾರಿಗಳಾಗಿ ಅವತರಿಸಿದ ಅವರು

ಭೂಮಂಡಲದಲ್ಲಿದ್ದ ಸಮಯದಲ್ಲಿ ಶಿವಭಕ್ತಿಯ ಜಯಕಾರವು ಮೊಳಗುವುದರೊಂದಿಗೆ ಶಿವಲಿಂಗಗಳ ಸ್ಥಾಪನೆ ಮಾಡಿಸಿದರು. ಜನ ಶಿವಪೂಜಾದಿಗಳು ವೈಭವವನ್ನು ಕಂಡು ಎಲ್ಲೆಲ್ಲೂ ಶಿವನಾಮ ಮಂತ್ರ ಜನರ ಬಾಯಲ್ಲಿ ಸಪ್ತ ಸ್ವರದಂತೆ ಹೊರ ಹೊಮ್ಮಿತು.

''ವೀರಶೈವ'' ಎಂಬ ಶಬ್ದ ವೇದ, ಆಗಮಗಳಷ್ಟು ಪ್ರಾಚೀನತೆ ಪಡೆದಿದೆ. ಇದರ ಪ್ರಥಮ ಪ್ರಯೋಗವನ್ನು ಅಲ್ಲಿ ಕಾಣುತ್ತೇವೆ. ಇದು ಅನ್ವರ್ಥಕ ಹಾಗೂ ಯಥಾರ್ಥವಾದ ನಾಮವಾಗಿದೆ.

ವೀರಶೈವವೆಂದರೆ ವೀರಶಿವನಿಂದಾದ ಮತವೆಂದು, ವೀರ ರಸವುಳ್ಳ ಶಿವನಿಂದಾದ ತತ್ವವೆಂದು ಸಿದ್ಧಾಂತವೆಂದು ಅರ್ಥೈಸುತ್ತೇವೆ. ವೀರಶಿವನೆಂದರೆ, ವೀರಭದ್ರ, ಶಿವ-ಭದ್ರ ಎರಡೂ ಒಂದು ಅರ್ಥದ ಪದಗಳು. ಈ ವೀರಶೈವವನ್ನು ಮೂರು ಬಗೆಯಾಗಿ ವಿಂಗಡಿಸಬಹುದಾಗಿದೆ.

೦೧. ಅನಾದಿ ವೀರಶೈವ

೦೨. ಆದಿ ವೀರಶೈವ

೦೩. ಆಧುನಿಕ ವೀರಶೈವ

ವಿಶಾಲವೂ ಸಮನ್ವಿತವೂ ಆದ ವೀರಶೈವ ಧರ್ಮ ವೀರೇಶನಿಂದ ಮೊಳೆತು ವೀರ ಮಹೇಶ್ವರರಾದ ಶಿವಾಚಾರ್ಯರಿಂದ ಸಂರಕ್ಷಿತವಾಗಿ ಬಸವಾದಿ ಪ್ರವಂಥರಿಂದ ಬೆಳೆದು ಬಂದಿದೆಯೆಂಬುದು ಒಂದು ಅಭಿಪ್ರಾಯ.

ಚತುವರ್ಣಿಯಾದಡೇನು ಚತುರ್ವರ್ಣಾತೀತನೆ ವೀರಶೈವ? ಎಂದೂ ಕುಲದಲ್ಲಿ ಶೂದ್ರ ನಾದಡೇನು? ಮನದಲ್ಲಿ ಮಹಾದೇವ ನೆಲೆಗೊಂಡವನೇ ವೀರಶೈವನೆಂದೂ, ಗುರುಮುಖದಿಂದಾಗಲಿ ಮತ್ತಾವ ಮುಖದಿಂದಾಗಲೀ ತಿಳಿದನುಭಾವಿಯೇ ಸಂಸ್ಕಾರಿ ಆತನೇ ಪರಮ ವೀರಶೈವನೆಂದು ಸಿದ್ದರಾಮ ಹೇಳಿದ್ದಾನೆ. ಪರಧನ, ಪರಸತಿಯರನ್ನು ಮುಟ್ಟದಿರಬೇಕು, ಪರಹಿಂಸೆ ಮಾಡಬಾರದು, ದೇಹ ಹೋದರೂ ಹಿಡಿದ ಆಚಾರವನ್ನು ಬಿಡದಿರಬೇಕು. ಈ ವೀರಾಚಾರವು ನೆಲೆಗೊಳ್ಳದೆ, ವೀರವಂಶದಲ್ಲಿ ಹುಟ್ಟಿದ ಮಾತ್ರಕ್ಕೆ ವೀರಶೈವ ನಾಗುವುದಿಲ್ಲವೆಂದು ಚೆನ್ನಬಸವಣ್ಣ ಹೇಳುತ್ತಾನೆ. ಅಲ್ಲದೆ ಕಾಯಕ ಮತ್ತು ದಾಸೋಹ ಸಿದ್ಧಾಂತವನ್ನು ತನ್ನ ಬದುಕಿನಲ್ಲಿ ಅನುಷ್ಠಾನಕ್ಕೆ ತಂದು ಆದರ್ಶ ಜೀವಿಯಾದ ಅಧ್ಯಯನು ಶರೀರದ ಮೇಲೆ ಸದಾ ಲಿಂಗವನ್ನು ಧರಿಸಿ ಇಂದ್ರಿಯ, ಮನ, ಪ್ರಾಣ, ಜ್ಞಾನ, ಭಾವಗಳನ್ನು ಒಮ್ಮುಖವಾಗಿ ಸದ್ಗುರು ಕಾರುಣ್ಯವನ್ನು ಪಡೆದು ಆನಂದಿಸುತ್ತ ಅಹಂಮತೆಯನ್ನು ನಾಶಮಾಡುತ್ತಾ ಬದುಕುವುದೇ ವೀರಶೈವವೆಂದು ಅರ್ಥಪೂರ್ಣವಾಗಿ ತಮ್ಮ ಅನುಭವದ ಮಾತುಗಳನ್ನಾಡಿದ್ದಾರೆ.

ವೀರಶೈವ ಧರ್ಮವು ಜಗತ್ತಿನ ಅನೇಕ ಧರ್ಮಗಳಲ್ಲಿ ಪ್ರಾಚೀನ ಧರ್ಮವಾಗಿದ್ದು ತನ್ನದೇ ಉದಾತ್ತ ಹಾಗೂ ಉದಾರ ತತ್ವಗಳನ್ನು ಪರಂಪರೆ ಇತಿಹಾಸವನ್ನು ಹೊಂದಿದೆ. ಶಿವಾಗಮಗಳ ಉತ್ತರ ಭಾಗದಲ್ಲಿ ಅದರ ನೆಲೆಯನ್ನು ಗುರುತಿಸಬಹುದು. ಮುಖ್ಯವಾಗಿ ಕರ್ನಾಟಕದಲ್ಲಿ ರೂಪುಗೊಂಡು ಅನಂತರ ನೆರೆ-ಹೊರೆಯ ಆಂದ್ರ, ಮಹಾರಾಷ್ಟ್ರ ಮತ್ತು ತಮಿಳುನಾಡಿನ ಪ್ರದೇಶಗಳನ್ನು ವ್ಯಾಪಿಸಿಕೊಂಡಿತು. ಅನೇಕ ವಿಚಾರಗಳಲ್ಲಿ ವೈಧಿಕ ಧರ್ಮದಿಂದ ಭಿನ್ನವಾದ ವೀರಶೈವಧರ್ಮ ಕರ್ನಾಟಕದ ಜನ-ಜೀವನ, ಸಂಸ್ಕೃತಿ ಹಾಗೂ ಸಾಹಿತ್ಯದ ಮೇಲೆ ತನ್ನದೇ ಪ್ರಭಾವ ಬೀರಿತು.

೧೨ನೇ ಶತಮಾನದ ಹೊತ್ತಿಗೆ ಹೆಚ್ಚು ಪ್ರಚಾರಕ್ಕೆ ಬಂದ ಈ ಧರ್ಮವು ಪ್ರಾಚೀನವು, ಬಲಿಷ್ಠವೂ ಆಗಿತ್ತು. ಪೂರ್ವದ ಧರ್ಮಗಳು ಹಾಗೂ ಬೌದ್ಧಿಕವಾಗಿ ಹಿಂದುಳಿದ ಜನರ ನಂಬಿಕೆಯ, ಅಂಧಾಚರಣೆಗಳು, ಮೌಢ್ಯ, ಧರ್ಪ, ವರ್ಣ-ವರ್ಗ ಕಲಹ ಇವುಗಳ ವಿರುದ್ಧ ಹೋರಾಟ ನಡೆಸಿ ತನ್ನ ಅಸ್ತಿತ್ವವನ್ನು ರೂಡಿಸಿಕೊಳ್ಳುವುದು ಇದರ ಮೊದಲ ಗುರಿಯಾಯಿತು.

ವೀರಶೈವ ಧರ್ಮವು ಯಾರೂ ಆಚರಿಸಬಹುದಾದ ವಿಶ್ವಮಾನ್ಯ ತತ್ವಗಳನ್ನು ಒಳಗೊಂಡಿದೆ. ಲಿಂಗ ತತ್ತ್ವ, ಕಾಯಕ, ದಾಸೋಹ, ಪ್ರಸಾದ ತತ್ವಗಳು ಇಲ್ಲಿ ಪ್ರಮುಖವಾಗಿವೆ. ವೀರಶೈವ ಧರ್ಮಕ್ಕೆ "ಶಿವಾದ್ವೈತ ಸಿದ್ಧಾಂತ" ಷಟಸ್ಥಲ ದರ್ಶನ, ವಾಙ್ಞಾಯ ವಿಸ್ತಾರ, 'ಶಿವಯೋಗ' ಇವೆಲ್ಲವು ಇದರಲ್ಲಿ ಅಡಕವಾಗಿರುವುದರಿಂದ ಇದೊಂದು ಪರಿಪೂರ್ಣದರ್ಶನವೆನ್ನಬಹುದು. ಜಗತ್ತಿನ ಧರ್ಮಗಳಲ್ಲಿ ಬೇರಾವ ಧರ್ಮಗಳು ಕೊಡದ ಸ್ತ್ರೀ ಸಮಾನ ಸ್ಥಾನವನ್ನು ವೀರಶೈವ ಧರ್ಮಕೊಟ್ಟಿದೆ.

ಭಕ್ತಿಯನ್ನು ಇಲ್ಲಿ ಪ್ರಧಾನವಾಗಿ ಕಾಣುತ್ತೇವೆ. ದೇವನಿಗೂ ಜೀವನಿಗೂ ಇರುವ ಮಧುರ ಸಂಬಧವನ್ನು ಭಕ್ತಿ ಉಂಟು ಮಾಡುವ ಕಾರಣ ದೇವನನ್ನು ಕಾಣಲು ಭಕ್ತಿಯೇ ಸಾಧನವಾಗಿರುವ ಕಾರಣ ಇಲ್ಲಿ ಭಕ್ತಿಗೆ ಮುಖ್ಯಸ್ಥಾನ ಲೌಕಿಕ ನೆಲೆಯಲ್ಲಿ ಸದಾ ಸುಖಾಪೇಕ್ಷಿಯಾಗಿ ಅದನ್ನರಸುತ್ತಾ ವಿಹರಿಸುತ್ತಿರುವ ಮನಸ್ಸನ್ನು ಅದರ ಕ್ಷಣಿಕ ನೆಲೆಯಿಂದ ಅಕ್ಷಯ ಸುಖದೆಡೆಗೆ ತಿರುಗಿಸುವ ಮಹಾಮಂತ್ರ ಷಡಕ್ಷರ ಮಂತ್ರ ಈ ಅಕ್ಷರದ (ಓಂ ನಮಃ ಶಿವಾಯ) ಮಂತ್ರ ಶಿವನಿಗಿಂತಲೂ ಶ್ರೇಷ್ಠ.

ಸದಾಚಾರ, ಶಿವಾಚಾರ, ಲಿಂಗಾಚಾರ, ಗಣಾಚಾರ ಮತ್ತು ಭೃತ್ಯಾಚಾರ ಈ ಪಂಚಾಚರಗಳು ವೀರಶೈವ ಸಂಹಿತ ಸಂವಿಧಾನವಾಗಿದೆ. ಇವುಗಳನ್ನು ಪರಿಶೀಲಿಸಿದಲ್ಲಿ ರಾಷ್ಟ್ರೀಯ ಸಂವಿಧಾನದಂತೆ ಸಾಮೂಹಿಕವಾಗಿದೆ. ಸಾಮಾಜಿಕ ನೀತಿ-ರೀತಿ ಸಂಬಂಧಿಸಿದಂತೆ ಒಂದು ಸುವ್ಯವಸ್ಥೆಯನ್ನು ರೂಪಿಸುವ ನಿಯಮಗಳೆನ್ನಬಹುದು. ನಿರ್ಮಲವಾಗಿ ಸಾಗಲು ಹಾಗೂ ವೈಚಾರಿಕ ನೆಲೆಗಟ್ಟನ್ನು ಹೊಂದಿವೆ. ಆಚಾರವೇ ಸ್ವರ್ಗ. ಅನಾಚಾರವೇ ನರಕ. ಆಚಾರವಿಲ್ಲದ ಗುರು ಭೂತಪ್ರಾಣಿ. ಅಂತರಂಗದ ಅರಿವಿಗೆ

ಆಚಾರವೇ ಕಾಯಕ, ಹೀಗೆ ಜೀವನದಲ್ಲಿ ಪವಿತ್ರ ಪ್ರಾಮಾಣಿಕತೆಯನ್ನು ಹೇಳುತ್ತಾ ವ್ಯಕ್ತಿ ಸಮಾಜಗಳೆರಡರ ಶುದ್ಧಿ ಅಭಿವೃದ್ಧಿಯನ್ನು ಕುರಿತು ತನ್ನ ಸಿದ್ಧಾಂತವನ್ನು ಪ್ರತಿಪಾದಿಸುತ್ತದೆ. ಕೆಲವರು ಭಾವಿಸುವಂತೆ ಆಚಾರ ಕೇವಲ ಜಲನಿಷ್ಠವಲ್ಲ ಆಚಾರ ಮುಖ್ಯವಾಗಿ ಒಳ್ಳಡತೆಯಿಂದ ಕೂಡಿದ್ದಾಗಿದೆ. ಸದಾಚಾರವಿರುವಲ್ಲಿ, ಧೈರ್ಯ, ಸ್ಥೈರ್ಯಗಳಿರುತ್ತವೆ. ಮನಕ್ಕೆ ನೆಮ್ಮದಿ ದೊರೆಯುತ್ತದೆ. ಆಳಕ್ಕೆ ಹೋದಂತೆಲ್ಲ ನುಡಿಗಿಂತ ನಡೆಗೆ ಹೆಚ್ಚು ಪ್ರಾಮುಖ್ಯತೆಯನ್ನು ಕಾಣುತ್ತೇವೆ. ಹೀಗಾಗಿ ಈ ಪಂಚಾಚಾರಗಳನ್ನು ವೀರಶೈವ ಸಿದ್ಧಾಂತದ ನೀತಿ ಸೂತ್ರಗಳು (ಮಾರಲ್ ಕೋಟ್) ಸಾಮಾಜಿಕ ತತ್ವಗಳು ಎಂತಲೂ ಕರೆಯಬಹುದಾಗಿದೆ. ಧಾರ್ಮಿಕ ಭಾಗದಲ್ಲಿ ಅಷ್ಟಾವರಣಗಳಾದ ಗುರು, ಲಿಂಗ, ಜಂಗಮ, ವಿಭೂತಿ, ರುದ್ರಾಕ್ಷಿ, ಮಂತ್ರ, ಪಾದೋದಕ ಹಾಗೂ ಪ್ರಸಾದಗಳು ಸಾಧಕನಿಗೆ ರಕ್ಷಾಕವಚಗಳಂತಿವೆ. ಇವು ಕೇವಲ ಬಾಹ್ಯ ವಸ್ತುಗಳಲ್ಲ. ಅಂತರಂಗದಲ್ಲಿ ಅರಿತು ಆಚರಿಸುವ ಅರಿವಿನ ಸಂಕೇತಗಳಾಗಿವೆ. ಇವು ಆಧ್ಯಾತ್ಮಿಕ ವಿಭಾಗದಲ್ಲಿ ಭಕ್ತಸ್ಥಲ, ಮಹೇಶ್ವರಸ್ಥಲ, ಪ್ರಸಾದಿಸ್ಥಲ, ಪ್ರಾಣಲಿಂಗಸ್ಥಲ ಶರಣ ಸ್ಥಲ, ಐಕ್ಯಸ್ಥಲವೆಂಬ ಆರು ಸ್ಥಲಗಳನ್ನು ವಿಶ್ಲೇಷಿಸುತ್ತದೆ. ಭಕ್ತನಾದರೆ ತನು-ಮನದ ಮೇಲಣ ಆಸೆಯಳಿದುಳಿದಿರಬೇಕು. ಮಹೇಶ್ವರನಾದರೆ ಪರಧನ-ಪರಸತಿಯಾಸೆಯಳಿದಿರಬೇಕು. ಪ್ರಸಾದಿಯಾದರೆ ಪ್ರಸಾದವಕೊಂಡ ಕಾಯ ಅಳಿಯದುಳಿದಿರಬೇಕು. ಪ್ರಾಣಲಿಂಗಿಯಾದರೆ ಸುಖ-ದು:ಖಾದಿಗಳನ್ನೆಲ್ಲವನ್ನು ಮರೆತು ಪ್ರಾಣಲಿಂಗದಲ್ಲಿ ಸುಸ್ಥಿರನಾಗಿರಬೇಕು, ಶರಣನಾದರೆ ಸತಿಪತಿ ಭಾವಳಿದಿರಬೇಕೆಂದು ಹೇಳುತ್ತದೆ. ಹೀಗೆ ಅಷ್ಟಾವರಣವೇ ಅಂಗವಾಗಿ, ಪಂಚಾಚಾರವೇ ಪ್ರಾಣವಾಗಿ, ಷಟ್‌ಸ್ಥಲವೇ ಆತ್ಮವಾಗಿ ಸಾಧಕ ಸಿದ್ಧಿಪುರುಷನಾಗಿರಬೇಕೆಂದು ಹೇಳುತ್ತದೆ.

* ಯಾವ ಜಾತಿಯವರೇ ಆಗಿರಲಿ, ವ್ಯಕ್ತಿಯವರೇ ಆಗಿರಲಿ, ಬಯಸಿದರೆ ದೇವಾಲಯದಲ್ಲಿ ಲಿಂಗದೀಕ್ಷೆಯನ್ನು ಪಡೆದು ಶಿವಭಕ್ತರಾಗಬಹುದು. ಹೆಸರನ್ನು ಬದಲಿಸಿಕೊಳ್ಳಬಹುದು.

* ಭಕ್ತರಲ್ಲಿ ಯಾವದೇ ಅಸಮಾನತೆಯನ್ನಾಗಲಿ ಜಾತಿಭೇದವನ್ನಾಗಲಿ ಮಾಡುತ್ತಿರಲಿಲ್ಲ. ಕರ್ಮ ಪ್ರಧಾನವಾದ ನಿಲುವನ್ನು ತಿರಸ್ಕರಿಸುವುದು.

* ಶಿವನನ್ನು ಇಷ್ಟಲಿಂಗ ಹಾಗೂ ಸ್ಥಾವರಲಿಂಗ ಎರಡೂ ರೂಪದಲ್ಲಿ ಪೂಜಿಸುತ್ತಿದ್ದರು. ಕೊರಳಲ್ಲಿ ಕಟ್ಟಿಕೊಳ್ಳುತ್ತಿದ್ದ ಲಿಂಗವನ್ನು ಅಂಗೈಯಲ್ಲಿಟ್ಟು ಇಲ್ಲವೇ ಪೀಠದ ಮೇಲಿಟ್ಟು ಪೂಜಿಸುವುದು.

* ಶಿವಭಕ್ತರನ್ನು 'ಮಾಹೇಶ್ವರ'ರೆಂದು ಭಾವಿಸುವುದು ಇವರೇ ವಿಶೇಷವಾಗಿ ವಾಸಿಸುತ್ತಿದ್ದ ಭಾಗವೇ ಬಹುಶ ಊರಿನ ಬಡಾವಣೆಗಳು ಶಿವಪುರಗಳು ಒಬ್ಬ ಭಕ್ತ ಉಳಿದ ಭಕ್ತರ ಜೋತೆ ಸೇರಿ

ಶಿವಗೋಷ್ಠಿಗಳನ್ನು ನಡೆಸುವುದು. ಶಿವನಷ್ಟೇ ಅಥವಾ ಶಿವನಿಗಿಂತಲೂ ಶಿವಭಕ್ತ ದೊಡ್ಡವನು ಎಂಬ ನಂಬಿಕೆಯನ್ನು ಕಾಣುತ್ತೇವೆ.

ವೀರಶೈವಧರ್ಮ ಜಗತ್ತಿನ ಇತರೆ ಧರ್ಮಗಳಿಂದ ಭಿನ್ನನಾಗಿ ಜನ್ಮ ತಾಳಿ ತನ್ನದೆ ಉದಾತ್ತ, ಆದರ್ಶ, ಹಾಗೂ ಸರಳ ಸಿದ್ಧಾಂತಗಳಿಂದ ಜನಪದ-ಜನಪ್ರಿಯವಾಗಿದೆ. ದೇವನೊಬ್ಬ ನಾಮ ಹಲವು, ಸಕಲ ಜೀವಾತ್ಮರಿಗೆ ಲೇಸನು ಬಯಸುವವನೇ ಶರಣ, 'ಹೊಲೆಯುಂಟೆ ಲಿಂಗವಿದ್ದೆಡೆಯಲ್ಲಿ?' 'ಕುಲವುಂಟೆ ಜಂಗಮ ವಿದ್ದೆಡೆಯಲ್ಲಿ?' 'ಕಳಬೇಡ ಕೊಲಬೇಡ ಅನ್ಯರಿಗೆ ಅಸಹ್ಯ ಪಡಬೇಡ' ಎಂಬ ಅಭೂತಪೂರ್ವ ಸೂತ್ರಗಳೊಂದಿಗೆ ಹೊಸ ಸಂಸ್ಕೃತಿಯನ್ನು ಹುಟ್ಟು ಹಾಕಿದೆ. ದುರಾದೃಷ್ಟವಶಾತ್ ಇತ್ತೀಚೆಗೆ ಗುರು-ವಿರಕ್ತ ಪರಂಪರೆಯ ಅಸ್ತಿತ್ವ. ಆದಿ ಪರಂಪರೆಯ ಗೊಂದಲ ಹುಟ್ಟಿಕೊಂಡು ವಾತಾವರಣ ತ್ವೇಷಗೊಂಡಿರುವುದು. ನಿಜಕ್ಕೂ ದುರಂತವೇ, ಅನಗತ್ಯವಾದ ಈ ಗೊಂದಲದ ಘರ್ಷಣೆ ವ್ಯರ್ಥ ಪ್ರತಿಷ್ಠೆಯ ಆಧುನಿಕ ಕಲ್ಪನೆಯ ಸೃಷ್ಟಿಯಾಗಿದೆ. ಮನದಲ್ಲಿನ ಪೂರ್ವಗ್ರಹಗಳನ್ನು ಬದಿಗೊತ್ತಿ ಸಾಮರಸ್ಯದ ಹಾದಿ ತುಳಿದಲ್ಲಿ ವೀರಶೈವ ಧರ್ಮಕ್ಕೂ, ಧರ್ಮ ಅವಲಂಬಿಗಳಿಗೂ ಕ್ಷೇಮ.

'ಧರ್ಮ'ವೆಂಬುದು ಪ್ರವಚನದ ವಿಷಯವಲ್ಲ. ಕ್ರಿಯಾಚರಣೆಯುಳ್ಳದು ಧರ್ಮ, ಸತ್ಯ ಸದಾಚಾರಗಳನ್ನು ನಡೆಯಲ್ಲಿ ವ್ಯಕ್ತಗೊಳಿಸುವುದು ಧರ್ಮ, ಇದು ಜೀವನದ ಅಭ್ಯುದಯವನ್ನು, ಮುಕ್ತಿಯ ನಿಲುವನ್ನು ಬೀರ ಬಲ್ಲದು, ಮಾನವನ ಸರ್ವತೋಮುಖ ಅಭಿವೃದ್ಧಿಗೆ ಕಾರಣವಾದುದು ಧರ್ಮ, ಮಾನವನ ಕರ್ತವ್ಯ ಪ್ರಜ್ಞೆಯೆ ಧರ್ಮ, ಮಾನವನು ಮಹಾದೇವನಾಗಲು ಧರ್ಮವಂತನಾಗಬೇಕಾಗುವುದು, ಧರ್ಮವೇ ಅಸತ್ಯದಿಂದ ಸತ್ಯದತ್ತ ಕರೆದೊಯ್ಯಬಲ್ಲದು, ಸತ್ಯಾನ್ವೇಷಣೆಯಿಂದ ಅಜ್ಞಾನ ಕತ್ತಲೆ ಅಳಿಯುವುದು, ಜ್ಞಾನದಿಂದ ಜ್ಯೋತಿ ಮಾರ್ಗವು ದೊರಕಿ ಆಧ್ಯಾತ್ಮಿಕ ದಿವ್ಯಪ್ರಕಾಶಲಭಿಸುವುದು, ಇದರಿಂದಲೇ ಅಮೃತತತ್ವ ದೊರೆಯುವುದು.

(ಬಸವಣ್ಣ) ದಯವಿಲ್ಲದ ಧರ್ಮವದಾವುದಯ್ಯ, ದಯವಿರಬೇಕು ಸಕಲ ಪ್ರಾಣಿಗಳಲ್ಲಿ
ದಯವೇ ಧರ್ಮದ ಮೂಲವಯ್ಯಾ ಕೂಡಲಸಂಗಮ ದೇವಯ್ಯಾ.

ದಾನ-ದಯಾ, ದಾಕ್ಷಿಣ್ಯಗಳಿಂದ ಕೂಡಿದ ವೀರಶೈವ ಧರ್ಮವು ಪ್ರಾಚೀನವಾದುದು, ಪುರಾತನವಾದುದು, ತನ್ನದೇ ಆದ ವಿಶಿಷ್ಟತೆಯುಳ್ಳದ್ದು. ವೀರಶೈವವು ಈ ವೀರಶೈವ ಧರ್ಮವು ಜಾಗತಿಕ ಧರ್ಮಗಳಲ್ಲಿ ತನ್ನ ಅಸ್ತಿತ್ವವನ್ನು ಸಾಧಿಸಿದೆ. ವಿಶ್ವಮಾನ್ಯ ಮೌಲ್ಯಗಳನ್ನು ಒಳಗೊಂಡಿದೆ, ಧರ್ಮದಲ್ಲಿ ಇರಬೇಕಾದಂತಹ ಕೆಲವು ಅಂಶಗಳನ್ನು ಒಳಗೊಂಡಿದೆ.

೦೧. ಸಿದ್ಧಾಂತ.

೦೨. ಸಾಧನೆ.

೦೩. ದರ್ಶನ.

೦೪. ಸಂಸ್ಕಾರ.

೦೫. ಸಮಾಜಶಾಸ್ತ್ರ.

೦೬. ನೀತಿಶಾಸ್ತ್ರ.

೦೭. ಅರ್ಥಶಾಸ್ತ್ರ.

೦೮. ಸಂಸ್ಕೃತಿ.

೦೯. ಪರಂಪರೆ.

೧೦. ಸಾಹಿತ್ಯ.

೧೧. ಧರ್ಮಗುರು.

ಅಷ್ಟಾವರಣಗಳು

ಅಷ್ಟಾವರಣಗಳು ವೀರಶೈವ ಧರ್ಮದ ಆಧಾರವಾಗಿದೆ. ವೀರಶೈವವು ಅಷ್ಟಾವರಣಗಳಿಗೆ ಹೆಚ್ಚಿನ ಮಹತ್ವ ಕೊಟ್ಟಿದೆ. ಅಷ್ಟಾವರಣಗಳೆಂದರೆ ಎಂಟುಹೊದಿಕೆಗಳು ಅಥವಾ ಸಂಕೇತಗಳು ಎಂಬುದಾಗಿ ಗುರುತಿಸಿ, ಅವುಗಳು ವೀರಶೈವರಿಗೆ ಅತ್ಯಂತ ಅವಶ್ಯಕವಾದವುಗಳೆಂದು ಮನದಟ್ಟು ಮಾಡಿಕೊಟ್ಟಿದೆ. ಇವು ವೀರಶೈವನಿಗೆ ಪರಮ ಪಾವನವಾಗಿದೆ, ರಕ್ಷಾಕವಚವೆನಿಸಿದೆ. ಯೋಧನು ಒಂದೇ ಕವಚವನ್ನು ಧರಿಸಿದರೆ ವೀರಶೈವನು ಎಂಟು ಕವಚಗಳನ್ನು ತೊಟ್ಟಿರುತ್ತಾನೆ. ವೀರಶೈವನಿಗೆ ಮರಣದ ಅಂಜಿಕೆಯೂ ಇರುವುದಿಲ್ಲ. ಅಷ್ಟಾವರಣವು ಸರ್ವಸಿದ್ಧಿಗಳನ್ನು ಕರುಣಿಸುತ್ತದೆ. ಅಷ್ಟಾವರಣಗಳನ್ನು ಮೈಗೂಡಿಸಿಕೊಳ್ಳುವ ವೀರಶೈವನಿಗೆ ಅಷ್ಟಸಿದ್ಧಿಗಳು ಸಿಕ್ಕುತ್ತವೆ. ಅಂತೆಯೇ ಶರಣರ ಮನೆಯಂಗಳದಲ್ಲಿಯ ಹಸುವು ಕಾಮಧೇನುವೆನಿಸುತ್ತದೆ, ಕಲ್ಲು ಪರುಷ ಮಣಿ ಎನಿಸುತ್ತದೆ, ಮರ ಕಲ್ಪ ವೃಕ್ಷವಾಗುತ್ತದೆ, ದೇಹದಲ್ಲಿ ಪ್ರಾಣವಿರುವವರೆಗೆ ಇಂದ್ರಿಯಗಳು ಕೆಲಸ ಮಾಡುತ್ತವೆ. ಅದರಂತೆ ಲಿಂಗವಂತನಾಗುವುದರಿಂದ ಅಷ್ಟಾವರಣದ ಸಂಬಂಧ ಬರುತ್ತದೆ.

ಅಷ್ಟಾವರಣಗಳು ಯಾವವೆಂದರೆ

೦೧. ಗುರು.

೦೨. ಲಿಂಗ.

೦೩. ಜಂಗಮ.

೦೪. ಪಾದೋದಕ.

೦೫. ಪ್ರಸಾದ.

೦೬. ವಿಭೂತಿ.

೦೭. ರುದ್ರಾಕ್ಷಿ.

೦೮. ಮಂತ್ರ.

೦೧. ಗುರು

ಮಾನವ-ಜನ್ಮ ಸಫಲತೆಯನ್ನು ಪಡೆಯಬೇಕಾದರೆ ಗುರುವಿನ ಅನುಗ್ರಹ ಬೇಕೆ ಬೇಕು. ಅಜ್ಞಾನವೆಂಬ ಕತ್ತಲೆಯಿಂದ ಸುಜ್ಞಾನವೆಂಬ ಬೆಳಕಿಗೆ ಕೊಂಡಯ್ಯುವವನೇ ಗುರು. ''ಮಾತೃ ದೇವೋಭವ, ಪಿತೃದೇವೋಭವ'' ಎನ್ನುವುದಕ್ಕೆ ''ಗುರುದೇವೋಭವ'' ಎನ್ನುವದನ್ನೂ ಸೇರಿಸಿದ್ದು ಗುರುವು ದೇವರಿಗೆ ಸಮಾನವೆನ್ನುವದನ್ನು ತೋರಿಸಿಕೊಡುತ್ತದೆ ಹಾಗೆಯೇ;

''ಗುರು: ಬ್ರಹ್ಮ ಗುರು ವಿಷ್ಣು:

ಗುರು: ದೇವೋ ಮಹೇಶ್ವರ:

ಗುರು: ಸಾಕ್ಷಾತ ಪರಬ್ರಹ್ಮ:

ತಸ್ಮೈ ಶ್ರೀ ಗುರುವೇ ನಮಃ''

ಎನ್ನುವುದು ಸಹ ಗುರುವನ್ನು ಬ್ರಹ್ಮ, ವಿಷ್ಣು ಮಹೇಶ್ವರರಿಗೆ ಸರಿಸಮನಾಗಿ ಕಂಡದುದನ್ನು ಎತ್ತಿ ತೋರಿಸುತ್ತದೆ. ಆದ್ದರಿಂದ ''ಗುರು'' ಎಂದರೆ ಕೇವಲ ಶಿಕ್ಷಕನೆಂದಾಗಲಿ, ಆಚಾರ್ಯನೆಂದಾಗಲಿ ತಿಳಿಯಬಾರದು. ಗುರುವಿನ ವೇಷ ಹಾಕಿದರೆ ಮಾತ್ರ ಗುರುತ್ವ ಬರುವುದಿಲ್ಲ, ಗುರುವಿನ ಕಾಯಕ ಮಾಡಿದಾಗ ಗುರುತ್ವ ಬರುವದು.

‘‘ಹರ ಮುನಿದರೆ ಗುರು ಕಾಯ್ವನು’’ ಎನ್ನುವ ಅರ್ಥವಿದೆ. ತಂದೆ-ತಾಯಿಗಳು ಬೌತ ದೇಹದ ಜನನಕ್ಕೆ ಕಾರಣವಾಗಿದ್ದರೆ ಗುರುವು ಮಂತ್ರ ಶರೀರದ ಜನನಕ್ಕೆ ಕಾರಣನಾಗಿ ವೀರಶೈವದಲ್ಲಿ ಶ್ರೇಷ್ಠ ಸ್ಥಾನ ಹೊಂದಿದ್ದಾನೆ. ವೀರಶೈವವು ಮೂರು ವಿಧವಾದ ಗುರುಗಳನ್ನು ಹೆಸರಿಸುತ್ತದೆ. ಆರಂಭದ ದೀಕ್ಷೆ ಕೊಡುವವನು ‘‘ದೀಕ್ಷಾ ಗುರು’’ ಎಂತಲೂ, ‘‘ತರಬೇತು ಕೊಡುವವನು ಶಿಕ್ಷಾಗುರು’’ ಎಂತಲೂ, ಕೊನೆಯ ಗುರಿ ಮುಟ್ಟಿಸುವವನಿಗೆ ‘‘ಮೋಕ್ಷಾ ಗುರು’’ ಎಂತಲೂ ಕರೆಯಲಾಗಿದೆ.

೦೨. ಲಿಂಗ

ಶಿಷ್ಯನು ಗುರುವಿನ ಅನುಗ್ರಹಕ್ಕೆ ಪಾತ್ರನಾಗಿದ್ದಾನೆ ಅನ್ನುವುದಕ್ಕೆ ಅವನು ದೇಹದ ಮೇಲೆ ಧರಿಸಿದ ಲಿಂಗವೇ ಸಾಕ್ಷಿ. ಕನ್ನಡಿಯಲ್ಲಿ ಮುಖವನ್ನು ನೋಡಿ ನಲಿವಂತೆ ಲಿಂಗದಲ್ಲಿ ನಿನ್ನನ್ನು ಕಣ್ತುಂಬ ನೋಡಿ ಕೈತುಂಬ ಪೂಜಿಸಿ ನಲಿನಲಿದಾಡು ಎಂದು ನಿಜಗುಣ ಶಿವಯೋಗಿಗಳು ಹೇಳಿದ್ದಾರೆ. ಗುರುವಿನಿಂದ ಅನುಗ್ರಹಿಸಲ್ಪಟ್ಟ ಲಿಂಗ ಹೊರಗೆ ಇಷ್ಟಲಿಂಗವಾಗಿ, ಒಳಗೆ ಪ್ರಾಣಲಿಂಗವಾಗಿ, ಭಾವದಲ್ಲಿ ಭಾವಲಿಂಗವಾಗಿ ಶೋಭಿಸುತ್ತದೆ. ಶರಣರು ಯಾವ ಮದ್ದು, ಗುಂಡುಗಳಿಲ್ಲದೆ, ಕೇವಲ ಇಷ್ಟಲಿಂಗದ ಅನುಗ್ರಹದಿಂದ ಜಾತಿವಾದವೆಂಬ ಕೋಟೆಯನ್ನು ಸ್ಫೋಟಗೊಳಿಸಿದರು, ಬಂದೂಕು ಬಳಸದೆ ಸಮಾನತೆ ಸಾಧಿಸಿದರು. ವಿಶ್ವದ ಕುರುಹಾದ ಇಷ್ಟಲಿಂಗವು ವಿಶ್ವ ಬಾಂಧವ್ಯವನ್ನು ಬೆಳೆಸುವ ಸೂತ್ರವಾಯಿತು. ಇಷ್ಟಲಿಂಗವೆಂಬುದು ಜ್ಞಾನಶಕ್ತಿಗಳ ಒಂದು ಸಾಮರಸ್ಯ, ಮನಸ್ಸನ್ನು ಒಂದೆಡೆ ನಿಲ್ಲಿಸಲು ಇಷ್ಟಲಿಂಗ ಒಂದು ಅನಿವಾರ್ಯ ಸಾಧನ. ಲಿಂಗವನ್ನು ಧ್ಯಾನಿಸಿ ನಮಿಸಿ ನಿದ್ರೆಗೈದರೆ ಸ್ವಪ್ನಾವಸ್ಥೆಯ ದೋಷಗಳು ದೂರವಾಗುತ್ತವೆ. ಹೊತ್ತಾರೆ ಎದ್ದು ಲಿಂಗವ ನೆನೆದರೆ ಅಪಮೃತ್ಯುಗಳು ಕಾಲಕರ್ಮಂಗಳು ತಪ್ಪುವವು. ಲಿಂಗವಿಲ್ಲದ ಸ್ಥಾನವೇ ಇಲ್ಲ, ಎಂದು ಸರ್ವಜ್ಞ ಹೇಳಿದ್ದಾರೆ.

ಲಿಂಗಕ್ಕೆ ಕಡೆಯಲ್ಲಿ? ಲಿಂಗಿಲ್ಲದೆಡೆಯಲ್ಲಿ?

ಲಿಂಗದೊಳು ಜಗವು ಅಡಗಿಹುದು, ಲಿಂಗವನು

ಹಿಂಗಿದವರುಂಟೆ ಸರ್ವಜ್ಞ!

ವೀರಶೈವರು ಲಿಂಗದ ಪೂಜೆಯನ್ನು ಮಾಡಿಕೊಳ್ಳುವುದು ಅತ್ಯಂತ ಅವಶ್ಯಕ. ಸ್ತ್ರೀಯರಾಗಲಿ-ಪುರುಷರಾಗಲಿ ಬೆಳಿಗ್ಗೆ ಬೇಗ ಎದ್ದು ಸ್ನಾನಮಾಡಿ, ಮನೆಯ ದೇವರಿಗೆ ಪೂಜೆಯನ್ನು ಮಾಡಿ, ನಂತರ ಲಿಂಗದ ಪೂಜೆಯನ್ನು ಮಾಡಿಕೊಳ್ಳುತ್ತಾರೆ. ಲಿಂಗವನ್ನು ಎಡ ಅಂಗೈಯಲ್ಲಿ ಇಟ್ಟುಕೊಂಡು, ಅದಕ್ಕೆ

೧೪. ವಿಭೂತಿ

ಅಷ್ಟಾವರಣದಲ್ಲಿ ಗುರು-ಲಿಂಗ-ಜಂಗಮಗಳನ್ನು ಪೂಜಿಸುವ ಸಾಧನಗಳೇ ಭಸ್ಮ, ರುದ್ರಾಕ್ಷಿ, ಮಂತ್ರಗಳು, ಧಾರ್ಮಿಕ ಪರಿಭಾಷೆಯಲ್ಲಿ ಇದಕ್ಕೆ ಪವಿತ್ರವಾದ ಬೂದಿ ಎಂಬ ಅರ್ಥವಿದೆ. ಎಲ್ಲ ಶೈವಪಂಥಗಳೂ ವಿಭೂತಿಯನ್ನು ಪವಿತ್ರವೆಂದು ನಂಬುತ್ತವೆ. ಆದರೆ ವೀರಶೈವರಲ್ಲಿ ವಿಭೂತಿಯೆಂದರೆ ಸಾಮಾನ್ಯ ಬೂದಿಯಲ್ಲ, ಅದು ಧಾರ್ಮಿಕ ವ್ಯಕ್ತಿಯೊಬ್ಬನಿಂದ ನಿರ್ದಿಷ್ಟ ವಿಧಾನಾನುಸಾರ ಸಿದ್ಧಗೊಂಡ ಪವಿತ್ರ ಭಸ್ಮ. ಶಿವನ ಮೈ ಬೆಳಕೆ ದಿವ್ಯ ಭಸಿತೆಂದು ಹೇಳುತ್ತಾರೆ. ಅಂಥ ಪರಂಜ್ಯೋತಿ ಪ್ರಕಾಶವನ್ನು ಸಾಕ್ಷಾತ್ಕರಿಸಿಕೊಳ್ಳಲು ಪ್ರಥಮ ಸಾಧನವಾದ ವಸ್ತುವೇ ವಿಭೂತಿ.

ಹಿಮಾಲಯದ ಮೈಕೊರೆಯುವ ಚಳಿಯಲ್ಲಿಯೂ ದಿಗಂಬರ ಸನ್ಯಾಸಿಗಳು ಸರ್ವಾಂಗಕ್ಕೆ ಭಸ್ಮಧಾರಣ ಮಾಡಿಕೊಂಡೇ ತಮ್ಮ ಜೀವನ ನಿರ್ವಹಿಸುತ್ತಾರೆ. ಭಸ್ಮದ ಪ್ರಭಾವದಿಂದಲೇ ಆರೋಗ್ಯವಾಗಿರುತ್ತಾರೆ. ಹೀಗೆ ಭಸ್ಮವು ಶೀತಬಾಧೆಯನ್ನು ಕಳೆಯುತ್ತದೆ. ಚರ್ಮವ್ಯಾಧಿಯನ್ನು ಗುಣಪಡಿಸುತ್ತದೆ. ಇಂಥ ಅಗಣಿತ ಮಹಿಮೆಯುಳ್ಳ ಭಸ್ಮವನ್ನು ಧರಿಸುವಲ್ಲಿ ಸದ್ಭಾವನೆ ಹಾಗೂ ಸಾವಧಾನತೆಗಳು ಅವಶ್ಯ, ಭಸ್ಮವನ್ನು ಧರಿಸುವಾಗ ಮೌನಿಯಾಗಿರಬಾರದು. ಮಂತ್ರಧ್ಯಾನ ಮಾಡುತ್ತಾ ಅಥವಾ ಭಸ್ಮದ ಮಹತ್ವವನ್ನು ನೆನೆಯುತ್ತಾ ಭಸ್ಮಧಾರಣ ಮಾಡಬೇಕು.

ಬಸವಣ್ಣನವರು

''ನೀರಿಂಗೆ ನೈದಿಲೆಯೆ ಶೃಂಗಾರ, ಸಮುದ್ರಕ್ಕೆ ತೆರೆಯೆ ಶೃಂಗಾರ

ನಾರಿಗೆ ಗುಣವೇ ಶೃಂಗಾರ, ಗಗನಕ್ಕೆ ಚಂದ್ರಮನೇ ಶೃಂಗಾರ

ನಮ್ಮ ಕೂಡಲ ಸಂಗನ ಶರಣರಿಗೆ ನೊಸಲ ವಿಭೂತಿಯೇ ಶೃಂಗಾರ''

ಭಸ್ಮವನ್ನು ಹಣೆಯ ಮೇಲೆ ಧರಿಸಿದರೆ ದೈವದ ದುರ್ಲಿಪಿಯೂ ಅಳಿಯುತ್ತದೆ, ಮೂರು ರೇಖೆಗಳು ಸ್ಪಷ್ಟವಾಗಿ ಕಾಣುವಂತೆ ಧರಿಸಬೇಕು. ಈ ತ್ರಿಪುಂಡ್ರಗಳು ಸತ್ವ-ರಜ-ತಮೋಗುಣಗಳನ್ನು ಮೀರಿನಿಂತ ವ್ಯಕ್ತಿತ್ವವನ್ನು ಸೂಚಿಸುವ ಸಂಕೇತಗಳಾಗಿವೆ.

ಭಕ್ತಿ-ಜ್ಞಾನ-ವೈರಾಗ್ಯ ಸಂಪನ್ನವೆಂಬ ಕುರುಹನ್ನು ತೋರಿಸುತ್ತವೆ. ಮತ್ತು ಹೊನ್ನು-ಹೆಣ್ಣು-ಮಣ್ಣುಗಳಿಂದ ಮುಕ್ತನಾದವನೆಂಬ ಸಂಕೇತವನ್ನು ಸೂಚಿಸುತ್ತವೆ. ಅಷ್ಟವರಣಗಳಲ್ಲೊಂದಾದ ವಿಭೂತಿ

ಕುರಿತು ಬಸವಾದಿ ಶರಣರು ತಮ್ಮ ವಚನಗಳಲ್ಲಿ ಅನುಭಾವ ಪದ್ಯಗಳಿಂದ ಚಿಂತನ ಮಾಡಿದ್ದಾರೆ. ''ವಿಭೂತಿ'' ಭೂತ ಗುಣಗಳನಳಿದುದೇ ವಿಭೂತಿ ಪರಶಿವನ ದಿವ್ಯ ತೇಜಸ್ಸು ಎಂದು ಶರಣರು ತಿಳಿಸುತ್ತಾರೆ. ಹಣೆಯ ತ್ರಿಪುಂಡ್ರ ಅಂದರೆ ಮೂರು ಬೆರಳುಗಳಿಂದ ವಿಭೂತಿ ಧರಿಸುವ ಉದ್ದೇಶ ಅದು ಅರಿವು ಆಚಾರ ಅನುಭಾವಗಳ ದ್ಯೋತಕ.

೦೫. ರುದ್ರಾಕ್ಷಿ

ಇದಕ್ಕೆ ಇನ್ನೊಂದು ಹೆಸರು ರುದ್ರನ ಕಣ್ಣು, ಇದೊಂದು ಜಾತಿಯ ಗಿಡದ ಬೀಜಗಳು ಇವುಗಳು ಶಿವನಿಗೆ ಪವಿತ್ರವೆಂಬ ನಂಬಿಕೆಯಿದೆ. ಭಕ್ತಿಯ ಬಾಳನ್ನು ಬಾಳುವ ಶರಣ ಸಂತತಿಗೆ ರುದ್ರಾಕ್ಷವೇ ದಿವ್ಯಾಭರಣ, ಲೌಕಿಕ ಮಾನವರಿಗೆ ಬಂಗಾರದೊಡವೆಯಿದ್ದಂತೆ. ಶಿವನೂ ಸಹಿತ ರುದ್ರಾಕ್ಷವನ್ನೇ ತನ್ನ ಮೈದೊಡಿಗೆಯನ್ನಾಗಿ ಮಾಡಿಕೊಂಡಿದ್ದಾನೆ. ಯಾರು ರುದ್ರಾಕ್ಷವನ್ನು ತಮ್ಮ ಮೈ ಮೇಲೆ ಧರಿಸಿಕೊಂಡಿರುವರೋ ಅವರ ಮೇಲೆ ಶಿವನ ಕೃಪಾದೃಷ್ಟಿ ಇದ್ದೇ ಇರುತ್ತದೆ. ವಿಭೂತಿ ಶೈತ್ಯಮೋಕ್ಷ ನಿವಾರಣೆ ಮಾಡಿದರೆ ರುದ್ರಾಕ್ಷ ಉಷ್ಣಾಂಶವನ್ನು ನಾಶ ಮಾಡುತ್ತದೆ. ಇದು ವೈಜ್ಞಾನಿಕ ಸತ್ಯ.

ಶಿವನು ರಾಕ್ಷಸರ ಕೈಸೇರಿದ್ದ ತ್ರಿಪುರಗಳನ್ನು ನಾಶ ಮಾಡಲು ರುದ್ರಾವತಾರವನ್ನು ತಾಳಿದನು, ತದೇಕ ಧ್ಯಾನದಿಂದ, ಏಕದೃಷ್ಟಿಯಿಂದ ತ್ರಿಪುರಗಳನ್ನು ನಾಶ ಮಾಡಲು ಗುರಿ ಹಚ್ಚಿದ್ದರಿಂದ ಅವನ ಕಣ್ಣಿನಲ್ಲಿ ನೀರು ತುಂಬಿ, ಕಣ್ಣೀರಿನ ಹನಿಗಳು ಹಿಮಾಲಯದ ಸಾನು ಪ್ರದೇಶದಲ್ಲಿ ಬಿದ್ದುದರಿಂದ ಅಲ್ಲಿ ಮರಗಳಾಗಿ ಹುಟ್ಟಿದವು. ಆ ಮರದ ಕಾಯಿಗಳೇ ರುದ್ರಾಕ್ಷಗಳು, ರುದ್ರನ ಅಕ್ಷಯ ಕಂಬನಿಗಳೇ ಕಾರಣವಾದುದರಿಂದ ರುದ್ರಾಕ್ಷವೆಂಬ ಹೆಸರು ಸ್ಥಿರವಾಯಿತು. ರುದ್ರಾಕ್ಷದಲ್ಲಿ ಎಲ್ಲ ಔಷಧಗಳಿಗಿಂತಲೂ ಮಿಗಿಲಾದ ಗುಣವಿದೆ. ವಾಯು ಶುದ್ಧಿಯನ್ನು ಮಾಡುವುದರಲ್ಲಿ ರುದ್ರಾಕ್ಷವನ್ನು ಬಿಟ್ಟರೆ ಇನ್ನೊಂದಿಲ್ಲ. ಜ್ವರಬಂದ ಬಾಯಿ, ನಾಲಿಗೆಗಳ ವಿಷವನ್ನು ರುದ್ರಾಕ್ಷದ ಗಂಧ ಪರಿಹರಿಸುತ್ತದೆ. ಅಂತ್ಯಕಾಲದಲ್ಲಿ ಅದರ ಗಂಧವನ್ನು ಕುಡಿಸಿದರೆ ಪವಿತ್ರವಾಗಿ ಕೈಲಾಸ ಪ್ರಾಪ್ತಿಯಾಗುತ್ತದೆ. ಯಾವಾಗಲೂ ರುದ್ರಾಕ್ಷವನ್ನು ಎದೆಯ ಮೇಲೆ ಧರಿಸಿದರೆ ವಾಯು ಶುದ್ಧವಾಗಿ ಆರೋಗ್ಯವುಂಟಾಗುತ್ತದೆ.

ಸಾಮಾನ್ಯವಾಗಿ ಪಂಚಮುಖ ಪರಶಿವನ ಪ್ರತೀಕವಾದ ಪಂಚಮುಖದ ರುದ್ರಾಕ್ಷಗಳನ್ನು ಧರಿಸುವದು ಮೇಲು ಕಂಠದಲ್ಲಿ ೩೨ ಮಣಿಯ ಮಾಲೆ ಧರಿಸಬೇಕು. ಎದೆಯ ಮೇಲೆ ಸುತ್ತುವರಿದು ೫೭ ರುದ್ರಾಕ್ಷಗಳ ಸರವನ್ನು ಧರಿಸಬೇಕು. ಸಾಧ್ಯವಾದರೆ ಒಂದಕ್ಕೊಂದು ಕೂಡಿಕೊಂಡಿರುವ ''ಗೌರೀಶಂಕರ'' ಎಂಬ

ದಿವ್ಯ ರುದ್ರಾಕ್ಷವೊಂದನ್ನು ಯಾವಾಗಲೂ ಎದೆಯ ಮೇಲೆ ಧರಿಸಬೇಕು. ಇದು ಶಿವಾದ್ವೈತ ತತ್ವ ಸೂಚಕವಾಗಿದೆ. ಈ ರುದ್ರಾಕ್ಷಗಳನ್ನು ದಿನಂಪ್ರತಿ ಧರಿಸುವುದರಿಂದ ಘನತರವಾದ ಜ್ಞಾನೋದಯವಾಗುವದು. ಪಾಪಕರ್ಮಗಳ ದೋಷ ನಿವಾರಣೆಯಾಗುವುದೆಂಬ ಪ್ರತೀತಿಯುಂಟು. ದುರ್ಗುಣಗಳು ನಾಶವಾಗುವುವು. ಅವನು ಪುಣ್ಯ ಜೀವಿಯಾಗುವನು.

ಆದಿಕಾಲದಿಂದಲೂ ಋಷಿಮುನಿಗಳು ರುದ್ರಾಕ್ಷಿಗೆ ಹೆಚ್ಚಿನ ಮಹತ್ವ ಕೊಟ್ಟು ಧರಿಸುತ್ತ ಬಂದಿದ್ದರೂ ವೀರಶೈವ ಸಿದ್ಧಾಂತದಲ್ಲಿ ಮಹತ್ವವಾದ ಸ್ಥಾನದಲ್ಲಿರಿಸಲಾಗಿದೆ. ಪರಿಪೂರ್ಣತ್ವದ ಜ್ಞಾನ ಪ್ರತೀಕವಾದ ನೇತ್ರವೆಂದು ಪರಿಗಣಿಸಲಾಗಿದೆ. ಆದ್ದರಿಂದ ರುದ್ರಾಕ್ಷ ವಿಶೇಷವಾಗಿ ವೀರಶೈವರಿಗೆ ಹೆಚ್ಚು ಪೂಜ್ಯನೀಯವಾಗಿದೆ. ಈ ರುದ್ರಾಕ್ಷಿಯು ಮಂತ್ರಶಕ್ತಿ ಮತ್ತು ಮನಸ್ಸನ್ನು ಶಾಂತಗೊಳಿಸುವ ನಿಯಂತ್ರಣ ಶಕ್ತಿಯನ್ನು ಹೊಂದಿದೆ ಅಲ್ಲದೆ ಆಯುರ್ವೇದಿ ಔಷಧಿ ತಯಾರಿಕೆಗಾಗಿ ಆಭರಣಗಳನ್ನು ತಯಾರಿಸುವಾಗ ವಿವಿಧ ಬಗೆಯಲ್ಲಿ ಬಳಸುತ್ತಿದ್ದಾರೆ. ಹೀಗಾಗಿ ಇದೂ ಸಹಿತ ಪರದೇಶಕ್ಕೆ ರವಾನೆಯಾಗುವ ಒಂದು ಮಹತ್ವದ ಸರಕಾಗಿದೆ.

ಸರ್ವಜ್ಞರು

''ರುದ್ರಾಕ್ಷಿ ಭಸಿತವನ್ನು ಹೊದ್ದಿರಲು ದೇಹದೊಳಗಿದ್ದ ಪಾಪಗಳು ಬಯಲಾಗಿ, ಶಿವನು ತಾನಿದ್ದಲ್ಲಿ ಬರುವ ಸರ್ವಜ್ಞ'' ಎಂದು ಹಾಡಿದ್ದಾನೆ.

೦೬. ಮಂತ್ರ

''ನಮ ಶಿವಾಯ'' ಈ ಐದು ಬೀಜಾಕ್ಷರಗಳಿಂದ ಕೂಡಿದ ಪವಿತ್ರ ತತ್ವವಾಕ್ಯವಿದು. ಈ ತತ್ವವಾಕ್ಯದ ಅರ್ಥ ಶಿವನಿಗೆ ಪ್ರಣಾಮಗಳು ಎಂದಾಗುತ್ತದೆ. ಇದನ್ನು ಪಂಚಾಕ್ಷರಿ ಮಹಾಮಂತ್ರ ಎಂಬುದಾಗಿಯೂ ಕರೆಯುತ್ತಾರೆ. ಇದಕ್ಕೆ ''ಓಂ'' ಸೇರಿಸಿದರೆ ''ಷಡಕ್ಷರ'' ಮಂತ್ರವಾಗುತ್ತದೆ. ಮಂತ್ರ ಗುರುಮುಖದಿಂದಲೇ ಉಪದೇಶಿಸಲ್ಪಡಬೇಕು. ಪುಸ್ತಕದಲ್ಲಿದ್ದುದನ್ನು ಕಲಿತು ಪಠಿಸಿದರೆ ಫಲವಿಲ್ಲ ದೀಕ್ಷಾ ಬದ್ಧನಾಗಿಯೇ ಮಂತ್ರಾನುಷ್ಠಾನವನ್ನು ಮಾಡಬೇಕು ಹೊರಗಿನ ವ್ಯಕ್ತಿಯನ್ನು ಘಟ್ಟಿಯಾದ ಧ್ವನಿಯಿಂದ ಕೂಗಿ ಕರೆಯಬೇಕಾಗುತ್ತದೆ. ಆದರೆ ಹೃದಯದಲ್ಲಡಗಿದ ಮಹಾದೇವನನ್ನು ಹೃದಯವಾಣಿಯಿಂದಲೇ ಕರೆದರೆ ತೀವ್ರವಾಗಿ ಕೇಳಿಸುವುದು. ಷಡಕ್ಷರ ಮಂತ್ರವು ಶಿವನ

ಹೆಸರಾಗಿರುವುದರಿಂದ ಅದರ ಉಚ್ಚಾರದಿಂದ ಶಿವನು ಪ್ರಾಕಾಶಿತನಾಗುವನು ಎಂದು ಹೇಳಲಾಗಿದೆ. ಅನುದಿನವೂ ತಪ್ಪದೇ ಆ ಮಂತ್ರವನ್ನು ಪಠಿಸುವುದರಿಂದ ಅಜ್ಞಾನವಳಿದು ಮೂರ್ಖತನ ಮಾಯವಾಗುವಂತೆ ಪಾಪತಾಪಗಳು ಪರಿಹಾರವಾಗುವವು. ಜಪವು ಜೀವನವನ್ನು ಪಾವನಗೊಳಿಸಿ ಮುಕ್ತನನ್ನಾಗಿಸುವುದು. ಏಕಚಿತ್ತದಿಂದ ಲಿಂಗದಲ್ಲಿ ದೃಷ್ಟಿಯನ್ನಿರಿಸಿ ಏಕ ಲಕ್ಷ್ಯವಾಗಿ ಮಹಾ ಮಂತ್ರದ ಅರ್ಥವನ್ನು ಗ್ರಹಿಸುತ್ತಾ ಸಾವಧಾನವಾಗಿ ಪುನಃ ಪುನಃ ಸ್ಮರಿಸುವದೇ ಜಪ.

ಓಂ- ಜಗದ್ವಾಚಕವಾಗಿಯೂ,

ನಮಃ- ಎಂಬುದು ''ನ ಮಮ ಇದಂ'' ಈ ಜಗತ್ತು ನನ್ನದಲ್ಲ ಎಂದು ಬೋಧಿಸುವದಾಗಿಯೂ

''ಶಿವಾಯ'' ಎಂಬುದು ಇದೆಲ್ಲಾ ಶಿವನಿಗೋಸ್ಕರವಾಗಿರುವದೆಂಬುದಾಗಿಯೂ ಸೂಚಿಸುತ್ತದೆ.

ಅರ್ಥಾತ್ ಉಪಭೋಗಕ್ಕಾಗಿ ಇರುವ ಜಗತ್ತೆಲ್ಲಾ ನನಗಾಗಿ ಅಲ್ಲ ಶಿವನಿಗಾಗಿ ಎಂದು ತಿಳಿದು ಸಮಸ್ತವನ್ನು ಶಿವನಿಗೆ ಸಮರ್ಪಣಮಾಡುವ ಅರ್ಥವನ್ನು ಬೋಧಿಸುವ ಮಂತ್ರರಾಜನಾದ ಈ ಷಡಕ್ಷರ ಮಂತ್ರವು ಸರ್ವೋತ್ಕೃಷ್ಟವಾದದ್ದು. ಇದು ಸಕಲ ಸಿದ್ಧಿಗಳನ್ನು ಕರುಣಿಸುವ ಕಾಮಧೇನು.

೦೭. ಪಾದೋದಕ

ಗುರುವಿನ ಪಾದದ ನೀರು, ಅದು ಪವಿತ್ರವಾದ ನೀರು, ಲಿಂಗಪೂಜಾ ಸಮಯದಲ್ಲಿ ಸ್ವಲ್ಪ ಸ್ವಲ್ಪವನ್ನೇ ಬಳಸಲೆಂದು ಗುರು ಅನುಗ್ರಹಿಸಿದ ಪವಿತ್ರ ಜಲ ಪಾದೋಕ, ಅದನ್ನು ಪಡೆಯಲು ಒಂದು ನಿರ್ಧಿಷ್ಟ ಕ್ರಮವಿದ್ದು ಅದನ್ನು ಸೂಕ್ಷ್ಮವಾಗಿ ಪಾಲಿಸಿಕೊಂಡು ಬರಲಾಗುತ್ತಿದೆ.

ಮೈಲಾರ ಶರಣರು ಹೀಗೆ ಹೇಳಿದ್ದಾರೆ.

''ವೀರಶೈವರ ಆರಾದ್ಯ ವಸ್ತುಗಳೆನಿಸಿದ ಗುರು, ಲಿಂಗ, ಜಂಗಮರ ಆರಾಧನೆಯಿಂದ ಪ್ರತ್ಯಕ್ಷವಾಗಿ ದೊರೆಯುವ ಫಲಗಳು ಪಾದೋದಕ, ಪ್ರಸಾದಗಳು'' ಈ ಪಾದೋದಕದಲ್ಲಿ ಮೂರು ಬಗೆಯಾಗಿದೆ.

ಗುರುಪಾದೋದಕ, ಲಿಂಗಪಾದೋದಕ, ಜಂಗಮಪಾದೋದಕ ಎಂದು ಮೂರು ಬಗೆ ಸದ್ಗುರುವಿನ ಪಾದ ಪೂಜೆಯಿಂದ ಪ್ರಾಪ್ತವಾಗುವುದೇ ಗುರುಪಾದೋದಕ ವೆನಿಸುವುದು. ಲಿಂಗವನ್ನು ಪೂಜಿಸಿ ಪಡೆಯುವುದು ಲಿಂಗಪಾದೋದಕ, ಜಂಗಮನ ಪಾದಪೂಜೆಯಿಂದ ಲಭ್ಯವಾಗುವುದು ಜಂಗಮಪಾದೋದಕ.

ಪಾದೋದಕ ಶಬ್ದದಲ್ಲಿ ನಾಲ್ಕು ಅಕ್ಷರಗಳಿವೆ.

"ಪಾ"- ಎಂದರೆ - ಪರಮಜ್ಞಾನ ಉದಯವಾಗುವುದು.

"ದೋ"- ಎಂದರೆ - ಸಕಲದೋಷಗಳು ನಾಶವಾಗುವವು.

"ದ"- ಎಂದರೆ - ದರ್ಪದ ಹುಟ್ಟಡಗುವುದು.

"ಕ"- ಎಂದರೆ - ಕರ್ಮ ನಾಶವಾಗುವುದು.

ಈ ಪಾದೋದಕವು ಅಕಾಲ ಮೃತ್ಯು ಭಯ, ರೋಗ, ಪಾಪಗಳನ್ನು ಕಳೆಯುತ್ತದೆ. ಸಕಲ ಕಲ್ಯಾಣವನ್ನುಂಟುಮಾಡಿ, ಬಯಕೆಗಳನ್ನು ಪೂರೈಸುವುದಲ್ಲದೆ ಸರ್ವಸಿದ್ಧಿಗಳ ಫಲವನ್ನು ದೊರಕಿಸುತ್ತದೆ. ಈ ಪಾದೋದಕವು ಸದ್ಭಕ್ತನ ಸತ್ಕ್ರಿಯೆಯಿಂದ ಹಾಗೂ ಜಂಗಮನ ಸುಜ್ಞಾನಗಳ ಮಂಥನದಿಂದ ಉದ್ಭವಿಸುತ್ತದೆ. ಪರಬ್ರಹ್ಮರೂಪಿ ಪಾದೋದಕವು ಗುರುವಿಗೂ ಬೇಕು, ಜಂಗಮನಿಗೂ ಬೇಕು, ಲಿಂಗಕ್ಕೂ ಬೇಕು, ಪಾದೋದಕ ಪ್ರಸಾದಗಳೇ ತ್ರಿ ವಿಧಕ್ಕೆ ಚೇತನ, ಪ್ರಾಣಸ್ವರೂಪ, ಅವಿಲ್ಲದೇ ಗುರು-ಲಿಂಗ-ಜಂಗಮ ಬದುಕಲಾರವು ಗುರುಲಿಂಗ ಜಂಗಮ ಪಾದೋದಕಗಳಿಗೆ ಕ್ರಮವಾಗಿ ಕ್ರಿಯಾ ಪಾದೋದಕ, ಜ್ಞಾನಪಾದೋದಕ, ಭಾವಪಾದೋದಕ ಎಂದು ಕರೆಯುತ್ತಾರೆ. ಧಾರ್ಮಿಕವಾಗಿ ಕೆಲವರು ಇವುಗಳನ್ನು ದೀಕ್ಷಾ ಪಾದೋದಕ, ಶೀಕ್ಷಾ ಪಾದೋದಕ, ಮೋಕ್ಷಾ ಪಾದೋದಕ ಎಂದು ಕರೆಯುತ್ತಾರೆ.

೦೮. ಪ್ರಸಾದ

ವೀರಶೈವದಲ್ಲಿ ಶ್ರೀಗುರುವು ಶಿಷ್ಯನಮೇಲಿನ ತನ್ನ ಕೃಪೆ ಅಥವಾ ಅನುಗ್ರಹದ ದ್ಯೋತಕವಾಗಿ ಅವನಿಗೆ ಕೊಡುವ ವಸ್ತುವನ್ನು ಪ್ರಸಾದವೆಂದು ಕರೆಯಲಾಗಿದೆ. ಇದು ಸಾಮಾನ್ಯವಾಗಿ ಆಹಾರ ಪದಾರ್ಥ ಇಲ್ಲವೆ ಹಣ್ಣು ಹಂಪಲುಗಳ ರೂಪದಲ್ಲಿರುತ್ತದೆ. ಭಕ್ತಿ, ಶ್ರದ್ಧೆಯಿಂದ ಪ್ರಸಾದವನ್ನು ಪಡೆದುಕೊಂಡವನ ಜೀವನವು ಪರಮ ಪಾವನವಾಗುವದು, ಕಾಯಕ ಮಾಡಿ ಗುರು-ಲಿಂಗ-ಜಂಗಮರಿಗೆ ಪದಾರ್ಥವನ್ನು ಅರ್ಪಿಸಿ ತೃಪ್ತಿಪಡಿಸಿ ತಾನು ಸ್ವೀಕರಿಸುವಲ್ಲಿ ಶುದ್ಧ ಪ್ರಸಾದ, ಸಿದ್ಧ ಪ್ರಸಾದ, ಪ್ರಸಿದ್ಧ ಪ್ರಸಾದಗಮ ತನಗೆ ಪ್ರಾಪ್ತವಾಗುವವೆಂಬುದನ್ನು ಗುರು ದೇವನು ಭಕ್ತನಿಗೆ ಹೇಳಿದ್ದಾನೆ. ವೀರಶೈವರಿಗೆ ಯಾವ ದೈನಂದಿನ ಆಹಾರವಾದರೂ ಪ್ರಸಾದವಾಗಬಹುದು ಪೂಜೆ ಮುಗಿದ ತಕ್ಷಣ ಹಾಲು, ಹಣ್ಣು, ಅನ್ನ ಮುಂತಾದ ಆಹಾರ ವಸ್ತುಗಳನ್ನು ನೈವೇದ್ಯ ಮಾಡುತ್ತಾರೆ. ಭಕ್ತನು ಈ ಪ್ರಸಾದ ಸ್ವೀಕರಿಸಿದರೆ ಶುದ್ಧನಾಗುತ್ತಾನೆಂಬ ನಂಬಿಕೆ ಇದೆ.

ವೀರಶೈವ ಧರ್ಮದ ಮೌಲ್ಯಮಾಪನ

೦೧. ವೀರಶೈವವು ತಾತ್ವಿಕವಾದುದು ವ್ಯಕ್ತಿನಿಷ್ಠವಲ್ಲ.

೦೨. ಸಕಲ ಮಾನವರನ್ನು ತಾತ್ವಿಕ ಹಂತದಲ್ಲಿ ಒಂದುಗೂಡಿಸುವ ಧರ್ಮವಿದು.

೦೩. ಏಕದೇವೋಪಾಸನೆಯ ರೂಪದಲ್ಲಿ ಇಷ್ಟಲಿಂಗ ಪೂಜೆಯಿದೆ.

೦೪. ಇಷ್ಟಲಿಂಗ ಪೂಜೆಯಲ್ಲಿ ಧಾರ್ಮಿಕ ಸ್ವಾತಂತ್ರ್ಯವಿದೆ. ಇದೇ ಲಿಂಗಾಚಾರ.

೦೫. ಲಿಂಗಧಾರಿಯಾದವನು ಅನ್ಯರಿಗೆ ಕೈಯೊಡ್ಡದೆ ಕಾಯಕನಿಷ್ಠನಾಗುವದು.

೦೬. ಸಚ್ಚಾರಿತ್ರ್ಯ ವಂತನಾಗುವಿಕೆಯೇ ಸದಾಚಾರ

೦೭. ಶಿವಭಕ್ತರಲ್ಲಿ ಸಮಾನತೆ ಭಾವೈಕ್ಯತೆಯಿರಿಸುವುದೇ ಶಿವಾಚಾರ.

೦೮. ಧರ್ಮತತ್ವಗಳಲ್ಲಿ ನಿಷ್ಠಾವಂತಿಕೆಯಿಂದಿರುವುದು.

೦೯. ವ್ಯಕ್ತಿಗೌರವ, ಪರಸ್ಪರರಲ್ಲಿ ಭೃತ್ಯಭಾವನೇ ಭಕ್ತಿಯ ಲಕ್ಷಣ.

೧೦. ಲಿಂಗಪೂಜಿಸುವ ಕೈ ಅನ್ಯರನ್ನು ಬೇಡದಿರುವುದು.

೧೧. ಕಾಯಕದ ಸಾರ್ಥಕತೆಗೆ ದಾಸೋಹಭಾವವೇ ಮುಖ್ಯ.

೧೨. ಅಷ್ಟಾವರಣ ಜೀವನದ ಅವಿಭಾಜ್ಯ ಅಂಗವಾಗಬೇಕು.

೧೩. ಪಂಚಾಚಾರಗಳು ಮಾನವನ ಗುರಿಯಾಗಬೇಕು.

೧೪. ಷಟ್‌ಸ್ಥಲವು ಜೀವನ ಸಿದ್ಧಾಂತವಾಗಬೇಕು.

೧೫. ಕಾಣದ ಹರನಿಗಾಗಿ ಹವಣಿಸುವುದು ಲಿಂಗವಂತಿಕೆಯಲ್ಲ.

೧೬. ಸದುವಿನಯವೇ ಸದಾಶಿವನೊಲುಮೆ ಎಂಬುದನರಿಯಬೇಕು.

೧೭. ಪರಶಿವನ ಶಕ್ತಿ ಸಂಕೋಚವೇ ಜೀವನೆನಿಸಿದ್ದರಿಂದ ಆ ಷಟ್‌ಶಕ್ತಿಗಳ ಸಾಕ್ಷಾತ್ಕಾರವೇ ಶಿವಪೂಜೆಯೆಂದರಿಯಬೇಕು.

೧೮. ಶ್ರದ್ಧಾ ನಿಷ್ಠೆಗಳೇ ವೀರಶೈವದ ಅಡಿಗಲ್ಲು

೧೯. ಲಿಂಗಧಾರಿಯಾದವನು ಸ್ಥಾವರ ಲಿಂಗಗಳಿಗೆ ಶರಣಾಗದಿರುವುದು.

೨೦. ಹಾಲಹಿಡಿದು ಬೆಣ್ಣೆಯನರಸುವಂತೆ, ಇಷ್ಟಲಿಂಗವ ಹಿಡಿದು ಅನ್ಯಪುಣ್ಯತೀರ್ಥಕ್ಕೆ ಹೋಗುವದು ವ್ಯರ್ಥವೆಂದರಿಯಬೇಕು.

೨೧. ಸಿರಿಯುಳ್ಳವನು ಸಿರಿವಂತ, ಗುಣವುಳ್ಳವನು ಗುಣವಂತ ನೆನಿಸುವಂತೆ ಲಿಂಗಧಾರಿಯಾದವನೇ ಲಿಂಗವಂತನೆಂಬುದನ್ನು ಅರಿಯಬೇಕು.

೨೨. ವೀರಶೈವನಾದೆಡೆ ಪರಧನ-ಪರಸತಿಯರ ಮುಟ್ಟದಿರಬೇಕು.

೨೩. ಪರಹಿಂಸೆಯ ನೆಸಗದೆ ಸಕಲ ಜೀವಿಗಳಿಗೆ ಲೇಸಬಯಸಬೇಕು.

೨೪. ಒಡಲಳಿದೆಡೆಯೂ ಹಿಡಿದಾಚಾರವ ಬಿಡದೆ ನಡೆಸುವುದೇ ವೀರಶೈವತ್ವ.

೨೫. ಆಚಾರವೇ ಸ್ವರ್ಗ-ಅನಾಚಾರವೇ ನರಕ.

೨೬. ಮರ್ತ್ಯ ಲೋಕವೇ ಕರ್ತಾರನ ಕಮ್ಮಟ

೨೭. ದಯವೇ ಧರ್ಮದ ಮೂಲ.

೨೮. ಜೀವನದ ಅಭ್ಯುದಯ ಮುಕ್ತಿಯ ನೀರವ ಬೀರಬಲ್ಲದೆ ನಿಜಧರ್ಮ.

೨೯. ಮಾನವ ದೇಹಶುದ್ಧಿಗೆ ಲಿಂಗಧಾರಣೆ, ಮನವಿಕಾಸಕ್ಕೆ ಮಂತ್ರಧ್ಯಾನ, ಆತ್ಮ ಸಾಕ್ಷಾತ್ಕಾರಕ್ಕೆ ಶಿವಯೋಗ ಸಾಧನೆ ಅವಶ್ಯ.

೩೦. ಶಿವಭಕ್ತನಾದ ಬಳಿಕ ಶಾಂತನಾಗಿರಬೇಕು. ಸತ್ಯನುಡಿಯ ನುಡಿಯಬೇಕು.

೩೧. ವೀರಶೈವರು ನಿತ್ಯ ಮುಕ್ತರು, ವಿದೇಹ ಮುಕ್ತಿ ಇವರದಲ್ಲ.

೩೨. ವೀರಶೈವರು ಸಂಕಲ್ಪ ವಿಕಲ್ಪ ರಹಿತರು.

ಶರಣರು

೦೧. ಬಸವಣ್ಣ

೦೨. ಅಲ್ಲಮಪ್ರಭು

೦೩. ವೀರವಿರಾಗಿಣಿ ಅಕ್ಕಮಹಾದೇವಿ

೦೪. ಸೊನ್ನಲಿಗೆಯ ಸಿದ್ದರಾಮ

೦೫. ಬಸವಣ್ಣನ ನೆರಳು ಹಡಪದ ಅಪ್ಪಣ್ಣ

೦೬. ಮಡಿವಾಳ ಮಾಚಿದೇವ

೦೭. ಅಂಬಿಗರ ಚೌಡಯ್ಯ

೦೮. ಹುತಾತ್ಮರಾದ ಹರಳಯ್ಯ-ಮಧುವಯ್ಯ

೦೯. ಮಾದರ ಚನ್ನಯ್ಯ

೧೦. ಜೇಡರ ದಾಸಿಮಯ್ಯ

೧೧. ಅಕ್ಕನಾಗಮ್ಮ

೧೨. ಚನ್ನಬಸವಣ್ಣ

೧೩. ಮೋಳಿಗೆಯ ಮಾರಯ್ಯ-ಮಹಾದೇವಿಯಮ್ಮ.

೧೪. ಆಯ್ದಕ್ಕಿ ಮಾರಯ್ಯ-ಲಕ್ಕಮ್ಮ.

೧೫. ನುಲಿಯ ಚಂದಯ್ಯ.

೧೬. ಸೊಡ್ಡಳ ಬಾಚರಸ.

೧೭. ರಾಯಸದ ಮಂಚಣ್ಣ ಮತ್ತು ರಾಮಮ್ಮ.

೧೮. ಮೇದಾರ ಕೇತಯ್ಯ.

೧೯. ಅಮುಗಿ ದೇವಯ್ಯ.

೨೦. ಡೋಹರ ಕಕ್ಕಯ್ಯ.

೨೧. ಸಕಲೇಶ ಮಾದರಸ.

೨೨. ಹಾವಿನಾಳ ಕಲ್ಲಯ್ಯ.

೨೩. ಮೆರೆಮಿಂಡ ದೇವ.

೨೪. ಕಿನ್ನರಿ ಬ್ರಹ್ಮಯ್ಯ-ಕಲಕೇಶ ಬ್ರಹ್ಮಯ್ಯ

ಅಧ್ಯಾಯ - ೪

ವೀರಶೈವ ಸಮುದಾಯದ ಆಚರಣೆಗಳು

ಒಂದು ಸಮಾಜದ ವ್ಯಕ್ತಿಗಳು ಪರಂಪರಾಗತವಾಗಿ ನಡೆಸಿಕೊಂಡು ಬರುವ ನಿರ್ಧಿಷ್ಟವಾದ ನೀತಿ ನಡತೆಗಳಿಗೆ ಆ ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಬದ್ಧನಾಗಿ ನಡೆದು ಕೊಳ್ಳಬೇಕು. ಈ ನಡವಳಿಕೆ ಹೆಚ್ಚುಕಾಲ ರೂಢಿಗೆ ಬಂದಾಗ ಆಚಾರ ಎನಿಸಿಕೊಳ್ಳುತ್ತದೆ. ಈ ಆಚರಣೆಗಳಿಗೆ ನಿಯಮ ಸರಿ ತಪ್ಪುಗಳ ಭಾವನೆ ಮತ್ತು ಸೂಕ್ತ ಅಸೂಕ್ತವೆಂಬ ನಿರ್ಬಂಧಗಳು ಸೇರಿಕೊಳ್ಳುತ್ತವೆ. 'ಆಚಾರ' ಎಂಬ ಪದಕ್ಕೆ ನಡತೆ, ಶಿಷ್ಟಾಚಾರ ಆಚರಿಸುವ ಪದ್ಧತಿ, ಪರಂಪರಾಗತವಾಗಿ ಒದಗಿ ಬಂದ ನಿಯಮಿತ ನಿತ್ಯ ಕರ್ಮಗಳು, ಸಂಪ್ರದಾಯ,ಪದ್ಧತಿ, ವಾಡಿಕೆ ವಿದ್ಯುಕ್ತಕರ್ಮ ಹೀಗೆ ಹಲವಾರು ಅರ್ಥಗಳಿವೆ.

ಆಚಾರ ಮತಧರ್ಮಕ್ಕೆ ಸಂಬಂಧಿಸಿದ್ದು, ಎಲ್ಲ ಧರ್ಮಗಳಿಗೂ ಧರ್ಮಾಚರಣೆಗಳಿವೆ. ಕ್ರೈಸ್ತ ಸಭೆಗಳಲ್ಲಿ ವಿವಿಧವಾದ ಆಚರಣೆಗಳಿವೆ. ಆಲಯದೊಳಗೆ ಶಿಲುಬೆಯನ್ನು ನಿಲ್ಲಿಸುವುದು, ಮೇಣದ ಬತ್ತಿ ಹಚ್ಚುವುದು, ಆರಾಧನೆಯ ಸಮಯದಲ್ಲಿ ಧೂಪ ಹಾಕುವುದು, ಶಿಲುಬೆಗೆ ನಮಸ್ಕಾರ ಮಾಡುವುದು, ಮೊಣಕಾಲೂರಿ ಪ್ರಾರ್ಥನೆ ಮಾಡುವುದು. ಹಾಗೆಯೇ ಹಿಂದೂ ಧರ್ಮದಲ್ಲಿಯೂ ವಿವಿಧವಾದ ಆಚರಣೆಗಳಿವೆ. ದೇವಸ್ಥಾನದೊಳಗೆ ಹೋದ ಮೇಲೆ ದೇವರನ್ನು ತೊಳೆಯುವುದು, ದೇವರಿಗೆ ಹೂ ಮುಡಿಸಿ ಕಾಯಿ ಒಡೆದು ಊದುಬತ್ತಿ ಹಚ್ಚಿ ಪೂಜೆ ಮಾಡುವುದು ನಂತರ ಪ್ರಸಾದವನ್ನು ತೆಗೆದುಕೊಳ್ಳವರು. ಹೀಗೆ ಆಚರಣೆಯ ಬಗ್ಗೆ ತಿಳಿಯಲು ಹಲವಾರು ಉದಾಹರಣೆಗಳನ್ನು ಹೇಳಬಹುದು.

ಒಬ್ಬ ವ್ಯಕ್ತಿ ನಂಬುವ ತತ್ವ ಸಿದ್ಧಾಂತ ಮತ ಏನೇ ಇರಲಿ ಅವನ ಆಚರಣೆ ಅನುಷ್ಠಾನ ನಿತ್ಯ ಜೀವನದಲ್ಲಿ ತನ್ನ ಕೆಲಸ ಕಾರ್ಯಗಳ ರೀತಿ ಇವು ಬಹಳ ಮುಖ್ಯ, ಇಂಥ ಆಚರಣೆಯಿಂದಲೇ ಆತ ಧರ್ಮವನ್ನು ರಕ್ಷಿಸಿದಂತೆ ಆಗುವುದು. ಆಚಾರ ಇಷ್ಟು ಮುಖ್ಯವಾದುದರಿಂದ ಭಾರತದಲ್ಲಿ ಅತಿ ಪ್ರಾಚೀನ ಕಾಲದಲ್ಲೇ ಇದನ್ನು ನಿಯಮಿಸುವ ಧರ್ಮ ಶಾಸ್ತ್ರಗಳು ಜನ್ಮತಾಳಿದವು. ಇವುಗಳನ್ನು ಸ್ಮೃತಿ ಗುಂಪಿಗೆ ಸೇರಿಸಲಾಯಿತು. ಸ್ಮೃತಿಗಳೆಂದರೆ, ಮಾನವನ ಸ್ಮೃತಿಗೆ ನೆನಪಿಗೆ ಗೋಚರವಾಗುವ ಪರಂಪರಾಗತವಾದ ಕಾರ್ಯ ಪದ್ಧತಿಗಳನ್ನು ವಿಶದೀಕರಿಸುವ ಗ್ರಂಥಗಳು.

ಆಚರಣೆಯ ನಿರೂಪಣೆಯಲ್ಲಿ ಹಲವು ವಿಷಯಗಳು ಬರುತ್ತವೆ. ಸಂಸ್ಕಾರಗಳು ಶುದ್ಧೀಕರಣ ಕರ್ಮಗಳು, ನಾಲ್ಕು ವರ್ಣಗಳವರು (ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಹಾಗೂ ಶೂದ್ರ ಮತ್ತು ಸಂಕೀರ್ಣ ಜಾತಿಯವರು ಅನುಸರಿಸಬೇಕಾದ ಕರ್ಮಗಳು) ನಾಲ್ಕು ಆಶ್ರಯಗಳು ಧರ್ಮಗಳು (ಬ್ರಹ್ಮಚರ್ಯ, ಗೃಹಸ್ತ, ವಾನಪ್ರಸ್ಥ, ಮತ್ತು ಸನ್ಯಾಸ) ಅನುಷ್ಠಾನ ಮಾಡಬೇಕಾದ ಕರ್ಮಗಳು, ವಿವಾಹ, ಸ್ತ್ರೀಯರ ಧರ್ಮ, ಆಹಾರ ನಿಯಮ, ಪಂಚ ಮಹಾಯಜ್ಞಗಳು (ಬ್ರಹ್ಮದೇವ, ಪಿತೃ ಮಾನವ, ಮತ್ತು ಭೂತ) ಇವುಗಳ ತೃಪ್ತಿಗೆ ಆಚರಿಸಬೇಕಾದ ಕಾರ್ಯಗಳು, ವ್ರತಗಳು ಮತ್ತು ತೀರ್ಥ ಕ್ಷೇತ್ರಗಳ ಸಂದರ್ಶನ ಮುಂತಾದವುಗಳು ಬರುತ್ತವೆ. ನಮ್ಮ ಜನಪದರ ಜಾತ್ರೆ ಉತ್ಸವ ಮತ್ತು ಹಬ್ಬಗಳಲ್ಲಿ ಈ ಬಗೆಯ ನಿಯತವಾದ ಆಚಾರಗಳನ್ನು ನೋಡಬಹುದು.

ಆಚಾರದಲ್ಲಿ ಸಂಸ್ಕಾರಗಳು ಸೇರುತ್ತವೆ. ಇವುಗಳಲ್ಲಿ ಜನ್ಮಾರಬ್ಧದಿಂದ ಮರಣ ಪರ್ಯಂತ ಅನುಷ್ಠಾನ ಮಾಡಬೇಕಾದ ವಿಶೇಷ ಕರ್ಮಗಳು ಇವೆ. ಸಮಾಜವು ವ್ಯವಸ್ಥಿತವಾಗಿ ನಡೆಯಲು ಜನಪದರು ಕೆಲವೊಂದು ಆಚರಣೆಗಳನ್ನು ರೂಡಿಗೆ ತಂದರು. ರೂಢಿಗೆ ತಂದ ಇಂತಹ ಆಚಾರಗಳಲ್ಲಿ ಕೆಲವು ನಂಬಿಕೆಗಳನ್ನು ತಮ್ಮ ತೆಕ್ಕೆಯಲ್ಲಿಟ್ಟುಕೊಂಡು ಬಂದವುಗಳಾಗಿವೆ. ಉದಾ : ದೇವರಿಗೆ ಕೋಳಿ, ಕುರಿಗಳನ್ನು ಬಲಿಕೊಡುತ್ತಾರೆ. ಮೂರು ಕಲ್ಲಿಟ್ಟು ಪೂಜೆ ಮಾಡಿ ಕೋಳಿ ಬಾಯಿಗೆ ನೀರುಬಿಟ್ಟು ಕುಯ್ಯದ್ಮೇಲೆ ರಕ್ತವನ್ನು ಕಲ್ಲಿನ ಮೇಲೆ ಹಾಕಿದರೆ ದೇವರ ಹೆಸರು ಹೇಳಿದರೆ ದೇವರಿಗೆ ಸಲ್ಲುತ್ತದಂತೆ.

ಜನಪದ ಗುಂಪು ನಿಸರ್ಗದಲ್ಲೆ ಜೀವಿಸುತ್ತಿದ್ದುದರಿಂದ, ನಿಸರ್ಗದ ವ್ಯಾಪಾರಗಳನ್ನು ವಿಸ್ಮಯ ಭಯದಿಂದ ನೋಡಿ, ನಿಸರ್ಗವನ್ನು ತನ್ನದೇ ರೀತಿಯಲ್ಲೇ ಅರಿಯುವ ಪ್ರಯತ್ನ ಮಾಡಿತು. ಪ್ರತಿನಿತ್ಯ ಉದಯಿಸುವ, ಮುಳುಗುವ ಸೂರ್ಯ, ಬೀಸುವ ಗಾಳಿ ಸುರಿಯುವ ಮಳೆಯ ಬಗ್ಗೆ ಜನಪದ ಗುಂಪು ಭಯ, ವಿಸ್ಮಯವನ್ನು ತೋರಿ ಅವುಗಳಲ್ಲಿ ಅತಿಯಾದ ಶಕ್ತಿ ಇದೆ ಎಂದು ಅವುಗಳನ್ನು ಒಲಿಸಿಕೊಳ್ಳುವ ಪ್ರಯತ್ನ ಮಾಡಿತು. ಇವುಗಳನ್ನು ಜನಪದರು ತನ್ನ ರಕ್ಷಣೆಗಾಗಿ, ಒಳತಿಗಾಗಿ, ಅಗೋಚರ ಶಕ್ತಿಯನ್ನು ಗಾಢವಾಗಿ ನಂಬಿ, ದೈವಿಕರಣಗೊಳಿಸಿ ಪೂಜಿಸುವ, ಆರಾಧಿಸುವ ಪರಂಪರೆ ಜಗತ್ತಿನ ಅನೇಕ ಜನಪದ ಗುಂಪುಗಳಲ್ಲಿ ರೂಢಿಗೆ ಬಂದಿತು. ಈ ನಂಬಿಕೆಗಳು ಕ್ರಿಯೆಯ ಮೂಲಕ ಆಚರಣೆಗಳಾಗಿ ಜನಪದ ಸಮುದಾಯದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡವು. 'ಆಚರಣೆ' ಎಂಬ ಪದ ಇಂಗ್ಲೀಷಿನ Ritual ಎಂಬ ಪದಕ್ಕೆ ಸಂವಾದಿಯಾದುದು Ritu ಎಂಬ ಲ್ಯಾಟಿನ್ ಮೂಲದ ಪದ, ಇದರ ಅರ್ಥ ಅಲ್ಲೆ ಸಂಪ್ರದಾಯ ಎಂದಿದೆ.

ದಾರ್ಮಿಕ ಪಾವಿತ್ರ್ಯದ ಜೊತೆಗೆ ಅತಿಮಾನುಷ ಶಕ್ತಿಗಳ ಭಯವೂ ಮಿಗಿಲಾದುದೇ ಆದುದರಿಂದ

ಆಚರಣೆಗಳನ್ನು ಅತ್ಯಂತ ಶ್ರದ್ಧೆಯಿಂದ ನಡೆಸಲಾಗುತ್ತದೆ. ನುಡಿಯಲ್ಲೇ ನಡೆಯಲ್ಲೇ ಸಣ್ಣ ತಪ್ಪಾದರೂ ಅನರ್ಥವಾದೀತೆಂಬ ಅಂಜಿಕೆ ಪ್ರತಿಯೊಂದು ಆಚರಣೆಯ ಹಿನ್ನೆಲೆಯಲ್ಲಿ ಇದ್ದೇ ಇರುತ್ತದೆ. ಉಪವಾಸವಿರುವುದು ಮೀಸಲು ವಸ್ತುಗಳನ್ನು ತಗೆದಿಡುವುದು ಹಿಂದಿನಿಂದ ನಡೆದು ಬಂದ ಪದ್ಧತಿಯಲ್ಲೆ ಸ್ವಲ್ಪವೂ ಲೋಪಬರದಂತೆ ಎಚ್ಚರ ವಹಿಸುವುದು. ಸಂಬಂಧ ಪಟ್ಟ ವ್ಯಕ್ತಿಯಿಂದಲೇ ಕ್ರಿಯೆಗಳನ್ನು ನಡೆಸುವುದು ಈ ಮುಂತಾದ ಕ್ರಮಗಳನ್ನು ಗಮನಿಸಿದಾಗ ಮತದ ಬಾಹ್ಯಾಚರಣೆಗಳಾದ ಇವು ಬದುಕಿನಲ್ಲಿ ಎಷ್ಟು ಪ್ರಮುಖ ಪಾತ್ರ ವಹಿಸುತ್ತವೆ ಎಂಬುದೇ ವೇದ್ಯವಾಗುತ್ತದೆ.

ಆಚರಣೆಗಳಲ್ಲಿ ಮೂರು ಬಗೆ ಇವೆ. ೦೧. ಪ್ರಾರ್ಥನೆ ೦೨.ಅರ್ಪಣೆ, ೦೩. ದೈಹಿಕ ಸಂಜ್ಞೆಗಳು ಮತ್ತು ಇತರೆ ಕ್ರಿಯೆಗಳು, ಮದುವೆ ಮುಂಜಿಗಳು, ಹಬ್ಬ ಹರಿದಿನಗಳ ಆಚರಣೆಗಳು, ಗೌರಿ ಹಬ್ಬದಲ್ಲಿ ಸುಮಂಗಲೆಯರು ಸ್ವಜಾತೀಯ ಅಥವಾ ಸ್ವಮತದ ಇತರ ಸುಮಂಗಲೆಯರಿಗೆ ಫಲ ತಾಂಬೂಲವನ್ನು ಕೊಡುವುದು, ಸಂಕ್ರಾಂತಿ ಹಬ್ಬದಲ್ಲಿ ಎಳ್ಳು ಹಂಚುವುದು, ಹೋಳಿ ಹಬ್ಬದಲ್ಲೆ ಬಣ್ಣದ ನೀರನ್ನು ಇತರರ ಮೇಲಿ ಚೆಲ್ಲುವುದು, ಯಾತ್ರಾ ಸ್ಥಳಗಳಿಗೆ ಹೋಗುವುದು, ಶವ ಸಂಸ್ಕಾರ ಮಾಡುವುದು, ಇತ್ಯಾದಿ ಇವೆಲ್ಲಕ್ಕೂ ವೈಧ್ಯಕೀಯ ಮನೋ ವೈಜ್ಞಾನಿಕ ಆಧಾರಗಳ ಜೊತೆಗೆ ನಂಬಿಕೆ ಪ್ರಬಲವಾಗಿರುತ್ತದೆ. ಇವುಗಳ ಆಚರಣೆಯಿಂದ ಮನಸ್ಸಿನಲ್ಲಿರುವ ಭಯ ಭೀತಿಗಳು ಅಪರಾಧ ಭಾವನೆಗಳು, ಸಂಶಯಗಳು ಬಿಡುಗಡೆಯಾಗಿ ಮನಸ್ಸಿಗೆ ನೆಮ್ಮದಿ ಉಂಟಾಗುತ್ತದೆ. ಮನುಷ್ಯ ತಾನು ನಡೆಸಿಕೊಂಡು ಬಂದ ವಿಶಿಷ್ಟ ಆಚರಣೆಗಳ ಬಗ್ಗೆ ಹೊಂದಿದ ಶ್ರದ್ಧೆ, ಉತ್ಸಾಹ, ನಂಬಿಕೆಗಳು ಸಂಪ್ರದಾಯಗಳ ಸೃಷ್ಟಿಗೆ ಕಾರಣವಾದವು. ಇಂತಹ ಸಂಪ್ರದಾಯ ಆಚರಣೆಗಳು ತಲೆಮಾರಿನಿಂದ ತಲೆಮಾರಿಗೆ ಹರಿಯುತ್ತಾ ಬಂದವು. ಭಾರತದಲ್ಲೆ ಆಚರಣೆಯಲ್ಲಿರುವ ಬಹುತೇಕ ಹಬ್ಬಗಳು ಕೃಷಿಯ ಕ್ರಿಯಾಚರಣೆಯ ಹಿನ್ನೆಲೆಯಲ್ಲಿ ಮೂಡಿ ಬಂದವುಗಳಾಗಿವೆ.

ಧಾರ್ಮಿಕ ಪಾವಿತ್ರ್ಯದ ಜೊತೆಗೆ ಅತಿಮಾನುಷ ಶಕ್ತಿಗಳ ಭಯವೂ ಮಿಗಿಲಾದುದೇ ಆದುದರಿಂದ ಆಚರಣೆಯನ್ನು ಅತ್ಯಂತ. ಶ್ರದ್ಧೆಯಿಂದ ನಡೆಸಲಾಗುತ್ತದೆ. ನುಡಿಯಲ್ಲಿ ನಡೆಯಲ್ಲಿ ಸಣ್ಣ ತಪ್ಪಾದರೂ ಅನರ್ಥವಾದೀತೆಂಬ ಅಂಜಿಕೆ ಪ್ರತಿಯೊಂದು ಆಚರಣೆಯ ಹಿನ್ನೆಲೆಯಲ್ಲಿ ಇದ್ದೇ ಇರುತ್ತದೆ. ಉಪವಾಸ ವಿರುವುದು ಮೀಸಲು ವಸ್ತುಗಳು ತೆಗೆದಿಡುವುದು, ಹಿಂದಿನಿಂದ ನಡೆದು ಬಂದ ಪದ್ಧತಿಯಲ್ಲೆ ಸ್ವಲ್ಪವೂ ಲೋಪ ಬರದಂತೆ ಎಚ್ಚರ ವಹಿಸುವುದು, ಸಂಬಂಧಪಟ್ಟ ವ್ಯಕ್ತಿಯಿಂದಲೇ ಕ್ರಿಯೆಗಳನ್ನು ನಡೆಸುವುದನ್ನು ಗಮನಿಸಿದಾಗ ಬಾಹ್ಯಾಚರಣೆಗಳಾದ ಇವು ಬದುಕಿನಲ್ಲಿ ಎಷ್ಟು ಪ್ರಮುಖ ಪಾತ್ರ ವಹಿಸುತ್ತಿವೆ ಎಂಬುದು ವೇದ್ಯವಾಗುತ್ತದೆ.

ಆಚರಣೆಗಳನ್ನು ವೈಯಕ್ತಿಕ ಎನ್ನುವುದಕ್ಕಿಂತ ಸಾಮೂಹಿಕ ಎನ್ನಬಹುದು. ಏಕೆಂದರೆ ಆಚರಣೆಗಳ ಉದ್ದೇಶಗಳಲ್ಲಿ ವೈಯಕ್ತಿಕತೆಯನ್ನು ಹೋಗಲಾಡಿಸಿ ಸಾಮೂಹಿಕತೆಯನ್ನು ಸಂಸ್ಥಾಪಿಸುವುದೂ ಒಂದು. ಅಲ್ಲದೆ ತಾರ್ಕಿಕಾಸಕ್ತಿಯುಳ್ಳ ಹಾಗೂ ಕೆಲವು ದೈಹಿಕ ಅವಶ್ಯಕತೆಗಳನ್ನು ನೆರವೇರಿಸುವ ಕ್ರಿಯೆಗಳನ್ನು ಆಚರಣೆಗಳೆಂದೇ ಕರೆಯಲಾಗುವುದಿಲ್ಲ. ಆದರೆ ಕ್ರಿಯೆಗಳಿಗೆ ತಾರ್ಕಿಕಾಸಕ್ತಿಯ ಪವಿತ್ರೋದ್ದೇಶ ಕಾರಣವಾಗಿದ್ದರೆ ಆಗ ಅವು ಆಚರಣಗಳೆನಿಸಿಕೊಳ್ಳುತ್ತವೆ.

ಉದಾ: ನಮ್ಮ ಆರೋಗ್ಯ ರಕ್ಷಣೆಗಾಗಿ ನಿತ್ಯವೂ ದೇಹದ ಕೊಳೆಯನ್ನು ತೊಳೆದುಕೊಳ್ಳಲು ಮಾಡುವ ಸ್ನಾನ, ಆಚರಣೆ ಎನ್ನಿಸಿಕೊಳ್ಳುವುದಿಲ್ಲ. ಆದರೆ ಪುಣ್ಯ ಬರುತ್ತದೆಂಬ ಆ ತಾರ್ಕಿಕೋದ್ದೇಶದಿಂದ ಪುಣ್ಯ ಕ್ಷೇತ್ರಗಳಲ್ಲಿ ಮಾಡುವ ಸ್ನಾನ ಆಚರಣೆ ಎನಿಸಿಕೊಳ್ಳುತ್ತದೆ.

ಆಚರಣೆ ಎಂಬುದು ಪ್ರಾದಿಮ ಧಾರ್ಮಿಕ ಕ್ರಿಯೆಯ ಮುಂದುವರಿದ ರೂಪ ಅತೀಂದ್ರಿಯ ಶಕ್ತಿ ಅಥವಾ ಶಕ್ತಿಗಳಿಂದ ಅನುಗ್ರಹ ಲೋಸುಗ ಕೈಕೊಂಡ ಕ್ರಿಯೆ ಇದಾಗಿದೆ. ಕ್ರಮವತ್ತಾದ, ವಿಧಿ ಪೂರ್ವಕವಾದ ಪರಂಪರಾನುಗತವಾಗಿ ನಡೆದು ಬಂದ ರೀತಿಯಲ್ಲೆ ನಡೆಸುವ ಇಂಥ ಕ್ರಿಯೆಗಳ ಹಿನ್ನೆಲೆಯಲ್ಲಿ ನಂಬಿಕೆ ಆಳವಾಗಿ ಬೇರು ಬಿಟ್ಟಿರುತ್ತದೆ. ಧರ್ಮ ಇದರ ಅಡಿಗಲ್ಲು, ಧಾರ್ಮಿಕ ವಿಧಿಗಳಿಂದ ತಾನುನಂಬಿದ ಪವಿತ್ರ ವಸ್ತುಗಳ ಪ್ರೀತಿಯನ್ನು ಸಂಪಾದಿಸಬಹುದೆಂದು ಮನುಷ್ಯ ಎಣಿಸುತ್ತಾನೆ. ಇದು ಕ್ರಮವತ್ತಾದ ಅರ್ಚನಾಕ್ರಮವೂ ಹೌದು, ತಾರ್ಕಿಕ ಹಿನ್ನೆಲೆಗಳಲ್ಲಿ ಸಂಪ್ರದಾಯ ನಿಷ್ಠ ರೀತಿಯಲ್ಲೆ ನಡೆಸುವ ಒಂದು ಕ್ರಿಯೆಯೂ ಹೌದು.

ಸಮಾಜದ ಎಲ್ಲಾ ಸ್ತರಗಳಲ್ಲೂ ನಂಬಿಕೆ ಆಚರಣೆಗಳು ಅಸ್ತಿತ್ವದಲ್ಲಿವೆ. ಮಾನವನು ಸಮಾಜಕ್ಕೆ ಅದರ ಕಟ್ಟು ಕಟ್ಟಳೆಗಳಿಗೆ ಬದ್ಧನಾಗಿ ನಡೆದು ಕೊಳ್ಳವುದರಿಂದ ಇವುಗಳಿಂದ ಹೊರತಾಗಿರಲು ಸಾಧ್ಯವಿಲ್ಲ. ನಂಬಿಕೆ ಆಚರಣೆಗಳು ಬಹುತೇಕವಾಗಿ ಪ್ರಕೃತಿ ಮೂಲದವು. ಆದ್ದರಿಂದ ಇವುಗಳನ್ನು ದೈವೀಸಂಬಂಧದ ಸೃಷ್ಟಿ ಎನ್ನಬಹುದು ಪ್ರಕೃತಿಯ ಮಡಿಲಲ್ಲೆ ಬದುಕ ಬೇಕಾಗಿದ್ದ ಆದಿಮಾನವ ಭಯ ಭಕ್ತಿಗಳಿಂದ ಮತ್ತು ಮನಸ್ಸಿನ ಅಸ್ಥಿರ ಭಾವನೆಗಳಿಂದ ದೈವಿಕ ನಂಬಿಕೆಗಳನ್ನು ಆಚರಣೆಯ ಕ್ರಮದಲ್ಲಿ ಉಳಿಸಿಕೊಂಡಿದ್ದಾನೆ. ಭಯ ಭಕ್ತಿಗಳನ್ನೊಳಗೊಂಡ ಆಚರಣೆಗಳು ಅನೇಕ ವಿಧಗಳಲ್ಲಿ ಅವುಗಳಿಗೆ ತೃಪ್ತಿಪಡಿಸುವ ಸಲುವಾಗಿ ಬೆಳೆದುಕೊಂಡು ಬಂದಿವೆ.

ಉದಾ: ಸತ್ತವರಿಗೆ ತಿಥಿ ಮಾಡದೆ ಹೋದರೆ ದೆವ್ವಗಳಾಗುತ್ತಾರೆ.

೪.೧ : ಜೀವನಾವರ್ತನ ಆಚರಣೆಗಳು

ಸೀಮಂತ ಮತ್ತು ನಾಮಕರಣ

ವ್ಯಕ್ತಿಯ ಬದುಕಿನ ಮೊದಲ ನಿಲ್ದಾಣವು ಜನನ. ಆದರೆ ಇದಕ್ಕೂ ಮೊದಲೇ ಜೀವದ ಚಟುವಟಿಕೆ ಪ್ರಾರಂಭವಾಗುತ್ತದೆ. ತಾಯಿಯು ಗರ್ಭವತಿಯಾಗುತ್ತಲೇ, ಮಗುವಿನ ದೇಹದ ವಿಕಾಸವು ಗರ್ಭವು ನಿಂತ ಕೂಡಲೇ ಪ್ರಾರಂಭವಾದರೆ ಜೀವದ ಪ್ರವೇಶ ಶಿಶುವಿನ ದೇಹಕ್ಕೆ ಆರುತಿಂಗಳು ತುಂಬಿದ ಮೇಲೆ ಪ್ರಾರಂಭವಾಗುತ್ತದೆ. ಆದ್ದರಿಂದ ಮಗುವು ಭೂಮಿಗೆ ಬರುವ ಪೂರ್ವದಲ್ಲಿಯೆ ಅದಕ್ಕೆ ಧಾರ್ಮಿಕ ಸಂಸ್ಕಾರ ಸಿಕ್ಕಬೇಕು. ತಾಯಿಯ ಮೂಲಕ ಗರ್ಭಸ್ತ ಶಿಶುವು ಹೇಗೆ ಆಹಾರವನ್ನು ಪಡೆಯುತ್ತದೆಯೋ ಹಾಗೆಯೇ ಧರ್ಮ ಸಂಸ್ಕಾರ ಮಂತ್ರೋಪದೇಶ ಪಡೆಯಬೇಕು, ಎನ್ನುವುದೇ ಲಿಂಗಾಯತ ಧರ್ಮದ ಮೂಲಸಿದ್ಧಾಂತ.

ಈ ವಿಶೇಷ ಸಂಸ್ಕಾರ ಜಗತ್ತಿನ ಮತ್ತಾವುದೇ ಧರ್ಮದಲ್ಲಿಯೂ ಇಲ್ಲ. ಇಂದು ಲಿಂಗವಂತ ಸಮಾಜ ಬಿಟ್ಟು ಬೇರೆ ಯಾವ ಭಾರತೀಯ ಧರ್ಮದಲ್ಲೂ ಈ ಸಂಸ್ಕಾರ ಇಲ್ಲ. ಮತ್ತು ಧರ್ಮ-ಸಂಸ್ಕೃತಿ ನಶಿಸಿ ಹೋಗುತ್ತಿರುವ ಈ ಕಾಲದಲ್ಲಿ ಕೇವಲ ವಚನ ಸಾಹಿತ್ಯದ ಶರಣ ಸಂಸ್ಕಾರ ಇರುವ ಮನೆತನಗಳಲ್ಲಿ ಮಾತ್ರ ಈ ಪದ್ದತಿ ಆಚರಣೆಯಲ್ಲಿದೆ.

ಇಂದಿನ ಆಧುನಿಕ ವಿಜ್ಞಾನವು ಮಗುವಿನ ಮನಃಸ್ಥಿತಿ, ಬುದ್ಧಿಶಕ್ತಿ, ಮುಂತಾದುವೆಲ್ಲವೂ ತಾಯಿಯ ಮನಃಸ್ಥಿತಿ, ಚಟುವಟಿಕೆ, ಆಚಾರ-ವಿಚಾರ, ಹೆರಿಗೆಯ ಸಮಯದಲ್ಲಿ ಆಗುವ ವೇದನೆ, ಇವೆಲ್ಲವುಗಳ ಮೇಲೆ ಅವಲಂಬಿಸಿದೆ ಎಂದು ಹೇಳಬಹುದು. ತಾಯಿಯು ಗರ್ಭವತಿ ಇದ್ದಾಗ ಒಳ್ಳೆಯ ಚಿಂತನೆ-ಅಧ್ಯಯನ ಮುಂತಾದುವುಗಳಲ್ಲಿ ತೊಡಗಿ ಮನಸ್ಸಿನ ಸ್ಥಿತಿಯನ್ನು ಉತ್ತಮವಾಗಿ ಕಾಯ್ದುಕೊಂಡರೆ ಮಗುವು ಸಹ ಉತ್ತಮ ಸ್ವಭಾವದ್ದು ಆಗುವುದು. ಇದಕ್ಕೆ ಪೂರಕವಾಗಲೆಂದು ಈ ಗರ್ಭ ಲಿಂಗಧಾರಣ ಅಳವಡಿಸಲಾಗಿದೆ.

ಸೀಮಂತ

ಪ್ರಥಮ ಗರ್ಭಧಾರಣೆಯಾದ ಐದು ಅಥವಾ ಆರು ಅಥವಾ ಎಂಟನೇ ತಿಂಗಳುಗಳಲ್ಲಿ ಮಾಡುವ ಶುಭ ಸಂಸ್ಕಾರ ಕಾರ್ಯವೇ ಸೀಮಂತ, ಆರನೇ ತಿಂಗಳಿನಲ್ಲಿ ಮಗುವಿಗೆ ಜೀವಾತ್ಮ ಸೇರುತ್ತದೆ. ದರ್ಬೆಯನ್ನು ಹಾಲಿನಲ್ಲಿ ಅರಿದು ತಾಯಿಯ ಮೂಗಿಗೆ ಸ್ವಲ್ಪ ಹಾಕಿದರೆ ಅದು ಮಗುವಿಗೆ ಸೇರುತ್ತೆ,

ಆಗ ಮಕ್ಕಳಿಗೆ ಜ್ಞಾನೋದಯ ಆಗುತ್ತದೆ. ಈ ಸೀಮಂತ ಮಾಡುವ ಉದ್ದೇಶ ತಾಯಿ ಮತ್ತು ಮಗು ಆಯುರಾರೋಗ್ಯ ಪಡಿಯಲಿ, ಉತ್ತಮ ಸಂತಾನವಾಗಲಿ, ಮುತ್ತೈದೆಯಾಗಿ ನೂರ್ಕಾಲ ಬಾಳಲಿ ಎಂದು ಈ ಆಚರಣೆಯ ಉದ್ದೇಶವಾಗಿದೆ.

ಗರ್ಭಿಣಿಗೆ ಬೈತಲೆಯನ್ನು ತೆಗೆದು ವೀಣಾನಾದಪೂರ್ವಕವಾಗಿ ಮಂತ್ರವನ್ನು ಉಚ್ಚರಿಸಿದರೆ ಆ ನಾದವು ತರಂಗ ತರಂಗವಾಗಿ ಗರ್ಭಿಣಿಯ ಗರ್ಭವನ್ನು ಹೊಕ್ಕು ಅಲ್ಲಿರುವ ಪಿಂಡದಲ್ಲಿ ಚೇತನವು ಬಂದು ವೈದಿಕವಾಗುವುದು ಈ ಪಿಂಡವು ಮಗುವಾಗಿ ಈಚೆಗೆ ಬಂದಾಗ ಆ ಮಗುವಿನ ಬುದ್ಧಿಯೇ ವೈದಿಕ ಮಾರ್ಗದಲ್ಲಿ ಓಡುವುದು. ಆದ್ದರಿಂದ ಸೀಮಂತ ಶಾಸ್ತ್ರ ಮಾಡುವರು. ಪ್ರಥಮ ಗರ್ಭ ಸಂಸ್ಕಾರದ ಮೂಲಕವಾಗಿ ಎಲ್ಲಾ ಗರ್ಭಗಳಿಗೂ ಸಂಸ್ಕಾರವಾಗಲೆಂದು ಸೀಮಂತ ಕಾರ್ಯದ ಉದ್ದೇಶವಾಗಿದೆ. ಗರ್ಭವು ಶುದ್ಧಿಯಾಗಿ ಯಾವ ತೊಂದರೆಯೂ ಇಲ್ಲದೆ ಹೆಂಡತಿಯ ಹೆರಿಗೆಯಾಗಲಿ ಎಂಬುದು ಉದ್ದೇಶ. ಈ ಗಿಡಮರಗಳಿಗೆ ಹೊಸ ಹಸಿರು ಚಿಗುರು ಹೇಗೆ ಬರುತ್ತದೆಯೊ ಅದೇ ರೀತಿ ತಾಯಿಗೆ ಹಸಿರು ಸೀರೆ, ಹಸಿರು ಬಳೆ, ಹಸಿರು ಕಣ, ತೊಡಿಸಿ ಮಗುವನ್ನು ಸ್ವಾಗತಿಸುತ್ತಾರೆ. ಈ ಸೀಮಂತವು ಮಹಿಳೆಯ ಧಾರ್ಮಿಕ ವಿಧಿಯ ಕಾರ್ಯವಾಗಿದೆ.

ಗರ್ಭಿಣಿಯು ಎಷ್ಟು ಸಂತೋಷದಿಂದ ಇರುವಳೋ, ಅಲ್ಲದೆ ಅವಳ ಮನಸ್ಸು ಒಳ್ಳೆಯ ಬಾವನೆಯಿಂದ, ಒಳ್ಳೆಯ ಭಕ್ತಿ, ಒಳ್ಳೆಯ ಉದ್ದೇಶ ಇದ್ದರೆ ಇವು ಮಗುವಿನ ಮೇಲೆ ಪರಿಣಾಮ ಬೀರಿ ತೇಜಸ್ವಿಯೂ, ಧಾರ್ಮಿಕನು, ಪರೋಪಕಾರಿಯೂ ದೇವಂತ ಭಕ್ತನು, ಆಚಾರಶೀಲನು, ವಿನಯಾದಿ ಸದ್ಗುಣ ಭರಿತನೂ, ವಿಧ್ಯಾಶೀಲನು, ಈ ಎಲ್ಲಾ ಗುಣಗಳು ಇರುವಂತ ಸುಂದರ ಮಗು ಜನಿಸುತ್ತದೆ.

ಸೀಮಂತ ಮಾಡುವ ಕಾರ್ಯ

ಸೀಮಂತ ಕಾರ್ಯ ಮಾಡುವುದಕ್ಕೆ ಬೇಕಾಗುವ ಸಾಮಗ್ರಿಗಳು

ಹಸಿರು ರೇಷ್ಮೆ ಸೀರೆ, ಹಸಿರು ಕಣ, ಹಸಿರು ಬಳೆ, ಹೂವು, ಹಣ್ಣುಗಳು, ಒಡವೆ, 'ಉಡಿ' ತುಂಬುವುದಕ್ಕೆ ಐದು ಲಿಂಬೆಹಣ್ಣು, ಐದು ಹತ್ತಿಹಣ್ಣು, ಐದು ಒಣ ಖರ್ಜೂರ, ಐದು ತರಹದ ಸಿಹಿತಿಂಡಿಗಳು ಬೇಕಾಗುತ್ತವೆ.

ಸೀಮಂತ ಮೂರನೇ ತಿಂಗನಳಿನಲ್ಲಿ ಕಾಳು ಕುಬ್ಬಸ ಅಂತಾ ತಾಯಿಮನೆಯವರು ಗಂಡನ ಮನೆಗೆ ಬಂದು ಉಡಿ ತುಂಬಲಿಕ್ಕೆ ಹತ್ತಿಹಣ್ಣು, ಲಿಂಬೆಹಣ್ಣು, ಕರ್ಜೂರ, ಹಸಿರು ಕಣ, ಇದನ್ನೆಲ್ಲಾ ಉಡಿತುಂಬಿ

ಆರತಿ ಮಾಡುತ್ತಾರೆ. ಸಿಹಿ ಅಡಿಗೆ ಮಾಡಿ ಎಲ್ಲಾರೂ ಊಟ ಮಾಡುತ್ತಾರೆ. ನಂತರ ಎಂಟನೇ ತಿಂಗಳಿನಲ್ಲಿ ಸೀಮಂತ ಮಾಡುತ್ತಾರೆ.

ಸೀಮಂತವನ್ನು ಲನೇ ತಿಂಗಳಲ್ಲಿ ಒಂದು ಒಳ್ಳೆಯ ದಿನ ನೋಡಿ ಮಾಡುತ್ತಾರೆ. ತಾಯಿಯ ಮನೆಯಿಂದ ಈ ಕಾರ್ಯದ ಹಿಂದಿನ ದಿನ ಬುತ್ತಿಯನ್ನು ತೆಗೆದುಕೊಂಡು ಬರುತ್ತಾರೆ. ನೂರಾರು ಸಜ್ಜೆರೊಟ್ಟಿ, ನೂರಾರು ಕರ್ಜಿಕಾಯಿ, ಜುನುಕದ ವಡೆ, ಎಣ್ಣೆಕಾಯಿ ಬದನೆಕಾಯಿ, ಕಾಳು ಉಸುಳಿ, ಶೇಂಗ ಚಟ್ನಿ, ಪುಟಾಣಿ ಚಟ್ನಿ, ಅಗಸೆ ಚಟ್ನಿ, ಮೊಸರನ್ನ, ಇವೆಲ್ಲವನ್ನು ತಾಯಿಯ ಮನೆಯವರು ಗಂಡನಮನೆಗೆ ತೆಗೆದುಕೊಂಡು ಹೋಗುವರು, ಕಾರ್ಯದ ಹಿಂದಿನ ದಿನವೇ ಗಂಡನ ಮನೆಯವರು ಈ ಬುತ್ತಿಯನ್ನು ತಮಗೆ ಬೇಕಾದವರಿಗೆಲ್ಲಾ ಇದನ್ನು ಹಂಚುತ್ತಾರೆ.

ಸೀಮಂತ ಮಾಡುವ ದಿನ ಗರ್ಭಿಣಿಗೆ ಐದು ಜನ ಉತ್ತೈದೆಯರು ಹಾಲು ತುಪ್ಪ ಹಾಕಿ, ಅರಿಶಿಣ ಹಾಕಿ, ಎಣ್ಣೆ ಹಚ್ಚಿ ಸ್ನಾನ ಮಾಡಿಸುತ್ತಾರೆ. ನಂತರ ತವರು ಮನೆಯವರು ತಂದ ಸೀರೆ, ಹೂ, ಒಡವೆ, ಹಸಿರು ಬಳೆ ತೊಡಿಸಿ ಅವಳಿಗೆ ಅಲಂಕಾರ ಮಾಡುತ್ತಾರೆ. ನಂತರ ದಂಡಿ ಕಟ್ಟಿ ಗಂಡನನ್ನು ಜೊತೆಯಲ್ಲಿ ಕೂರಿಸಿ ಇಬ್ಬರಿಗೂ ಹಾರ ಹಾಕಿ ಆರತಿ ಸಮಯದಲ್ಲಿ ಹುಡುಗಿಯ ತಾಯಿ ಮನೆಯವರು ಅಳಿಯನಿಗೆ ಬಂಗಾರ ಮತ್ತು ಬಟ್ಟೆಯನ್ನು ಕೊಟ್ಟು ಆರತಿ ಮಾಡುತ್ತಾರೆ. ಆ ಸಮಯದಲ್ಲಿ ಗಂಡನಿಗೆ ಹೆಂಡತಿಯ ಹೆಸರನ್ನು, ಹೆಂಡತಿಗೆ ಗಂಡನ ಹೆಸರನ್ನು ಕೇಳಿ ಉಡುಗೊರೆ ಕೊಡುತ್ತಾರೆ. ಸೀಮಂತದ ಕಾರ್ಯದ ದಿನ ಮನೆಯ ದೇವರಿಗೆ ಅಭಿಷೇಕ ಪೂಜೆಯನ್ನು ಮಾಡಿಸುತ್ತಾರೆ. ಗರ್ಭಿಣಿಗೆ ಲಿಂಗದ ಪೂಜೆಯನ್ನು ಮಾಡಿಸುತ್ತಾರೆ. ಈ ಸೀಮಂತ ಕಾರ್ಯ ಮಾಡಲು ಕಾರಣ ಮಗುವಿಗೆ ಜನ್ಮ ನೀಡುವಾಗ ಅವಳು ಪ್ರತಿ ಬಾರಿಯು ಪುನರ್ಜನ್ಮ ಪಡೆದಂತೆ ಅದಕ್ಕೆ ಅವಳು ಸಂತೋಷದಿಂದ ಇರುವುದು ಮುಖ್ಯ. ಬಂದ ಮುತ್ತೈದೆಯರು ಅವಳಿಗೆ ಆಶೀರ್ವಾದ ಮಾಡಿದರೆ ಅವಳಿಗೆ ಧೈರ್ಯ ಹೆಚ್ಚಾಗುತ್ತದೆ.

ಈ ಸೀಮಂತದ ಕಾರ್ಯವನ್ನು ಶ್ರೀಮಂತರು ಹೆಚ್ಚು ಆಡಂಬರದಿಂದ ಮಾಡುತ್ತಾರೆ. ಮಧ್ಯಮದವರು ಸಾಧಾರಣವಾಗಿ ಈ ಕಾರ್ಯಮಾಡಿ ಮುಗಿಸುತ್ತಾರೆ. ಈ ಕಾರ್ಯ ಹೆಚ್ಚಾಗಿ ಗಂಡನ ಮನೆಯಲ್ಲಿಯೇ ನಡೆಯುತ್ತದೆ.

ಗರ್ಭಿಣಿ ಇದ್ದಾಗ ಕೊಡುವ ಆಹಾರಗಳು

ಮಗುವನ್ನು ಈ ಲೋಕಕ್ಕೆ ತರಲು ಒಬ್ಬ ತಾಯಿ ಪಡುವ ವೇದನೆ ಅಷ್ಟಿಷ್ಟಲ್ಲ. ಹುಟ್ಟಲಿರುವ ಮಗು ಆರೋಗ್ಯವಾಗಿ ಅಂದವಾಗಿರಬೇಕೆಂದು ಬಯಸುತ್ತಾ ಅದಕ್ಕಾಗಿ ಏನೆಲ್ಲಾ ಪ್ರಯತ್ನ ಎಂತಹ ಕಷ್ಟವನ್ನಾದರೂ ಸಹಿಸುತ್ತಾಳೆ. ಆನಂದದಿಂದ ಕೂಡಿದ ಮಾತೃತ್ವ ಅನೇಕ ನೋವುಗಳನ್ನು ನುಂಗಿ

ನಗುನಗುತ್ತಾ ಭರಿಸುತ್ತದೆ. ವಾಂತಿ, ಸುಸ್ತು ಕಾಡುತ್ತಿದ್ದರೂ ತಿನ್ನಲು ಆಗದಿದ್ದರೂ ತನಗೆ ಹಿಡಿಸಿದರೂ ಹಿಡಿಸದಿದ್ದರೂ ಸಮತೋಲನ ಪೌಷ್ಠಿಕಾಹಾರ ಸೇವಿಸಲೇಬೇಕು. ಎಷ್ಟೇ ಕೆಲಸಗಳಿದ್ದರೂ ಸಮಯಕ್ಕೆ ಸರಿಯಾಗಿ ವಿಶ್ರಾಂತಿ, ಸ್ವಲ್ಪ ಮಟ್ಟಿಗೆ ಶಾರೀರಿಕ ವ್ಯಾಯಾಮ ಅತ್ಯಗತ್ಯ. ಇಲ್ಲದಿದ್ದರೆ ಹೆರಿಗೆ ಸಮಯದಲ್ಲಿ ತಾಯಿ ಮಗು ಇಬ್ಬರಿಗೂ ಅಪಾಯ ತಪ್ಪಿದಲ್ಲ.

ಗರ್ಭವತಿ ಇದ್ದಾಗ ಎಂತಹ ಪರಿಸ್ಥಿತಿಯಲ್ಲೂ ಆಹಾರ ಬಿಡಬಾರದು, ಪೌಷ್ಠಿಕ ಆಹಾರ ಸೇವಿಸದಿದ್ದರೆ ಸುಸ್ತು, ವಾಂತಿ, ಕಣ್ಣು ತಿರುಗುವುದು, ಹೊಟ್ಟೆನೋವು, ಕಾಲುನೋವು ಬರುವುದು, ನಾಲ್ಕರಿಂದ ಒಂಭತ್ತು ತಿಂಗಳವರೆಗೂ ಪ್ರತಿವಾರವೂ ಒಂದೂವರೆಯಿಂದ ಎರಡು ಕೆ.ಜಿ.ಯಷ್ಟು ಬೆಳೆಯಬೇಕು. ಮಗು ಈರೀತಿ ಬೆಳೆಯಬೇಕೆಂದರೆ ಸಮತೋಲನ ಆಹಾರವನ್ನು ಸೇವಿಸಬೇಕು.

ಆಹಾರದ ಬಗ್ಗೆ ಮೊದಲಿನ ಮೂರು ತಿಂಗಳಲ್ಲಿ ವಹಿಸಬೇಕಾದ ಎಚ್ಚರಿಕೆ ಎಂದರೆ ಗರ್ಭದರಿಸಿದ ತಕ್ಷಣ ಹೆಚ್ಚು ತಿನ್ನ ಬೇಕೆಂದುಕೊಳ್ಳುವುದು ಸರಿಯಲ್ಲ. ಮಗು ಇದೆ ಎಂದು ಎರಡರಷ್ಟು ತಿಂದರೆ ಪ್ರಯೋಜನಕ್ಕಿಂತ ತೊಂದರೆಗಳೆ ಹೆಚ್ಚು, ಪೌಷ್ಠಿಕ ಆಹಾರಗಳನ್ನು ಸೇವಿಸಬೇಕು. ಇತ್ತ ತಾಯಿಗೆ ಮತ್ತು ಶಿಶುವಿಗೂ ಸಹ ಪ್ರೊಟೀನ್, ಕ್ಯಾಲ್ಸಿಯಂ, ಐರನ್, ಕೆಲವು ಮುಖ್ಯವಾದ ವಿಟಮಿನ್ ಅಗತ್ಯವಿದೆ. ಒಂದೇ ಬಾರಿ ಹೆಚ್ಚಿಗೆ ಸೇವಿಸುವ ಆತುರಬೇಡ, ಹೊಟ್ಟೆ ಭಾರವಾಗದಂತೆ ದಿನಕ್ಕೆ ಆರು ಬಾರಿ ಊಟ ಮಾಡಬೇಕು. ಬೆಳಗಿನ ಜಾವ ಎದ್ದ ತಕ್ಷಣ ಬ್ರೆಡ್ ಟೋಸ್ಟ್, ಇಡ್ಲಿಯಂತಹ ಎಣ್ಣೆಯಿಲ್ಲದ ಪದಾರ್ಥಗಳನ್ನು ಸೇವಿಸಬೇಕು. ಅಧಿಕ ವಾಸನೆ ಬರುವ ಪದಾರ್ಥಗಳನ್ನು ಹತ್ತಿರ ಸುಳಿಯಲು ಬಿಡಬೇಡಿ. ಊಟದ ಜೊತೆ ಜೊತೆಗೆ ದ್ರವಪದಾರ್ಥಗಳನ್ನು ಸೇವಿಸಬಾರದು. ಊಟದ ಮೊದಲು ಅಥವಾ ಊಟದ ನಂತರ ಸೇವಿಸಬೇಕು. ಮೊಸರು ಸೇವಿಸಬೇಕು, ಹಾಲಿನಲ್ಲಿ ಕೇಸರಿಯನ್ನು ಬೆರೆಸಿ ಕುಡಿಯಬೇಕು, ಹಣ್ಣು, ತರಕಾರಿಗಳನ್ನು ಚೆನ್ನಾಗಿ ತಿನ್ನಬೇಕು. ಅವಳು ಬಯಸುವ ಆಹಾರವನ್ನು ಕೊಡಬೇಕು. ಮಿತಿ ಮೀರಿದ ಔಷದ/ಮಾತ್ರೆಯನ್ನು ಬಳಸಬಾರದು. ಇದರಿಂದ ಗರ್ಭಪಾತವಾಗುವ ಸಂಭವವಿದೆ. ವೈದ್ಯರ ಸಲಹೆಯನ್ನು ಪಡೆದು ನಡೆಯಬೇಕು. ಸಿಹಿ ತಿಂಡಿಗಳನ್ನು ತಿನ್ನಬಾರದು. ಕೊಬ್ಬು ಅಧಿಕವಾಗಿರುವ ಪದಾರ್ಥಗಳಾದ ಹಾಲು, ಬೆಲ್ಲವನ್ನು ಕೊಡಬೇಕು. ಜಾಸ್ತಿ ನೀರನ್ನು ಕುಡಿಯಬೇಕು. ಗರ್ಭಿಣಿಯು ಚೆನ್ನಾಗಿ ಕೆಲಸಮಾಡಿದರೆ ಹೆರಿಗೆ ಸುಲಭವಾಗಿ ಆಗುತ್ತದೆ.

ಗರ್ಭಿಣಿಯ ಬಯಕೆಗಳು

ಈ ಸಮಯದಲ್ಲಿ ಅವಳ ಮನಸ್ಸಿನಲ್ಲಿ ಅನೇಕ ಬಯಕೆಗಳು ಉಂಟಾಗುತ್ತವೆ. ಗರ್ಭಿಣಿಯರ ಬಯಕೆಗಳನ್ನು ತೀರಿಸದಿದ್ದರೆ 'ನಾಳೆ ಕಿವಿ ಸೋರುವ ಮಗು ಹುಟ್ಟುತ್ತದೆ', ಎಂದು ಹಿರಿಯರು ಹೇಳಿದ

ಮಾತು ಈ ಸಮಯದಲ್ಲಿ ಅವಳು ಹೆಚ್ಚಾಗಿ ಹುಳಿ ತಿನ್ನಲು ಬಯಸುತ್ತಾಳೆ. ಸುಣ್ಣ, ಇದ್ದಿಲು, ಮಣ್ಣು, ಅಕ್ಕಿ, ವಿಭೂತಿ, ಕೆಮ್ಮಣ್ಣು, ಅಲ್ಲದೆ ಮಳೆ ಬಂದಾಗ ಅದರ ಮಣ್ಣಿನ ವಾಸನೆ ಇಷ್ಟಪಡುತ್ತಾರೆ. ಅವರು ಬಯಸಿದ ಸೀರೆ, ಒಡವೆ ಕೊಡಿಸಬೇಕು. ಒಟ್ಟಿನಲ್ಲಿ ಅವರು ಏನನ್ನು ಕೇಳುತ್ತಾರೆಯೋ ಅದನ್ನೆಲ್ಲ ನೆರವೇರಿಸಬೇಕು. ಇದರಿಂದ ಅವಳು ಸಂತೋಷವಾಗಿ ಇರುತ್ತಾಳೆ. ಬಯಕೆಗಳು ಈಡೇರದೆ ಇದ್ದಾಗ ಅವಳ ಕಾಲು ಊದಿಕೊಳ್ಳುತ್ತವೆ, ಎಂದು ಹಿರಿಯರು ತಿಳಿಸಿದ್ದಾರೆ.

ಗರ್ಭಿಣಿ ಇದ್ದಾಗ ಕೆಲವು ಎಚ್ಚರಿಕೆಗಳು

ಗರ್ಭಿಣಿಯು ಬಹಳ ಎಚ್ಚರಿಕೆಯಿಂದ ಇರಬೇಕು. ಅದಕ್ಕಾಗಿ ಕೆಲವು ಅಂಶಗಳನ್ನು ಪಾಲಿಸಬೇಕು.

೦೧. ಸೂರ್ಯ ಗ್ರಹಣದ ಸಮಯದಲ್ಲಿ ಮನೆಯ ಹೊರಗಡೆ ಹೋಗಬಾರದು, ಒಳಗಡೆ ಇರಬೇಕು.

೦೨. ತನ್ನ ಮಗುವಿನ ಒಳ್ಳೆಯ ಭವಿಷ್ಯದ ಬಗ್ಗೆ ಆಲೋಚಿಸಬೇಕು.

೦೩. ರಾಮಾಯಣ, ಮಹಾಭಾರತ ಹೀಗೆ ಹಲವಾರು ಪುರಾಣದ ಕಥೆಗಳು, ಜ್ಞಾನಾಭಿವೃದ್ಧಿಯ ಪುಸ್ತಕಗಳನ್ನು ಹೆಚ್ಚು ಓದಿ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕು. ಆಗ ಮಗುವಿನ ಬೆಳವಣಿಗೆಯ ಮೇಲೆ ಪರಿಣಾಮ ಬೀರುತ್ತದೆ.

೦೪. ಯಾವಾಗಲೂ ಒಳ್ಳೆಯ ವಿಷಯಗಳನ್ನೇ ಕೇಳಿಕೊಳ್ಳಬೇಕು. ಅನಾವಶ್ಯಕವಾದ ಮನಸ್ಸಿಗೆ ಹಿಂಸೆ ನೀಡುವ ವಿಷಯ ಅಥವಾ ಘಟನೆಗಳ ಬಗ್ಗೆ ಗಮನ ನೀಡಬಾರದು. ಇದರಿಂದ ಮಗುವಿನ ಬೆಳವಣಿಗೆಗೆ ಕುಂಠಿತವಾಗುತ್ತದೆ.

೦೫. ಅವಳು ನಡೆಯುವಾಗ ಬಹಳ ಎಚ್ಚರಿಕೆಯಿಂದ ಇರಬೇಕು.

೦೬. ಗ್ರಹಣ ಇದ್ದಾಗ ಗರ್ಭಿಣಿಯು ಯಾವುದೇ ತರಕಾರಿಗಳನ್ನು ಹೆಚ್ಚಬಾರದು ಇದರಿಂದ ಮಕ್ಕಳು ಅಂಗವಿಕಲತೆಯಿಂದ ಹುಟ್ಟುತ್ತವೆ.

೦೭. ಗ್ರಹಣ ಬಿಟ್ಟನಂತರ ಗರ್ಭಿಣಿಗೆ ಬಾವಿನೀರಿಗೆ ಯಾವುದೇ ದೋಷವಿಲ್ಲದ ಕಾರಣ ಆ ನೀರನ್ನು ಕಾಸಿ ಸ್ನಾನ ಮಾಡಿಸುತ್ತಾರೆ.

೦೮. ಗರ್ಭಿಣಿಯು ಒಳ್ಳೆಯ ವಾತಾವರಣದಲ್ಲಿದ್ದು, ಒಳ್ಳೆಯ ರೀತಿ ನಡೆದುಕೊಳ್ಳಬೇಕು. ತನ್ನ ಮತ್ತು ತನ್ನ ಮಗುವಿನ ಬಗ್ಗೆ ಹೆಚ್ಚು ಗಮನ ಇರಬೇಕು.

ಬಾಣಂತಿಯ ಕಾರ್ಯ

ಹೆರಿಗೆ ಆಗುವುದು ಮೊದಲು ತವರ ಮನೆಯಲ್ಲಿಯೇ ಬಾಣಂತಿಗೆ ಕೆಲವು "ಶಾಸ್ತ್ರಗಳನ್ನು" ಮಾಡುತ್ತಾರೆ. ಬಾಣಂತಿ ಮತ್ತು ಮಗುವನ್ನು ಮನೆಗೆ ಕರೆದುಕೊಂಡು ಬಂದಾಗ ಬಾಗಿಲಲ್ಲಿ ನಿಲ್ಲಿಸಿ ಆರತಿ ಮಾಡಿ ಮನೆಯೊಳಗೆ ಕರೆದುಕೊಳ್ಳುತ್ತಾರೆ. ಮಣೆಯ ಮೇಲೆ ಬಾಣಂತಿಯನ್ನು ಕೂರಿಸಿ ಅರಿಷಿಣ, ಕುಂಕುಮ, ಹೂ, ಬೇವಿನ ಸೊಪ್ಪು, ನೆನೆದ ಅಕ್ಕಿ, ಕಡ್ಲೆಕಾಳು, ತಂಬಿಟ್ಟು, ವೀಳೆದೆಲೆ, ಅಡಿಕೆ, ತಾಂಬೂಲ ಕೊಡಬೇಕು. ಮತ್ತು ಮಗು ಬಾಣಂತಿಗೆ ಆರತಿ ಮಾಡಬೇಕು. ತಿನ್ನಲು ಎಲೆ ಅಡಿಕೆ ಕೊಡಬೇಕು.

ಐದನೆಯ ದಿನಕ್ಕೆ ಮಗು-ಬಾಣಂತಿಗೆ ಎಣ್ಣೆ ಸ್ನಾನ ಮಾಡಿಸಿ ಸ್ವಾಮಿಗಳನ್ನು ಕರೆಸಿ ವಸ್ತ್ರದಲ್ಲಿ ಲಿಂಗವನ್ನು ಕಟ್ಟಿ ಅದಕ್ಕೆ ಬಿಲ್ವ ಪತ್ರೆಯಿಂದ ಶಾಸ್ತ್ರೋಕ್ತವಾಗಿ ಪೂಜೆ ಮಾಡಿಸಿ ಸ್ವಾಮೀಜಿಯವರು ಮಗುವಿನ ಕತ್ತಿಗೆ ಲಿಂಗವನ್ನು ಕಟ್ಟುತ್ತಾರೆ. ಎರಡು ತಿಂಗಳು ತುಂಬಿದ ಮೇಲೆ ಗಂಗೆ ಪೂಜೆ ಮಾಡಿ ಮಗು-ಬಾಣಂತಿ ದೇವಸ್ಥಾನಕ್ಕೆ ಹೋಗಿ ಬರುತ್ತಾರೆ. ನಂತರ ಮೂರನೆ ತಿಂಗಳಲ್ಲಿ ಬೇರೆಯವರ ಮನೆಗೆ ಹೋಗಿ ಉಡಿ ತುಂಬಿಸಿಕೊಂಡು ಬರುತ್ತಾರೆ. ಬಾಣಂತಿ ಮತ್ತು ಮಗುವನ್ನು ಅಕ್ಕಪಕ್ಕದವರು ನೋಡಬೇಕೆಂದರೆ ಕೈ-ಕಾಲುತೊಳೆದು ಮನೆಯೊಳಗೆ ಹೋಗಬೇಕು. ಮಗುವಿಗೆ ಒಂದು ತಿಂಗಳು ತುಂಬುವವರೆಗೂ ಅದನ್ನು ಯಾರಿಗೂ ಹೆಚ್ಚಾಗಿ ತೋರಿಸುವುದಿಲ್ಲ. ಕೇರು ಬೀಜವನ್ನು ಮಗುವಿನ ತೊಟ್ಟಿಲಲ್ಲಿ ಇಟ್ಟಿರುತ್ತಾರೆ. ಸೂಜಿಯನ್ನು ಕಾಸಿ ಕೇರು ಬೀಜಕ್ಕೆ ಚುಚ್ಚುತ್ತಾರೆ. ಅದು ಕಪ್ಪಗೆ ಆದಾಗ ಅದನ್ನು ಮಗುವಿನ ಕಾಲಿಗೆ ಹಚ್ಚುತ್ತಾರೆ. ಏಕೆಂದರೆ ಮಗು ದೊಡ್ಡದಾದ ಮೇಲೆ ಅದನ್ನು ಗೊತ್ತಿಲ್ಲದೆ ಮುಟ್ಟಿದರೆ ಕೈ-ಕಾಲುಗಳಿಗೆ ಬಾವು ಬರುತ್ತವೆ. ಹಾಗೆ ಬಾರದಿರಲೆಂದು ಮಾಡುತ್ತಾರೆ.

ಬಾಣಂತಿಯನ್ನು ನೋಡಿಕೊಳ್ಳುವುದು ಮತ್ತು ಆಹಾರಗಳನ್ನು ಕೊಡುವ ವಿಧಾನ

ಬಾಣಂತಿ ಇದ್ದಾಗ ಅವಳ ಆರೋಗ್ಯ ತುಂಬಾ ಸೂಕ್ಷ್ಮವಾಗಿರುತ್ತದೆ. ಅವಳು ಯಾವುದೇ ರೀತಿ ಯೋಚನೆ ಮಾಡಲು ಅವಕಾಶ ಕೊಡಬಾರದು. ತಕ್ಷಣ ಯಾವುದೇ ಆಘಾತ ವಿಷಯಗಳನ್ನು ತಿಳಿಸಬಾರದು, ಬಾಣಂತಿಗೆ ಶೀತ ಆಗದೇ ಇರುವ ಹಾಗೆ ನೋಡಿಕಳ್ಳಬೇಕು. ಶೀತ ಆದರೆ ಮೈಯೆಲ್ಲಾ ಊದುವುದು, ಬಾಣಂತಿ ತುಂಬಾ ಯೋಚನೆ ಮಾಡಿದರೆ ಬಾಣಂತಿ ಸನ್ನಿ ಅಂತ ಆಗುತ್ತದೆ. ಬಾಣಂತಿ ಹೆಚ್ಚಾಗಿ ಓದಬಾರದು, ಟಿ.ವಿ.ನೋಡಬಾರದು, ಜಾಸ್ತಿ ಹೊತ್ತು ಕೂರಬಾರದು.

ಬಾಣಂತಿಗೆ ಅವಳದೇ ಆದ ಒಂದು ಕೊಠಡಿಯನ್ನು ಏರ್ಪಡಿಸಬೇಕು. ಹಗ್ಗದ ಮಂಚವನ್ನು ಹಾಕಿ ಮಲಗಿಸಬೇಕು. ಆ ಕೋಣೆ ತುಂಬಾ ಬೆಚ್ಚಗಿರಬೇಕು. ಬೆಳಿಗ್ಗೆ ೫ ಗಂಟೆಗೆ ಎಬ್ಬಿಸಿ ಮೈಗೆಲ್ಲಾ ಅರಿಶಿಣ,

ಎಣ್ಣೆ ಹಚ್ಚಿ ಬಿಸಿ ನೀರಿನಲ್ಲಿ ಸ್ನಾನ ಮಾಡಿಸಬೇಕು. ಅಗ್ಗಿಷ್ಟಿಕೆಯನ್ನು ತಂದು ಅವಳ ಕೈ-ಕಾಲು, ಬೆನ್ನು ಎಲ್ಲಾ ಕೆಂಡದಲ್ಲಿಯೇ ಕಾಯಿಸಬೇಕು. ಕೆಂಡಕ್ಕೆ ಸಾಮ್ರಾಣಿ ಪುಡಿ ಹಾಕಿ ತಲೆಯನ್ನು ಒಣಗಿಸಬೇಕು. ಅವಳ ಸೊಂಟಕ್ಕೆ ಬಿಗಿಯಾಗಿ ಬಟ್ಟೆಯನ್ನು ಕಟ್ಟುತ್ತಾರೆ. ನಂತರ ಅಂಟಿನ ಉಂಡೆ, ಹಾಲು ಕೊಡುತ್ತಾರೆ, ನಂತರ ಮಲಗಿಸುತ್ತಾರೆ, ಬಿಸಿ ಬಿಸಿಯಾದ ತಿಂಡಿಯನ್ನು ಅವಳು ಎದ್ದಮೇಲೆ ಕೊಡುತ್ತಾರೆ. ನಂತರ ಮದ್ಯಾಹ್ನ ಸಣ್ಣಕ್ಕಿ ಅನ್ನ ಮೆಣಸಿನ ಸಾರು ಅಥವಾ ಬೆಳ್ಳುಳ್ಳಿ, ಬಜೆ, ತುಪ್ಪ ಕೊಡುತ್ತಾರೆ. ಮತ್ತೆ ಸಂಜೆ ಅರಿಸಿನ ಎಣ್ಣೆ ಹಚ್ಚಿ ಮೈಗೆ ಸ್ನಾನ ಮಾಡಿಸುವರು. ಬಾಣಂತಿಗೆ ಆದಷ್ಟು ಹೆಚ್ಚಿನ ಪ್ರಮಾಣದಲ್ಲಿ ತುಪ್ಪ ಕೊಡಬೇಕು.

ಮೊದನೆಯ ದಿನ ಅಂದರೆ ಮಗುವಾದ ತಕ್ಷಣ ಜಾಯಿಕಾಯಿ, ಸಕ್ಕರೆ ಎರಡೂ ನೆನೆಯುವಷ್ಟು ತುಪ್ಪ ಹಾಕಿ ೪ ಸ್ಪೂನ್ ಬಾಣಂತಿಗೆ ಕೊಡುವುದು, ಇದನ್ನೂ ಮೂರು ದಿನ ಕೊಡಬೇಕು. ಬೆಳಿಗ್ಗೆ ಎದ್ದ ತಕ್ಷಣ ಖಾಲಿ ಹೊಟ್ಟೆಗೆ ಅಳವಿಯಲ್ಲಿ ಪಾಯಸ ಮಾಡಿ ಕೊಡುತ್ತಾರೆ. ಮೂರು ದಿನ 'ಕೊಬ್ಬರಿಕಾರ' ಕೊಡುವುದು, ಇವೆಲ್ಲ ಕೊಡುವುದರಿಂದ ಸೊಂಟಕ್ಕೆ ಶಕ್ತಿ ಬರುತ್ತದೆ. ಮೂರುದಿನ ಅಂಟನ್ನು ಹಾಲಿನಲ್ಲಿ ನೆನೆಸಿ ಕೊಡುತ್ತಾರೆ. ಸಣ್ಣಕ್ಕಿ ಅನ್ನವನ್ನು ಮೂರು ತಿಂಗಳು ಮಾಡಿಕೊಡುವರು. ದಿನಕ್ಕೆ ಒಂದು ಸಾರಿ ಬೆಲ್ಲ ಹಾಕಿ ಸಜ್ಜಿಗೆಯನ್ನು ಮಾಡಿಕೊಡುತ್ತಾರೆ. ಒಂದು ತಿಂಗಳು ತುಂಬುವುದರೊಳಗೆ ಅಂಟಿನ ಉಂಡೆಯನ್ನು ಕೊಡುವರು.

ತಾಯಿ ಮಗುವಿನ ಲಾಲನೆ, ಪಾಲನೆ

ಮಗುವನ್ನು ತಾಯಿ ತನ್ನ ಕಣ್ಣಿನ ರೆಪ್ಪೆತರಹ ನೋಡಿಕೊಳ್ಳುತ್ತಾಳೆ. ಮಗುವಿಗೆ ಯಾವುದೇ ರೀತಿ ತೊಂದರೆ ಬಂದರು ಸಹಿಸುವುದಿಲ್ಲ. ತನಗೆ ಎಷ್ಟೇ ಕಷ್ಟ ಇದ್ದರು ಅದನ್ನು ಮರೆತು ಮಗುವಿಗೆ ಅಡಚಣೆಯಾಗದಂತೆ ನೋಡಿ ಕೊಳ್ಳುತ್ತಾಳೆ. ತನ್ನ ಮಗುವಿಗೆ ಕಾಲಕಾಲಕ್ಕೆ ಹಾಲು, ಆಹಾರ ಕೊಟ್ಟು ನೋಡಿಕೊಳ್ಳುತ್ತಾಳೆ. ಮಗುವಿನ ಆಟ, ಅದರ ನಗು ನೋಡಿ ಆನಂದಪಡೆಯುತ್ತಾಳೆ. ತನ್ನ ನೋವು ಏನೆ ಇದ್ದರು ಮರೆಯುತ್ತಾಳೆ. ತನ್ನ ಮಗುವನ್ನು ಎಷ್ಟೇ ನೋಡಿದರು ತೃಪ್ತಿಯಾಗುವುದಿಲ್ಲ. ಇದರಿಂದ ಮಗುವಿಗೆ ತಾಯಿಯ ದೃಷ್ಟಿಯೇ ಆಗುತ್ತದೆ. ಮಗುವಿಗೆ ೩ ತಿಂಗಳು ತುಂಬಿದಾಗ ಅದು ಮಗುಚಿಕೊಂಡು ಮುಂದೆ ಬರುವುದು, ನಂತರ ಅದು ಎದ್ದು ಕೂರುವುದು ನಿಲ್ಲುವಾಗ, ಹೆಜ್ಜೆ ಮುಂದೆ ಇಡುವಾಗ, ಆಗ ತಾಯಿ ತನ್ನ ಸುತ್ತಲೂ ಇರುವ ಜನರನ್ನು ಮರೆತು ಮಗುವಿನ ಜೊತೆ ಮಗುವಾಗಿ ಆಡುವಳು.

ತಾಯಿ ಮತ್ತು ಮಗುವಿನ ಸಂಬಂಧವೆಂಬುದು ಪ್ರಕೃತಿ ಸೃಷ್ಟಿಸಿದ ಅದ್ಭುತಗಳಲ್ಲೊಂದು, ತಾಯ್ತನದ ಕಲ್ಪನೆಯೇ ಹೆಣ್ಣಿಗೆ ಸುಖ ಸಂತೋಷ ನೀಡುತ್ತದೆ. ಹೆಣ್ಣು ಮಗು ಹುಟ್ಟಿದರೆ ಅದಕ್ಕೆ ತಾಯ್ತನದ

ಗುಣ ಬೆಳೆದಿರುತ್ತದೆ. ತನಗೆ ಬುದ್ಧಿ ಬಂದಾಗ ಗೊಂಬೆಯನ್ನೇ ಮಗುವೆಂದು ತಿಳಿದು ಅದಕ್ಕೆ ಸ್ನಾನ, ಊಟ ಮಾಡಿಸುತ್ತಾಳೆ. ಗಂಡು ಮಕ್ಕಳು ಕಾರು, ಚೆಂಡು ಎಂದು ಆಟವಾಡುತ್ತವೆ. ತಾಯಿಯೇ ಮಗುವಿನ ತೊದಲ ಮಾತನ್ನು ಕೇಳಿ ಸಂತೋಷ ಪಡುತ್ತಾಳೆ. ತನ್ನ ಮಗುವಿಗಾಗಿ ಆಕೆ ಸರ್ವಸ್ವವನ್ನು ತ್ಯಾಗ ಮಾಡಬಲ್ಲಳು. ಪ್ರಾಣವನ್ನು ಪಣವಾಗಿಡಬಲ್ಲಳು, ಇವರ ಬಾಂಧವ್ಯದ ಬೆಸುಗೆ ಇಷ್ಟು ಬಲವಾಗಿಲ್ಲದಿದ್ದಲ್ಲಿ ಮನುಕುಲದ ಸಂತತಿ ಬೆಳೆಯುತ್ತಲೇ ಇರಲಿಲ್ಲ.

ಮಗುವಿಗೆ ತಾಯಿಯ ಎದೆ ಹಾಲನ್ನು ಕುಡಿಸುತ್ತಾರೆ. ಈ ಹಾಲು ರೋಗ ನಿರೋಧಕ ಶಕ್ತಿಯನ್ನು ಹೊಂದಿರುತ್ತದೆ. ದಿನಾಲು ಮಗುವಿಗೆ ಕೊಬ್ಬರಿ ಎಣ್ಣೆಯನ್ನು ಹಚ್ಚಿ ಮಸಾಜ್ ಮಾಡಿಸುತ್ತಾರೆ. ಮಗುವಿಗೆ ಹಾಲು, ಅರಿಶಿಣ ಹಚ್ಚಿ ಸ್ನಾನ ಮಾಡಿಸುತ್ತಾರೆ. ನಂತರ ಮೈಯನ್ನು ಮೆತ್ತನೆಯ ಬಟ್ಟೆಯಿಂದ ಒರೆಸಿ ಸಾಮ್ರಾಣಿ ಹೊಗೆ ಹಾಕಿ ತಲೆ ಆರಿಸಿ ನಂತರ ತಲೆಗೆ 'ಕುಂಚಗಿ' ಕಟ್ಟಿ ಮೈಗೆ ಬಿಗಿಯಾಗಿ ಬಟ್ಟೆ ಸುತ್ತಿ ಜೋಲಿಯಲ್ಲಿ ಮಲಗಿಸುತ್ತಾರೆ. ೨೦ ದಿನದ ನಂತರ ಮಗುವಿಗೆ ತಾಯಿಯ ಹಾಲಿನಿಂದ ಗುಟಿ (ಸುತ್ತುಖಾರ) ಕೊಡುತ್ತಾರೆ. ಅಂದರೆ ಬಾದಾಮಿ, ಕಲ್ಲು ಸಕ್ಕರೆ, ಬಜೆ, ಉತ್ತತ್ತಿ, ಜಾಯಿಕಾಯಿ, ಎದೆ ಹಾಲಿನಲ್ಲಿ ಇವೆಲ್ಲವನ್ನು ತೇಯ್ದು ಮಗುವಿಗೆ ತಿನ್ನಿಸುತ್ತಾರೆ. ಇದನ್ನು ೩ ತಿಂಗಳು ಆಗುವ ತನಕ ಕೊಡುವರು. ಚಳಿಗಾಲದಲ್ಲಿ ಮಗುವನ್ನು ತುಂಬಾ ಬೆಚ್ಚಗೆ ಇಡಬೇಕು. ೫ ತಿಂಗಳು ನಂತರ ರಾಗಿ ಗಂಜಿ, ತಿನ್ನಿಸುತ್ತಾರೆ. ರಾಗಿಯನ್ನು ನೆನೆಹಾಕಿ ಮೊಳಕೆ ಬರಿಸಿ, ಬಟಾಣಿ, ಕಡ್ಲೆಕಾಯಿ ಬೀಜ, ಸೋಯಾಬೀನ್ಸ್, ಕಡ್ಲೆಕಾಳು ಇವನ್ನು ಮೊಳಕೆ ಬರಿಸಿ, ಒಣಗಿಸಿ ನಂತರ ಹುರಿದು ಹಿಟ್ಟು ಮಾಡಿ ಅದನ್ನು ಬಟ್ಟೆಯಲ್ಲಿ ಸೋಸಿ ಗಂಜಿ ಮಾಡಿ ಮಗುವಿಗೆ ತಿನ್ನಿಸುತ್ತಾರೆ. ಇದರಿಂದ ಮಕ್ಕಳು ತುಂಬಾ ಗಟ್ಟಿಯಾಗುತ್ತವೆ. ನಂತರ ಬೇಳೆಕಟ್ಟು, ತರಕಾರಿಕಟ್ಟು ಅನ್ನಕ್ಕೆ ಹಾಕಿ ಮೆತ್ತಗೆ ಮಾಡಿ ತಿನ್ನಿಸುತ್ತಾರೆ. ಹಣ್ಣುಗಳನ್ನು ತಿನ್ನಿಸುತ್ತಾರೆ. ತಾಯಿಯ ಹಾಲನ್ನು ೧ ೧/೨ ವರ್ಷ ತಪ್ಪದೆ ಕೊಡಬೇಕು.

ನಾಮಕರಣ

ನಾಮಕರಣ ಎನ್ನುವುದು ಸಾಂಪ್ರದಾಯಕವಾಗಿ ಬಂದಂತಹ ಪದ್ಧತಿ. ಇದನ್ನು ಹಿರಿಯರು ಮಗುವನ್ನು ಗುರುತಿಸುವುದಕ್ಕಾಗಿ ಒಂದು ಹೆಸರನ್ನು ಸೂಚಿಸಿ ನಂತರ ಶಾಸ್ತ್ರಗಳಿಂದ ಆ ಮಗುವಿಗೆ ನಾಮಕರಣ ಎಂಬುದಾಗಿ ಮಾಡುತ್ತಾರೆ. ಈ ನಾಮಕರಣದ ಶಾಸ್ತ್ರ ತವರು ಮನೆಯವರು ಮಾಡುತ್ತಾರೆ.

ಈ ನಾಮಕರಣ ಮಾಡುವ ಮೊದಲು ಮನೆಯನ್ನು ಸೂತಕ ಮಾಡಿ ಮನೆಗೆ ಸುಣ್ಣ ಹಚ್ಚುತ್ತಾರೆ. ನಂತರ ಸ್ವಾಮಿಗಳ ಪಾದ ದೂತಕ ಮಾಡುತ್ತಾರೆ. ಒಂದು ಒಳ್ಳೆಯ ಮುಹೂರ್ತ ನೋಡಿ ಈ ನಾಮಕರಣದ ಶಾಸ್ತ್ರ ಮಾಡುತ್ತಾರೆ. ಈ ಶಾಸ್ತ್ರಕ್ಕೆ ತವರು ಮನೆಯವರೆ ತೊಟ್ಟಿಲನ್ನು ತರುತ್ತಾರೆ.

ಅಲ್ಲದೆ ಮಗುವಿಗೆ ಉಡುದಾರ, ಉಂಗುರ, ಕಾಲಿಗೆ ಕಡಗ, ಚೈನು, ಸರ, ಹೊಸ ಬಟ್ಟೆಯನ್ನು ಅಲ್ಲದೆ ಮಗಳಿಗೆ ಸೀರೆ, ಅಳಿಯನಿಗೆ ಬಟ್ಟೆತಂದು ಉಡಿಯಕ್ಕಿ ಹಾಕುತ್ತಾರೆ. ನಂತರ ಗಂಡನ ಮನೆಯವರು ಸಹ ಉಡಿಯಕ್ಕಿ ಹಾಕುತ್ತಾರೆ.

ಈ ನಾಮಕರಣ ಶಾಸ್ತ್ರ ಮಾಡುವುದು ೧೧ ಅಥವಾ ೧೩ನೇ ದಿನಕ್ಕೆ. ಬಾಣಂತಿ ಮತ್ತು ಮಗುವಿಗೆ ಎಣ್ಣೆ ಸ್ನಾನವನ್ನು ಮಾಡಿಸಿ ನಂತರ ಹೊಸ ಬಟ್ಟೆಯನ್ನು ಹಾಕಿ ತಾಯಿ ಮಗುವನ್ನು ಅಲಂಕರಿಸುತ್ತಾರೆ. ನಂತರ ತೊಟ್ಟಿಲಿಗೆ ಹೂ, ರೇಷ್ಮೆ ಸೀರೆ, ಅದಕ್ಕೆ ಗಿಳಿ, ಗುಬ್ಬಿಯ ಗೊಂಬೆಗಳನ್ನು ಕಟ್ಟಿ ಇಳೆ ಬಿಟ್ಟಿರುತ್ತಾರೆ. ಈ ರೀತಿ ಅಲಂಕರಿಸಿದ ನಂತರ ತೊಟ್ಟಿಲಿಗೆ ಅರಿಸಿಣ, ಕುಂಕುಮ ಹಚ್ಚಿ ಪೂಜೆಯನ್ನು ಮಾಡುತ್ತಾರೆ. ನಂತರ ಸ್ವಾಮೀಜಿಗಳನ್ನು ಕರೆಯಿಸಿ ಮಗುವಿಗೆ ಲಿಂಗಧಾರಣೆಯ ಪೂಜೆಯನ್ನು ಮಾಡಿಸುತ್ತಾರೆ. (ಈ ಲಿಂಗಧಾರಣೆ ಎಂದರೆ ಒಂದು ಲಿಂಗವನ್ನು ಬಟ್ಟೆಯಲ್ಲಿ ಕಟ್ಟಿ ಅದಕ್ಕೆ ವಿಭೂತಿ, ಕುಂಕುಮ, ಹಾಗೂ ಪತ್ರಿಯನ್ನು ಏರಿಸಿ ಅದನ್ನು ಮಗುವಿಗೆ ಕಟ್ಟುತ್ತಾರೆ.)

ನಂತರ ಬಾಣಂತಿಯನ್ನು ಗಂಗಾ ಪೂಜೆಗೆ ಕರೆದುಕೊಂಡು ಹೋಗುತ್ತಾರೆ. ಈ ಸಂಡೂರಿನ ಪರಿಸರದಲ್ಲಿ ಬಾಣಂತಿಯನ್ನು ಗಂಗಾ ಪೂಜೆಗೆ ಕರೆದುಕೊಂಡು ಹೋಗುವಾಗ ಅವಳ ಮಡಿಲಿನಲ್ಲಿ ಹತ್ತಿಕಾಳು, ಬೇವಿನ ಎಲೆಯನ್ನು ಹಾಕಿರುತ್ತಾರೆ. ಇದನ್ನು ಅವಳು ಬಾವಿಯವರೆಗೆ ಬರುವವರೆಗೂ ದಾರಿಯಲ್ಲಿ ಉದುರಿಸಿಕೊಂಡು ಹೋಗುತ್ತಾಳೆ.

ಗಂಗೆ ಪೂಜೆ

ಗಂಗೆ ಪೂಜೆಗೆ ಹೋಗುವಾಗ ಬಿಂದಿಗೆಯಲ್ಲಿ ಹಾಲು ತುಪ್ಪವನ್ನು ಹಾಕಿಕೊಳ್ಳುತ್ತಾರೆ. ಉಡಿಯಕ್ಕಿಗೆ ಎಲೆ, ಅಡಿಕೆ, ಚಿಗಳಿ ತಂಬಿಟ್ಟು, ಹಸಿಕಡ್ಲೆಕಾಳು, ಹೂ, ಇಟ್ಟುಕೊಂಡಿರುತ್ತಾರೆ. ಬಾವಿಗೆ ಮತ್ತು ಬಿಂದಿಗೆಗೆ ಪೂಜೆಮಾಡಲು ಹೂ, ವಿಭೂತಿ, ಕುಂಕುಮ, ಅರಿಸಿಣ, ಇಟ್ಟುಕೊಳ್ಳುತ್ತಾರೆ. ಬಾವಿಗೆ ಬಿಂದಿಗೆಯಲ್ಲಿ ಇರುವ ಹಾಲು-ತುಪ್ಪವನ್ನು ಹಾಕುತ್ತಾರೆ. ನಂತರ ಬಾವಿಯಿಂದ ನೀರನ್ನು ಬಿಂದಿಗೆಯಲ್ಲಿ ತುಂಬಿಕೊಂಡು ಅದಕ್ಕೆ ಹೂ, ಕುಂಕುಮ, ಅರಿಸಿಣ ಹಚ್ಚಿ ಅಲಂಕರಿಸಿ ಪೂಜೆಮಾಡುತ್ತಾರೆ. ಅದರ ಮುಂದೆ ಐದು ಉಡಿಯನ್ನು ಜೋಡಿಸಿ ಒಂದನ್ನು ಬಾಣಂತಿಗೆ, ಉಳಿದವನ್ನು ಬಂದ ಮುತ್ತೈದೆಯರಿಗೆ ಕೊಡುತ್ತಾರೆ.

ಹೆಸರು ಇಡುವುದು

ಈ ಗಂಗಾ ಪೂಜೆಯನ್ನು ಮಾಡಿಕೊಂಡು ಬಂದ ಮೇಲೆ ಹೆಸರನ್ನು ಇಡುತ್ತಾರೆ. ಈ ಹೆಸರನ್ನು ಸೋದರ ಅತ್ತೆ ಇಲ್ಲವೆ ಸೋದರ ಮಾವ ಇಡುತ್ತಾರೆ. ಸೋದರತ್ತೆ ಏಕೆ ಹೆಸರಿಡುತ್ತಾರೆ ಎಂದರೆ

ಇವಳು ಹುಡುಗನ ಅಕ್ಕ ಅಥವ ತಂಗಿ ಇವಳಿಗೆ ತವರಿನ ಮನೆಯಲ್ಲಿ ಹೆಚ್ಚಿನ ಪ್ರಾಮುಖ್ಯತೆ ಇರುತ್ತದೆ. ಇಲ್ಲದಿದ್ದರೆ ಗೌರವ ಕಡಿಮೆ ಆಗುತ್ತದೆ. ಅವಳು ಇಟ್ಟ ಹೆಸರು ಮನೆಯಲ್ಲಿ ರಾರಾಜಿಸಬೇಕು. ಸೋದರತ್ತೆ ಹೆಸರು ಇಡುವಾಗ ಅವಳಿಗೆ ಮುತ್ತೈದೆಯರು ಬೆನ್ನಿಗೆ ಗುದ್ದುತ್ತಾರೆ. ಇವಳು ಮಗುವಿನ ಕಿವಿಗೆ ೩ಸಲ ಹೆಸರನ್ನು ಕೂಗುತ್ತಾಳೆ. ಹೆಸರು ಕೂಗುವುದರ ಮೊದಲು ಮನೆಯ ದೇವರ ಹೆಸರನ್ನು ಕೂಗುತ್ತಾರೆ. ಈ ಶಾಸ್ತ್ರವನ್ನು ಮನೆಯಲ್ಲಿ ಇಲ್ಲವೆ ದೇವಸ್ಥಾನದಲ್ಲಿ ಇಟ್ಟುಕೊಳ್ಳುತ್ತಾರೆ. ಸೋದರತ್ತೆ ಹೆಸರು ಇಟ್ಟಿದಕ್ಕೆ ಅವಳಿಗೆ ತವರು ಮನೆಯವರೆ ಉಡುಗೊರೆಯನ್ನು ಕೊಡುತ್ತಾರೆ. ಐದು ಜನ ಮುತ್ತೈದೆಯರು ತೊಟ್ಟಿಲಿನ ಎದುರು ಬದುರಾಗಿ ನಿಂತು ಮಗುವನ್ನು ಮೇಲಿನಿಂದ ಕೆಳಗೆ ಕೆಳಗಿನಿಂದ ಮೇಲೆ ೫ ಸಲ ಕೊಡುತ್ತಾರೆ. ನಂತರ ತೊಟ್ಟಿಲ ಒಳಗೆ ಮಗುವನ್ನು ಮಲಗಿಸುತ್ತಾರೆ. ಹೊಸದಾಗಿ ಮದುವೆಯಾದ ಹೆಣ್ಣು ಮಕ್ಕಳನ್ನು ತೊಟ್ಟಲಿನ ನಾಲ್ಕು ಬದಿಯಲ್ಲಿ ನಾಲ್ಕು ಜನರನ್ನು ನಿಲ್ಲಿಸಿ ಅವರ ಮಡಿಲಿನಲ್ಲಿ ಮಂಡಕ್ಕಿಯನ್ನು ತುಂಬಿ ತೊಟ್ಟಿಲನ್ನು ತೂಗಿಸುತ್ತಾರೆ. ಇದರಿಂದ ಅವರಿಗೆ ಮಗು ಬೇಗ ಆಗಲಿ ಎಂದು ಅರ್ಥ.

ಒಂದು ತಿಂಗಳು ಮಗುವಿಗೆ ತುಂಬುವುದರಲ್ಲಿ ಅಕ್ಕಸಾಲಿಗನ ಹತ್ತಿರ ಕಿವಿ ಚುಚ್ಚಿಸುತ್ತಾರೆ. ತಟ್ಟೆಯಲ್ಲಿ ಎಲೆ, ಅಡಿಕೆ, ಇಟ್ಟು ಅದರ ಜೊತೆಗೆ ತಮಗೆ ಯೋಗ್ಯಾನುಸಾರವಾಗಿ ದಕ್ಷಿಣೆಯನ್ನು ಇಟ್ಟು ಅಕ್ಕಸಾಲಿಗನಿಗೆ ಕೊಡುತ್ತಾರೆ. ಒಂದು ಒಳ್ಳೆಯ ದಿನ ನೋಡಿ ೫-೬ನೇ ತಿಂಗಳಿನಲ್ಲಿ ಅನ್ನ ಇಲ್ಲವೆ ಸಿಹಿಯನ್ನು ತಿನ್ನಿಸುತ್ತಾರೆ. ಇದಕ್ಕೆ ಅನ್ನ ಮೂಹೂರ್ತ ಎಂದು ಕರೆಯುತ್ತಾರೆ.

ದೋಷ ಪರಿಹಾರ

ಮಗು ಹುಟ್ಟಿದ ತಕ್ಷಣವೇ ಅದರ ಗಳಿಗೆ ನೋಡಿ, ನಕ್ಷತ್ರ ರಾಶಿಯನ್ನು ನೋಡಿ ಯಾವ ಅಕ್ಷರದ ಮೇಲೆ ಬಂದಿದೆ ಎಂದು ಸ್ವಾಮಿಗಳ ಹತ್ತಿರ ಮೊದಲೇ ತಿಳಿದುಕೊಂಡು ಜಾತಕವನ್ನು ಬರೆಸುತ್ತಾರೆ. ನಂತರ ಮಗು ಹುಟ್ಟಿದ ತಕ್ಷಣ ಅದಕ್ಕೆ ಏನಾದರು ದೋಷ ಇದ್ದರೆ ನವಗ್ರಹಗಳ ಪೂಜೆಯನ್ನು ಮಾಡಿಸಿ ನವ ದಾನ್ಯಗಳನ್ನು ಕೊಡಿಸುತ್ತಾರೆ. ಇಲ್ಲವೆ ಯೋಗ್ಯ ಇರುವಂತಹವರು ಜೀವಂತವಾದ ಹಸು, ಕರು ದಾನ ಕೊಡುತ್ತಾರೆ. ಇಲ್ಲವೆ ಬೆಳ್ಳಿಯ ಚೌಕ ತಗಡಿನಲ್ಲಿ ಹಸು, ಕರುವಿನ ಕೆತ್ತನೆ ಮಾಡಿ ಅದನ್ನು ದಾನ ಕೊಡುತ್ತಾರೆ.

ಒಂದು ವೇಳೆ ಮಗುವು ಮೂಲ ನಕ್ಷತ್ರದಲ್ಲಿ ಹುಟ್ಟಿದ್ದರೆ ಮಗುವಿನ ತಂದೆ ನೋಡಬಾರದು ಎನ್ನುವುದಿದ್ದರೆ, ಬಾಂಡಲಿಗೆ ಎಣ್ಣೆಯನ್ನು ಹಾಕಿ ಮಗುವಿನ ಮುಖವನ್ನು ಅದರಲ್ಲಿ ಕಾಣಿಸುವಂತೆ ತಂದೆಗೆ ತೋರಿಸುತ್ತಾರೆ.

ಈ ನಾಮಕರಣ ಶಾಸ್ತ್ರಕ್ಕೆ ಅನೇಕ ನೆಂಟರು, ಅಕ್ಕ ಪಕ್ಕದವರು ಸೇರಿರುತ್ತಾರೆ. ಅನೇಕ ರೀತಿಯ ಸಂಭ್ರಮದಿಂದ ಆಚರಿಸಿ ರುಚಿಯಾದ ಊಟವನ್ನು ಮಾಡಿ ಬಂದವರು ಮಗುವಿಗೆ ಉಡುಗೊರೆಯನ್ನು ಕೊಟ್ಟು ಹೊರಡುತ್ತಾರೆ.

ಸೀಮಂತದ ಹಾಡು

ರಂಗನ ರಾಣಿ ಮಂಜುಳವೇಣಿ ಹಂಗನೆ
ಗರ್ಭದಾಪೇಕ್ಷೆಗಳು ||ಪ||
''ಪ್ರಥಮ'' ತಿಂಗಳಿನಲ್ಲಿ ಅತಿ ಬಳಲುತ ನಾರಿ
ವುಕಾಉಕಾಕುಂದದಿ ಬಾಡಿ ಬಳಲುತಿರೆ
ಗೃಥಕ್ಷೀರ ಪರಮಾನ್ನ ಹಿತವಾದುದು
ತನ್ನ ಸುತನ ಬಯಕೆ ಕಾಟ ಬಯಸಿದಳು.

''ಎರಡನೆ'' ತಿಂಗಳಿನಲ್ಲಿ ಎಳಹುಣಸೆನೆಲ್ಲಿ
ಎಳೆಯ ಮಾವಿನಕಾಯಿ ಬಯಸಿದಳು
ಎಳೆಯ ನೀರಿನ ಕಾಯಿ ಸವಿಯಾದುದು ತನ್ನ
ಕೆನೆ ಮಸರವಲಕ್ಕಿ ಬಯಸಿದಳು.

''ಮೂರನೆ'' ತಿಂಗಳು ತುಂಬಲು ಮಂಜುಳೆ
ತೋರಿ ಬರಲು ತನ್ನ ತವರೂರಿನಲ್ಲಿ ವಾರಿಗೆ
ಗೆಳೆತಿರ ತೂರ್ಗಡ ವನದಲ್ಲಿ ಪಾರಿಜಾತಾರ
ಕುಸುಮ ಮುಡಿಗೆ ಮುಡಿಸಿದಳು.

‘‘ನಾಲ್ಕನೆಯ’’ ತಿಂಗಳಲ್ಲಿ ಪಾಕ ಹೋಳಿಗೆ ಲಾಡು
ಪೇಣಿ ಜಿಲೇಬಿ, ಚಿರೋಟಿ ಬಾಸುಂದಿ
ಬೂಂಧಿ ಕೀರ್ ಬೇಕಾದುದು ತನ್ನ
ದೋಸೆ ಸೀಕರಣಿ ಸಿಕ್ಕಿನುಂಡೆ ಬಯಸಿದಳು

‘‘ಐದನೆ’’ ತಿಂಗಳಲ್ಲಿ ಹೋಳಿಗೆಯನ್ನೂರಿಗೆ
ಹೊಸ ಬೆಣ್ಣೆ ಕಾಸಿದ ತುಪ್ಪ ಬಯಸಿದಳು
ಹೀರೆ ಸೌತೆ ಬೆಂಡೆ ಬೂಟೂಟೂ ಬಜ್ಜಿ
ಖಾರದ ಹಪ್ಪಳ ಸಂಡಿಗೆ ಬಯಸಿದಳು.

‘‘ಆರನೇ’’ ತಿಂಗಳಲ್ಲಿ ಆರಿದವು ಬೇಳೆ
ಸಾರುಪ್ಪಿನ ಕಾಯಿ ಬಯಸಿದಳು.

‘‘ಏಳನೆಯ’’ ತಿಂಗಳಲ್ಲಿ ಹೋಳಿಗೆಯನ್ನೊರಿಗೆ
ಹೊಸ ಬೆಣ್ಣೆ ಕಾಸಿದ ತುಪ್ಪ ಬಯಸಿದಳು
ಹೀರೆ ಸೌತೆ ಬೆಂಡೆ ಬೂಟೂಟೂ ಬಜ್ಜಿ
ಖಾರದ ಹಪ್ಪಳ ಸಂಡಿಗೆ ಬಯಸಿದಳು.

‘‘ಎಂಟನೆ’’ ತಿಂಗಳಲ್ಲಿ ಎಸಳ ಸಂಪಿಗೆ
ಕುಸುಮ ಹೆಸರು ಪೆತ್ರವಲ ಬಯಸಿದಳು
ಜರಿಯ ರವಿಕೆಯು ಹೊಸ ಮುತ್ತಿನುಂಗುರ
ಬಿಸುಜ ನೇತ್ರೆಯುತಾ ಬಯಸಿದಳು.

"ಒಂಬತ್ತು" ತಿಂಗಳು ತುಂಬಲು ಮಂಜುಳೆ
ಚಂದ್ರನಂದದಿ ಪೋಲ್ವ ಕಂದನ ಪಡೆದಿಹಳು
ಪಟ್ಟೆ ವೀಳ್ಯವನಿಟ್ಟು ಮುತ್ತಿನಕ್ಷತೆ ಇಟ್ಟು
ಮುತ್ತಿನಾರತಿಯ ಎತ್ತಿದರು.

ಮಗುತಾಯಿಯನ್ನು ವರ್ಣನೆ ಮಾಡುವ ಹಾಡು

ತಾಯಿನಿನ್ನ ಉಪಕಾರವನು ಮರೆಯನೆಂದು ನಾನು||
ನಿನ್ನ ಮೋಹ ಮಮತೆಗಳನು ಬಣ್ಣಿಸಲು ಸಾದ್ಯವೇನು||
ಒಂಬತ್ತು ತಿಂಗಳಲ್ಲಿ ವಡಲ ಬಾರ ತಾಪದಲ್ಲಿ
ನೊಂದು ಬಳಲಿ ಪಡೆದೆ ನನ್ನ ಜನ್ಮವನ್ನೂ
ನಾನು ಹುಟ್ಟುವಾಗ ಕಷ್ಟವೆಷ್ಟು ತಾಯಮ್ಮ
ನನ್ನ ಜನ್ಮದೊಂದಿಗೆ ನಿನ್ನ ಪುನರ್ ಜನ್ಮವಾಯಿತಮ್ಮ
ಮತ್ತೆ ಹುಟ್ಟಿ ಬಂದೆಯಮ್ಮ ||ತಾಯಿ||

ಮಾಂಸ ಮುದ್ದೆಯಾದ ನನ್ನ ತಿದ್ದಿತೀಡಿ ಬೆಳೆಸಿದೆಯಮ್ಮ
ಅಡಿ ಬಂದ ನನ್ನ ಅಂಗಾಲ ತೊಳೆದೆಯಮ್ಮ
ಹಸಿದ ಬಾಯಿಗೆ ಅನ್ನವಿಟ್ಟು ಆನಂದಪಡೆದೆಯಮ್ಮ
ದೃಷ್ಟಿ ದೋಷ ಬಾರದಂಗೆ ರಕ್ಷ ಬಂಧ ಕಟ್ಟಿದೆಯಮ್ಮ
ಕಪ್ಪು ಚುಕ್ಕೆ ಹಣೆಯಲಿಟ್ಟು ಆನಂದ ಪಡೆದೆಯಮ್ಮ. ||ತಾಯಿ||

ಜಾನಪದ ಗೀತೆ (ಲಾಲಿ ಹಾಡು)

ಕೂಸಿದ್ದ ಮನೆಗೆ ಬೀಸಣಿಕೆ ಯಾತಕೆ
ಕೂಸು ಕಂದಯ್ಯ ಒಳ ಹೊರಗೆ
ಕೂಸು ಕಂದಯ್ಯ ಒಳ ಹೊರಗೆ ಸುಳಿದರೆ
ಬೀಸಣಿಕೆ ಗಾಳಿ ಸುಳಿದಾಂಗೆ ||ಪ||

ಕಂಡಲ್ಲಿ ಆಡ್ಯಾನ ಕಡೆಗೆಲ್ಲಿ ಚೆಲ್ಯಾವ||
ದುಂಡು ಮುತ್ತೆಲ್ಲಾ ಉದುರ್‍ಯಾವ
ದುಂಡು ಉದುರ್‍ಯಾವ ಕಂದನ್ನ
ಬಿರಿದುಲಿ ಕಂಡವರು ಕೊಡಿರವ್ವ ||೧||

ಹಾವಿನ ಹೆಡೆ ಚಂದ, ಮಾವಿನ ಮಿಡಿ ಚಂದ
ಹಾರಾಡಿ ಬರುವ ಗಿಳಿ ಚೆಂದ
ಹಾರಾಡಿ ಬರುವ ಗಿಳಿ ಚಂದ ನೀ ಚಂದ
ಕಂದಯ್ಯ ಚಂದ ನಮಗೆಲ್ಲ ||೨||

ಹಕ್ಕಿಗೆ ಗೂಡಾಸೆ, ಮಕ್ಕಳಿಗೆ ತಾಯಾಸೆ
ಬಿತ್ತಿದ ಬೆಳೆಗೆ ಮಳೆಯಾಸೆ
ಬಿತ್ತಿದ ಬೆಳೆಗೆ ಮಳೆಯಾಸೆ ನೀ ಯಾಸೆ
ಹತ್ತಿರ ವಿರಲು ನಮಗಾಸೆ ||೩||

ನಿನ್ನಂತ ಮಕ್ಕಳು ನೂರಾರು ಆಡಲು

ಹೊನ್ನೆ ಮರದ ನೆರಳೊಳು

ಹೊನ್ನೇ ಮರದ ನೆರಳೊಳು ಆಡಲು

ಸನ್ಯಾಸಿ ಜಪವ ಮರೆತಾನಾ ||

ಮಗವಿನ ಲಾಲಿ ಹಾಡು

ಬಸವ ಹುಟ್ಟಿದನೆಂದು ಹೊಸ ಪೊಳಿ ಕಟ್ಟಿಸಿರಿ

ಬಸವ ಬಲ್ಲಿದನೆಂದು ತೂಗಿರೆ ಬಸವ ಬಲ್ಲಿದನಲ್ಲ

ಭಾಷೆ ತಪ್ಪುವನಲ್ಲ ಶಶಿ ಮುಖದ ಕಂದನ ತೂಗಿರೆ.

ಜೋ ಜೋ ಎನ್ನ ಜೋಪಿಯ ಕಂದ ಜೋ ಜೋ

ಹುಟ್ಟಿ ಬಾರದ ಕೂಸು ಹುಟ್ಟಿತ್ರಿ ಮೂಹೂರ್ತದ ಬಾಗ್ಯವಂತನೆಂದು

ತೂಗಿರೆ ಪುಣ್ಯವಂತನೆಂದು ತೂಗಿರೆ

ಕಟ್ಟಾಣಿ ಗುಂಡಿನ ಕಲ್ಯಾಕ್ಷರುವದಂತ

ತೊಟ್ಟಿಲದಾಗ ಐದಾನ ತೂಗಿರೆ.

ಜೋ ಜೋ ಎನ್ನ ಜೋಪಿಯ ಕಂದ ಜೋ ಜೋ

ಸೋದರ ಅತ್ತಿಯ ಕರಿರೆ ಸಾದ ಮುತ್ತೈದೆರೆ ಧ್ವನಿ ಒಂದು ಕೋಗಿಲೆ

ಧ್ವನಿ ಒಂದು ಛಾಯಾ ಗುದ್ದ ಬ್ಯಾಡರಿ ನೀವು ಗುರುವಿನ

ಸಾಕ್ಷಿಯಾಗಿ ಚೆನ್ನ ಬಸವ ಎಂದು ಕೂಗಿರೆ

ಜೋ ಜೋ ಎನ್ನ ಜೋಪಿಯ ಕಂದಾ ಜೋ ಜೋ

ಜೋಗುಳದ ಹಾಡು

ಜೋ ಜೋ.....ಜೋಗುಳ ಪಾಡುವೆನಣ್ಣ
ಸುಖದಲ್ಲಿ ನಿದ್ರಿಸು ಮುದ್ದಿನ ಚಿನ್ನ ||ಜೋ ಜೊ||
ಬಿಗಿದಪ್ಪಿ ಮುದ್ದಿಸಿ ಕರುಳನೇ ವರಸಿ
ಮಾಡಿನ ಮರೆಯಲ್ಲಿ ಮೊಲೆಯುಣಿಸಿ ||ಜೋ ಜೊ||
ಮೆತ್ತ ಹಾಸಿನ ತೊಟ್ಟಿಲೊಳಿರಿಸಿ ತೂಗುವೆ
ಬೆಚ್ಚನೆ ಹೊದಿಕೆಯ ನೊದಿಸಿ ಜೋ ಜೋ||
ಕಂದಯ್ಯ ನೀನೆ ವಂಶದ ಬಳ್ಳಿ
ಮನವನು ಮನೆಯನು ಬೆಳಗು ಬೆಳ್ಳಿ
ನಗೆಯನ್ನು ಸೊಸಿ ನಿನ್ನಯ ಮೊಗವ
ನೋಡುತ ಹರುಷದಿ ಮರೆವನು ಜಗವ ಜೋ ಜೊ||
ಉತ್ತಮ ನಗೆನುಡಿ ಪಾಡುವನಾಗು
ದೇವರ ನೆನೆಯುತ ನಿತ್ಯದ ಬಾಗು ಜೋ ಜೋ||

ಯೌವ್ವನ

ತಾಯಿ ತನ್ನ ಮಗಳು ಋತುಮತಿಯಾದಾಗ ಅದನ್ನ ಮೊದಲು ತಾಯಿ ನೋಡುವುದಿಲ್ಲ. ತಾಯಿ ಬಿಟ್ಟು ಬೇರೆಯವರು ಅಂದರೆ ಅತ್ತೆ, ಚಿಕ್ಕಮ್ಮ, ಅಕ್ಕ, ಅಕ್ಕಪಕ್ಕದವರು ಮೊದಲಾದವರು ನೋಡಬಹುದು.

ಋತುಮತಿಯಾದ ಕೂಡಲೆ ಐದು ಜನ ಮುತ್ತೈದೆಯವರನ್ನು ಕರೆದು ಅವಳಿಗೆ ಎಣ್ಣೆ ಹಚ್ಚಿ, ಅರಿಶಿಣ ಹಚ್ಚಿ, ನೀರು ಹಾಕುತ್ತಾರೆ. ಅವಳನ್ನು 'ಐದುದಿನ' ಇಲ್ಲವೆ 'ಒಂಬತ್ತು ದಿನ' ಇಲ್ಲವೆ 'ಹದಿನಾರು' ದಿನ ಒಂದು ಕೋಣೆಯಲ್ಲಿ ಕೂರಿಸುತ್ತಾರೆ. ಅವಳಿಗೆ ೧೨ ವರ್ಷದ್ದು ದೋಷ ಇರುತ್ತದೆ. ಅದಕ್ಕೆ

ಅವಳನ್ನು ಹೊರಗಡೆ ಕೂರಿಸುತ್ತಾರೆ. ಆದ್ದರಿಂದ ಅವಳಿಗೆ ಪರಿಶುದ್ಧ ಮಾಡಿ, ಅವಳ ಪಕ್ಕದಲ್ಲಿ ಒಂದು ಪಟ್ಟದ ಗೊಂಬೆಯನ್ನು ಜೊತೆಗೆ ಕೊಟ್ಟಿರುತ್ತಾರೆ. ಏಕೆಂದರೆ ಅವಳು ಒಬ್ಬಳೆ ಇರುತ್ತಾಳೆ ಅದಕ್ಕೆ ಕೊಡುತ್ತಾರೆ.

ಋತುಮತಿಗೆ ಕೊಡುವ ಆಹಾರಗಳು

ದಿನಾಲು ಅವಳಿಗೆ ಸಿಹಿ ತಿಂಡಿಗಳನ್ನು ಕೊಡುತ್ತಾರೆ. ಬಿಸಿ ಬಿಸಿಯಾದ ಆಹಾರ ಕೊಡುತ್ತಾರೆ. ಚಿಗಳಿ-ತಿನ್ನಿಸುತ್ತಾರೆ. ಈ ದಿನಗಳಲ್ಲಿ ಅವಳಿಗೆ ತುಂಬ ಶ್ರೇಷ್ಠವಾದ ತಿಂಡಿ 'ಅಂಟಿನ ಉಂಡೆ' ಇದನ್ನು ಒಂದು ತಿಂಗಳು ಕೊಡುತ್ತಾರೆ. ಈ ದಿನಗಳಲ್ಲಿ ಅವಳು ತನ್ನ ದೇಹದ ನಿಯಂತ್ರಣದ ಶಕ್ತಿ ಕಡಿಮೆಯಾಗಿರುತ್ತದೆ. ಅದಕ್ಕೆ ಈ ಉಂಡೆಯನ್ನು ಕೊಟ್ಟಿರುತ್ತಾರೆ.

ಋತುಮತಿಯನ್ನು ಒಳಗೆ ಕರೆದುಕೊಂಡಾಗ ಮಾಡುವ ಕಾರ್ಯಗಳು

ಉಡಿ ತುಂಬುವ ಸಾಮಗ್ರಿಗಳು

ಎಲೆ, ಅಡಿಕೆ, ಚಿಗಳಿ, ಉತ್ತುತ್ತಿ, ಬಾಳೆಹಣ್ಣು, ಸೇಬು, ದ್ರಾಕ್ಷಿ, ಗೋಡಂಬಿ, ವಣಕೊಬ್ಬರಿ ಇವೆಲ್ಲವನ್ನು ಒಂದು ತಟ್ಟೆಯಲ್ಲಿ ಜೋಡಿಸಿಕೊಂಡು ಅವಳ ಸೆರಗಿಗೆ ಇವನ್ನು ತುಂಬುತ್ತಾರೆ. ಒಂದು ಕಣ ಇಟ್ಟು ಅವಳನ್ನು ಒಳಗೆ ಕರೆದುಕೊಂಡಮೇಲೆ ೯ನೇ ದಿನಕ್ಕೆ ಮನೆಯಲ್ಲಿ ಸ್ವಾಮಿಗಳನ್ನು ಕರೆಸುತ್ತಾರೆ. ದೇವರ ಮನೆಯಲ್ಲಿ ಇವಳೆ ಸ್ವಾಮಿಗಳ ಪಾದವನ್ನು ಒಂದು ತಟ್ಟೆಯಲ್ಲಿ ಇರಿಸಿ ನೀರು ಹಾಕಿ ತೊಳೆದು ವಿಭೂತಿ, ಕುಂಕುಮ, ಅರಿಶಿಣ ಹಚ್ಚಿ, ಪತ್ರಿ ಇಟ್ಟು ಊದಿನಕಡ್ಡಿ ಬೆಳಗಿ ಪೂಜೆಯನ್ನು ಮುಗಿಸುತ್ತಾಳೆ. ನಂತರ ಸ್ವಾಮಿಗಳು ಅವಳಿಗೆ ಲಿಂಗದ ಪೂಜೆಯನ್ನು ಮಾಡಿಕೊಳ್ಳುವುದರ ಬಗ್ಗೆ ಹೇಳಿಕೊಡುತ್ತಾರೆ. ಲಿಂಗವನ್ನು ಅವಳು ತನ್ನ ಎಡಗೈಯಲ್ಲಿ ಇಟ್ಟುಕೊಂಡು ಅದಕ್ಕೆ ಸ್ವಾಮಿಗಳ ಕಾಲು ತೊಳೆದ ನೀರನ್ನು ಹಾಕಿ ವಿಭೂತಿ, ಗಂಧ, ಕುಂಕುಮ, ಅರಿಶಿಣ ಹಚ್ಚಿ, ಪತ್ರಿ ಇಟ್ಟು ಊದಿನಕಡ್ಡಿ ಬೆಳಗಿ ಪೂಜೆಯನ್ನು ಮುಗಿಸುತ್ತಾಳೆ. ನಂತರ ಸ್ವಾಮಿಗಳ ಪಾದವನ್ನು ತೊಳೆದ ನೀರನ್ನು ಮನೆತುಂಬಾ ಎಲ್ಲಾ ಕಡೆ ಎರಚುತ್ತಾರೆ. ಮನೆಯು ಮೈಲಿಗೆಯಿಂದ ಪಾವನವಾಗಲಿ ಎಂದು ನಂತರ ಅವಳನ್ನು ಐದು ಜನ ಮುತ್ತೈದೆಯರು ಗಂಗಾಪೂಜೆಯನ್ನು ಮಾಡಿಸಿಕೊಂಡು ಬರುತ್ತಾರೆ.

ಗಂಗಾಪೂಜಾ ವಿಧಾನ

ಋತುಮತಿಯನ್ನು ಬಾವಿಗೆ ಮುತ್ತೈದೆಯರು ಕರೆದುಕೊಂಡು ಹೋಗುತ್ತಾರೆ. ಒಂದು ಬಿಂದಿಗೆಯಲ್ಲಿ ಹಾಲು-ತುಪ್ಪವನ್ನು ಹಾಕಿಕೊಂಡು ಹೋಗಿರುತ್ತಾರೆ. ಅದನ್ನು ಭಾವಿಗೆ ಸುರಿದು ಆ ಬಿಂದಿಗೆಯಿಂದ

ನೀರನ್ನು ಸೇದಿ ಅದಕ್ಕೆ ವಿಭೂತಿ, ಕುಂಕುಮ, ಅರಿಶಿಣ ಹಚ್ಚಿ ಒಂದು ಹೂವಿನ ಹಾರ ಹಾಕುತ್ತಾರೆ. ಐದು ಎಳೆ ದಾರದಿಂದ ಅರಿಶಿಣ ದಾರಮಾಡಿ ಬಿಂದಿಗೆಗೆ ಹಾಕುತ್ತಾರೆ. ಇದರ ಮುಂದೆ ಎಲೆ, ಅಡಿಕೆ, ಉತ್ತುತ್ತಿ, ಚಿಗಳಿ-ತಂಬಿಟ್ಟು ಇವುಗಳನ್ನು ಉಡಿಯಾಗಿ ಐದು ಇಡುತ್ತಾರೆ. ಒಂದು ಬಾವಿಗೆ ಹಾಕುತ್ತಾರೆ. ಇನ್ನೊಂದು ಋತುಮತಿಗೆ ಕೊಡುತ್ತಾರೆ. ಉಳಿದವನ್ನು ಬಂದ ಮುತ್ತೈದೆಯರಿಗೆ ಕೊಡುತ್ತಾರೆ. ಬಾವಿಗೂ ಸಹ ವಿಭೂತಿ, ಕುಂಕುಮ, ಹೂ, ಧರಿಸಿ ಊದಿನಕಡ್ಡಿಯನ್ನು ಬೆಳಗಿ ಪೂಜೆಮಾಡುತ್ತಾರೆ. ಆ ಬಿಂದಿಗೆಯನ್ನು ಋತುಮತಿಯಾದವಳ ತಲೆಯಮೇಲೆ ಹೊರಿಸಿಕೊಂಡು ಬರುತ್ತಾರೆ. ಅದನ್ನು ದೇವರ ಮನೆಯಲ್ಲಿ ಇಡುತ್ತಾರೆ. ನಂತರ ಮದ್ಯಾಹ್ನದ ವೇಳೆಗೆ ಸ್ವಾಮಿಗಳಿಗೆ ಊಟವನ್ನು ಬಡಿಸಿ, ಬಂದವರಿಗೂ ಊಟವನ್ನು ಬಡಿಸುತ್ತಾರೆ.

ಸಂಜೆಯ ಕಾರ್ಯ

ಮನೆಯನ್ನು ಅಲಂಕರಿಸಿ ಋತುಮತಿಯಾದವಳನ್ನು ಅಲಂಕರಿಸಿ ಅಕ್ಕ ಪಕ್ಕದವರನ್ನು ಕರೆಯುತ್ತಾರೆ. ಊರಿನಿಂದ ಬಂದ ಅತ್ತೆ, ಅಕ್ಕ, ಚಿಕ್ಕಮ್ಮ ಮೊದಲಾದವರು ಕರ್ಜಿಕಾಯಿ, ಮೈಸೂರುಪಾಕ, ಜಿಲೇಬಿ, ಬಾದುಶ, ಹಣ್ಣು, ಹೂ, ಸೀರೆ, ಯೋಗ್ಯರಿದ್ದವರು ಒಡವೆಗಳನ್ನು ಕೊಡುತ್ತಾರೆ. ಉಡಿಯಾಗಿ ಇವೆಲ್ಲ ತುಂಬುತ್ತಾರೆ. ಯೋಗ್ಯವಾಗಿ ಇದ್ದವರು ಈ ಕಾರ್ಯವನ್ನು ಹದಿನಾರು ದಿನಗಳವರೆಗೆ ಮಾಡುತ್ತಾರೆ. ಪ್ರತಿಯೊಬ್ಬರು ಅವಳಿಗೆ ಆರುತಿ ಮಾಡಿ ಉಡುಗೊರೆಯನ್ನು ಕೊಡುತ್ತಾರೆ.

ಹಿಂದೂ ಮದುವೆ: ಭಾರತದ ಗ್ಯಾಸೆಟಿಯರ್ (ಭಾಗ-೧)

ಹಿಂದೂಗಳಲ್ಲಿ ಮದುಮಗಳುನ್ನು ಮದುಮಗನಿಗೆ ಕನ್ಯಾದಾನವೆಂದು ಕೊಡುಗೆಯ ರೂಪದಲ್ಲಿ ಮದುವೆ ಮಾಡಿಕೊಡುವ ಸಾರ್ವತ್ರಿಕ ಪದ್ಧತಿಯಿದೆ. ಸಾಮಾನ್ಯವಾಗಿ ವಿವಾಹ ವಿಧಿಗಳನ್ನು ಮದುಮಗಳ ಮನೆಯಲ್ಲಿ ಕೆಲವು ವೇಳೆ ದೇಗುಲ-ಮಠಗಳಲ್ಲಿ ಇಲ್ಲವೆ ಛತ್ರಗಳಲ್ಲಿ ನೆರವೇರಿಸುತ್ತಾರೆ. ಬಹಳಷ್ಟು ಜಾತಿಗಳಲ್ಲಿ ವಿವಾಹ ವಿಧಿಗಳು ವಿಶೇಷವಾಗಿ ಈ ಕೆಳಗೆ ಬರೆದ ಪ್ರಕಾರ ಜರುಗುವುವು. ವೀಳ್ಯದ ಶಾಸ್ತ್ರ ಮತ್ತು ನಿಶ್ಚಿತಾರ್ಥಗಳಲ್ಲಿ ಮದುವೆಯ ಪ್ರಸ್ತಾಪ ನಿಶ್ಚಿತರೂಪ ತಾಳುತ್ತದೆ. ದೇವದ್ರುತದಲ್ಲಿ ಇಬ್ಬಣಗಳ ಪೂರ್ವಜರ ಮತ್ತು ದೇವರ ವರಪ್ರಸಾದಗಳನ್ನು ಕೋರುವರು. ಚಪ್ಪರ ಅಥವಾ ಎಲೆ ವಾಸದಲ್ಲಿ ಮದುವೆ ಮಂಟಪದ ನಿರ್ಮಾಣವಾಗುತ್ತದೆ. ಬ್ರಾಹ್ಮಣರಲ್ಲಿ ಮತ್ತು ಬ್ರಾಹ್ಮಣರ ಪದ್ಧತಿಗಳನ್ನು ಅನುಸರಿಸುವ ವೈಶ್ಯರಂಥ ಜಾತಿಗಳಲ್ಲಿ, ವರನು ವಧು ಗೃಹಕ್ಕೆ ಬಂದ ನಂತರ ಈ ವಿಶಿಷ್ಟ ವಿಧಿಗಳನ್ನು

ಆಚರಿಸುವರು, ವರಪೂಜೆ ಮದುಮಗನನ್ನು ಅವನ ತಾಯಿ ತಂದೆಗಳನ್ನು ಎದುರುಗೊಂಡು ಸತ್ಕರಿಸುವುದು ನಾಂದಿ ವಧೂವರರ ಪೂರ್ವಜರನ್ನು ಅಹ್ವಾನಿಸುವುದು. ಕಂಕಣಧಾರಣ, ವಧೂವರರು ಪರಸ್ಪರ ಕೈಗೆ ದಾರ ಕಟ್ಟುವದು ಇದು ಅವರು ವಿವಾಹ ಬದ್ದರಾಗುವ ಸೂಚನೆ. ಅಕ್ಷತೆ ಕೆಂಬಣ್ಣ ಸವರಿದ ಅಕ್ಕಿಯನ್ನು ವಧುವರರು ಪರಸ್ಪರ ತಲೆಗಳ ಮೇಲೆ ತೂರಿಕೊಳ್ಳುವರು. ಮಂಗಳಸೂತ್ರ ಕಟ್ಟುವುದು. ಈ ವಿಧಿಯ ಮದುವೆ ಕರಾರನ್ನು ಸಂಸ್ಕಾರ ರೂಪದಲ್ಲಿ ಮಾರ್ಪಡಿಸುತ್ತದೆ. ಇದರಲ್ಲಿ ವಧೂವರರ ಕರಬದ್ಧ ಅಂಜಲಿ ಪುಟಗಳಲ್ಲಿ ಬಂಧುಗಳ ಮತ್ತು ಸ್ನೇಹಿತರು ಹಾಲೆರೆಯುವರು. ಸೇಸೆ ಇದರಲ್ಲಿ ವಧೂವರರ ತಲೆಗಳ ಮೇಲೆ ದಂಪತಿಗಳು ಅಕ್ಕಿಕಾಳು ಹಾಕುವದು, ಲಾಜಹೋಮ, ಅಗ್ನಿಹೋಮದಲ್ಲಿ ಲಾಜ ಅಥವಾ ಬತ್ತದ ಅರಳುಗಳ ಅರ್ಪಣೆ, ಸಪ್ತಪದಿ ಇದರಲ್ಲಿ ವಧೂವರರು ಪವಿತ್ರ ಅಗ್ನಿಕುಂಡದ ಸುತ್ತಲೂ ಏಳು ಹೆಜ್ಜೆಗಳನ್ನು ಕ್ರಮಿಸುವುದು. ಇಲ್ಲಿಗೆ ವಿವಾಹ ನವದಂಪತಿಗಳು ಕೂಡಿ ಉಣ್ಣುವರು. ನಾಗವಲ್ಲಿ ಇದರಲ್ಲಿ ಕೆಂಬಣ್ಣದ ನೀರಿದ್ದ ಎರಡು ಪಾತ್ರೆಗಳಲ್ಲಿ ಮದುಮಕ್ಕಳು ಕೈಯಿಕ್ಕಿ ಹುಡುಕಾಡುವದು. ಕಂಕಣ ವಿಸರ್ಜನ ಮದುವೆಯ ಮುನ್ನ ಕೈಗೆ ಕಟ್ಟಿದ ದಾರ ಬಿಚ್ಚುವದು-ಗದ್ದಿಗೆ ಅಥವಾ ಸಿಂಹಾಸನ ಪೂಜೆ-ಇದರಲ್ಲಿ ಸಿಂಹಾಸನದ ಪೂಜೆ ಇರುತ್ತದೆ.

ಲಿಂಗಾಯತರು ನೆರವೇರಿಸುವ ಮದುವೆಗಳಲ್ಲಿ ಅಗ್ನಿ ಹೋಮಕ್ಕೆ ಅವಕಾಶವಿಲ್ಲ. ಅದರ ಬದಲು ಪಂಚಕಲಶ ಅಂದರೆ ಐದು ಪವಿತ್ರ ಬಿಂದಿಗೆಗಳ ಪ್ರತಿಷ್ಠೆ ಆಗುತ್ತದೆ. ವೀರಭದ್ರ ಕುಲದೇವತೆಯನ್ನು ಆರಾಧಿಸುವ ಕೆಲವು ಕುಟುಂಬಗಳು ಮದುವೆಯ ಮೊದಲು ಗುಗ್ಗಳ ಸೇವೆಯನ್ನು ಕೈಗೊಳ್ಳುವರು. ಐದರಲ್ಲಿಯು ನಾಲ್ಕು ಕಲಶಗಳಲ್ಲಿ ಹಾಲುಮಡ್ಡಿ ಮತ್ತೆತರ ದಾಹಕ ಪದಾರ್ಥಗಳಾದ ಗುಗ್ಗಳ ಅಥವಾ ಧೂಪ ತುಂಬಿ ಕಲಶಗಳನ್ನು ಮೆರವಣಿಗೆಯಿಂದ ಒಯ್ಯುತ್ತಾರೆ. ಇವು ವೀರಭದ್ರ ಮತ್ತು ಶಿವನಿಗೆ ಸಲ್ಲಿಸುವ ಮರ್ಯಾದೆ. ಸಾಮಾನ್ಯವಾಗಿ ವಿವಾಹ ವಿಧಿಯನ್ನು ಜಂಗಮನೊಬ್ಬ ನಡೆಸುವನು. ಲಿಂಗಾಯತರ ಇತರ ವಿಧಿಗಳು ಬೇರೆ ಹಿಂದೂಗಳ ವಿಧಿಗಳಂತೆ ಇರುತ್ತಾನೆ.

ಲಿಂಗಾಯತ, ಒಕ್ಕಲಿಗ ಮತ್ತಿತರ ಬಹಳ ಜಾತಿಗಳಲ್ಲಿ ಮದುವೆಯ ಮೊದಲು ಒಂದು ಕಂಬವನ್ನು ನಿಲ್ಲಿಸಿ, ಅದಕ್ಕೆ ಕಳ್ಳಿ (ಡಬಗಳ್ಳಿ) ಕಟ್ಟುತ್ತಾರೆ. ಅದಕ್ಕೆ 'ಹಾಲುಗಂಬ' ವೆಂಬ ಹೆಸರು ಇದನ್ನು ನಿಲ್ಲಿಸಿದ ಸ್ಥಳಗಳಲ್ಲಿಯೇ ಮದುವೆ ಮಂಟಪ ನಿರ್ಮಾಣಗೊಳ್ಳುತ್ತದೆ. ಕುರುಬರಲ್ಲಿ, ಅಗಸರಲ್ಲಿ, ಈಡಿಗರಲ್ಲಿ ಮುದುವಣಗಿತ್ತಿಯ ಸೋದರ ಮಾವನಿಗೆ ಕಳ್ಳಿಗಿಡ ಕಡಿಯುವ ಅಧಿಕಾರಮಾನವಿದೆ. ಹಾಲಗಂಬಕ್ಕೆ ವಾಡಿಕೆಯಂತೆ ಕುಂಕುಮ ಕೇಸರಿ ಮತ್ತು ಸುಣ್ಣ ಬಳಿದು ಹಸಿರೆಲೆಗಳಿಂದ ಅಲಂಕರಿಸುವರು ಮದುವೆಕಾಲಕ್ಕೆ ಕಲಶಗಳನ್ನು ಚೌಕಾಕಾರವಾಗಿ ಈ ಕಂಬದ ಸುತ್ತಲೂ ಇಡುವರು. ಒಂದು ದಾರದಿಂದ ಈ ಕಲಶಗಳನ್ನು

ಸುತ್ತುವರು. ಈ ಚೌಕದಲ್ಲಿ ಮದುಮಕ್ಕಳಿಗೆ ಪವಿತ್ರ ಸ್ನಾನ ಮಾಡಿಸಿ ಹೊಸಬಟ್ಟೆ ತೊಡಿಸುವರು ವಾಡಿಕೆಯ ವಿಧಿಗಳನ್ನು ಪೂರ್ತಿಗೊಳಿಸಿದ ನಂತರ ವಧುವಿನ ಕೊರಳಿಗೆ ವರನು ತಾಳಿಯನ್ನು ಕಟ್ಟುವನು.

ಬಹಳಷ್ಟು ಜಾತಿಗಳಲ್ಲಿ ಮದುವೆ ಮುಖ್ಯ ಹಂತಗಳೆಂದರೆ ಮದುಮಗಳ ಕೊರಳಿಗೆ ಮದುಮಗನು ಮಂಗಳ ಸೂತ್ರ ಅಥವಾ ಕರಿಮಣಿ ಸರ ಕಟ್ಟುವದು ಮತ್ತು ಧಾರೆ ಎರೆಯುವುದು. ಪುರೋಹಿತನು ದೇವರ ಅನುಗ್ರಹವನ್ನು ಕೋರುತ್ತಾನೆ. ನೆರೆದವರೆಲ್ಲ ತಮ್ಮ ಸದಿಚ್ಛೆಯ ದ್ಯೋತಕವೆಂದು ಮದುಮಕ್ಕಳ ತಲೆಗಳ ಮೇಲೆ ಕೆಂಬಣ್ಣ ಸವರಿದ ಅಕ್ಕೀಕಾಳು ಎರಚುತ್ತಾರೆ. ಎಲ್ಲಾ ಜಾತಿಯವರಲ್ಲಿ ಸಾಮಾನ್ಯವಾಗಿ ಎಲ್ಲ ವಿಧಿ ವಿವರಗಳನ್ನು ಒಳಗೊಂಡ ಮದುವೆಯ ಸಮಾರಂಭವು ಸಾಂಗವಾಗಲು ಐದು ದಿನ ಹಿಡಿಯುತ್ತದೆ.

ಮಂತ್ರ ಮಾಂಗಲ್ಯ

ಮಂತ್ರ ಮಾಂಗಲ್ಯವೆಂಬ ಮದುವೆಯ ಸಂಪ್ರದಾಯ ಈ ರಾಜ್ಯದ ಮಲೆನಾಡು ಪ್ರದೇಶದಲ್ಲಿ ಬಳಕೆಯಾಗ ಹತ್ತಿದೆ. ಹಿಂದುಗಳ ಮದುವೆಗಳಲ್ಲಿ ನಡೆಯುತ್ತಿರುವ ವಿಪರೀತ ವೆಚ್ಚ ವರ್ಜಿಸಿ, ಪೌರೋಹಿತ್ಯ ಪದ್ಧತಿ ತಳ್ಳಿಹಾಕಿ ಇದನ್ನು ಪ್ರಾರಂಭಿಸಿದ್ದಾರೆ. ಡಾ.ಕೆ.ವಿ.ಪುಟ್ಟಪ್ಪ (ಕುವೆಂಪು) ರವರು ಇದರ ಬಗ್ಗೆ ಕೆಲವು ಮಂತ್ರ-ಸೋತ್ರಗಳನ್ನು ಹೇಳಿ ಹೊಸ ಗ್ರಂಥಗಳಿಂದ ಆಯ್ದು ಹೊತ್ತಿಗೆಯ ರೂಪದಲ್ಲಿ ಪ್ರಕಟಿಸಿದ್ದಾರೆ. ಮದುವೆ ನಿಶ್ಚಯಿಸಿದ ಶುಭ ಮೂಹೂರ್ತದಲ್ಲಿ ಪುರೋಹಿತನಲ್ಲದ ತಾರ್ಕಿಕ ನೊಬ್ಬನು ಮಂತ್ರ ಪಟಿಸಿ, ಧಾರ್ಮಿಕ ಗ್ರಂಥಗಳಲ್ಲಿಯ ಕೆಲವು ವಾಕ್ಯಗಳನ್ನು ಓದುವನು. ಆಮೇಲೆ ಮದುಮಗಳ ಕೊರಳಲ್ಲಿ ಮದುಮಗನು ತಾಳಿ ಕಟ್ಟುವನು. ಇಷ್ಟೇ ವಿಧಿಗಳಲ್ಲಿ ಮದುವೆಯನ್ನು ಸಾಂಗಗೊಳಿಸುವರು.

ವರದಕ್ಷಿಣೆ ಮತ್ತು ತೆರ

ಮದುವೆ ಬಳುವಳಿಯ ಅಥವಾ ವರದಕ್ಷಿಣೆಯ ಸ್ವೀಕಾರವು ಹಿಂದೂ ವಿವಾಹ ಸಂಸ್ಥೆಯಲ್ಲಿ ಸೇರಿಕೊಂಡ ದುಷ್ಟ ಪದ್ಧತಿಯಾಗಿದೆ. ಸ್ಥಿತಿವಂತ ಮತ್ತು ಸುಶಿಕ್ಷಿತ ಅಳಿಯಂದಿರಿಗೆ ಅನೇಕ ವೇಳೆ ದೊಡ್ಡ ಮೊತ್ತದ ಬಳುವಳಿ ಕೊಡಲಾಗುತ್ತದೆ. ಇತ್ತೀಚೆಗೆ ವಿಚಾರವಂತ ಹೆತ್ತವರು ತಮ್ಮ ಕುಮಾರನ ಬಗ್ಗೆ ಬಳುವಳಿ ನಿರಾಕರಿಸುವುದುಂಟು. ಕಾಯಿದೆಯಂತೆ ವರದಕ್ಷಿಣೆ ನಿಷಿದ್ಧ, ವರದಕ್ಷಿಣೆಗೆ ವಿಪರೀತವಾದ ತೆರಪದ್ಧತಿಯಲ್ಲಿ ವರನ ತಾಯಿ ತಂದೆಗಳು ವಧುವಿನ ಪಕ್ಷದವರಿಗೆ ಕನ್ಯಾಶುಲ್ಕ ಕೊಡುವರು. ಅದು ಹೆಣ್ಣಿನ ಸಲುವಾಗಿ ಗಂಡಿನವರು ತೆರಬೇಕಾದ ಮೊತ್ತ ಕೊಡುವ ತೆರದ ಮೊತ್ತ, ಅವರ ಆರ್ಥಿಕ ಸ್ಥಾನವನ್ನು ಅವಲಂಭಿಸಿದೆ. ಈ ಪದ್ಧತಿ ಕೆಲವು ಜಾತಿಗಳಲ್ಲಿ ಮತ್ತು ಬುಡಕಟ್ಟುಗಳಲ್ಲಿ ಬಳಕೆಗೊಂಡಿದೆ. ಅದೂ

ಸಹ ಕ್ರಮೇಣ ಲೋಪಗೊಳ್ಳುತ್ತಲಿದೆ. ಈಗ ಬಹಳ ಪ್ರಸಂಗಗಳಲ್ಲಿ ವಿಧಿಗಳನ್ನು ಸುಲಭಗೊಳಿಸಿ ಎರಡೇ ದಿನಗಳಲ್ಲಿ ಮದುವೆ ಮುಗಿಸಿ ಬಿಡುತ್ತಾರೆ. ಹಿಂದಿನ ಕಾಲದಲ್ಲಿ ಶೋಭನಪ್ರಸ್ತ ಮದುವೆಯಾದ ಒಂದೆರಡು ವರ್ಷಗಳ ನಂತರ ನೆರವೇರಿಸುತ್ತಿದ್ದರು. ಆದರೆ ಈಗ ಆ ವಿಧಿಯನ್ನು ಪಟ್ಟಣಿಗರು ಮದುವೆಯ ದಿನವೇ ಪೂರ್ತಿಗೊಳಿಸುತ್ತಾರೆ.

ಹಿಂದೂಗಳಲ್ಲಿ ಕುಲಗೋತ್ರಗಳ ಒಳಗೆ ನಿಷೇಧಿಸುವ ಮತ್ತು ಅವುಗಳ ಹೊರಗೆ ಮಾಡಿಗೊಡುವ ಅನೇಕ ಕಟ್ಟಳೆಗಳು ಇವೆ. ಸಾಮಾನ್ಯವಾಗಿ ತನ್ನ ಜಾತಿಯ ಹೊರಗೆ ಮತ್ತು ನಿಕಟ ಸಂಬಂಧಿತರ ಒಳಗೆ ಯಾರು ಮದುವೆ ಆಗಲಾರರು. ಯಾವದೊಂದು ಉಪಜಾತಿಯು ಅನುಲೋಮ (ವಿವಾಹ ಉಪಜಾತಿಯಲ್ಲೇ ವಿವಾಹ ಸಂಬಂಧ)ವನ್ನು ಮಾತ್ರ ಒಪ್ಪಿಕೊಂಡರೆ, ಮದುವೆ ಬಯಸುವವರು ತಮ್ಮ ಉಪಜಾತಿಯಲ್ಲೇ ಇದ್ದ ಭಾಷೆ, ಪ್ರದೇಶ, ಮತ ಮತ್ತು ಕಸಬುಗಳ ಅಂತರವನ್ನು ಅವಲಂಬಿಸಿದೆ. ಕುಲದ ಹೊರಗಿನ ಮದುವೆಗಳನ್ನು ಮಾತ್ರ ಒಪ್ಪುವ ಕಟ್ಟಳೆಗಳೆಂದರೆ, 'ಬಳಿ' ಇಲ್ಲವೆ ''ಬೆಡಗು''ಗಳು. ಇವು ಬಣಗಳಲ್ಲಿ ಇಲ್ಲವೆ ಬುಡಕಟ್ಟಿನವರಲ್ಲಿ ಇರುವ ಪ್ರಭೇಧಗಳು, ತಮ್ಮಲ್ಲಿಯೇ ಶರೀರ ಸಂಬಂಧ ನಡಿಸುವವರನ್ನು ಈ ಬಣಗಳು ನಿಷೇಧಿಸುತ್ತವೆ. ಈ ನಿಷೇಧ ಸ್ಥೂಲವಾಗಿ ಎಲ್ಲ ಬ್ರಾಹ್ಮಣರರಿಗೆ ಅನ್ವಯಿಸುತ್ತದೆ. ಬಳಿ ಬೆಡಗುಗಳಿಗೆ ಬ್ರಾಹ್ಮಣರ ಗೋತ್ರಗಳು ಹೋಲುತ್ತವೆ. ಆದ್ದರಿಂದ ಬ್ರಾಹ್ಮಣರು ಸಗೋತ್ರ ವಿವಾಹಗಳನ್ನು ನಿಷೇಧಿಸುತ್ತಾರೆ. ಮತ್ತು ಭಿನ್ನ ಗೋತ್ರಗಳಲ್ಲಿ ಸಂಬಂಧ ಬೆಳೆಸುತ್ತಾರೆ. ಸ್ಥೂಲವಾಗಿ ಹೇಳ ಬೇಕಾದರೆ ಹಿಂದೂಗಳು ಜಾತಿಯಲ್ಲೇ ಮದುವೆಗಳನ್ನು ಮಾಡಿಕೊಟ್ಟು ಕುಲಗೋತ್ರ ಬಳಿ ಬೆಡಗುಗಳಲ್ಲಿ ಮದುವೆ ಆಗಗೊಡುವುದಿಲ್ಲ. ಸ್ವಾತಂತ್ರ್ಯದ ನಂತರ ವಿಧಿಸಿದ ಕಾಯಿದೆಯಂತೆ, ಕುಲಗೋತ್ರ ಬಳಿ ಬೆಡಗುಗಳಲ್ಲಿಯ ವಿವಾಹಗಳು ಸಿಂಧುವೆನಿಸಿಕೊಳ್ಳುತ್ತವೆ.

ಮದುವೆ

ಮಾನವನ ಜೀವನದಲ್ಲಿ ಮದುವೆ ಎನ್ನುವುದು ಮಹತ್ವದ ಘಟನೆ. ಭಾರತೀಯ ಜೀವನ ಪದ್ಧತಿಯಲ್ಲಿ ಇದೊಂದು ಮುಖ್ಯವಾದ ಸಂಸ್ಕಾರ. ಸ್ತ್ರೀ-ಪುರುಷರೆಂಬ ಇಬ್ಬರು ವ್ಯಕ್ತಿಗಳನ್ನು ಸಾಮಾಜಿಕ-ಧಾರ್ಮಿಕ ವಿಧಿ ವಿಧಾನಗಳಿಂದ ಒಟ್ಟುಗೂಡಿಸುವ ಸಂಸ್ಕಾರವೆಂದರೆ 'ವಿವಾಹ'. ಎರಡು ಬೇರೆ ಬೇರೆ ಮನೆತನಗಳಲ್ಲಿ ಹುಟ್ಟಿ ಬೆಳೆದ ಬಿನ್ನ ಪರಿಸರದ ಇಬ್ಬರು ಅಪರಿಚಿತರನ್ನು ಮದುವೆ ಎಂಬ ಸಂಸ್ಕಾರ ಒಂದುಗೂಡಿಸುತ್ತದೆ.

ಜಗತ್ತಿನ ಬೇರೆ ಬೇರೆ ದೇಶ, ಜನಾಂಗ, ಧರ್ಮಗಳವರಲ್ಲಿ ತಮ್ಮದೇ ಆದ ರೀತಿಯಲ್ಲಿ ವಿವಾಹದ ವಿಧಿ ವಿಧಾನಗಳು ಬಳಕೆಯಲ್ಲಿ ಇವೆ. ಮದುವೆ ಎನ್ನುವ ಈ ಸಾಮಾಜಿಕ ಒಂದು ಕಟ್ಟು ಪಾಡನ್ನು ಮನುಷ್ಯ ತನ್ನ ಸಮಾಜದಲ್ಲಿ ಅಳವಡಿಸಿ ಕೊಂಡದ್ದು ಏಕೆ?

ಆದಿ ಮಾನವನಲ್ಲಿ, ಅನಾಗರಿಕ ವಾತಾವರಣವಿದ್ದ ಕಾಲದಲ್ಲಿ ಈ ಸಂಸ್ಕಾರ ಬಳಕೆಯಲ್ಲಿ ಇರಲಿಕ್ಕಿಲ್ಲ, ಯಾವ ರೀತಿ ಪಶುಪಕ್ಷಿಗಳು ತಮ್ಮ ಶಾರೀರಿಕ ಕಾಮನೆಗಳನ್ನು ಭಾವನಾರಹಿತವಾಗಿ ಪೂರೈಸಿಕೊಳ್ಳುತ್ತವೆಯೋ ಹಾಗೆ ಮನುಷ್ಯನೂ ವರ್ತಿಸಿರಲಿಕ್ಕೂ ಸಾಕು. ಕಾಲಾನಂತರದಲ್ಲಿ ಗರ್ಭಿಣಿಯಾದ ನಿಸ್ಸಹಾಯಕ ಮಹಿಳೆಯರ ರಕ್ಷಣೆಗಾಗಿ ಹೆತ್ತ ನಂತರ ನಿಸ್ಸಹಾಯಕ ಸ್ಥಿತಿಯಲ್ಲಿರುವ ತಾಯಿ-ಮಗುವಿನ ಪೋಷಣೆಗಾಗಿ ಹೊಣೆಗಾರಿಕೆಯೊಂದನ್ನು ವಹಿಸಿ ಕೊಡಲು ಸ್ತ್ರೀ ಪುರುಷರಲ್ಲಿ ಶಾಶ್ವತ ಸಂಬಂಧವನ್ನು ಏರ್ಪಡಿಸಲು ಸಮಾಜದಲ್ಲಿ 'ಹಿರಿಯರು' ಆಲೋಚಿಸಿ, ಈ ವಿಧಿಯನ್ನು ಅಳವಡಿಸಿರಬಹುದು. ಹುಟ್ಟುಗುಣಗಳಲ್ಲಿ ಮುಖ್ಯವಾದ ಕಾಮತೃಪ್ತಿಯಿಂದ ಆರಂಭವಾದ ಈ ಒಟ್ಟುಗೂಡಿಸುವ ಕ್ರಿಯೆ, ಮುಂದೆ ಇನ್ನೊಂದು ಹುಟ್ಟುಗುಣವಾದ ವಾತ್ಸಲ್ಯ ತೃಪ್ತಿಗೆ ಎಡೆಮಾಡಿಕೊಟ್ಟು ನಂತರ ತನ್ನದೇ ಆದ ಸಂತಾನವನ್ನು ಜಗತ್ತಿಗೆ ಕೊಡಬೇಕೆಂಬ 'ಸಂಘಜೀವನಾಕಾಂಕ್ಷೆ' ಎಂಬ ಮತ್ತೊಂದು ಹುಟ್ಟುಗುಣವನ್ನು ತಣಿಸುತ್ತದೆ. 'ಕುಟುಂಬ' ಎಂಬ ಪುಟ್ಟ ಘಟಕವು ಮನುಷ್ಯನ ಸಂಘ ಜೀವನಾಕಾಂಕ್ಷೆಯ ಒಂದು ಅಭಿವ್ಯಕ್ತ ರೂಪ.

ಭಾರತೀಯ ಜೀವನಕ್ರಮದಲ್ಲಿ ವಿವಾಹವು ಉಳಿದೆಲ್ಲ ಸಂಸ್ಕಾರಗಳಿಗಿಂತ ಗಣ್ಯ ಸ್ಥಾನವನ್ನು ಗಿಟ್ಟಿಸಿದೆ. ಏಕೆಂದರೆ ಭಾರತೀಯರಲ್ಲಿ ಮುಖ್ಯವಾಗಿ ಹಿಂದೂಗಳಲ್ಲಿ ಪತಿ-ಪತ್ನಿಯರ ಸಂಬಂಧ ಸಾವಿನ ಪರ್ಯಂತರ ಅಗಲಲಾರದ ಸಂಬಂಧ ''ಕಾಲುಗಳೆರಡಾದರೂ ಓಟ ಒಂದೆ ಹೇಗೋ, ಕೈಗಳು ಎರಡಾದರೂ ಮಾಟ ಒಂದೇ ಹೇಗೋ, ಕಣ್ಣುಗಳು ಎರಡಾದರೂ ನೋಡುವ ವಸ್ತು ಒಂದೆ ಹೇಗೋ ಹಾಗೆಯೇ ಶರೀರ ಎರಡಾದರೂ ಪತಿ-ಪತ್ನಿಯರ ಸಂಬಂಧ ಗಾಢವಾಗಿ ಒಂದೇ ಗುರಿಯತ್ತ ಸಾಗಬೇಕು.''

ಮದುವೆ ಎನ್ನುವ ಧಾರ್ಮಿಕ ವಿಧಿಯು ಮನುಷ್ಯನ ಜೀವನದಲ್ಲಿ ಒಮ್ಮೆ ಮಾತ್ರ ಬರುವಂಥಾದ್ದು ಆದರೆ ಆತನ ಆಕೆಯ ಪೂರ್ಣ ಭವಿಷ್ಯವನ್ನೇ ನಿರ್ಧರಿಸುವಂತಹದ್ದು. ಪರಸ್ಪರ ಪರಿಚಿತರಲ್ಲದ ಇಬ್ಬರು ಈಗ ಪರಿಚಿತರು, ಆತ್ಮೀಯರೂ ಆಗಿ ಇಡೀ ಜೀವನ ಪರ್ಯಂತರ ಒಟ್ಟುಗೂಡಿ ಬಾಳಲೇ ಬೇಕು. ಇಂತಹ ಅನ್ಯೋನ್ಯತೆ ಉಂಟು ಮಾಡುವ ವಿವಾಹ ಕಾರ್ಯಕ್ರಮವು ಅರ್ಥಗರ್ಭಿತವಾಗಿ ದಾಂಪತ್ಯ ಜೀವನವನ್ನು ಪ್ರವೇಶಿಸುವವರಿಗೆ ಸ್ಫೂರ್ತಿದಾಕವಾಗಿ ಇರಬೇಕು.

ಧರ್ಮಸಿಂಧು ಮೊದಲಾದ ಗ್ರಂಥಗಳಲ್ಲಿ ಕನ್ಯೆಯ ವಿವಾಹವನ್ನು ೧೦ ರಿಂದ ೧೨ನೆಯ ವಯಸ್ಸಿನೊಳಗಾಗಿ ಮಾಡಬೇಕೆಂದು ಘಂಟಾ ಘೋಷವಾಗಿ ಹೇಳಿದೆ. ವಿಶೇಷ ಸಂದರ್ಭಗಳಲ್ಲಿ ಮಾತ್ರ ಋತುಮತಿಯಾಗಿ ೩ ವರ್ಷಗಳೊಳಗೆ ಕನ್ಯೆಯ ವಿವಾಹ ಜರುಗಿಸಬಹುದೆಂದು ಕೆಲ ಗ್ರಂಥಗಳು ನಿರೂಪಿಸಿವೆ ಆದರೆ ಬಾಲ್ಯ ವಿವಾಹದಿಂದಾ ಅನ್ಯಾಯ ಅನಾಹುತಗಳನ್ನು ನಿರೀಕ್ಷಿಸಿ, ಬರಬರುತ್ತ

ಧರ್ಮಾಚಾರದ ಬಾಲ್ಯ ವಿವಾಹಗಳಿಗೆ ಸಮಾಜವು, ಸರಕಾರವೂ ತಡೆ ಹಾಕಿತು. ಸದ್ಯಕ್ಕಂತೂ ೧೮ ವರ್ಷದೊಳಗಿನ ಬಾಲಿಕೆಯರ ವಿವಾಹ ಅಪರಾಧವೆಂದು ನಾವೇ ನಮ್ಮ ಸರಕಾರವೇ ನಿರ್ಣಯಿಸಿ ಕಾಯ್ದೆಯನ್ನು ಕೂಡ ಮಾಡಿಬಿಟ್ಟಿತು.

ಗಂಡು-ಹೆಣ್ಣು ನೋಡುವ ಶಾಸ್ತ್ರ

ಮೊದಲು ಯಾವುದಾದರು ಒಂದು ಊರಿನಲ್ಲಿ 'ವಧು' ಇದೆ ಎಂದು ಗೊತ್ತಾದಾಗ 'ವರನು' ದೊಡ್ಡವರು (ತಂದೆ- ತಾಯಿ) ಅಥವ ಸ್ವಾಮಿಯವರನ್ನು ಜೊತೆಯಲ್ಲಿ ಕರೆದುಕೊಂಡು 'ವಧು'ವನ್ನು ನೋಡಲು ಹೋಗುತ್ತಾರೆ. ವರನಿಗೆ ವಧು ಇಷ್ಟವಾದರೆ ತಂದೆ-ತಾಯಿ ಅಕ್ಕ ತಂಗಿ ಉಳಿದ ಬೇರೆ ನೆಂಟರು ಎಲ್ಲಾರು ಹೋಗಿ ಮತ್ತೆ ನೋಡುತ್ತಾರೆ. ಕನ್ಯಾ ನಮಗೆ ಇಷ್ಟವಾಗಿದ್ದಾಳೆ ನೀವುಗಳು ಬಂದು ನಮ್ಮ ಮನೆಯನ್ನು ನೋಡಿ ಎಂದು ಹೇಳಿ ಹೋಗುತ್ತಾರೆ ಕನ್ಯಾವನ್ನು ನೋಡಲಿಕ್ಕೆ ಬಂದಾಗ ಮೊದಲಿಗೆ ಬರಿ ಕೈಯಲ್ಲಿ ಬರುವುದಿಲ್ಲ. ಹಣ್ಣು, ಹೂ ತೆಗೆದುಕೊಂಡು ಬಂದಿರುತ್ತಾರೆ. ವದುವಿನ ಕಡೆಯವರಿಗೆ ವರ ಇಷ್ಟವಾಗಿದ್ದರೆ, ಅವರ ಮನೆತನವನ್ನು ನೋಡಲು ೮-೧೦ ಜನ ಸೇರಿ ಹೋಗುತ್ತಾರೆ. ಮನೆತನ ಎಂದರೆ ಅವರ ಮನೆ ಹೇಗಿದೆ, ಆ ವರನ ತಂದೆ-ತಾಯಿ, ಅವರ ಬಳಗದ ಜನ, ಹಾಗೂ ಅವರ ಆಸ್ತಿ, ಎಲ್ಲವನ್ನು ನೋಡಿ ಅವರ ಕುಟುಂಬದ ಪರಿಚಯ ತಿಳಿದುಕೊಳ್ಳುತ್ತಾರೆ.

ನಂತರ ಇಬ್ಬರ ಕಡೆಯಿಂದ 'ಒಪ್ಪಿಗೆ' ಎನ್ನುವ ಪದ ತಿಳಿದಕೂಡಲೆ ಸ್ವಾಮಿಗಳ ಹತ್ತಿರ ಗಂಡು-ಹೆಣ್ಣಿನ ಜಾತಕವನ್ನು ಕೂಡಿಬರುತ್ತದೆಯೆ ಎಂದು ತಿಳಿದುಕೊಳ್ಳುತ್ತಾರೆ. ಈ ಹಿಂದು ಮದುವೆಯಲ್ಲಿ ಕೆಲವರು ಜಾತಕವನ್ನು ನೋಡುವುದಿಲ್ಲ. ಗಂಡು- ಹೆಣ್ಣಿನ ಹೆಸರು ಬಲ ಕೂಡಿಬಂದರೆ ಸಾಕು ಎಂದು ಹೇಳುತ್ತಾರೆ.

ಗಂಡು-ಹೆಣ್ಣಿನ ಒಪ್ಪಿಗೆಯ ಮೇರೆಗೆ ಈ ನಿಶ್ಚಿತಾರ್ತದ ದಿನವನ್ನು ಗುರುತಿಸಿಕೊಳ್ಳುತ್ತಾರೆ. ಆ ನಿಶ್ಚಿತಾರ್ತವನ್ನು ವದುವಿನವರ ಅವರ ಯೋಗ್ಯತೆಗೆ ತಕ್ಕಹಾಗೆ ಮಾಡುತ್ತಾರೆ.

ನಿಶ್ಚಿತಾರ್ತದ ದಿನ ಮಾಡುವ ಶಾಸ್ತ್ರಗಳು

ಈ ನಿಶ್ಚಿತಾರ್ತ ನಡೆಯುವುದು 'ವದು'ವಿನ ಮನೆಯಲ್ಲಿ. ಇದು ಅವರ ಯೋಗ್ಯತೆಗೆ ತಕ್ಕಂತೆ ಮಾಡುತ್ತಾರೆ. ಶ್ರೀಮಂತರು ಅತ್ಯಂತ ಆಡಂಬರದಿಂದ ಮಾಡುತ್ತಾರೆ ಎಂದು ಹೇಳಬಹುದು. ಈ ನಿಶ್ಚಿತಾರ್ತಕ್ಕೆ 'ವರದ' ಕಡೆಯವರು ಅವರ ಯೋಗ್ಯತೆಗೆ ತಕ್ಕಹಾಗೆ ಒಂದು ಸೀರೆ, ರವಿಕೆ ಬಟ್ಟೆ, ಕಾಲು ಚೈನು, ಉಂಗುರ ಮತ್ತು ಎಲೆ, ಅಡಿಕೆ, ಹೂ, ಸಕ್ಕರೆ ಮತ್ತು ಸೂಸ್ಕ ಇವೆಲ್ಲವನ್ನು ತರುತ್ತಾರೆ.

'ವದು'ವಿನವರು ಸಹ 'ವರ'ನಿಗೆ ಒಂದು ಜೊತೆ ಬಟ್ಟೆ, ಉಂಗುರ ಕೊಡುತ್ತಾರೆ. (ವರನು ಮನೆಗೆ ಬಂದಾಗ ಬಾಗಿಲಲ್ಲಿ ಅವರ ಕಾಲಿಗೆ ನೀರು ಹಾಕುತ್ತಾರೆ. ಬಾಗಿಲ ಬಳಿಯಲ್ಲಿಯೇ ಉಂಗುರ ಇಡುತ್ತಾರೆ ಹುಡುಗಿಯ ತಂದೆ) ದೇವರ ಮನೆಗೆ ಹೋಗಿ ಕೈ ಮುಗಿಯುತ್ತಾರೆ.

ಸ್ವಾಮಿಗಳು ಪೂಜೆಯನ್ನು ಆರಂಭಿಸುತ್ತಾರೆ. ಗಣಪತಿ ಪೂಜೆಯನ್ನು ಮಾಡುತ್ತಾರೆ.

ಪೂಜೆ ಮಾಡುವ ವಿಧಾನ

ಮೊದಲಿಗೆ ಕಂಬಳಿಯನ್ನು ಹಾಸುತ್ತಾರೆ. ನಂತರ ಅದರ ಮೇಲೆ ಅಕ್ಕಿಯನ್ನು ಉದುರಿಸುತ್ತಾರೆ. ಕಂಬಳಿಯ ಮೇಲೆ ಒಂದು ತಟ್ಟೆಯನ್ನು ಇಟ್ಟು ಅದಕ್ಕೆ ಅಕ್ಕಿಯನ್ನು ತುಂಬುತ್ತಾರೆ. ಅದರ ಮೇಲೆ ಒಂದು ತಂಬಿಗೆಯನ್ನು ಇಟ್ಟು ಅದರ ಒಳಗೆ ನೀರನ್ನು ಹಾಕಿ ಅದರಲ್ಲಿ ಒಂದು ಕಾಯಿಯನ್ನು ಇಡುತ್ತಾರೆ. ಸುತ್ತಲು ೫ ಎಲೆಯನ್ನು ಇಡುತ್ತಾರೆ. ತಂಬಿಗೆಯ ಕಂಠದ ಹತ್ತಿರ ನಂತರ ಕಾಯಿ ಇಟ್ಟು ಆ ಕಾಯಿಗೆ ಮತ್ತು ತಂಬಿಗೆಗೆ ವಿಭೂತಿ, ಕುಂಕುಮ, ಅರಿಸಿನ ಹಾಗೂ ಹೂವನ್ನು ಇಟ್ಟು ಅಲಂಕರಿಸುತ್ತಾರೆ. ೨ ಕಾಲು ದೀಪಗಳನ್ನು ಹಚ್ಚುತ್ತಾರೆ. ವರನ ಕಡೆಯವರು ತಂದ ಎಲೆ, ಅಡಿಕೆ, ಹೂ, ಸಕ್ಕರೆ, ಸೀರೆ, ಕಣ, ಉಂಗುರ, ಕಾಲು ಚೈನು ಇವೆಲ್ಲವನ್ನು ಜೋಡಿಸುತ್ತಾರೆ. ಅಲಂಕರಿಸಿದ ಆ ತಂಬಿಗೆಗೆ ಸ್ವಾಮಿಗಳು ಪೂಜೆಯನ್ನು ಮಾಡುತ್ತಾರೆ. ಒಂದು ಮಣೆಯ ಮೇಲೆ ಕಳಸದ ತಟ್ಟೆಯನ್ನು ಜೋಡಿಸುತ್ತಾರೆ. ಈ ಪೂಜೆಯಾದ ನಂತರ ತಾಂಬೂಲವನ್ನು ಬದಲಾಯಿಸುತ್ತಾರೆ. ಇದರಲ್ಲಿ ಎಲೆ, ಅಡಿಕೆ, ಸಕ್ಕರೆ ಇಟ್ಟಿರುತ್ತಾರೆ. ಹೆಣ್ಣಿನ-ತಂದೆ-ಗಂಡಿನ-ತಂದೆಯ ಬಾಯಿಗೆ ಹಾಕುತ್ತಾರೆ. ಗಂಡಿನ-ತಂದೆ ಹೆಣ್ಣಿನ-ತಂದೆಯ ಬಾಯಿಗೆ ಹಾಕುತ್ತಾರೆ. ಗಂಡಿನ ತಂದೆ ನಿಮ್ಮ ಮಗಳನ್ನು ಸಂತೋಷದಿಂದ ನಮ್ಮ ಸೊಸೆಯಾಗಿ ಮಾಡಿಕೊಂಡಿದ್ದೇವೆ ಎಂದು ಹೇಳುತ್ತಾರೆ. ಹೆಣ್ಣಿನ ತಂದೆ ನಮ್ಮ ಮಗಳನ್ನು ಸಂತೋಷವಾಗಿ ನಿಮ್ಮ ಮನೆಗೆ ಕೊಟ್ಟಿದ್ದೇವೆ ಎಂಬ ಮಾತುಗಳನ್ನು ಹೇಳಿ ಸಕ್ಕರೆ ಹಾಕಿಕೊಳ್ಳುತ್ತಾರೆ.

ನಂತರ ಆ ಕಂಬಳಿಯ ಮೇಲೆ 'ವದು' ವನ್ನು ಕೂಡಿಸಿ. ಅವರು ತಂದ ಸೀರೆ, ಕಣ, ವರನ ತಂಗಿ-ಅಕ್ಕ ಇಲ್ಲವೆ ಅತ್ತೆಯವರು ಕುಂಕುಮ ಹಚ್ಚಿ ಕಳಸಬೆಳಗಿ ಕೊಡುತ್ತಾರೆ. ಆ ಸೀರೆಯನ್ನು 'ವದು' ಉಟ್ಟುಕೊಂಡು ಬರುತ್ತಾಳೆ. ನಂತರ ಅವಳನ್ನು ಕೂಡಿಸಿ ಅವಳ ಪಕ್ಕಕ್ಕೆ ವದುವಿನ ಅಕ್ಕ ಅಥವ ತಂಗಿಯನ್ನು ಕೂಡಿಸುತ್ತಾರೆ. 'ವದು'ವಿಗೆ ವರನ ಕಡೆಯವರು ತಂದ ಸುಸ್ಕವನ್ನು ವದುವಿನ ತಲೆಗೆ ಕಟ್ಟುತ್ತಾರೆ. ನಂತರ ಅವಳಿಗೆ ಉಡಿಯಕ್ಕಿಯನ್ನು ತುಂಬುತ್ತಾರೆ ಅದರಲ್ಲಿ ಒಂದು ಕಣ, ಅಕ್ಕಿ, ಎಲೆ, ಅಡಿಕೆ ಹಾಗೂ ಅರಿಸಿಣ ಕೊಂಬು, ಒಣ ಕೊಬ್ಬರಿ ಬಟ್ಟಲು ಇಟ್ಟಿರುತ್ತಾರೆ. ಉಂಗುರ ಕಾಲು ಚೈನುಗಳನ್ನು ವರನ ಅತ್ತೆ ಅಥವಾ ತಂಗಿಯವರು 'ವದು'ವಿಗೆ ಹಾಕಿ ಆ ಐದು ಜನ ಮುತ್ತೈದೆಯರು ಇವಳಿಗೆ ಕಳಸದ

ಆರುತಿಯನ್ನು ಮಾಡುತ್ತಾರೆ. ವದುವಿನ ಅಕ್ಕಳಿಗೂ ಸಹ ಆರುತಿಯನ್ನು ಮಾಡುತ್ತಾರೆ. (ಒಂಟಿಯಾಗಿ ವದುವನ್ನು ಮೊದಲು ಕೂಡಿಸಬಾರದು ಎಂದು ಅವಳ ಪಕ್ಕಕ್ಕೆ ಅಕ್ಕ ಅಥವ ತಂಗಿಯನ್ನು ಕೂಡಿಸುತ್ತಾರೆ).

ನಂತರ ವರ ಮತ್ತು ವದು ಇಬ್ಬರನ್ನು ಒಟ್ಟಿಗೆ ಕೂಡಿಸುತ್ತಾರೆ. ಇಬ್ಬರು ಒಬ್ಬರಿಗೊಬ್ಬರು ಹಾರವನ್ನು ಹಾಕುತ್ತಾರೆ. ನಂತರ ಉಂಗುರಗಳನ್ನು ಇಬ್ಬರು ಒಬ್ಬರಿಗೊಬ್ಬರು ಹಾಕಿಕೊಳ್ಳುತ್ತಾರೆ. 'ವದು' ವರನಿಗೆ ಕಳಸದ ಆರುತಿ ಬೆಳಗುತ್ತಾರೆ. ನಂತರ 'ವರನು' ವದುವಿಗೆ ಬೆಳಗುತ್ತಾರೆ. ನಂತರ ಒಬ್ಬರಿಗೊಬ್ಬರು ಸಕ್ಕರೆಯನ್ನು ಬಾಯಿಯಲ್ಲಿ ಹಾಕಿಕೊಳ್ಳುತ್ತಾರೆ. ಈ ನಿಶ್ಚಿತಾರ್ತವನ್ನು ನೋಡಲು ಬಂದವರಿಗೆ ಎಲೆ, ಅಡಿಕೆ, ಸಕ್ಕರೆಯನ್ನು ಇಟ್ಟು ಪ್ರತಿಯೊಬ್ಬರಿಗೂ ಕೊಡುತ್ತಾರೆ. ವರನನ್ನು ಕೂಡಿಸಿದಾಗ ಹೆಣ್ಣಿನ-ತಂದೆ-ತಾಯಿ ವರನಿಗೆ ಬಟ್ಟೆಯನ್ನು ಕೊಡುತ್ತಾರೆ. ನಂತರ ಊಟದ ಕಾರ್ಯಕ್ರಮನಡೆಯುತ್ತದೆ. ಊಟಕ್ಕೆ ಹೋಳಿಗೆ, ಪಲ್ಲೆ, ಕೊಸಂಬರಿ, ಹಪ್ಪಳ ಸಂಡಿಗೆ, ಅನ್ನ, ಸಾರು, ಉಪ್ಪಿನಕಾಯಿ, ಬಡಿಸುತ್ತಾರೆ.

ಮದುವೆ ಹತ್ತಿರ ಬಂದಾಗ ಮಾಡುವ ಶಾಸ್ತ್ರಗಳು

ನಿಶ್ಚಿತಾರ್ತ ಆದ ಕೆಲವೆ (ತಿಂಗಳು) ದಿನಗಳಲ್ಲಿ ಮದುವೆಯ ತಾರೀಖು ತಿಂಗಳನ್ನು ಗುರುತಿಸುತ್ತಾರೆ.

ಶಾಸ್ತ್ರಗಳು

೦೧. ಚಪ್ಪರ ಹಾಕುವುದು

೦೨. ಚಟ್ಟು ಬಡಿಸುವುದು

೦೩. ಲಗ್ನ ಕಟ್ಟಿಸುವುದು

೦೪. ಒಳಕಲ್ಲು-ಗೋದಿಕಲ್ಲು ಪೂಜೆ

೦೫. ಶಾವಿಗೆ ಪೂಜೆ

೦೬. ಸಂಡಿಗೆ ಇಡುವ ಶಾಸ್ತ್ರ

೦೭. ಹಸೆ ಬರೆಯುವುದು.

೦೧. ಚಪ್ಪರ ಹಾಕುವುದು

ಈ ಶಾಸ್ತ್ರ ಮನೆಯ ಮುಂದೆ ಮಾಡುತ್ತಾರೆ. ನಾಲ್ಕು ಕಂಬಗಳನ್ನು ಇಡುತ್ತಾರೆ. ಇದರ ಅಲಂಕಾರಕ್ಕೆ ಮಾವಿನ ತೋರಣ, ತೆಂಗಿನ ಗರಿ, ಬಾಳೆಕಂಬ, ಅಂದ್ರದ ಎಲೆ ಮೊದಲಾದವನ್ನು ತರುತ್ತಾರೆ. ಈ ಶಾಸ್ತ್ರ ಆರಂಭ ಮಾಡುವ ಮೊದಲಿಗೆ ಬ್ಯಾಂಡುಗಳ ಸಮೇತ ಅನೇಕ ಜನ ಸೇರಿ ದೇವಸ್ಥಾನಕ್ಕೆ ಹೋಗಿ

ಹಾಲುಗಂಬ (ಇದನ್ನು ಸೋದರ ಮಾವ ಮತ್ತು ಅತ್ತೆ ಅವರೆ) ತರುತ್ತಾರೆ. ನಂತರ ಅವುಗಳನ್ನು ನಾಲ್ಕು ಕಂಬಗಳಿಗೆ ಅಲಂಕರಿಸಿ ಪೂಜಿಸುತ್ತಾರೆ. ಈ ಪೂಜೆಯನ್ನು ಮೊದಲು ಬಲಗಡೆ ಕಂಬದಿಂದ ಆರಂಭಿಸುತ್ತಾರೆ. ಅದಕ್ಕೆ ಹಾಲು ತುಪ್ಪಹಾಕಿ, ನಂತರ ವಿಭೂತಿ, ಕುಂಕುಮ, ಅರಿಶಿಣ ಹಚ್ಚಿ, ಊದಿನಕಡ್ಡಿ ಬೆಳಗಿ ಕಾಯಿ ಒಡೆಯುತ್ತಾರೆ. ಈ ಪೂಜೆಯನ್ನು ಸೋದರತ್ತೆ ಸೋದರ ಮಾವಂದಿರು ಮಾಡುತ್ತಾರೆ. ಮಡಿವಾಳರಿಂದ ಚಪ್ಪರಕ್ಕೆ ಅರಿಶಿಣದ ಬಟ್ಟೆಯನ್ನು ಕಟ್ಟಿಸುತ್ತಾರೆ.

೦೨. ಚಟ್ಟು ಬಡಿಯುವುದು

ಒಂದು ತಟ್ಟೆಯಲ್ಲಿ ಸುಣ್ಣದ ನೀರು, ಕೆಮ್ಮಣ್ಣಿನ ನೀರು ಬೇರೆ ಬೇರೆ ಕಲಿಸಿ ಮನೆ ಅಳಿಯ ತಟ್ಟೆಯನ್ನು ಹಿಡಿದಿರುತ್ತಾನೆ. ಮಗಳು ಆ ತಟ್ಟೆಯಲ್ಲಿ ಹಸ್ತವನ್ನು ಇಟ್ಟು ಗೋಡೆಗೆ ಮನೆಯ ಸುತ್ತಲು ಹಚ್ಚಿಕೊಂಡು ಹೋಗುತ್ತಾರೆ. ಚಪ್ಪರದ ಅಡಿಯಲ್ಲಿ ಮಣೆಹಾಕಿ ಮಗಳು ಅಳಿಯನನ್ನು ಕೂರಿಸಿ ಅರಿಶಿಣದ ನೀರನ್ನು ಹಾಕಿ ಸ್ನಾನ ಮಾಡಿಸುತ್ತಾರೆ. ನಂತರ ಮಗಳು ಅಳಿಯನಿಗೆ ಹೊಸ ಬಟ್ಟೆಯನ್ನು ಕೊಡುತ್ತಾರೆ.

೦೩. ಲಗ್ನದ ಅಕ್ಕಿ ಕಟ್ಟುವ ಕಾರ್ಯ

ಒಂದುಮೀಟರ್ ಬಿಳಿ ಬಟ್ಟೆಯನ್ನು ಹಾಸಿ ಅದರಲ್ಲಿ ೫ ಪಾವು (ಸೇರು) ಅಕ್ಕಿ, ೫ ಕಣ, (ಕೆಂಪು, ಬಿಳಿ ಪೀಸ್‌ಗಳು) ೫ ಉತ್ತುತ್ತಿ, ೫ ಕೊಬ್ಬರಿಬಟ್ಟಲು, ೫ ದುಂಡು ಅಡಿಕೆ, ೫ ಗೇರು ಬೀಜು, ೫ ತಾಳೆಗರಿ, ೫ ನಿಂಬೆಹಣ್ಣು, ವೀಳೆದೆಲೆ, ಗೇರುಬೀಜ ೫, ಈ ಎಲ್ಲಾ ಸಾಮಗ್ರಿಗಳನ್ನು ಕಟ್ಟಿ ದೇವರ ಮನೆಯಲ್ಲಿ ಇಡುತ್ತಾರೆ. ಲಗ್ನ ಪತ್ರಿಕೆಯನ್ನು ಒಂದು ಇಟ್ಟು ಪೂಜೆ ಮಾಡುತ್ತಾರೆ. ಈ ಗಂಟನ್ನು ಗಂಡಿನ ಮನೆಯವರು ಯಾರಾದರು ಹೆಣ್ಣಿನ ಮನೆಗೆ ತೆಗೆದುಕೊಂಡು ಹೋಗುತ್ತಾರೆ. ಅಲ್ಲಿ ಅವರು ತಂದವರ ಕಾಲು ತೊಳೆದು ಪೂಜೆಮಾಡಿ ಅದರಲ್ಲಿ ತಮಗೆ ಬೇಕಾದ ಸಾಮಗ್ರಿಯನ್ನು ತೆಗೆದುಕೊಳ್ಳುತ್ತಾರೆ. ನಂತರ ಈ ಗಂಟನ್ನು ಮದುವೆ ಮಂಟಪಕ್ಕೆ ಕಳುಹಿಸುತ್ತಾರೆ. ಇದನ್ನು ಹೆಣ್ಣಿನ ಪಕ್ಕದಲ್ಲಿ ಇಟ್ಟಿರುತ್ತಾರೆ. ಈ ಲಗ್ನ ಕಟ್ಟಿಸುವ ಕಾರ್ಯ ಹೆಣ್ಣಿನ ಮನೆಯಲ್ಲಿ, ಗಂಡಿನ ಮನೆಯಲ್ಲಿ ಇದೇ ರೀತಿ ನಡೆಯುತ್ತದೆ. ಈ ಗಂಟನ್ನು ಹೆಣ್ಣಿನವರು ಗಂಡಿನ ಮನೆಗೆ, ಗಂಡಿನವರು ಹೆಣ್ಣಿನ ಮನೆಗೆ ಕಳುಹಿಸುತ್ತಾರೆ.

೦೪. ಒಳಕಲ್ಲು-ಗೋದಿಕಲ್ಲು ಪೂಜೆ

ಬೀಸೋಕಲ್ಲಿಗೆ ಸುಣ್ಣದ ಮತ್ತು ಕೆಮ್ಮಣ್ಣಿನ ಪಟ್ಟೆಯನ್ನು ಹಚ್ಚುತ್ತಾರೆ. ಕುಂಕುಮ, ಅರಿಶಿಣ ಹಚ್ಚಿ, ಹೂ ಇಟ್ಟು, ಅಲಂಕರಿಸುತ್ತಾರೆ. ಬೀಸೋಕಲ್ಲಿನ ಗೂಟಕ್ಕೆ ಅರಿಶಿಣದಾರದಲ್ಲಿ ಮಾವಿನ ಸೊಪ್ಪನ್ನು ಕಟ್ಟುತ್ತಾರೆ. ಈ ಕಲ್ಲಿನ ಮುಂದೆ ೫ ಉಡಿಯನ್ನು ಇಟ್ಟಿರುತ್ತಾರೆ. ಎಲೆ, ಅಡಿಕೆ, ಚಿಗಳಿ,

ತಂಬಿಟ್ಟು, ಬಾಳೆಹಣ್ಣು ಈ ಐದು ಉಡಿಗಳನ್ನು ಪೂಜೆಯಾದ ನಂತರ ೫ ಜನ ಮುತ್ತೈದೆಯರಿಗೆ ಈ ಉಡಿಯನ್ನು ಕೊಡುತ್ತಾರೆ. ಈ ೫ ಜನರು ಬೀಸೋಕಲ್ಲಿಗೆ ಗೋದಿ, ಅಕ್ಕಿ ಹಾಕಿಕೊಂಡು ಹಾಡುಹೇಳುತ್ತಾ ೫ ಸುತ್ತು ಬೀಸುತ್ತಾರೆ. (ಕಾಯಿ ಹೊಡೆದು ನೈವೇದ್ಯ ಮಾಡುತ್ತಾರೆ.) ಕಳಶ ಬೆಳಗುತ್ತಾರೆ. ಬಂದ ಮುತ್ತೈದೆಯರಿಗೂ ಕಳಶ ಬೆಳಗುತ್ತಾರೆ.

ಒಳಕಲ್ಲು ಪೂಜೆ

ಒಳಕಲ್ಲು ಮತ್ತು ಒನಕೆಗೆ ಸುಣ್ಣ ಮತ್ತು ಕೆಮ್ಮಣ್ಣಿನ ಪಟ್ಟಿಯನ್ನು ಹಚ್ಚುತ್ತಾರೆ. ಕುಂಕುಮ, ಅರಿಶಿಣ ಹಚ್ಚಿ ಹೂ ಇಟ್ಟು ಅಲಂಕರಿಸುತ್ತಾರೆ ಒನಕೆಗೆ ಅರಿಶಿಣದಾರದಲ್ಲಿ ಮಾವಿನ ಸೊಪ್ಪನ್ನು ಕಟ್ಟುತ್ತಾರೆ. ಇದರ ಮುಂದೆ ೫ ಉಡಿಯನ್ನು ಇಡುತ್ತಾರೆ. ಎಲೆ, ಅಡಿಕೆ, ಚಿಗಳಿ, ತಂಬಿಟ್ಟು, ಬಾಳೆಹಣ್ಣು ಇಡುತ್ತಾರೆ. ಒಳಕಲ್ಲಿಗೆ ಪೂಜೆಮಾಡಿ ಕಾಯಿ ಹೊಡೆದು ಈ ಉಡಿಗಳನ್ನು ೫ಜನ ಮುತ್ತೈದೆಯರಿಗೆ ಕೊಡುತ್ತಾರೆ. ನಂತರ ಇವರಿಗೆ ಕಳಶ ಬೆಳಗುತ್ತಾರೆ. ಒನಕೆಯಿಂದ (ಅರಿಶಿಣ ಕೋಣೆ) ಯನ್ನು ಹಾಡು ಹೇಳುತ್ತಾ ಕುಟ್ಟುತ್ತಾರೆ.

೧೫. ಶಾವಿಗೆ ಮಣಿ ಪೂಜೆ

ಶಾವಿಗೆ ಮಣಿ ಇಟ್ಟು ಇದಕ್ಕೆ ವಿಭೂತಿ, ಕುಂಕುಮ, ಅರಿಶಿಣ, ಹೂ ಇಟ್ಟು ಅಲಂಕರಿಸಿ, ಊದಿನಕಡ್ಡಿ ಬೆಳಗಿ ಕಾಯಿ ಹೊಡೆದು ನಂತರ ೫ ಜನ ಮುತ್ತೈದೆಯರಿಗೆ ಉಡಿ ಕೊಡುತ್ತಾರೆ. ಪ್ರತಿಯೊಬ್ಬರಿಗೂ ಕಳಸ ಬೆಳಗುತ್ತಾರೆ. ನಂತರ ಇವರು ಒಬ್ಬರಾದ ನಂತರ ಒಬ್ಬರು ಮೈದಹಿಟ್ಟನ್ನು ಕಲಿಸಿ ಶಾವಿಗೆ ಹೊಸೆಯುತ್ತಾರೆ.

೧೬. ಸಂಡಿಗೆ ಶಾಸ್ತ್ರ

ಒಂದು ಪಾತ್ರೆಯಲ್ಲಿ ಅಕ್ಕಿಹಿಟ್ಟನ್ನು ಗಟ್ಟಿಯಾಗಿ ಕುದಿಸಿಕೊಂಡು ಚಪ್ಪರದ ಅಡಿಯಲ್ಲಿ ಒಂದು ಮಣೆಹಾಕಿ ಅದರ ಮೇಲೆ ಬಿಳಿ ಬಟ್ಟೆಯನ್ನು ಹಾಸಿ ಇದರ ಮೇಲೆ ಹಿಟ್ಟಿನಿಂದ ಈಶ್ವರನನ್ನು ಮಾಡಿ ಅದರ ಮುಂದೆ ಬಸವಣ್ಣನನ್ನು ಮಾಡಿ ಇಡಬೇಕು. ನಂತರ ಕುಂಕುಮ, ಅರಿಶಿಣ ಹಚ್ಚಿ, ಊದಿನಕಡ್ಡಿ, ಕರ್ಪೂರ ಬೆಳಗಿ, ಕಳಶ ಬೆಳಗಿ ೫ ಜನ ಮುತ್ತೈದೆಯರು ಇದೆ ತರ ಪೂಜೆಮಾಡಿ ಐದು-ಐದು ಸಂಡಿಗೆಯನ್ನು ಪ್ರತಿಯೊಬ್ಬರು ಇಡುತ್ತಾರೆ. ಇದನ್ನು ತೆಗೆದುಕೊಂಡು ದೇವರ ಮನೆಯಲ್ಲಿ ಇಡುತ್ತಾರೆ.

೦೭. ಹಸೆ ಬರೆಯುವುದು

ಕರಿ ಕಂಬಳಿಯನ್ನು ಹಾಸಿ ಅದರ ಮೇಲೆ ಜೋಳ ಅಥವ ಅಕ್ಕಿಯಿಂದ ಹಸೆ ಬರೆಯುತ್ತಾರೆ. ಹೆಣ್ಣು ಕುಳಿತುಕೊಳ್ಳುವಾಗ ಬಲಗಾಲನ್ನು ಮುಂದೆ ಇಟ್ಟು ಕುಳಿತುಕೊಳ್ಳಬೇಕು. ಮೊದಲನೆ ಸಲ ಹೆಣ್ಣಿಗೆ ಅರಿಶಿಣ ಹಚ್ಚ ಬೇಕಾದರೆ ಹೆಸರು ಬಲ ಕೇಳಿ ಹಚ್ಚಿಸುತ್ತಾರೆ. ನಾಗಮ್ಮ ಅಥವ ಲಕ್ಷ್ಮಿ ಎನ್ನುವವರೆ ಮೊದಲು ಹೆಣ್ಣಿಗೆ ಅರಿಶಿಣ ಹಚ್ಚುತ್ತಾರೆ. ನಂತರ ವೀಳೆದೆಲೆಯಲ್ಲಿ ಹರಳೆಣ್ಣೆ ತೆಗೆದುಕೊಂಡು ೫ ಸಲ ಹೆಣ್ಣಿನ ತಲೆ ಮೇಲೆ ಹಾಕುತ್ತಾರೆ. ನಂತರ ಪ್ರತಿಯೊಬ್ಬರು ಅರಿಶಿಣ ಹಚ್ಚುತ್ತಾರೆ. ಹಂದ್ರದ ಅಡಿಯಲ್ಲಿ ಮಣೆ ಹಾಕಿ ಹೆಣ್ಣನ್ನು ಕೂಡಿಸಿ ನೀರು ಹಾಕುತ್ತಾರೆ. ಐದು ಜನ ಮುತ್ತೈದೆಯರು ನೀರು ಹಾಕುತ್ತಾರೆ. ಶಾಂಪೂ, ಸೋಪಿನಿಂದ ಅವಳಿಗೆ ಸ್ನಾನ ಮಾಡಿಸಿ ಅಲಂಕರಿಸುತ್ತಾರೆ. ನಂತರ ದೇವಸ್ಥಾನಕ್ಕೆ ಕರೆದುಕೊಂಡು ಹೋಗುತ್ತಾರೆ. ನಂತರ ಊಟದ ಕಾರ್ಯಕ್ರಮ ನಡೆಯುತ್ತದೆ. ಬಳೆ ಎಲ್ಲವನ್ನು ಹೆಣ್ಣಿನ ಕೈಯಲ್ಲಿ ಪೂಜೆ ಮಾಡಿಸಿ ಹೆಣ್ಣಿಗೆ ಬಳೆ ಹಾಕಿಸುತ್ತಾರೆ. ಮುತ್ತೈದೆಯರಿಗೂ ಸಹ ಹಾಕಿಸುತ್ತಾರೆ. ಈ ಕಾರ್ಯಕ್ರಮಗಳನ್ನು ಮುಗಿಸಿ, ಸಂಜೆ ವೇಳೆಗೆ ಹೆಣ್ಣಿನವರು ಛತ್ರಕ್ಕೆ ಬಸ್‌ನಲ್ಲಿ ಅಥವಾ ಕಾರಿನಲ್ಲಿ ಹೊರಡುತ್ತಾರೆ.

ಹೆಣ್ಣಿನವರು ಛತ್ರಕ್ಕೆ ಹೋದನಂತರ ಗಂಡಿನವರು ಬರುತ್ತಾರೆ. ಹೆಣ್ಣಿನವರು ಕಳಶ ತಂದು ಬ್ಯಾಂಡಿನ ಸಮೇತ ಗಂಡನ್ನು ಸ್ವಾಗತಿಸಿಕೊಳ್ಳುತ್ತಾರೆ. ಗಂಡಿನ ಕಾಲು ತೊಳೆದು ಪೂಜೆಮಾಡಿ ಹಾರ ಹಾಕಿ, ಕಾಯಿ ನೀವ್ವಳಿಸಿ ಹೊಡೆದು ಆರುತಿ ಮಾಡುತ್ತಾರೆ. ಆರುತಿ ಮಾಡಿದವರಿಗೆ ಗಂಡು ದುಡ್ಡನ್ನು ಕೊಡುತ್ತಾನೆ. ಈ ರೀತಿ ಹೆಣ್ಣಿನವರು ಛತ್ರದಲ್ಲಿ ಗಂಡನ್ನು ಸ್ವಾಗತಿಸಿ ಕೊಳ್ಳುತ್ತಾರೆ. ಅವರು ಒಳಗೆ ಬಂದ ನಂತರ ಮುಖ ತೊಳೆದ ಮೇಲೆ ಹೆಣ್ಣಿನವರೇ ಟವಲ್ಲು, ಸ್ನೊ, ಪೌಡರ್, ಬಾಚಣಿಕೆ, ಕನ್ನಡಿ, ಕೊಬ್ಬರಿ ಎಣ್ಣೆ, ಹೂ ಕೊಡುತ್ತಾರೆ. ಅವರೆಲ್ಲರೂ ರೆಡಿಯಾದ ನಂತರ ಕಾಫಿ, ತಿಂಡಿಯನ್ನು ಕೊಡುತ್ತಾರೆ.

ನಂತರ ಹಿರಿಳ್ಳೆ ಕಾರ್ಯಕ್ರಮ (ಮದುವೆಯ ಹಿಂದಿನ ದಿನದ ಶಾಸ್ತ್ರ)

ರಾತ್ರಿವೇಳೆ ಈ ಕಾರ್ಯಕ್ಕೆ ಗಂಡಿನವರೇ ಹೆಣ್ಣಿಗೆ ವಡವೆ, ಮತ್ತು ರೇಷ್ಮೆ ಸೀರೆ, ಎಲೆ, ಅಡಿಕೆ, ಸಕ್ಕರೆ, ಹೂ ಕೊಡುತ್ತಾರೆ. ಹೆಣ್ಣಿನವರು ಸಹ ಚೈನು, ಉಂಗುರ ಗಂಡಿಗೆ ಕೊಡುತ್ತಾರೆ. ಎಲ್ಲರ ಸಮ್ಮುಖದಲ್ಲಿಯೂ ಶಾಸ್ತ್ರ ಮಾಡಿಸಿ ಗಂಡು ಹೆಣ್ಣನ್ನು ಕೂಡಿಸಿ ಆರುತಿಮಾಡುತ್ತಾರೆ.

ಮಾಂಗಲ್ಯ ಧಾರಣೆಯ ಕಾರ್ಯ

ಬೆಳಿಗ್ಗೆ ಗಂಡು ಹೆಣ್ಣುಗಳನ್ನು ಕೂಡಿಸಿ ಅರಿಶಿಣ ಹಚ್ಚುತ್ತಾರೆ. ಇವರ ಜೊತೆಗೆ ಗಂಡಿನ ಅಕ್ಕ ಅಥವ ತಂಗಿ ಹೆಣ್ಣಿನ ಅಕ್ಕ ಅಥವಾ ತಂಗಿ ಗಂಡು ಹೆಣ್ಣಿನ ಬೆನ್ನು ಹಿಂದೆ ಇವರನ್ನು ಕರಿ ಕಂಬಳಿಯಲ್ಲಿ ನಾಲ್ಕು ಜನರನ್ನು ಕೂಡಿಸುತ್ತಾರೆ. ಕಂಬಳಿಯ ಮೇಲೆ ಹಸೆ ಬರೆದಿರುತ್ತಾರೆ. ಎಣ್ಣೆಯನ್ನು ತಲೆಯಮೇಲೆ ಹಚ್ಚಿ ಮೈಗೆ ಅರಿಶಿಣ ಹಚ್ಚುತ್ತಾರೆ. ಅವರಿಗೆ ಅಕ್ಷತೆಯನ್ನು ಹಾಕಿ ಕಳಶ ಬೆಳಗುತ್ತಾರೆ. ಐದು ಜನ ಮುತ್ತೈದೆಯರು ಅರಿಶಿಣ ಹಚ್ಚಿದ ಕೂಡಲೆ ನಾಲ್ಕು ಜನರನ್ನು ಹೊರಗೆ ಕರೆದುಕೊಂಡು ಬಂದು ಅರಿಶಿಣದ ನೀರು ಹಾಕುತ್ತಾರೆ.

ಗಂಡಿನವರು ಹೆಣ್ಣಿನವರಿಗೆ ಬಟ್ಟೆ ಕೊಡುತ್ತಾರೆ. ಹೆಣ್ಣಿನವರು ಗಂಡಿನವರಿಗೆ ಬಟ್ಟೆಯನ್ನು ಕೊಡುತ್ತಾರೆ. ಹೆಣ್ಣನ್ನು ಒಳಗೆ ಕರೆದುಕೊಂಡು ಹೋಗಿ ಬಾಸಿಂಗ ಕಟ್ಟುತ್ತಾರೆ. ಗಂಡನ್ನು ಸಹ ಒಳಗೆ ಕರೆದುಕೊಂಡು ಹೋಗಿ ಕಚ್ಚೆ ಪಂಚೆ, ಪೇಟಾ, ಶಲ್ಯವನ್ನು ತೊಡಿಸಿ ದೇವರ ಮುಂದೆ ಕೂರಿಸಿ ಬಾಸಿಂಗ ಕಟ್ಟಿ ಗಂಡನ್ನು ಎಲ್ಲರು ಕಳಶ ತೆಗೆದುಕೊಂಡು ವಾದ್ಯದಿಂದ ಕರೆದುಕೊಂಡು ಹೋಗಿ ಬಿಟ್ಟುಬರುತ್ತಾರೆ ದೇವಸ್ಥಾನಕ್ಕೆ.

ಸ್ವಾಮಿಯವರು ಧಾರೆಯ ಮಂಟಪದೊಳಗೆ ಹೆಣ್ಣಿನ ತಂದೆ ತಾಯಿ ಹತ್ತಿರ ಪಂಚಕಳಶಗಳನ್ನು ಉಡಿಸಿ ಪೂಜೆಮಾಡಿಸುತ್ತಾರೆ. ೫ ತಾಂಬ್ರದ ತಂಬಿಗೆ ಅದರಲ್ಲಿ ನೀರುಹಾಕಿ ೫ ವಿಳೆದೆಲೆ ಇಟ್ಟು, ಕಾಯಿಇಟ್ಟು, ಕಣಗಳನ್ನು ಇಡಬೇಕು. ಅದಕ್ಕೆ ಹೂವಿನಿಂದ ಅಲಂಕರಿಸಿ ಪೂಜೆ ಮಾಡಿಸುತ್ತಾರೆ.

ಗಂಡಿನವರು ಹೆಣ್ಣಿನವರು ಗಂಗಾ ಪೂಜೆ ಮಾಡಲು ಹೋಗುತ್ತಾರೆ. ವೀಳೆದೆಲೆ, ಅಡಿಕೆ, ಬಾಳೆಹಣ್ಣು, ಚಿಗಳಿ, ತಂಬಿಟ್ಟು ಇವೆಲ್ಲವನ್ನು ಉಡಿಗೆ ಇಟ್ಟು ಪೂಜೆ ಮಾಡುಬೇಕು. ಪೂಜೆಗೆ ಹೋಗುವಾಗ ಕೊಡದಲ್ಲಿ ಸ್ವಲ್ಪ ಹಾಲು ತುಪ್ಪ ಹಾಕಿಕೊಂಡಿರಬೇಕು. ಬಾವಿಗೆ ಹೋಗಿ ಈ ಹಾಲು-ತುಪ್ಪ ಸುರಿದು ಒಂದು ಕೊಡ ನೀರು ಸೇದುಕೊಂಡ ಕುಡಿಬಾಳೆಯ ಎಲೆಯ ಮೇಲೆ ಅಕ್ಕಿಯನ್ನು ಹಾಕಿ ಆ ಗಂಗಾ ಕೊಡವನ್ನು ಅದರ ಮೇಲೆ ಇಡಬೇಕು. ಇಟ್ಟು ಬಾವಿ ಪೂಜೆ ಮಾಡಬೇಕು. ಕೊಡ ಪೂಜೆ ಮಾಡುವಾಗ ವೀಳೆದೆಲೆ, ಕಾಯಿ, ಕಣ, ಹೂ ಇಟ್ಟು ಪೂಜೆ ಮಾಡಿ ಐದು ಉಡಿಯನ್ನು ನೈವೇದ್ಯೆ ಮಾಡಿ ಕಾಯಿ ಹೊಡೆಯಬೇಕು. ನಾಲ್ಕು ಉಡಿಯನ್ನು ಕುಂಕುಮ ಕೊಟ್ಟು ಮುತ್ತೈದೆಯರಿಗೆ ಕೊಡಬೇಕು. ಒಂದು ಉಡಿಯನ್ನು ಬಾವಿಗೆ ಹಾಕಬೇಕು. ಕಳಶ ಬೆಳಗಿ ಕರ್ಪೂರ ಹಚ್ಚಿ ಆ ಕೊಡವನ್ನು ಒಬ್ಬ ಮುತ್ತೈದೆ ವಾದ್ಯದಿಂದ ತಲೆಯ ಮೇಲೆ ಹೊತ್ತುಕೊಂಡು ಛತ್ರದ ಒಳಗೆ ಬರಬೇಕಾದಲ್ಲಿ ಅವಳಿಗೆ ಕಾಲು ತೊಳೆದು ಒಳಗೆ ಕರೆದುಕೊಂಡು

ಬರುತ್ತಾರೆ. ಆ ಗಂಗೆಯನ್ನು ಧಾರೆ ಮಂಟಪದಲ್ಲಿ ಕೂಡಿ ಬಾಳೆಎಲೆ ಹಾಸಿ ಅದರ ಮೇಲೆ ಇಡುತ್ತಾರೆ. ಒಂದು ಪಾತ್ರೆಯಲ್ಲಿ ಹಾಲು ತುಪ್ಪವನ್ನು ಸ್ವಾಮಿಗಳು ಇಟ್ಟುಕೊಂಡಿರುತ್ತಾರೆ.

ಬಿಡದಿ ಮನೆಯಲ್ಲಿ ಹೆಣ್ಣನ್ನು ಅಲಂಕಾರಮಾಡಿ ಬಾಸಿಂಗ ಕಟ್ಟಿ ಗೌರಿ ಪೂಜೆಗೆ ಕೂಡಿಸಿ ಗಂಡನ್ನು ಹೆಣ್ಣಿನ ಕಡೆಯವರು ವಾದ್ಯ ಕಳಸದಿಂದ ದೇವಸ್ಥಾನಕ್ಕೆ ಕರೆದುಕೊಂಡು ಬರಲು ಹೋಗಬೇಕು. ಗಂಡು ಧಾರೆ ಮಂಟಪಕ್ಕೆ ಬರುವವರೆಗೂ ಹೆಣ್ಣು ಗೌರಿ ಪೂಜೆಯನ್ನು ಮಾಡುತ್ತಲೆ ಇರಬೇಕು. ಅರಿಶಿಣ ಗೌರಮ್ಮನನ್ನು ಮಾಡಿಕೊಂಡು ಒಂದೊಂದೆ ಪತ್ರಿ ಹಾಕುತ್ತಾ ಸ್ವಾಮಿಗಳು ಹೇಳಿಕೊಟ್ಟ ಮಂತ್ರವನ್ನು ಅವಳು ಹೇಳುತ್ತಿರಬೇಕು.

ಗಂಡನ್ನು ಧಾರೆ ಮಂಟಪಕ್ಕೆ ಹೆಣ್ಣಿನ ತಂದೆ ಕೈಹಿಡಿದು ಕರೆದುಕೊಂಡು ಬಂದು ಕೂರಿಸುತ್ತಾರೆ. ಧಾರೆ ಮಂಟಪದಲ್ಲಿ ಗಂಡಿನ ಮುಂದೆ ಬಿಳಿ ಬಟ್ಟೆಯನ್ನು ಅಡ್ಡ ಪರದೆ ಹಾಕಿರುತ್ತಾರೆ. ಗೌರಿ ಪೂಜೆ ಮಾಡುತ್ತಿದ್ದ ಹೆಣ್ಣನ್ನು ಸೋದರ ಮಾವ ಕೈಹಿಡಿದುಕೊಂಡು ಧಾರೆ ಮಂಟಪಕ್ಕೆ ಕರೆದುಕೊಂಡು ಬಂದು ಕೂರಿಸುತ್ತಾರೆ. ಪರದೆಯ ಎದುರುಭಾಗ ಕೂರಿಸುತ್ತಾರೆ. ಗಂಡು ಹೆಣ್ಣಿಗೆ ಪರದೆಯ ಮೇಲಿನಿಂದ ಅಕ್ಕಿಯನ್ನು ತಲೆಯಮೇಲೆ ಹಾಕುತ್ತಾರೆ. ಹೆಣ್ಣು ಗಂಡಿಗೆ ಪರದೆಯಮೇಲೆನಿಂದ ಅಕ್ಕಿ ಹಾಕುತ್ತಾರೆ.

ಪರದೆಯನ್ನು ತೆಗೆದು ಗಂಡು ಹೆಣ್ಣನ್ನು ಎದುರು ಬದಿರು ಕೂರಿಸಿ ಇಬ್ಬರ ಕೈಯ ಮೇಲೆ ಒಂದು ಕಾಯಿಯನ್ನು ಇಡುತ್ತಾರೆ. ಮೊದಲು ಹೆಣ್ಣಿನ ತಂದೆ ತಾಯಿ ಧಾರೆ ಎರೆಯುತ್ತಾರೆ. ಗಂಡಿನ ತಂದೆ ತಾಯಿ ಹಾಲು ತುಪ್ಪ ಧಾರೆ ಎರೆಯುತ್ತಾರೆ. ಸಬಿಕರಿಗೆಲ್ಲಾ ಮಾಂಗಲ್ಯವನ್ನು ಮುಟ್ಟಿಸಿಕೊಂಡು ಬಂದು ಮೂಹೂರ್ತದ ಸಮಯಕ್ಕೆ ಸರಿಯಾಗಿ ಗಂಡಿನ ಕೈಯಲ್ಲಿ ಮಾಂಗಲ್ಯವನ್ನು ಕಟ್ಟಿಸುತ್ತಾರೆ.

ಮಾಂಗಲ್ಯ ಧಾರಣೆಯ ನಂತರ ಆರತಿಗೆ ಕೂರಿಸುತ್ತಾರೆ. ನೆಂಟರಿಸ್ಟರು, ಸಹೋದರರು, ಬಂದವರು ಉಡುಗರೆಯನ್ನು ಕೊಟ್ಟು ಎಲ್ಲಾ ರುಚಿಯಾದ ಊಟಮಾಡಲು ಹೊರಡುತ್ತಾರೆ.

ಇತ್ತ ಧಾರೆ ಮಂಟಪದಲ್ಲಿ ನವದಂಪತಿಗಳಿಗೆ ಸ್ವಾಮಿಗಳು ನಾಗೊಲೆ ಶಾಸ್ತ್ರವೆಂದು ಮಾಡಿಸುತ್ತಾರೆ.

ನಾಗೊಲೆಶಾಸ್ತ್ರ ವಿಧಾನ

ಒಂದು ಅಕ್ಕಿ ಆನೆ ಬರೆಯುತ್ತಾರೆ. ಒಂದು ಉಪ್ಪಿನ ಆನೆಯನ್ನು ಬರೆಯುತ್ತಾರೆ. ಅಕ್ಕಿ ಹಿಟ್ಟಿನಲ್ಲಿ ದೀಪಮಾಡಿ ಅಲಂಕರಿಸುತ್ತಾರೆ. ಉಂಗುರವನ್ನು ಅಕ್ಕಿಯಲ್ಲಿ ಬಚ್ಚಿಟ್ಟು ದಂಪತಿಗಳ ಕೈಯಲ್ಲಿ ಹುಡುಕಿಸುತ್ತಾರೆ. ಯಾರಿಗೆ ಮೊದಲು ಸಿಗುತ್ತದೆಯೊ ಅವರಿಗೆ. ಅಡಿಕೆಯಲ್ಲಿ ಸರಿ ಬೆಸ ಆಡಿಸುತ್ತಾರೆ. ಹೂವಿನಲ್ಲಿ ಚಂಡುಮಾಡಿ ಚಂಡು ಆಟ ಆಡಿಸುತ್ತಾರೆ. ತೊಟ್ಟಿಲು ತೂಗುವ ಶಾಸ್ತ್ರ ಮಾಡುತ್ತಾರೆ.

ಒಂದು ಹುಡುಗನಿಗೆ ದಾಸಯ್ಯನ ಪಾತ್ರಮಾಡಿ ಅವನು ಜಾಗಟೆ ಬಾರಿಸಿಕೊಂಡು ದಂಪತಿಗಳು ಪ್ರದಕ್ಷಿಣೆ ಮಾಡುವಾಗ ದಾಸಯ್ಯನು ಪ್ರದಕ್ಷಿಣೆ ಮಾಡಿಕೊಂಡು ಬರುತ್ತಾನೆ. ಗಂಡಿನ ಹತ್ತಿರ ೧೦೦ ಅಥವಾ ೧೦೦೦ರೂ ಗಳನ್ನು ಕೇಳುತ್ತಾನೆ. ದುಡ್ಡನ್ನು ಕೊಟ್ಟು ಸಂತೋಷದಿಂದ ಕಾರ್ಯಕ್ರಮ ಮುಗಿಸುತ್ತಾರೆ. ಗಂಡು ಹೆಣ್ಣನ್ನು ಮನೆದುಂಬಿಸಲು ಗಂಡಿನ ಮನೆಗೆ ಕರೆದುಕೊಂಡು ಹೋಗುತ್ತಾರೆ.

ಮನೆದುಂಬಿಸುವ ಕಾರ್ಯ

ಹೊಸ್ತಿಲ ಮೇಲೆ ಸೇರಿನಲ್ಲಿ ಅಕ್ಕಿಯನ್ನು ತುಂಬಿ ಅದರ ಮೇಲೆ ಒಂದು ಅಚ್ಚು ಬೆಲ್ಲ ಇಟ್ಟಿರುತ್ತಾರೆ. ಹೊಸ್ತಿಲು ಪೂಜೆಮಾಡಿ, ಹೊಸ್ತಿಲಿಗೆ ಮಳೆ ಹೊಡೆಸಿ ಅಕ್ಕಿ ಬೆಲ್ಲವನ್ನು ಬಲಗಾಲಿನಿಂದ ಹೊಡೆಸುತ್ತಾರೆ. ಒಳಗೆ ಬಂದು ದೇವರ ದೀಪ ಹಚ್ಚಿಸುತ್ತಾರೆ. ಹೆಣ್ಣಿನ ಮನೆಯಲ್ಲಿ ಪ್ರಸ್ತದ ಕಾರ್ಯ ಇಟ್ಟುಕೊಳ್ಳುತ್ತಾರೆ. ದಂಪತಿಗಳ ಕೈಯಲ್ಲಿ ಐದನೆಯ ದಿನ ಚಪ್ಪರ ಪೂಜೆಮಾಡಿಸಿ ಒಂದು ಗರಿಯನ್ನು ಸ್ವಲ್ಪ ಎಳೆಯುತ್ತಾರೆ. ಐದು ದೊಸೆಯನ್ನು ನೈವೇದ್ಯಮಾಡಿ ಚಪ್ಪರದ ಮೇಲೆ ಹಾಕುತ್ತಾರೆ. ಚಪ್ಪರವನ್ನು ಒಂದು ತಿಂಗಳು ತುಂಬುವ ಹೊತ್ತಿನಲ್ಲಿ ಬಿಚ್ಚಬಹುದು.

ಸಾವು

ಎಮ್ಮವರಿಗೆ ಸಾವಿಲ್ಲ, ಎಮ್ಮವರು ಸಾವನರಿಯರು,
ಸಾವೆಂಬುದು ಸಯವಲ್ಲ,
ಲಿಂಗದಲ್ಲಿ ಉದಯವಾದ ನಿಜೈಕ್ಯರಿಗೆ
ಆ ಲಿಂಗದಲ್ಲಿಯಲ್ಲದೆ ಬೇರೆ ಮತ್ತೊಂದೆಡೆಯಿಲ್ಲ,
ಕೂಡಲ ಸಂಗಮದೇವರ ಶರಣ ಸೊಡ್ಡಳ ಬಾಚರಸರು
ನಿಜಲಿಂಗದ ಒಡಲೊಳಗೆ ಬಗಿದು ಹೊಕ್ಕಡೆ
ಉಪಮಿಸಬಲ್ಲವರ ಕಾಣೆನು.

ಹುಟ್ಟಿನಂತೆ ಸಾವು ಅನಿವಾರ್ಯ, ಹುಟ್ಟು-ಸಾವು ಜೀವನ ನಾಣ್ಯದ ಎರಡು ಮುಖಗಳಿದ್ದಂತೆ, ಹುಟ್ಟು ಸಾವನ್ನು ಜೊತೆಗಿಟ್ಟುಕೊಂಡೆ ಬರುತ್ತಾರೆ. ನಿರಾಶಾವಾದಿಯ ದೃಷ್ಟಿಯಲ್ಲಿ ಹುಟ್ಟಿನಿಂದ ಪ್ರಾರಂಭವಾಗುವ

ಜೀವನ ಚಕ್ರ ಸಾವಿನತ್ತ ಚಲಿಸುತ್ತದೆ. ಹೀಗಾಗಿ ನಿರಾಶಾವಾದಿ, 'ಏಕೆ ಬಾಳಬೇಕು? ಎಂದಿದ್ದರೂ ಸಾಯಬೇಕಲ್ಲ' ಎಂದು ಹತಾಶನಾದರೆ ಆಶಾವಾದಿಯು ಜೀವನದ ಅಂತಿಮ ನಿಲ್ದಾಣವೇ ಸಾವು, ಅದು ಸಮೀಪಿಸುವುದರೊಳಗೆ ಬಾಳಿನ ಪ್ರತಿಯೊಂದು ಕ್ಷಣವನ್ನೂ ಸಾರ್ಥಕ ಮಾಡಿಕೊಳ್ಳಬೇಕು ಎಂದು ಉತ್ಸಾಹದಿಂದ ಮುಂದುವರಿಯುತ್ತಾನೆ.

ಸಾವು ಅನಿವಾರ್ಯ, ಯಾರಾದರೇನು ಐಹಿಕ ಬದುಕಿಗೆ ಪೂರ್ಣ ವಿರಾಮ ನೀಡಿ ಹೋಗಲೇಬೇಕು, ಎಷ್ಟೇ ದೀರ್ಘಕಾಲ ಬದುಕಿದರೂ ಒಂದು ದಿವಸ ಜೀವನ ನಾಟಕಕ್ಕೆ ಅಂತಿಮ ತೆರೆ ಎಳೆಯಬೇಕು, 'ಜೀವನ' ಹುಟ್ಟು ಸಾವುಗಳೆರಡರ ಮಧ್ಯೆ ಇರುವ ಘಟನಾವಳಿಗಳ ಒಂದು ಚಕ್ರ, ಹುಟ್ಟು ಎಂಬುದು ಆರಂಭಿಕ ನಿಲ್ದಾಣವಾದರೆ ಬಾಲ್ಯ, ಯೌವ್ವನ, ಮುಪ್ಪು, ಎಂಬ ಮೂರು ನಿಲ್ದಾಣಗಳಲ್ಲಿ ಹಾಯ್ದು ಜೀವನದ ಗಾಡಿ ಮರಣ ಎಂಬ ಕೊನೆಯ ನಿಲ್ದಾಣದಲ್ಲಿ ನಿಲ್ಲುತ್ತದೆ.

ಮರಣವೇ ಮಹಾನವಮಿ ಎಂದು ಮಹಾನುಭಾವಿ ಬಸವಣ್ಣನವರು ಹೇಳಿರುವದರಿಂದ ಅದು ಅತೀ ಪವಿತ್ರವಾದುದು. ಈಗಿನ ಪರಿಸ್ಥಿತಿಯಲ್ಲಿ ಮರಣವೂ ಕೂಡ ಅತೀ ವೆಚ್ಚದ್ದು, ಬಹಳ ತೊಂದರೆದಾಯಕವೂ ಆಗಿದೆ, ಶವ ಸಂಸ್ಕಾರವು ಈಗಿರುವಂತೆ ಲಿಂಗಾಯತ ಧರ್ಮಕ್ಕೆ ಸಲ್ಲದ ಅನೇಕ ಮೂಢನಂಬಿಕೆಗಳಿಂದಲೂ ಕಂದಾಚಾರಗಳಿಂದಲೂ ಕೂಡಿದೆ, ಆದ್ದರಿಂದ ಜೀವನದ ಕೊನೆಯ ಘಟ್ಟವಾದ ಈ ಶವ ಸಂಸ್ಕಾರ ವಿಧಿಯನ್ನು ಲಿಂಗವಂತ ಧರ್ಮದ ತತ್ವಕ್ಕೆ ಅನುಗುಣವಾಗಿ ಹೇಳಲಾಗಿದೆ.

ಲಿಂಗವಂತನು ಇಷ್ಟಲಿಂಗಧಾರಿಯಾಗಿ ಲಿಂಗಾಂಗ ಸಾಮರಸ್ಯವನ್ನು ಹೊಂದುವವನಾದ್ದರಿಂದ ಮರಣದ ನಂತರವೂ ಅವನು ಲಿಂಗದೇಹಿಯಾಗಿರುವನು, ಲಿಂಗದೇಹಿಯಾಗಿಯೇ ಸಮಾಧಿ ಹೊಂದುವನು. ಲಿಂಗದ ಅವಾಸಕ್ಕೆ ತಕ್ಕುದಾದ ಆ ಕಾಯವು ಇದ್ದರೂ ಬಿದ್ದರೂ ಪವಿತ್ರವಾಗಿರುವದು, ಪರಿಶುದ್ಧವಾದ ಶರೀರವು ಲಿಂಗರೂಪವು, ಅದಕ್ಕಾಗಿ ಈ ಪವಿತ್ರವಾದ ದೇಹಕ್ಕೆ ಮುಟ್ಟು ತಟ್ಟುಗಳಿಂದ ಸೂತಕ ಸಂಬಂಧವಾಗುವದಿಲ್ಲ. ಆದ್ದರಿಂದ ಸತ್ತನು, ಸ್ವರ್ಗಸ್ಥನಾದನು, ಕೈಲಾಸವಾದನು ಎಂಬ ಶಬ್ದಗಳನ್ನು ಬಳಸದೆ ಲಿಂಗದೊಳಗಾದನು, ಲಿಂಗೈಕ್ಯನಾದನು ಎಂದು ಲಿಂಗವಂತರು ಹೇಳುವದು ಉಚಿತ. ಆದ್ದರಿಂದ ಲಿಂಗದೊಳಗಾದ ಶರಣನ ದೇಹವನ್ನು ಲಿಂಗರೂಪವಾಗಿಯೇ ನಾವು ಕಾಣಬೇಕು. ಅಂತ್ಯ ಸಂಸ್ಕಾರದ ಈ ಲಿಂಗೈಕ್ಯ ಕಾರ್ಯವನ್ನು ಪರಿಶುದ್ಧ ಭಾವನೆಯಿಂದಲೇ ಜರುಗಿಸಬೇಕು. ಎಲ್ಲರೂ ಇದನ್ನರಿತು ಆಚರಿಸಿದರೆ ಲಿಂಗಾಯತ ಸಮಾಜಕ್ಕೆ ಒಳ್ಳೇ ಉಪಕಾರವಾಗುವದು.

ವೀರಶೈವ ಧಾರ್ಮಿಕ ಅಂತ್ಯಸಂಸ್ಕಾರ

ವೀರಶೈವನು ಹುಟ್ಟಿನಿಂದ ಸಾವಿನವರೆಗೂ ಸಂಸ್ಕಾರ ಜೀವಿ, ಸಂಸ್ಕಾರರಹಿತನಾಗಿ ಯಾವ ಕರ್ಮವನ್ನು ಅತ ಆಚರಿಸುವುದಿಲ್ಲ. ಪ್ರತಿಯೊಂದು ಕ್ರಿಯೆಗೂ ಶಿವನಾಮಸ್ಮರಣೆಯ, ಮಂತ್ರ ದೀಕ್ಷೆಯ ಸಂಸ್ಕಾರ ನೀಡಿ ಪರಿಶುದ್ಧಾತ್ಮನಾಗಿ ಬದುಕಲು ಹೇಳಿದೆ ನಮ್ಮ ವೀರಶೈವಧರ್ಮ.

ಮಾನವನ ದೇಹವು ಮಾಂಸ ಮೂಳೆಯ ತಡಿಕೆ, ಬರುವಾಗ ಬೆತ್ತಲೆ, ಹೋಗುವಾಗ ಬೆತ್ತಲೆ, ಬಂದು ಹೋಗುವ ನಡುವೆ ಬರೀ ಕತ್ತಲೆ, ಇದು ಗೊತ್ತಿದ್ದರೂ ಸಹ, ಮಾನವರು ಹುಟ್ಟಿದಾಗ ಸಂಭ್ರಮದ ಆಚರಣೆ ಮಾಡಿತ್ತಾರೆ. ಸತ್ತಾಗಲು ಸಹ ವಿದಾಯ ಹೇಳುವ ಸಂಭ್ರಮದ ಆಚರಣೆ ಮಾಡುತ್ತಾರೆ. ಒಂದು ಮಗು ಪ್ರಪಂಚಕ್ಕೆ ಬರುವ ಮುನ್ನ ಅದರ ನಿರೀಕ್ಷೆ ಇರುತ್ತದೆ. ಯೋಜಿತ ಕಾರ್ಯಗಳಿರುತ್ತವೆ. ಒಂದು ಜೀವ ಬಿಟ್ಟುಹೋದಾಗ ಅದರ ಸುಳಿವು ತಿಳಿಯುವುದು ಕಷ್ಟ, ಆಗ ಆಚರಿಸುವ ಕ್ರಮಗಳು ಹಲವು, ಈ ಆಚರಣೆಗಳು ತ್ವರಿತ ರೀತಿಯಲ್ಲಿ ನಿರ್ಧಿಷ್ಟ ಸಮಯದಲ್ಲಿ ಮಾಡಿ ಮುಗಿಸಬೇಕು.

ಮರಣ ಹೊಂದಿದ ಕೂಡಲೆ ಮಾಡುವ ಕಾರ್ಯ

ಮರಣ ಹೊಂದಿದ ತಕ್ಷಣ ಅಕ್ಕಪಕ್ಕದವರಿಗೆ ತಿಳಿಸುತ್ತಾರೆ. ನೆಂಟರಿಗೆಲ್ಲಾ ದೂರವಾಣಿಯ ಮೂಲಕ ವಿಚಾರ ತಿಳಿಸುತ್ತಾರೆ. ಹೆಣದ ಕೈ ಕಾಲು ಬಗ್ಗಿಸಲು ಯೋದರನ್ನು ಕರೆಸುತ್ತಾರೆ. ಮರಣ ಹೊಂದಿದ ವ್ಯಕ್ತಿಯನ್ನು ಬಹಳ ಸಮಯ ಇಡಲಾಗುವುದಿಲ್ಲ. ಅದಕ್ಕಾಗಿ ಒಂದು ನಿರ್ದಿಷ್ಟ ಸಮಯವನ್ನು ಶವ ಸಂಸ್ಕಾರಕ್ಕೆ ಇಡುತ್ತಾರೆ. ಮರಣ ಹೊಂದುವ ವ್ಯಕ್ತಿ ಸಾಯುವ ಕೆಲ ದಿನಗಳ ಮುಂಚಿತವಾಗಿಯೇ ಪಟ್ಟಾಚಾರ್ಯ ಸ್ವಾಮಿಯೊಬ್ಬರನ್ನು ಆಹ್ವಾನಿಸಿ, ಸಾಯುವ ವ್ಯಕ್ತಿಯಿಂದ ಸ್ವಾಮಿಗಳಿಗೆ ವಿಭೂತಿ ವೀಳ್ಯೆ ಕೊಡಿಸುತ್ತಾರೆ. ಇದರ ಅರ್ಥ ಮರಣ ಹೊಂದಿದ ನಂತರ ಮುಂದೆ ಮಾಡುವ ಕಾರ್ಯಗಳನ್ನು ಇವರೆ ನೆಡೆಸಿಕೊಡಬೇಕೆಂದು, ಜೀವ ಹೋಗುತ್ತಿದೆ ಎಂದು ತಿಳಿದಾಗ ಮನೆಯವರೆಲ್ಲಾರೂ ತುಳಸಿ ನೀರನ್ನು ಅವರ ಬಾಯಿಗೆ ಬಿಡುತ್ತಾರೆ.

ಪೂಜಾ ವಿಧಾನ ಕಾರ್ಯ

ಶವಕ್ಕೆ ಮೊದಲು ಸ್ನಾನ ಮಾಡಿಸುತ್ತಾರೆ. ನಂತರ ಆ ಶವವನ್ನು ಪೂರ್ವದಿಕ್ಕಿಗೆ ಇಲ್ಲವೆ ಉತ್ತರ ದಿಕ್ಕಿನಲ್ಲಿ ಮನೆಯಲ್ಲಿ ಒಂದು ಗೋಡೆಯ ಮುಂದೆ ಕಂಬಳಿಯನ್ನು ಹಾಸಿ. ಶವವನ್ನು ಕೂರಿಸುತ್ತಾರೆ. ಮುಂದೆ ಬೀಳದ ಹಾಗೆ ಶವದ ಕುತ್ತಿಗೆಗೆ 'ಕವೆ' ಕೋಲನ್ನು ಇಟ್ಟಿರುತ್ತಾರೆ. ದೇಹಕ್ಕೆ ವಿಭೂತಿಯನ್ನು ಬಳಿದು ಜಲಮಿಶ್ರಿತ ಭಸ್ಮ ತ್ರಿಪುಂಡ್ರಗಳನ್ನು ಸರ್ವನಿಯಮಿತ ಸ್ಥಾನಗಳಿಗೆ ಧರಿಸಿ ಬಿಳಿ ಮಡಿ ಬಟ್ಟೆಗಳನ್ನು.

ರುದ್ರಾಕ್ಷಿ ಮಾಲೆಯನ್ನು ಹಾಕುತ್ತಾರೆ. ಹೂವಿನ ಹಾರಗಳನ್ನು ಹಾಕಿರುತ್ತಾರೆ. ಶವದ ಮುಂದೆ ಎರಡು ದೀಪಗಳನ್ನು ಹಚ್ಚಿಡುತ್ತಾರೆ ಕಳಶವನ್ನು ಇಟ್ಟಿರುತ್ತಾರೆ.

ನಂತರ ಸ್ವಾಮಿಗಳನ್ನು ಕರೆಸಿ ಪೂಜೆಯನ್ನು ಆರಂಭಿಸುತ್ತಾರೆ. ಶವದ ತೊಡೆಯ ಮೇಲೆ ಗುರುವಿನ ಎಡಪಾದವನ್ನು ಇರಿಸಿ, ಗುರುವಿನ ಸ್ಪರ್ಶದಿಂದ ಶವದ ದೇಹಕ್ಕೆ ಜೀವ ಸಂಚಲನವೆಂಬ ನಂಬಿಕೆಯಂತೆ ಮನೆಯವರು ಗುರುವಿನ ಪಾದ ತೊಳೆದು, ಪೂಜಿಸಿ, ಕರ್ಪೂರ ಹಚ್ಚಿ ಕಳಸ ಬೆಳಗಿ ತೆಂಗಿನ ಕಾಯಿ ಹೊಡೆಯುತ್ತಾರೆ. ಈ ಮೊದಲನೆ ಪೂಜೆ ನಡೆಯುವಾಗ 'ಬ್ಯಾಂಡ್'ನ್ನು ಬಾರಿಸುತ್ತಾರೆ.

ಸ್ವಲ್ಪ ಸಮಯದ ನಂತರ ಎರಡನೇ ಪೂಜೆಯನ್ನು ಆರಂಭಿಸುತ್ತಾರೆ. ಮನೆಯವರು ಗುರುವಿನ ಪಾದ ತೊಳೆದು ಪೂಜಿಸುತ್ತಾರೆ. ಎರಡನೆಯ ಬ್ಯಾಂಡ್ ಶಬ್ದ ಕೇಳಿದ ಕೂಡಲೆ ಅಕ್ಕಪಕ್ಕದವರು ನಂಟರು ಎಲ್ಲರು ಸೇರುತ್ತಾರೆ. ಪ್ರತಿಯೊಬ್ಬರು ಶವವನ್ನು ನೋಡಲು ಹೋಗುವ ಮುನ್ನ ಕೈಕಾಲು ತೊಳೆದು ಒಳಗೆ ಹೋಗಬೇಕು. ಈ ಪೂಜೆಗಳನ್ನು ಮಾಡುತ್ತಿರುವಾಗಲೆ ಹೊರಗಡೆ ಮಂಟಪದ ಅಲಂಕಾರ ನಡೆಯುತ್ತದೆ. (ವಿಮಾನ)

ಮಂಟಪ (ವಿಮಾನ) ತಯಾರಿಕೆ: (ಅಲಂಕಾರ)

ಮಂಟಪವನ್ನು ತಂದು ಅದನ್ನು ನೀರಿನಿಂದ ತೊಳೆದು ಅದಕ್ಕೆ ಹೂವಿನಿಂದ ಅಲಂಕಾರ ಮಾಡಿ ನಂತರ ಸುತ್ತಲು ಇರುವ ನಾಲ್ಕು ಕಂಬಗಳಿಗೆ ಬಾಳೆಯ ಕಂಬವನ್ನು ಕಟ್ಟುತ್ತಾರೆ. ನಂತರ ಮಾವಿನ ಎಲೆಯ ತೋರಣಗಳನ್ನು ಕಟ್ಟುತ್ತಾರೆ. ಮೂರು ಬಾಗದ ಸುತ್ತಲು ಸೀರೆಯನ್ನು ಕಟ್ಟುತ್ತಾರೆ. ಅಲ್ಲಲ್ಲಿ ಟೆಂಗಿನಕಾಯಿ, ನಿಂಬೆಹಣ್ಣು, ಕೊಬ್ಬರಿ ಬಟ್ಟಲು, ಕಾರೀಕಗಳನ್ನು ಕಟ್ಟಿ ತೂಗು ಬಿಡಬೇಕು.

ನಂತರ ಮೂರನೆಯ ಪೂಜೆಯನ್ನು ಪ್ರಾರಂಭಿಸುತ್ತಾರೆ. ಕರ್ಪೂರವನ್ನು ಹಚ್ಚಿ ಮಂಗಳಾರತಿಯ ಪದಗಳನ್ನು ಹಾಡಿ ಪೂಜೆಯನ್ನು ಮುಕ್ತಾಯ ಮಾಡುತ್ತಾರೆ. ನಂತರ "ಸಾಂಬ ಜಯ ನಮಃ ಪಾರ್ವತಿ ಪತಿ ಹರಹರ ಮಹಾದೇವ" ಎಂಬ ಜಯ ಘೋಷಗಳನ್ನು ಮಾಡುತ್ತಾ ಶವವನ್ನು ಹೊರಗೆ ಅಲಂಕರಿಸಿದ ಮಂಟಪಕ್ಕೆ ಕೂರಿಸುತ್ತಾರೆ. ಈ ಮಂಟಪವನ್ನು ಒಯ್ಯುವ ವಿರುದ್ದವಾಗಿ ಇಟ್ಟಿರುತ್ತಾರೆ. ನಂತರ ಮೂರು ಹೆಜ್ಜೆ ಮುಂದೆ ಹೋಗಿ ಪುನಃ ವಿರುದ್ದ ದಿಕ್ಕಿಗೆ ತಿರುಗಿಸಿ ಜಯ ಘೋಷಗಳನ್ನು ಹೇಳುತ್ತಾ ಸ್ಮಶಾನಕ್ಕೆ ಹೊರಡುತ್ತಾರೆ. ಮೂರನೆಯ ಪೂಜೆ ಆರಂಭದಿಂದಲೂ ಪ್ರಾರಂಭಿಸಿದ 'ಬ್ಯಾಂಡ್'ಗಳು ಶಬ್ದ ಸ್ಮಶಾನಕ್ಕೆ ಹೋಗುವವರೆಗೂ ನಿಲ್ಲಿಸುವುದಿಲ್ಲ. ಶವದ ಮಂಟಪವನ್ನು ದಾರಿಯಲ್ಲಿ ಒಯ್ಯುವಾಗ ಕೆಳಗೆ ಇಳಿಸಿ ಹೆಗಲು ಕೊಟ್ಟವರು ಹಿಂದು-ಮುಂದಾಗಿ ಬದಲಾಗುತ್ತಾರೆ. ದಾರಿಯಲ್ಲಿ ಮಂಡಕ್ಕಿ ಇಲ್ಲವೆ ಪೀಳಿದೆಲೆಗಳನ್ನು ಚೀಳಿಸಿಕೊಂಡು ಹೋಗುತ್ತಿರುತ್ತಾರೆ.

ಶವಕಾಯುವ ವಿಧಾನ

ಮದ್ಯಾಹ್ನದ ನಂತರ ಮರಣ ಹೊಂದಿದ್ದರೆ ಶವವನ್ನು ರಾತ್ರಿಯಲ್ಲಿ ಕಾಯಬೇಕು. ಶವದ ಮುಂದೆ ದೀಪವನ್ನು ಹಚ್ಚಿ ಭಜನೆ ಮಾಡುವವರಿಗೆ ವಿಭೂತಿ ವೀಳ್ಯೆಯನ್ನು ಕೊಟ್ಟು ಕರೆದಿದ್ದರೆ ಅವರು ಬಂದು ರಾತ್ರಿಯೆಲ್ಲಾ ಭಜನೆಯನ್ನು ಮಾಡುತ್ತಾರೆ. ಅವರಿಗೆ ಎಲೆ, ಅಡಿಕೆ, ಟೀ ಗಳನ್ನು ಮದ್ಯರಾತ್ರಿ ಹೊತ್ತು ಕೊಡುತ್ತಾ ಇರಬೇಕು. ಬೆಳಗಾಗುವುದರೊಳಗೆ ಬಂದು ಬಾಂದವರೆಲ್ಲರು ಸೇರುತ್ತಾರೆ.

ಸಮಾದಿ ರಚನೆ

ಸ್ಮಶಾನದಲ್ಲಿ ಗುರುಗಳು ಪಾದವಿಟ್ಟು ತೋರಿಸಿದ ಸ್ಥಳದಲ್ಲಿ ೬' X ೬' ಯು ಚೌಕವಾದ ಕುಣಿಯನ್ನು ೬ ಅಡಿ ಆಳಕ್ಕೆ ತೋಡುತ್ತಾರೆ. ನಂತರ ಕುಣಿಯ ತಳಭಾಗದಲ್ಲಿ ಪೂರ್ವಾಭಿಮುಖವಾಗಿ ಅಥವಾ ಉತ್ತರಾಭಿಮುಖವಾಗಿ ಶವದ ಅಳತೆಯ ಲೆಕ್ಕದ ಅಂದಾಜಿಗೆ ಗುಣೇವು ತೆಗೆಯುತ್ತಾರೆ. ಪೂರ್ವ-ಪಶ್ಚಿಮ ದಿಕ್ಕಿನಲ್ಲಿ ಎರಡು ಸಣ್ಣ ಗೂಡು ಮಾಡಿ ಅದರಲ್ಲಿ ಪ್ರಣತಿಗಳನ್ನು ತಯಾರು ಮಾಡಿಟ್ಟಿರುತ್ತಾರೆ. ಈ ಕುಣಿಯಲ್ಲಿ ಶವವನ್ನು ಕೂರಿಸುವುದಕ್ಕೂ ಮುಂಚೆ ವಿಭೂತಿ ಉಂಡೆಗಳನ್ನು ಒಡೆದು ಪುಡಿ ಮಾಡಿ ಹಾಕಬೇಕು. ಶವವನ್ನು ಉತ್ತರಾಭಿಮುಖವಾಗಿ ಕುಣಿಯಲ್ಲಿ ಕೂರಿಸುತ್ತಾರೆ. ಗೂಡಿನಲ್ಲಿ ಇರುವ ಪ್ರಣತಿಯನ್ನು ಬೆಳಗಿಸಿ ಗುರುಗಳು ಶವದ ತೊಡೆಯ ಮೇಲೆ ಎಡಗಾಲನ್ನು ಇಡುತ್ತಾರೆ. ಸತ್ತವರ ಮನೆಯ ಹಿರಿಯ ಮಗನು ಗುರುಗಳ ಪಾದ ಪೂಜೆ ಹಾಗೂ ಶವಕ್ಕೆ ಪೂಜೆ ಸಲ್ಲಿಸಿ ಶವದ ಕೊರಳಿನಲ್ಲಿ ಇದ್ದ ಲಿಂಗದ ಕಾಯಿಯಿಂದ ಲಿಂಗವನ್ನು ಹೊರತೆಗೆದು ಶವ ಪೂಜಾ ಭಂಗಿಯಲ್ಲಿ ಕೂಡಿಸಿದ ಶವದ ಎಡಗೈಯಲ್ಲಿಡಬೇಕು. ನಂತರ ಗುರುಗಳು ಶವದ ತಲೆಯ ಮೇಲಿರುವ ಪೇಟ (ವಸ್ತ್ರದಿಂದ ಪೇಟ ಸುತ್ತಿರುತ್ತಾರೆ.)ವನ್ನು ಶವದ ತಲೆಯಿಂದ ತೆಗೆದು ಹಿರಿಯ ಮಗನ ತಲೆಯ ಮೇಲಿರಿಸಿ ಸತ್ತವರ ತರಹ ಈತನೂ ಮನೆಯ ಜವಾಬ್ದಾರಿಯನ್ನು ಹೊತ್ತುಕೊಳ್ಳುತ್ತಾನೆಂದು ಪ್ರಮಾಣ ವಚನ ಸ್ವೀಕರಿಸುತ್ತಾನೆ.

ನಂತರ ಪೂಜೆಗೆ ಮುಂಚೆ ಎಲ್ಲರ ಕೈಯಲ್ಲಿ ಕೊಟ್ಟಿದ್ದ ಹೂ, ಪತ್ರಿಗಳನ್ನು ಜಯ ಘೋಷಗಳೊಂದಿಗೆ ಎಲ್ಲರು ಶವದ ಮೇಲೆ ಹಾಕುತ್ತಾರೆ. ಎಲ್ಲರೂ ಶವದ ಅಂತಿಮ ದರ್ಶನ ಪಡೆದು ಸತ್ತವರ ಮನೆಮಂದಿಗಳಿಂದ ಮೊದಲು ತಲಾ ಮೂರು ಬೊಗಸೆ ಮಣ್ಣನ್ನು ಶವದ ಮೇಲೆ ಹಾಕುತ್ತಾರೆ. ನಂತರ ಬಂದವರೆಲ್ಲರೂ ಮಣ್ಣು ಹಾಕುತ್ತಾರೆ. ಸುತ್ತಲೂ ಇದ್ದ ಮಣ್ಣನ್ನು ಚಲಿಕೆಗಳಿಂದ ಕುಣಿಯೊಳಗೆ ಹಾಕಿ ಮುಚ್ಚುತ್ತಾರೆ.

ಕುಣಿಯ ಮೇಲೆ ಒಂದು ಕಲ್ಲು ಇಟ್ಟು ಅದರ ಮೇಲೆ ಗುರುಗಳನ್ನು ನಿಲ್ಲಿಸಿ ಹಿರಿಯ ಮಗನಿಂದ

ಪಾದ ಪೂಜೆಯನ್ನು ಮಾಡಿಸುತ್ತಾರೆ. ಹಾಗೆ ಬಳಸಿದ ಚಲಿಕೆ, ಹಾರೆಯನ್ನು ಸಹ ಪೂಜೆ ಮಾಡಿಸಿ ಗುರುಗಳಿಗೆ ದಕ್ಷಿಣೆ ಕೊಟ್ಟು ಪಾದಕ್ಕೆ ನಮಸ್ಕರಿಸುತ್ತಾರೆ.

ಶವಕ್ಕೆ ಮಣ್ಣು ಮುಚ್ಚಿದ ಕೂಡಲೆ ಗುರುಗಳು ಸರ್ವರಿಗೆಲ್ಲರಿಗೂ ೯, ೧೧, ೧೩, ೧೬ನೇ ದಿನಗಳಲ್ಲಿ ಒಂದನ್ನು ನಿಗಧಿಮಾಡಿ ಅದೇ ದಿನ ಸತ್ತವರ ಆತ್ಮಕ್ಕೆ ಶಾಂತಿ ಕೋರಲು ಶಿವಗಣಾರಾಧನೆ ಕಾರ್ಯಕ್ರಮ ಜರಗುವುದು ಎಂದು ತಿಳಿಸುತ್ತಾರೆ. ನಂತರ ಕುಣಿ ತೆಗೆದವರಿಗೆ ಬ್ಯಾಂಡು ಬಾರಿಸಿದವರಿಗೆ ಅಲ್ಲಿಯೇ ಹಣ ಹಂಚುತ್ತಾರೆ. ನಂತರ ಎಲ್ಲರು ಮನೆಗೆ ಹೊರಡುತ್ತಾರೆ.

ಮಣ್ಣು ಮುಚ್ಚಿದ ನಂತರ ಎಲ್ಲರೂ ಹಳ್ಳದಲ್ಲಿಯೆ ಕೈ ಕಾಲು ಮುಖವನ್ನು ತೊಳೆದು ಸತ್ತವರ ಮನೆಗೆ ಸಂಸ್ಕಾರಕ್ಕೆ ಬಂದ ಜನರೆಲ್ಲರು ಮತ್ತೆ ಹೂಗಿ ಅವರ ಮನೆಯಲ್ಲಿ ದೀಪವನ್ನು ನೋಡಿ ತಮ್ಮ ತಮ್ಮ ಮನೆಗೆ ಹೋಗುತ್ತಾರೆ. ತಮ್ಮ ಮನೆಗೆ ಹೋದ ಮೇಲೆ ನೇರವಾಗಿ ಒಳಗೆ ಹೋಗುವುದಿಲ್ಲ. ಮನೆಯವರು ಅವರಿಗೆ ಹೊರಗಡೆನೆ ನೀರು ಹಾಕುತ್ತಾರೆ. ನಂತರ ಸ್ನಾನ ಮಾಡಿ ದೇವಸ್ಥಾನಕ್ಕೆ ಹೋಗುತ್ತಾರೆ.

ಸತ್ತವರ ಮನೆಯವರು ಸ್ಮಶಾನದಿಂದ ಬಂದ ನಂತರ ಮನೆಯನ್ನು ತೊಳೆದುಕೊಂಡು ಗುರುಗಳ ಪಾದತೊಳೆದ ನೀರಿನಿಂದ ಮನೆಯಲ್ಲಿ ಪೋಷಣೆ ಮಾಡಿಕೊಳ್ಳುತ್ತಾರೆ. ೩ನೆಯ ದಿನ ಗುರುಗಳನ್ನು ಕರೆದು ಪಾದ ತೊಳೆದುಕೊಂಡು ಮನೆಯೆಲ್ಲಾ ಪೋಷಣೆ ಮಾಡಿ ಗುರುಗಳಿಗೆ ಊಟಕ್ಕೆ ಬಡಿಸಿ ನಂತರ ಫಲಹಾರಗಳೊಂದಿಗೆ ಸ್ಮಶಾನಕ್ಕೆ ಹೋಗಿ ಶವಕ್ಕೆ ಮಣ್ಣು ಮುಚ್ಚಿದ ಜಾಗದಲ್ಲಿ ಅವರ ಇಷ್ಟಾರ್ಥಗಳನ್ನು ಇಟ್ಟು ನಮಸ್ಕರಿಸಿ ಬರಬೇಕು.

ಶಿವಗಣಾರಾಧನೆಯ ದಿನ ತಿಥಿ ಕಾರ್ಯ

ಈ ದಿನ ಆರಂಭವಾಗುವುದಕ್ಕೂ ಮುಂಚೆ ಮನೆಯನ್ನು ಸುಣ್ಣ ಬಳಿದುಕೊಂಡು ತಯಾರಿಮಾಡಿಕೊಳ್ಳುತ್ತಾರೆ. ಅಲ್ಲದೆ ಸತ್ತವರ ಭಾವಚಿತ್ರದೊಂದಿಗೆ ಕಾರ್ಡುಗಳನ್ನು ಮಾಡಿಸಿ, ತಮಗೆ ಗೊತ್ತಿರುವ ಮನೆಯವರಿಗೆಲ್ಲ ಈ ಕಾರ್ಡುಗಳನ್ನು ಕೊಟ್ಟು ಕರೆದು ಬರುತ್ತಾರೆ. ಆರಾಧನೆಯ ದಿನ ಗುರುಗಳನ್ನು ಅವರ ಪಾದ ತೊಳೆದುಕೊಂಡು ಪೂಜೆಮಾಡಿ ಆ ನೀರನ್ನು ಮನೆಯ ಎಲ್ಲಾಕಡೆ ಪೂಷಿಸುತ್ತಾರೆ. ನಂತರ ಸತ್ತವರ ಭಾವಚಿತ್ರವನ್ನು ಇಟ್ಟು ಅದಕ್ಕೆ ಹೂವಿನ ಹಾರ ಹಾಕಿ ಕುಂಕುಮ ಹಚ್ಚಿ ಪೂಜೆ ಮಾಡುತ್ತಾರೆ. ಇಲ್ಲವೆ ಒಂದು ತಂಬಿಗೆ ಇಟ್ಟು ಅದಕ್ಕೆ ನೀರು ಹಾಕಿ ಎಲೆ, ಕಾಯಿ ಇಟ್ಟು ವಿಭೂತಿ, ಕುಂಕುಮ, ಹೂ ಇಟ್ಟು ಪೂಜೆಯನ್ನು ಮಾಡುತ್ತಾರೆ. ನಂತರ ಜಂಗಮ ಗುರುಗಳಿಗೆ ಊಟಕ್ಕೆ

ಹಾಕಬೇಕು. ಅವರು ಊಟ ಮಾಡುವಾಗ 'ತಲ ಬಾಗಿಲಿಗೆ' ಹೋಗಿ ''ಸತ್ತವರ ಮನೆಯವರು ಜಂಗಮರ ಊಟದ ಪಂಕ್ತಿ ಸಾಗಿದೆ. ಊಟಕ್ಕೆ ಬಾ'' ಎಂದು ಸತ್ತವರ ಹೆಸರು ಮೂರು ಸಾರಿ ಕೂಗಿ ಕರೆಯಬೇಕು. ಇದರ ಅರ್ಥ ಸತ್ತವರು ಆ ದಿನ ಪುನಃ ಮನೆಯೊಳಗೆ ಪ್ರವೇಶ ಮಾಡಿ ಮನೆಯ ಹಿರಿಯ ಸಾಲಿನಲ್ಲಿ ಸೇರ್ಪಡೆಯಾಗಬೇಕೆಂಬ ಭಾವನೆ.

೯, ೧೧, ೧೩, ೧೬ನೇ ದಿನಕ್ಕೆ ಶಿವಗಣರಾಧನೆ ಕಾರ್ಯವನ್ನು ಮಾಡುತ್ತಾರೆ. ಅದೇ ದಿನ ಪೂಜಾ ಸಮಯದಲ್ಲಿ ಬ್ಯಾಂಡಿನವರಿಗೆ ಹೇಳಿ ಮಂಗಳವಾದ್ಯಗಳನ್ನು ಬಾರಿಸಲು ಹೇಳುತ್ತಾರೆ. ಅದು ಮುಂದಿನ ದಿನಗಳಲ್ಲಿ ಮಂಗಳ ಕಾರ್ಯಗಳನ್ನು ಮಾಡಲು ನಾಂದಿಯಾಗುತ್ತದೆ.

೪.೨: ವಾರ್ಷಿಕಾವರ್ತನದ ಆಚರಣೆಗಳು

ನಾವು ವಾಸಿಸುವ ಈ ಪ್ರಪಂಚ ಧರ್ಮಕ್ಷೇತ್ರವೂ ಹೌದು. ಕರ್ಮಕ್ಷೇತ್ರವೂ ಹೌದು. ಇಲ್ಲಿ ವಾಸಿಸುವ ನಾವು ನಮ್ಮ ಒಳಿತಿಗಾಗಿ, ಸುಖ ಸಂತೋಷಕ್ಕಾಗಿ, ಬಾಳಿನಲ್ಲಿ ಬದಲಾವಣೆಗಾಗಿ, ಸಾಧನೆಯಿಂದ ಸಿದ್ದಿಯತ್ತ ಸಾಗುವುದಕ್ಕಾಗಿ ಸಮಾಜ ಸಂಘಟನೆಗಾಗಿ ಆತ್ಮೀಯರೊಂದಿಗೆ ಬೆರೆಯಲಿಕ್ಕಾಗಿ ಹಲವು ಹಬ್ಬ ಹರಿದಿನಗಳನ್ನು ಆಚರಿಸುತ್ತಾ ಬಂದಿದ್ದೇವೆ. ವ್ರತ ನಿಯಮಗಳನ್ನು ಎಲ್ಲಾ ದಿನಗಳಂದು ಆಚರಿಸಲು ಸಾಧ್ಯವಿಲ್ಲ. ಕೊನೆ ಪಕ್ಷ ಇಂಥ ದಿನಗಳಲ್ಲಾದರೂ ಸ್ವಲ್ಪ ದೇಹದಂಡನೆ ಆತ್ಮಚಿಂತನೆ ಮಾಡಿದಾಗ ಒಳ್ಳೆಯದಾಗುತ್ತದೆ. ಎಲ್ಲಾ ಹಬ್ಬಗಳಲ್ಲಿ ಕಂಡುಬರುವ ಸಮಾನ ಅಂಶವೆಂದರೆ ಪ್ರಾತಃಕಾಲದ ಅಭ್ಯಂಜನ ಸ್ನಾನ, ಹೊಸ ವಸ್ತ್ರ, ಮನೆಗಳನ್ನು ಸ್ವಚ್ಚಗೊಳಿಸುವುದು, ಬಣ್ಣ ಬಣ್ಣದ ರಂಗೋಲಿಗಳನ್ನು ಹಾಕುವುದು, ಮನೆಯ ಬಾಗಿಲುಗಳಿಗೆ ಮಾವಿನ ತೋರಣಗಳನ್ನು ಕಟ್ಟುವುದು, ರುಚಿಯಾದ ಭೋಜನಗಳನ್ನು ಮಾಡುವುದು, ಬಂಧು, ಬಾಂಧವರ ಸುಮಧುರ ಮಿಲನ, ಜಪ-ತಪ, ಪೂಜೆ ಪುರಸ್ಕಾರ, ದೇವಸ್ಥಾನಗಳಲ್ಲಿ ಹಬ್ಬದ ದಿನ ವಿಶೇಷ ಪೂಜೆಗಳು ಹಾಗೂ ಸಂಗೀತ, ಹೋಮ, ಭಜನೆ ಮುಂತಾದವು ಮನಸ್ಸಿಗೆ ಸಂತೋಷ ಉಂಟುಮಾಡುವ ಕಾರ್ಯಕ್ರಮಗಳು ನಡೆಯುತ್ತವೆ. ಎಲ್ಲಾ ಹಬ್ಬ ಉತ್ಸವಗಳು ನಮ್ಮಲ್ಲಿ ಉತ್ಸಾಹ ತುಂಬಿ ಹಳೆಯ ನೋವು ಮರೆಸಿ, ಬಾಂಧವ್ಯದ ಕೊಂಡಿ ಕಳಚದಂತೆಮಾಡಿ ಸಾಮುದಾಯಿಕ ಮನರಂಜನೆ, ದೈವಭಕ್ತಿ, ಭಾವೈಕ್ಯತೆ, ಮನಶ್ಯಾಂತಿ ಉಂಟುಮಾಡಿ ಜೀವನಕ್ಕೆ ನವೋತ್ಸಾಹವನ್ನು ತಂದು ಕೊಡುತ್ತವೆ.

ಯುಗಾದಿ ಹಬ್ಬ (ಯುಗದ ಆದಿ ದಿನ)

ಹಳೆಯ ಮತ್ತು ಹೊಸ ವರ್ಷಗಳನ್ನು ಜೋಡಿಸುವ ಸುವರ್ಣಸೇತುವೆ ಯುಗಾದಿ. ಫಾಲ್ಗುಣಬಹುಳ

ಅಮವಾಸ್ಯೆಯ ದಿನ ಹಳೆಯ ವರ್ಷಕ್ಕೆ ವಿದಾಯ ಹೇಳಿ ಮರುದಿನ ಚೈತ್ರಶುಕ್ಲ ಪ್ರತಿಪದೆಯಂದು ಹೊಸ ವರ್ಷವನ್ನು ಸ್ವಾಗತಿಸುತ್ತೇವೆ. ನಾವೀಗ ಇರುವ ಕಲಿಯುಗದ ಆದಿಯ ದಿನವೂ ಯುಗಾದಿಯೇ, ಕೃತಯುಗ ಆರಂಭವಾದದ್ದು ಕಾರ್ತಿಕಶುಕ್ಲ ನವಮಿಯಂದು ವೈಶಾಖಶುಕ್ಲ ತೃತೀಯಾ ತ್ರೇತಾಯುಗದ ಮೊದಲ ದಿನ, ದ್ವಾಪರದ ಆರಂಭ ಮಾಘ ಬಹುಳ ಅಮವಾಸ್ಯೆ, ಕಲಿಯುಗದ ಆರಂಭದ ದಿನ ಈ ಚೈತ್ರ ಶುಕ್ಲ ಪಾಡ್ಯ. ಹಾಗಾಗಿ ನಮ್ಮ ಯುಗದ ಆದಿ ದಿನ ಈ ಯುಗಾದಿ 'ಯುಗ' ಎಂದರೆ ನೂತನ ವರ್ಷ 'ಆದಿ' ಎಂದರೆ 'ಆರಂಭ' ಎಂದು ಅರ್ಥ.

ಹಬ್ಬದ ವೈಶಿಷ್ಟ

'ಅಸುರೀ ಶಕ್ತಿಯ ವಿರುದ್ಧ ಸಾತ್ವಿಕ ಶಕ್ತಿಯ ವಿಜಯವೇ ಯುಗಾದಿಯ ವೈಶಿಷ್ಟ'. ಈ ದಿನ ಶ್ರೀರಾಮ ರಾವಣನನ್ನು ಕೊಂದು ಅಯೋಧ್ಯೆಗೆ ಬಂದು ರಾಮರಾಜ್ಯವಾಳಲು ಪ್ರಾರಂಭಿಸಿದರು. ದೊರೆ ಶಾಲಿವಾಹನನು ಉಜ್ಜಯಿನಿಯ ವಿಕ್ರಮಾದಿತ್ಯನನ್ನು ಪರಾಭವಗೊಳಿಸಿ, ತನ್ನ ಮಹಾವಿಜಯದ ಕುರುಹಾಗಿ ಶಾಲಿವಾಹನ ಶಕವನ್ನು ಸ್ಥಾಪಿಸಿದುದು ಈ ಚೈತ್ರಶುಕ್ಲ ಪ್ರತಿಪದೆಯೆಂದು ''ವೀರಶೈವ ಪರಂಪರೆಯ ಪಂಚಾಚಾರ್ಯರ ಅವತಾರವಾದುದೂ ಯುಗಾದಿಯೆಂದೇ'' ಚಂದ್ರನ ಚಲನೆಯನ್ನನುಸರಿಸಿ ಅಮವಾಸ್ಯೆ, ಹುಣ್ಣಿಮೆಗಳ ಆಧಾರದ ಮೇಲೆ ಮಾಸ ಗಣನೆ ಮಾಡುವ ಪದ್ಧತಿಗೆ ಚಂದ್ರಮಾನ ಎಂದು ಹೆಸರು. ಹೀಗೆ ವಿಜಯೋತ್ಸವದ ಪ್ರತೀಕವಾದ ಯುಗಾದಿ ಪೌರುಷ ಮತ್ತು ಪರಾಕ್ರಮಗಳ ಆರಾಧನೆಯ ಹಬ್ಬ.

'ಉಡು' ಅಂದರೆ ನಕ್ಷತ್ರ. 'ಗಮನ' ಅಂದರೆ ಚಲನೆ, ಈ ಎರಡು ಪದಗಳು ಮೊದಲ ಅಕ್ಷರಕೂಡಿ 'ಉಗ ' (ನಕ್ಷತ್ರ ಚಲನೆ) ಎಂದೂ, ಇದಕ್ಕೆ ಆರಂಭಕಾಲಸೂಚಕ 'ಆದಿ' ಸೇರಿ 'ಉಗಾದಿ' ಎಂದೂ ಆಗಿದೆ. 'ಯುಗದ ಆದಿ' ಯುಗಾದಿ ಎಂಬ ಸಂಸ್ಕೃತ ಪದದ ತದ್ಭವವೇ 'ಉಗಾದಿ' ಎಂದು ಹೇಳುವುದುಂಟು, ಕನ್ನಡ ಕವಿಗಳ ನಾಲಿಗೆಗೆ 'ಉಗಾದಿ' ಗಿಂತ 'ಯುಗಾದಿ'ಯೇ ಹೆಚ್ಚು ಹತ್ತಿರದ ಪದ. ಋತುರಾಜ ವಸಂತನನ್ನು ಜತೆಗಿಟ್ಟುಕೊಂಡು ಯುಗಾದಿ ಮೆಲ್ಲ ಮೆಲ್ಲನೆ ಬರುತ್ತದೆ. ಬರಡು ಶಿಶಿರನಿಗೆ ವಿದಾಯ ಹೇಳಿ ರಸದ ಚಿಲುಮೆಯೆನಿಸಿದ ವಸಂತ ಕಾಲಿಕ್ಕುತ್ತಾನೆ. ಶಿಶಿರದಲ್ಲಿ ಬೋಳು-ಬೋಳಾದ ತರುಲತೆಗಳಲ್ಲೆಲ್ಲ ಈಗ ಪ್ರಾಣ ಪ್ರತಿಷ್ಠೆಯಾಗುತ್ತದೆ. ಜೀವದಾನ ಪಡೆದ ಗಿಡ-ಮರ-ಬಳ್ಳಿಗಳಲ್ಲಿ ದುಂಬಿಗಳ ಸಂಗೀತ ಕಛೇರಿ, ಜೀವನೋತ್ಸಾಹದ ರಸಮಯ ಒರತೆ.

ಕವಿ ಬೇಂದ್ರೆಯವರು ಯುಗಾದಿಯ ಆಗಮನದಲ್ಲಿ ಹೊಸತನವನ್ನು ಕಾಣುತ್ತಾರೆ. ಅದನ್ನು ಆದರದಿಂದ ಬರಮಾಡಿಕೊಳ್ಳುತ್ತಾರೆ.

ಯುಗ ಯುಗಾದಿ ಕಳೆದರೂ

ಯುಗಾದಿ ಮರಳಿ ಬರುತಿದೆ

ಹೊಸ ವರುಷಕೆ ಹೊಸ ಹರುಷವ

ಹೊಸತು ಹೊಸತು ತರುತಿದೆ.

ಹೊಂಗೆ ಹೂವ ತೊಂಗಲಲ್ಲಿ

ಭೃಂಗದ ಸಂಗೀತ ಕೇಳಿ

ಮತ್ತೆ ಕೇಳಿ ಬರುತಿದೆ

ಕಮ್ಮನೆ ಬಾಣಕ್ಕೆ ಸೋತು

ಜುಮ್ಮನೆ ಮಾಮರವು ಹೂತು

ಕಾಮಗಾಗಿ ಕಾದಿದೆ.

ಕವಿ ಕುವೆಂಪು ಯುಗಾದಿಯ ಸನಾತನ ರೂಢಿಯಲ್ಲಿ ಬದುಕಿನ ನಿತ್ಯ ಸಿದ್ಧಾಂತವನ್ನು ಗುರುತಿಸುತ್ತಾರೆ. 'ಪ್ರೇಮಕ್ಕೆ ಮೀಸಲು ನವಸಂವತ್ಸರ' ಎಂದು ಹಾಡಿ, ಬದುಕಿನ ಹಳೆಯ ಪೊರೆಯನ್ನು ಕಳಚಿ ಒಗೆಯಲು ಅವರು ಕರೆ ನೀಡುತ್ತಾರೆ. ಗತ ವರ್ಷದ ಮೃತ ಪಾಪವನ್ನು ಸುಟ್ಟು, ನವಸಂವತ್ಸರವನ್ನು ತೆರೆದ ಹೃದಯದೊಡನೆ ಬರಮಾಡಿಕೊಳ್ಳಬೇಕು. ಹಿಂದಿನ ಅಪಜಯ, ಅಪಮಾನಗಳನ್ನು ಮರೆತು ಸಂಶಯ, ದ್ವೇಷ ಅಸೂಯೆಗಳನ್ನು ಅವುಗಳ ಹುಟ್ಟಿನಲ್ಲಿಯೇ ಚಿವುಟಿ ಹಾಕಬೇಕು. ತೊಲಗಲಿ ದುಃಖ, ತೊಲಗಲಿ ಮತ್ಸರ ಎಂಬ ಹಾರೈಕೆಯೊಂದಿಗೆ ಕವಿ ತಮ್ಮ ಯುಗಾದಿ ಪದ್ಯದಲ್ಲಿ ತುಂಬ ಮಾರ್ಮಿಕವಾಗಿ ಹೀಗನ್ನುತ್ತಾರೆ.

ಮಾವಿನ ಬೇವಿನ ತೋರಣ ಕಟ್ಟು ಜೀವನವೆಲ್ಲಾ ಬೇವು ಬೆಲ್ಲ

ಬೇವು ಬೆಲ್ಲಗಳನೊಟ್ಟಿಗೆ ಕಟ್ಟು ಎರಡೂ ಸವಿವನೆ ಕಲಿ ಮಲ್ಲ

ಆಚರಣೆ

ಸುದೀರ್ಘವಾದ ಅಂಧಕಾರ ಮತ್ತು ಶೀತಕಾಲ ಕಳೆದು ಸಂತೋಷಪ್ರದವಾದ ವಸಂತದ ಆಗಮನವನ್ನು ಸೂಚಿಸಲು ಯುಗಾದಿ ಮರಳಿ ಬರುತ್ತದೆ. ಇದು ನಿದ್ರಿಸಿದ ಭೂತಾಯಿಯನ್ನು ಎಚ್ಚಿಸುವ ಹಬ್ಬ. ಋತುರಾಜ ವಸಂತನಿಗೆ ಸ್ವಾಗತ ಹೇಳುವ ಪರ್ವದಿನ.

ಯುಗಾದಿ ದಿನ ಎಣ್ಣೆ, ನೀರು ಹಾಕಿಕೊಂಡು ಹೊಸ ಬಟ್ಟೆ ತೊಟ್ಟುಕೊಳ್ಳುತ್ತಾರೆ. ಸ್ನಾನ ಮಾಡುವ ನೀರಿನಲ್ಲಿ ಬೇವಿನ ಸೊಪ್ಪನ್ನು ಹಾಕಿರುತ್ತಾರೆ. ಪ್ರಸನ್ನವದನರಾಗಿ ದೇವರ ಪೂಜೆ ನಡೆಸಿ, ಗುರು-ಹಿರಿಯರಿಗೆ ನಮಸ್ಕಾರ ಮಾಡಿ ಅವರಿಂದ ಆಶೀರ್ವಾದ ಪಡೆಯುವುದು ವಾಡಿಕೆ. ಈ ಹಬ್ಬದ ದಿನ ಹೋಳಿಗೆ, ಬೇವು ಬೆಲ್ಲ, ಅನ್ನ, ಸಾರು, ಹಪ್ಪಳ, ಸಂಡಿಗೆ, ಕೋಸಂಬರಿಯನ್ನು ಮಾಡಿ ಒಂದು ತಟ್ಟೆಯಲ್ಲಿ ಈ ಎಲ್ಲಾ ಅಡಿಗೆಯನ್ನು ಜೋಡಿಸಿ ದೇವಸ್ಥಾನಕ್ಕೆ ಮನೆಮಂದಿಯರೆಲ್ಲರೂ ಸೇರಿ ಹೋಗುತ್ತಾರೆ. ಮಧ್ಯಾಹ್ನದ ಭೋಜನದಲ್ಲಿ ಮೊದಲು ಬೇವು-ಬೆಲ್ಲ ತಿಂದು, ಅನಂತರ ಹೋಳಿಗೆ ಪಾಯಸಗಳನ್ನು ಊಟ ಮಾಡುವುದು ರೂಢಿ.

ಸಂಜೆ ಪಂಚಾಂಗ ಶ್ರವಣ. ಸಂಡೂರಿನಲ್ಲಿ ಈ ಯುಗಾದಿಯ ದಿನ ಸಂಜೆ ಒಂದು ವಿಶೇಷವಾದ ಜಾತ್ರೆ (ರಥೋತ್ಸವ) ನಡೆಯುತ್ತದೆ. ಯುಗಾದಿ ಹಬ್ಬ ಆರಂಭದ ಮುಂಚೆ ಐದು ದಿನಗಳಿಂದ ಈ ರಥೋತ್ಸವದ ಕಾರ್ಯಗಳು ಆರಂಭವಾಗುತ್ತದೆ. ಈ ಯುಗಾದಿ ರಥೋತ್ಸವವು ಸಂಡೂರಿನ ಮೇನ್ ಬಜಾರ್‌ನಲ್ಲಿ ಹಳೆಯ ಪೋಲಿಸ್ ಸ್ಟೇಷನ್ ಹತ್ತಿರ ಎಂಟು ದಿನ ಮುಂಚೆ ರಥವನ್ನು ತಂದು ನಿಲ್ಲಿಸುತ್ತಾರೆ. ಮೇನ್ ಬಜಾರ್ ಕೆಳಗೆ ಇರುವ ವೀರಭದ್ರ ದೇವಸ್ಥಾನದಲ್ಲಿ ಈ ಕಾರ್ಯನಡೆಯುತ್ತದೆ. ದೇವಸ್ಥಾನಕ್ಕೆ ಸುಣ್ಣ-ಬಣ್ಣಗಳನ್ನು ಬಳಿದು ಮಾವಿನ ತೋರಣಗಳಿಂದ ಅಲಂಕರಿಸಿರುತ್ತಾರೆ. ರಥಕ್ಕೆ ಬಣ್ಣ ಬಳಿದು ಅದಕ್ಕೆ ಹೂ ಮಾವಿನ ಎಲೆಗಳಿಂದ ಅಲಂಕರಿಸಿರುತ್ತಾರೆ.

ಈ ರಥೋತ್ಸವದ ಮೊದಲನೆಯ ದಿನ ಕಂಕಣ ಕಟ್ಟುವ ಕಾರ್ಯಮಾಡುತ್ತಾರೆ. ಅರಿಶಿಣದ ದಾರಕ್ಕೆ ಎಲೆ, ಅರಿಶಿಣದ ಕೊಂಬು ಕಟ್ಟಿ ಹೀಗೆ ಐದು ಕಂಕಣಗಳನ್ನು ತಯಾರಿಸಿಕೊಂಡು ಇವುಗಳನ್ನು ಬಸವಣ್ಣ, ನೀಲಮ್ಮ, ಗಣೇಶ, ಪಾರ್ವತಿ-ಪರಮೇಶ್ವರ ದೇವರಿಗೆ ಕಟ್ಟುತ್ತಾರೆ. ಸ್ವಾಮಿಗಳು ಸಹ ಕಟ್ಟಿಕೊಳ್ಳುತ್ತಾರೆ. ಈ ಕಂಕಣದ ಕಾರ್ಯ ಎಂದರೆ ಜಾತ್ರೆ ಮಾಡುವುದಕ್ಕಾಗಿಯೇ ಈ ಕಂಕಣವನ್ನು ಕಟ್ಟಿಕೊಳ್ಳುತ್ತಾರೆ. ಬಸವಣ್ಣ-ನೀಲಮ್ಮ ಇವರಿಗೆ ಮದುವೆ ಮಾಡಿಸುವುದೇ ಈ ರಥೋತ್ಸವದ ವಿಶೇಷವಾಗಿದೆ. ಬಸವಣ್ಣ-ನೀಲಮ್ಮ ಈ ದೇವರ ಮೂರ್ತಿಗಳನ್ನು ಪಲ್ಲಕ್ಕಿಯಲ್ಲಿ ಕೂರಿಸಿ ಮೆರವಣಿಗೆ ಮಾಡಿ ರಥದ ಸುತ್ತಲು ಸುತ್ತಿಸಿ ಮತ್ತೆ ದೇವಸ್ಥಾನಕ್ಕೆ ಕರೆದುಕೊಂಡು ಬರುತ್ತಾರೆ.

ಎರಡನೆಯ ದಿನ ಬಸವಣ್ಣ-ನೀಲಮ್ಮ ಇವರಿಗೆ ಮಾಂಗಲ್ಯಧಾರಣೆ ನಡೆಯುತ್ತದೆ. ವೀರಶೈವ ಸಮಾಜದ ಮುಖ್ಯಸ್ಥರು ಸೇರಿರುತ್ತಾರೆ. ನಂತರ ಪಲ್ಲಕ್ಕಿಯಲ್ಲಿ ಕೂರಿಸಿ ಮೆರವಣಿಗೆ ಮಾಡುತ್ತಾರೆ. ಈ ಐದು ದಿನಗಳಲ್ಲಿ 'ಬಲಿ ಅನ್ನ' ಎನ್ನುವ ಶಾಸ್ತ್ರ ಮಾಡುತ್ತಾರೆ. ರಥದ ಚಕ್ರದ ಅಡಿಯಲ್ಲಿ ನೀರು ಹಾಕಿ, ಅನ್ನ ಇಡುತ್ತಾರೆ. ಇದಕ್ಕೆ 'ಬಲಿ ಅನ್ನ' ಎಂದು ಕರೆಯುತ್ತಾರೆ. ಏಕೆಂದರೆ ಈ ರಥೋತ್ಸವದ ಕಾರ್ಯಕ್ಕೆ ಯಾವುದೇ ತರಹದ ಕುಂದು, ಕೊರತೆ ಬರಬಾರದು ಎಂದು ನಂಬಿಕೊಂಡು ಈ ಶಾಸ್ತ್ರ ಮಾಡುತ್ತಾರೆ.

ಮೂರನೆಯ ದಿನ ಸಹ ಪಲ್ಲಕ್ಕಿಯಲ್ಲಿ ಬಸವಣ್ಣ-ನೀಲಮ್ಮನನ್ನು ಕೂರಿಸಿ ಮೆರವಣಿಗೆ ಮಾಡುತ್ತಾರೆ. ನಾಲ್ಕನೆಯ ದಿನ 'ಯುಗಾದಿ ಪಾಡ್ಯ' ಈ ದಿನ ಸಂಜೆ ರಥವನ್ನು ಎಳೆಯುತ್ತಾರೆ. ರಥಕ್ಕೆ ಹೆಚ್ಚು ಹೂಗಳನ್ನು ಹಾಕಿ ಅಲಂ ಕರಿಸಿರುತ್ತಾರೆ. ಸಂಜೆ ಊರಿನ ಜನರೆಲ್ಲರು ಈ ರಥೋತ್ಸವ ನೋಡುವುದಕ್ಕೆ ಸಂಡೂರಿನ ಮೇನ್ ಬಜಾರ್‌ಗೆ ಬಂದು ಸೇರಿರುತ್ತಾರೆ. ಈ ರಥದಲ್ಲಿ ಬಸವಣ್ಣ-ನೀಲಮ್ಮನನ್ನ ಕೂರಿಸಿ ಸಂಡೂರಿನ ಪ್ರಭುದೇವ ಸ್ವಾಮಿಗಳು ಬಂದು ಪೂಜೆ ಮಾಡಿದ ಮೇಲೆ ರಥವನ್ನು ಎಳೆಯುತ್ತಾರೆ. ನಂದಿಕೋಲುಗಳ ಕುಣಿತ ಹಾಗೂ ಇತರೆ ಮೇಳಗಳಿಂದ ಜನರೆಲ್ಲರೂ ಕುಣಿದು ಕುಪ್ಪಳಿಸಿ ಆನಂದದಿಂದ ರಥವನ್ನು ಎಳೆಯುತ್ತಾರೆ.

ಐದನೆಯ ದಿನ ಈ ಮದುವೆ ಆದ ಬಸವಣ್ಣ-ನೀಲಮ್ಮ ಇವರುಗಳ ಕಡೆ ಗಂಡು-ಹೆಣ್ಣಿನ ಮಾತುಕತೆ, ಇದನ್ನು ಊರಿನ ವೀರಶೈವಧರ್ಮದ ಮುಖ್ಯಸ್ಥರು ಕುಳಿತು ಕಾರ್ಯವನ್ನು ಮಾಡುತ್ತಾರೆ. ಅಲ್ಲದೆ ಹೂವಿನಿಂದ ಚಂಡು ತಯಾರಿಸಿ ಅಂದು ಆಟವಾಡುತ್ತಾರೆ. ನಂತರ ಓಕಳಿಯನ್ನು ಸಹ ಒಬ್ಬರಿಗೊಬ್ಬರು ಹಚ್ಚಿಕೊಂಡು ಕುಣಿದಾಡುತ್ತಾರೆ. ರಥೋತ್ಸವ ಮುಗಿಯುತು.

ಬೇವು-ಬೆಲ್ಲ

ಯುಗಾದಿ ಎಂದ ಕೂಡಲೆ ನಮ್ಮ ನೆನಪಿಗೆ ಬರುವುದು ಬೇವು ಬೆಲ್ಲ. ಬೇವಿನ ಚಿಗುರಿನ ಕಹಿ, ಬೆಲ್ಲದ ಸಿಹಿ ಇವೆರಡೂ ಬದುಕಿನ ಪ್ರತೀಕ, ನೋವು ನಲಿವುಗಳ ಸಂಕೇತ, ದೃಷ್ಟ-ಅದೃಷ್ಟಗಳ ಪ್ರತಿಬಿಂಬ ಹಿಂದಿನ ಬೇವನ್ನು ಜೀರ್ಣಿಸಿಕೊಂಡು ಇಂದಿನ ಬೆಲ್ಲವನ್ನು ಸವಿಯಲು ಯೋಗ ಬೇಕು. ನಮ್ಮ ನಾಲಿಗೆ ಸಿಹಿಬೇಕು ಕಹಿಬೇಡ ಎನ್ನುತ್ತದೆ. ಆದರೆ ನಾಲಿಗೆಗೆ ಸಿಹಿಯಾದುದು ಹೊಟ್ಟೆ ಸೇರಿ ಜೀರ್ಣವಾಗುವ ಹೊತ್ತಿಗೆ ಶರೀರಕ್ಕೆ ಕಹಿಯಾದೀತು. ಹಾಗೆಯೇ ನಾಲಿಗೆಯ ತುದಿಗೆ ಕಹಿಯಾದ ವಸ್ತು ಮುಂದೆ ಪರಿಣಾಮದಲ್ಲಿ ಸಿಹಿಯನ್ನು, ಹಿತವನ್ನೂ ಉಂಟು ಮಾಡಬಹುದು ಪರಿಣಾಮೇ (ಅಮೃತೋಪಮಮ್)

ಈ ದೃಷ್ಟಿಯನ್ನು ಇಟ್ಟುಕೊಂಡು ಸಿಹಿ-ಕಹಿಗಳೆರಡನ್ನೂ ಯುಕ್ತ ಪ್ರಮಾಣದಲ್ಲಿ ಉಚಿತ ಕಾಲಗಳಲ್ಲಿ ಸೇವಿಸುವುದು ಜಾಣತನ.

ನಮ್ಮ ಬದುಕಿನಲ್ಲಿ ನಮಗೆಂದೂ 'ಕಹಿ ಬೇಡ:ಸಿಹಿ ಬೇಕು' ಇದು ಎಲ್ಲರ ಬಯಕೆ. ಆದರೆ ವಾಸ್ತವ ಇದಲ್ಲ ಎಲ್ಲರ ಜೀವನವೂ ಸುಖ-ದುಃಖ, ಲಾಭ-ನಷ್ಟ, ಮಾನ-ಅಪಮಾನ, ಜಯ-ಪರಾಜಯ ಈ ದ್ವಂದ್ವಗಳ ಸಮ್ಮಿಲನ ಯಾರಿಗೂ ಸುಖ, ಲಾಭ, ಮಾನ, ಜಯಗಳು ಶಾಶ್ವತವಲ್ಲ. ಅಂತೆಯೇ ದುಃಖ, ನಷ್ಟ, ಅಪಮಾನ, ಪರಾಜಯಗಳೂ ಸ್ಥಿರವಲ್ಲ. ಇವೆಲ್ಲ ಒಂದಾದ ಮೇಲೆ ಒಂದರಂತೆ, ಚಕ್ರದ ಪಟ್ಟಿಗಳಂತೆ ಬಂದುಹೋಗುತ್ತಿರುತ್ತವೆ. ಅದ್ದರಿಂದ ಮಾನವನು ಸುಖ ಬಂದಾಗ ಹಿಗ್ಗದೆ, ಕಷ್ಟ ದಾಳಿ ನಡೆಸಿದಾಗ ಕುಗ್ಗದೆ, ಈ ಎಲ್ಲ ದ್ವಂದ್ವಗಳನ್ನು ಜಯಿಸಿ, ಸಮತೆ ಸಾಧಿಸಬೇಕು. ಇದು ಯುಗಾದಿಯ ಬೇಕು ಬೆಲ್ಲಗಳ ಸಂದೇಶ.

ಆಯುರ್ವೇದದ ಪ್ರಕಾರ ವಸಂತಕಾಲದಲ್ಲಿ ತಲೆದೋರುವ ಶಾರೀರಕ ರೋಗ-ರುಜಿನಗಳಿಗೆ ಬೇವು ಒಳ್ಳೆಯ ಔಷದ. ಏಕೆಂದರೆ ಬೇವು ಕ್ರಿಮಿನಾಶಕ ಉಷ್ಣತೆಯನ್ನು ತಗ್ಗಿಸಿ ಮೈಗೆ ತಂಪು ಒದಗಿಸುವ ಶಕ್ತಿಯೂ ಅದಕ್ಕಿದೆ. ಇದರ ಜತೆಗೆ ಸ್ವಲ್ಪ ಉಷ್ಣಗುಣದ ಬೆಲ್ಲವೂ ಸೇರಿದರೆ ದೇಹದಲ್ಲಿ ಸಮತೋಲನ ಸಾಧಿಸಲು ಸಾಧ್ಯ. ಶತಾಯುವಾಗಿ, ವಜ್ರಕಾಯವನ್ನು ಹೊಂದಿ, ಸರ್ವಸಂಪತ್ತು ಪಡೆದು, ಸರ್ವಾದಿಷ್ಟಗಳನ್ನು ನಾಶಪಡಿಸಿ, ಸುಖವಾಗಿರುವುದಕ್ಕಾಗಿ ಬೇವಿನ ಚಿಗುರೆಲೆಗಳ ಭಕ್ಷಣ ಎನ್ನುತ್ತದೆ. ಹಳೆಯ ಕ್ಷಣ ಕಳೆದು, ಹೊಸ ವರುಷ ಹೊಸ ಹರುಷದ ಸಂಕೇತ. ಪಂಚಾಂಗದ ಹೊಸ ಪುಟವನ್ನು ಬದಲಾದಂತೆ ನಮ್ಮ ಅಂತರಂಗವೂ ಬದಲಾಗಬೇಕು. ಹೊಸ ಪರಿವರ್ತನೆ ಮೂಡಿಬರಬೇಕು. ಹಿಂದೆ ಕಾಮನ ಹುಣ್ಣಿಮೆ ಮುಂದೆ ರಾಮನವಮಿಗಳ ಮಧ್ಯೆ ಬರುವ ಯುಗಾದಿ ನಮ್ಮನ್ನು ಕಾಮನಿಂದ ರಾಮನತ್ತ, ಕಹಿಯಿಂದ ಸಿಹಿಯತ್ತ, ಕತ್ತಲೆಯಿಂದ ಬೆಳಕಿನತ್ತ ಒಯ್ದು ಆಯುರಾರೋಗ್ಯ ಭಾಗ್ಯವನ್ನು ಹಾರೈಸುವ ಹಬ್ಬವಾಗಿದೆ.

ಹೊಸ ವರುಷದ ಹೊಸ ಯುಗಾದಿಯ ಹಂಬಲದಂತೆ ನಾವು ಹೊಸ ಬಯಕೆಗಳನ್ನು ಹೊತ್ತು ನಿಲ್ಲಬೇಕು. ನಮ್ಮ ಬದುಕಿನ ಭಾಗ್ಯವಿಧಾತರು, ನಾವು ನಮ್ಮ ಸುಖದುಃಖಗಳಿಗೆ ನಾವೇ ಪಾಲುದಾರರು. ಆತ್ಮ ವಿಶ್ವಾಸ, ಸಾಹಸ, ಧೈರ್ಯಗಳನ್ನು ನಮ್ಮದಾಗಿಸಿಕೊಳ್ಳೋಣ ಆಗ ಬದುಕು ಬಂಗಾರವಾಗುತ್ತದೆ.

ಮಾವು ನಾವು, ಬೇವು ನಾವು

ನೋವು ನಲಿವು ನಮ್ಮವು

ಹೂವು ನಾವು, ಹಸಿರು ನಾವು

ಬೇವು ಬೆಲ್ಲ ನಮ್ಮವು

ಯುಗಾದಿ ಹರುಷದ ದಿಬ್ಬವಾಗಿ, ಉತ್ಸಾಹದ ಕಾರಂಜಿಯಾಗಿ, ಸ್ಫೂರ್ತಿಯ ಸೆಲೆಯಾಗಿ, ಸಂತಸದ ನೆಲೆಯಾಗಿ ಯುಗದ ಆದಿಯಿಂದಲೂ ನಮ್ಮೆದುರು ನಿಂತಿದೆ ಇಂದು ಮಾತ್ರವಲ್ಲ. ಮುಂದೆಯೂ ಅದು ಹಾಗೆಯೇ ನಿಲ್ಲಬೇಕು.

ಬಸವ ಜಯಂತಿ

ಲಿಂಗಾಯತ ಧರ್ಮದಪ್ರಕಾರ ಪುರುಷನ ಹೃದಯ ಸ್ವರೂಪದ ಬಸವಣ್ಣನವರ ಜಯಂತಿಯು ಎಲ್ಲ ಲಿಂಗಾಯತರಿಗೆ ಸರ್ವಶ್ರೇಷ್ಠ ಹಬ್ಬ. ಅದು ಮನುಕುಲಕ್ಕೆ ಸ್ವಾತಂತ್ರ್ಯ ಸಾರುವ ಮಹಾಪುರುಷನಿಗೆ ಜನ್ಮವಿತ್ತಿದೆ. ಪ್ರತಿ ವರುಷ ವೈಶಾಖ ಶುದ್ಧ ಅಕ್ಷಯ ತೃತೀಯಾದಂದು ಈ ಹಬ್ಬವು ಬರುವುದು. ಅಂದು ಎಲ್ಲ ಲಿಂಗಾಯತರು ಮನೆಯಲ್ಲಿ ಕಡ್ಡಾಯವಾಗಿ ಸ್ನಾನ ಪೂಜಾದಿಗಳನ್ನು ಮಾಡಿ, ವಚನ ಶಾಸ್ತ್ರ ಪಾರಾಯಣ ಮಾಡಬೇಕು. ಸ್ಥಿತಿವಂತರು, ವ್ಯಾಪಾರಸ್ಥರು, ಅನುಕೂಲ ವಿದ್ಧವರು, ತಮ್ಮ ತಮ್ಮ ಯೋಗ್ಯತೆಗೆ ಅನುಸಾರವಾಗಿ ವಚನಗಳ ನೂರಾರು ಪ್ರತಿಗಳನ್ನು ಪ್ರಕಟಿಸಿ ಹಂಚಬೇಕು. ಸ್ತ್ರೀಯರು ತಮ್ಮ ಸ್ನೇಹಿತೆಯರನ್ನು ಮನೆಯಲ್ಲಿ ಆಹ್ವಾನಿಸಿ ತೆಂಗಿನಕಾಯಿ ಬಾಳೆಹಣ್ಣು ಇತ್ಯಾದಿ ವಸ್ತುಗಳನ್ನು ಕೊಡುವ ಬದಲಿಗೆ ವಚನಗಳ ಪ್ರತಿಗಳನ್ನು ಹಂಚಬೇಕು. ವ್ಯಾಪಾರಸ್ಥರು ತಮ್ಮ ಅಂಗಡಿಗಳಲ್ಲಿ ಬಸವಣ್ಣನವರ ದೊಡ್ಡ ಭಾವ ಚಿತ್ರವನ್ನು ಅಲಂಕರಿಸಿಟ್ಟು ಸಹೋದ್ಯೋಗಿಗಳಿಗೆ ಆಮಂತ್ರಣ ನೀಡಿ ವಚನಗ್ರಂಥಗಳನ್ನು ಹಂಚಬೇಕು. ಅಂದು ಅಂಗಡಿಯ ವ್ಯಾಪಾರವನ್ನು ನಿಲ್ಲಿಸಿ, ಬಡಬಗ್ಗರಿಗೆ ಕೈಲಾದಷ್ಟು ಸಹಾಯ ಮಾಡಿ, ವೈದ್ಯರು ಅಂದು ಉಚಿತ ಚಿಕಿತ್ಸೆಯನ್ನು ನೀಡಿ ಸೇವಾಭಾವವನ್ನು ಪ್ರಕಟಿಸಬೇಕು. ದೊಡ್ಡ ಪ್ರಮಾಣದಲ್ಲಿ ಬಸವ ಜಯಂತಿಯ ಮೆರವಣಿಗೆಗಳನ್ನು ಏರ್ಪಡಿಸಿ ಅದರಲ್ಲಿ ಭಾಗವಹಿಸಬೇಕು. ನಾನು ಶ್ರೀಮಂತ, ದೊಡ್ಡ ಅಧಿಕಾರಿ, ವಿದ್ಯಾವಂತ ಎಂಬ ಹಮ್ಮು ತಳೆಯದೆ ಕಿಂಕರನಾಗಿ ಭಾಗವಹಿಸಿ ಗುರು ಭಕ್ತಿಯನ್ನು, ಸಮಾಜ ಸಂಘಟನಾ ಪ್ರಜ್ಞೆಯನ್ನು ಪ್ರಕಟಿಸಬೇಕು.

ಸಂಡೂರಿನಲ್ಲಿ ಈ ಬಸವ ಜಯಂತಿಯ ಹಬ್ಬ ಅತ್ಯಂತ ವಿಶೇಷವಾಗಿ ನಡೆಯುತ್ತದೆ. ಸಂಡೂರಿನ ಮೇನ್ ಬಜಾರ್ ಕೆಳಗೆ ಪೇಟೆ ಬಸವಣ್ಣನ ದೇವಸ್ಥಾನ ವಿದೆ. ಆ ದೇವಸ್ಥಾನಕ್ಕೆ ಸುಣ್ಣ ಬಣ್ಣಗಳನ್ನು ಹಚ್ಚಿ ಅಲಂಕರಿಸುತ್ತಾರೆ. ಮಾವಿನ ತೋರಣಗಳನ್ನು ಕಟ್ಟುತ್ತಾರೆ. ಈ ದಿನ ಬಸವಣ್ಣನವರು ಜನಿಸಿದ ದಿನ. ಆದ್ದರಿಂದ ಊರಿನಲ್ಲಿ ಬಸವಣ್ಣನವರ ಭಾವ ಚಿತ್ರವನ್ನು ಊರಿನ ತುಂಬಾ ಮೆರವಣಿಗೆ ಮಾಡುತ್ತಾರೆ. ಅಲ್ಲದೆ ಎತ್ತುಗಳಿಗೆ ಆ ದಿನ ಚೆನ್ನಾಗಿ ಸ್ನಾನ ಮಾಡಿಸಿ ಕೋಡಿಗೆ ಬಣ್ಣ ಹಚ್ಚಿ, ಕುತ್ತಿಗೆಗೆ

ಗೆಜ್ಜೆಯನ್ನು ಕಟ್ಟುತ್ತಾರೆ. ಅಲ್ಲದೆ ಮೂಗುದಾರ ಕಟ್ಟುತ್ತಾರೆ. ಕೋಡಿಗೆ ಹೂವಿನ ಗೊಂಡೆವು ಕಟ್ಟುತ್ತಾರೆ. ಎತ್ತುಗಳ ಬೆನ್ನ ಮೇಲೆ ಶಾಲುಗಳನ್ನು ಹಾಕುತ್ತಾರೆ. ಹೀಗೆ ಎರಡು ಎತ್ತುಗಳಿಗೆ ಅಲಂಕರಿಸುತ್ತಾರೆ. ಪ್ರತಿಯೊಬ್ಬ ರೈತರು ತಮ್ಮ ಜೋಡಿ ಎತ್ತುಗಳಿಗೆ ಹೀಗೆ ಅಲಂಕಾರ ಮಾಡಿ ಊರಿನ ತುಂಬ ಮೆರವಣಿಗೆಯನ್ನು ಮಾಡುತ್ತಾರೆ.

ಮನೆಯಲ್ಲಿ ಆದಿನ ಸ್ತ್ರೀಯರು ಬೆಳಿಗ್ಗೆ ಬೇಗ ಎದ್ದು ಸ್ನಾನ ಮಾಡಿ ಮನೆಗೆ ಮಾವಿನ ತೋರಣಗಳನ್ನು ಕಟ್ಟಿ ದೇವರಿಗೆ ಹೂವಿನಿಂದ ಅಲಂಕಾರ ಮಾಡಿ ಪೂಜೆಮಾಡಿ ದೇವಸ್ಥಾನಕ್ಕೆ ಹೋಗಿ ಬರುತ್ತಾರೆ. ಆದಿನ ಜೋಳದ ಅಕ್ಕಿಯ ಅನ್ನವನ್ನು ಮಾಡಿ ಎತ್ತುಗಳಿಗೆ ತಿನ್ನಲು ಇಡುತ್ತಾರೆ. ಅಲ್ಲದೆ ಮನೆಯಲ್ಲಿ ಹೋಳಿಗೆ ಅಡಿಗೆ ಮಾಡಿ ಊಟಮಾಡುತ್ತಾರೆ. ಆದಿನ ಹೊಸ ವಸ್ತ್ರಗಳನ್ನು ಉಟ್ಟು ಅತ್ಯಂತ ಸಂಬ್ರಮದಿಂದ ಹಬ್ಬ ಆಚರಿಸುತ್ತಾರೆ. ವಿರಕ್ತ ಮಠದ ಸ್ವಾಮಿಗಳು ಆದ ಪ್ರಭುದೇವರು ಮೆರವಣಿಯಲ್ಲಿ ಪಾಲ್ಗೊಳ್ಳುತ್ತಾರೆ.

ಈ ಬಸವ ಜಯಂತಿಯು 'ರಾಜಸಿದ್ದಿಯ ಯೋಗ' ಎಂದು ಆದಿನ ಎಲ್ಲಾರೂ ವಡವೆ, ವಸ್ತ್ರಗಳನ್ನು ಪಡೆಯುತ್ತಾರೆ. ಅಲ್ಲದೆ. ಸಾಮೂಹಿಕ ವಿವಾಹ, ಗೃಹಪ್ರವೇಶ, ಹೀಗೆ ಹಲವು ಕಾರ್ಯಗಳನ್ನು ಆದಿನ ಮಾಡಿಕೊಳ್ಳುತ್ತಾರೆ.

ವಚನಗಳು

೦೧. ಕಳಬೇಡ, ಕೊಲಬೇಡ, ಹುಸಿಯ ನುಡಿಯಲಿಬೇಡ
ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ
ತನ್ನ ಬಣ್ಣಿಸಬೇಡ, ಇತರ ಹಳಿಯಲು ಬೇಡ
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲ ಸಂಗಮ ದೇವರ ಒಲಿಸುವ ಪರಿ!

೦೨. ಮೃತ್ಯು ಲೋಕವೆಂಬುದು ಕರ್ತಾರನ ಕಮ್ಮಟವಯ್ಯ
ಇಲ್ಲಿಸಲ್ಲುವವರು ಅಲ್ಲಿಯೂ ಸಲ್ಲುವರು
ಇಲ್ಲಿ ಸಲ್ಲದವರು ಅಲ್ಲಿಯೂ ಅಲ್ಲರಯ್ಯ
ಕೂಡಲ ಸಂಗಮ ದೇವಾ!

೦೩. ದಯವಿಲ್ಲದಾ ಧರ್ಮದಾವುದಯ್ಯಾ?

ದಯವಿರಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯೂ

ದಯವೇ ಧರ್ಮದ ಮೂಲವಯ್ಯ

ಕೂಡಲ ಸಂಗಯ್ಯ ನಂತಲ್ಲದೊಲ್ಲನಯ್ಯ.

೦೪. ಎಮ್ಮವರಿಗೆ ಸಾವಿಲ್ಲ, ಎಮ್ಮವರು ಸಾವರಿಯರು

ಸಾವೆಂಬುದು ಸ್ವಯವಲ್ಲ

ಲಿಂಗದಲ್ಲಿ ಉದಯವಾದ ಲಿಂಗೈಕ್ಯಂಗೆ

ಆಲಿಂಗದಲ್ಲಿಯಲ್ಲದೆ ಬೇರೆ ಮತ್ತೊಂದೆಡೆ ಯುಂಟೇ

ಕೂಡಲ ಸಂಗಮದೇವ!

ನಾಗರ ಪಂಚಮಿ

ದೇವರನ್ನು 'ಸರ್ವಭೂತಾಂತರಾತ್ಮಾ' ಎಂದು ತಿಳಿದವರು ಭಾರತೀಯರು. ಆದ್ದರಿಂದಲೇ ಅನೇಕ ಪ್ರಾಣಿವಿಶೇಷಗಳನ್ನೂ, ವೃಕ್ಷ ವಿಶೇಷಗಳನ್ನು ಕೆಲವು ದಿವ್ಯ ಶಕ್ತಿಗಳು ಸಂಕೇತವಾಗಿ ಭಾರತೀಯ ಸಂಸ್ಕೃತಿ ಮಾನ್ಯ ಮಾಡಿದೆ. ಆನೆಯ ಸೊಂಡಿಲ ಗಣಪತಿ, ಕುದುರೆಯ ಮುಖದ ಹಯಗ್ರೀವ, ಹಂದಿಯ ಮುಖದ ವರಾಹಾವತಾರಿ ವಿಷ್ಣು ಇವರೆಲ್ಲ ದೇವತಾಮೂರ್ತಿಗಳಾದರೆ ಹಂಸ, ಶೇಷ, ಆನೆ, ಮೀನು, ಆಮೆ, ಸಿಂಹ, ಇಲಿ, ನಂದಿ, ನವಿಲು ಮುಂತಾದ ಪ್ರಾಣಿಗಳು, ಹಂಸ, ಗರುಡ ಮೊದಲಾದ ಹಕ್ಕಿಗಳು ದೇವತಾ ಸಾನ್ನಿಧ್ಯದಲ್ಲಿ ಸೇವೆ ಸಲ್ಲಿಸುತ್ತಿವೆ. ಆಮೆಗಳು ಈಜಿಪ್ಟ್‌ನಲ್ಲಿ ಪವಿತ್ರತೆಯ ಸಂಕೇತ, ಜಪಾನ್ ದೇಶದಲ್ಲಿ ಮೀನು ವೃದ್ಧಿಯ ಪ್ರತೀಕ, ರೆಕ್ಕೆಗಳುಳ್ಳ ಸರ್ಪ ಚೀನಾದಲ್ಲಿ ಸಮೃದ್ಧಿಯ ಸೂಚಕ, ಈಜಿಪ್ಟ್‌ನಲ್ಲಿ ಹಾವು ಅಮೃತತ್ವದ ಸಾಧಕ.

ಭಾರತದಲ್ಲಿ ನಾಗಾರಾಧನೆ ಅರ್ಷೇಯವಾಗಿ ಬೆಳೆದುಬಂದಿದೆ. ವೇದ, ಪುರಾಣ, ಮಹಾಕಾವ್ಯ, ಕಾವ್ಯ, ಜನಪದ ಸಾಹಿತ್ಯ-ಇಲ್ಲೆಲ್ಲ ನಾಗನಿಗೆ ಸಂಬಂಧಿಸಿದ ಹಲವಾರು ಉಲ್ಲೇಖಗಳಿವೆ. ಋಗ್ವೇದದ ಸರ್ಪಸೂಕ್ತದಲ್ಲಿ ನಾಗನ ವರ್ಣನೆ ಇದೆ. ಇಂದ್ರನು ನಾಗಗಳನ್ನು ಧ್ವಂಸ ಮಾಡಿದನೆಂಬ ಉಲ್ಲೇಖವೂ ಇಲ್ಲಿದೆ. ಹರಪ್ಪ ಸಂಸ್ಕೃತಿಯಲ್ಲಿ ನಾಗಾರಾಧನೆಗೆ ತುಂಬ ಮಹತ್ವ ನೀಡಲಾಗಿದೆ. ಜೈನ, ಬೌದ್ಧ,

ಶೈವ, ವೈಷ್ಣವ, ಸೌರ, ಶಾಕ್ತ, ಮುಂತಾದ ಮತಗಳಲ್ಲಿಯೂ ನಾಗನಿಗೆ ಪ್ರಾಧಾನ್ಯವಿದೆ. ಪಾರ್ಶ್ವನಾಥ ತೀರ್ಥಂಕರ ತಲೆಯ ಮೇಲ್ಭಾಗದಲ್ಲಿ ನಾಗನ ಹೆಡೆಯ ಲಾಂಛನವಿದೆ.

ನಾಗನು ವಿಷ್ಣುವಿಗೆ ಹಾಸಿಗೆ, ಶಿವನಿಗೆ ಕಂಠಾಭರಣ, ಗಣಪತಿಗೆ ಹೊಟ್ಟೆಯ ಪಟ್ಟಿ, ಕುಂಡಲಿನೀ ಶಕ್ತಿಯ ಪ್ರತೀಕವಾಗಿ, ತ್ರಿಪುರ ಸಂಹಾರ ಕಾಲದಲ್ಲಿ ಮೇರುವೆಂಬ ಬಿಲ್ಲಿನ ಎದೆಯಾಗಿ, ಸಮುದ್ರ ಮಂಥನ ಕಾಲದಲ್ಲಿ ಮಂದರ ಪರ್ವತವೆಂಬ ಕಡಗೋಲಿಗೆ ಹಗ್ಗವಾಗಿ, ದುರ್ಯೋಧನನ ಧ್ವಜ ಚಿಹ್ನೆಯಾಗಿ, ಭೂಮಿಯನ್ನು ಹೊತ್ತ ಆಧಿಶೇಷನಾಗಿ, ಪಾರ್ಶ್ವನಾಥ ತೀರ್ಥಂಕರನ ಶಿರೋಲಾಂಛನವಾಗಿ, ಲಕ್ಷ್ಮಣ, ಬಲರಾಮ, ಸುಬ್ರಹ್ಮಣ್ಯ, ಸ್ವಾಮಿಯ ಅನನ್ಯ ಸ್ವರೂಪವಾಗಿರುವ 'ನಾಗ' ಅಸಾಧಾರಣ ಶಕ್ತಿಶಾಲಿಯಾದ ಆದಿಶೇಷ.

ಆಚರಣೆಯ ಉದ್ದೇಶ

ಅನನ್ಯ ಸ್ವರೂಪವಾಗಿರುವ 'ನಾಗ' ಭಾರತೀಯರಿಗೆಲ್ಲ ಪೂಜಾರ್ಹವಾಗಿದೆ. ಇಷ್ಟಾರ್ಥ ಸಿದ್ಧಿಗಾಗಿ, ಪುತ್ರ ಪ್ರಾಪ್ತಿಗಾಗಿ ಪ್ರಾರ್ಥಿಸುವ 'ನಾಗ' ಸತ್ತರೆ ವೈದಿಕ ರೀತಿಯಲ್ಲಿ ಉತ್ತರ ಕ್ರಿಯೆ ನಡೆಸುವರು. ಪ್ರಾಚೀನ ಕಾಲದಲ್ಲಿ ಹಾವಿನ ಭಯಂಕರ ವಿಷವನ್ನು ಸ್ಮರಿಸಿ ಅವುಗಳ ಬಾಧೆ ಬರದಿರಲೆಂಬ ಉದ್ದೇಶದಿಂದ ಈ ಹಬ್ಬ ಆಚರಣೆಗೆ ಬಂದಿತೆಂದು ಊಹಿಸಬಹುದು. ಎಲ್ಲೆಲ್ಲೂ ಹಸಿರು ತುಂಬಿ ಕಂಗೊಳಿಸುವ ಮಳೆಗಾಲದಲ್ಲಿ ಬರುವ ಶ್ರಾವಣ ಮಾಸದಲ್ಲಿ ಹಾವುಗಳ ಕಾಟ ಸ್ವಲ್ಪ ಹೆಚ್ಚು. ಈ ವಿಷಜಂತುಗಳ ಬಾಧೆ ನಮಗೆ ತಟ್ಟದಿರಲಿ ಎಂಬ ಉದ್ದೇಶ ಪೂಜಾ ರೂಪದಲ್ಲಿ ಪರಿಣಮಿಸಿರಬಹುದು.

ಶ್ರಾವಣ ಶುದ್ಧ ಪಂಚಮಿಗೆ ನಾಗಪಂಚಮಿ ಎಂದು ಹೆಸರು. ಅಂದು ಭಯ ಭಕ್ತಿಯಿಂದ ನಾಗಾರಾಧನೆ ಮಾಡುವವರಿಗೆ ಸರ್ಪಭಯವಿಲ್ಲ. ನಾಗಪಂಚಮಿ ಹೆಚ್ಚಾಗಿ ಹೆಣ್ಣು ಮಕ್ಕಳ ಹಬ್ಬ. ಅದು ಅವರಿಗೆ ಮಾಂಗಲ್ಯಪ್ರದ ಎಂದು, ಸಂತಾನ ಪ್ರದ ಎಂದೂ ನಂಬಿಕೆ.

ಶ್ರಾವಣ ಮಾಸದಲ್ಲಿ ಬರುವ ಈ ನಾಗರ ಪಂಚಮಿಯ ಹಬ್ಬ ಎರಡು ದಿನ ನೆಡೆಯುತ್ತದೆ. ಮೊದಲಿಗೆ ನಾಗ ಅಮವಾಸ್ಸೆ ಬರುತ್ತದೆ. ನಂತರ ನಾಗ ಚೌತಿ ಮತ್ತು ನಾಗಪಂಚಮಿ ಎಂದು ಎರಡು ದಿನ ಹಬ್ಬ ಆಚರಿಸುತ್ತಾರೆ. ನಾಗ ಚೌತಿ ಎಂದರೆ ದೊಡ್ಡ ನಾಗಪ್ಪನ ಪೂಜೆ, ನಾಗ ಪಂಚಮಿ ಎಂದರೆ ಮರಿ ನಾಗಪ್ಪನ ಪೂಜೆಯನ್ನು ಮಾಡುವ ದಿನಗಳು. ಈ ಹಬ್ಬದ ದಿನ ಗೋಮಯದಿಂದ ಬಾಗಿಲು ಸಾರಿಸಿ, ಚಿತ್ರಗಳನ್ನು ಬರೆದು ನೇಮದಿಂದ ನಾಗನನ್ನು ಪೂಜಿಸುತ್ತಾರೆ. ಈ ನಾಗಪಂಚಮಿಯ ಆಚರಣೆಗಾಗಿ ಹೆಣ್ಣು ಮಕ್ಕಳು ಗಂಡನ ಮನೆಯಿಂದ ತೌರು ಮನೆಗೆ ಬರುತ್ತಾರೆ. ಹಬ್ಬಕ್ಕೆ ನಾಲ್ಕು ದಿನ ಇರುವಾಗಲೆ

ನಾಗಪ್ಪಂದು, ನಂದು, ಎಂದು ಹೇಳಿಕೊಂಡು ಹಾಲು ಎರೆಯುತ್ತಾರೆ. ಇದಕ್ಕೆ ಐದು ಉಡಿಗಳನ್ನು ಇಡುತ್ತಾರೆ. ಉಡಿಯ ಸಾಮಾಗ್ರಿಗಳು ಹೀಗಿವೆ ಎಲೆ, ಅಡಿಕೆ, ಚಿಗಳಿ, ತಂಬಿಟ್ಟು, ಕಡ್ಲೆಕಾಳು, ಜೋಳದ ಹರಳು, ಸಜ್ಜೆ, ಇವೆಲ್ಲವನ್ನು ವೀಳೆದೆಲೆಯಲ್ಲಿ ಜೋಡಿಸಿ ಐದು ಉಡಿ ತಯಾರಿಸುತ್ತಾರೆ. ಒಂದನ್ನು ನಾಗಪ್ಪನಲ್ಲಿ ಇಡುತ್ತಾರೆ. ಉಳಿದ ನಾಲ್ಕು ಉಡಿಗಳನ್ನು ಮುತ್ತೈದೆಯರಿಗೆ ಕೊಡುತ್ತಾರೆ. ಕಾಯಿ, ಬಾಳೆ ಹಣ್ಣು, ನೈವೇದ್ಯ ಮಾಡುತ್ತಾರೆ.

ಮನೆಯಲ್ಲಿ ಈ ರೀತಿ ಪೂಜೆ ಮಾಡಿ ನಂತರ ಬಾವಿ ಹತ್ತಿರ ಇರುವ ನಾಗಪ್ಪನ ಕಲ್ಲಿಗೆ ಇಲ್ಲವೆ ಹುತ್ತಕೆ ಹೋಗಿ ಹಾಲು ಎರೆದು ಬರುತ್ತಾರೆ. ಒಂದು ತಟ್ಟೆಯಲ್ಲಿ ಉಡಿಯನ್ನು, ಹಾಲು ತುಪ್ಪ, ನೀರು, ಊದಿನಕಡ್ಡಿ, ಕರ್ಪೂರ, ಅಕ್ಷತೆಯನ್ನು ಹಾಗೂ ಕುಂಕುಮ, ಅರಿಶಿಣ ಇವೆಲ್ಲವನ್ನು ಇಟ್ಟುಕೊಂಡು ಹೋಗುತ್ತಾರೆ. ಮೊದಲಿಗೆ ನೀರನ್ನು ಮೂರುಸಲ, ನಂತರ ಹಾಲನ್ನು ಮೂರು ಸಲ ಹಾಕುವಾಗ ನಾಗಪ್ಪಂದು, ನಂದು, ದೇವರದು ಎಂದು ಹೇಳುತ್ತಾರೆ. ನಂತರ ಪೂಜೆಯನ್ನು ಮಾಡಿ ಬಾಳೆಹಣ್ಣನ್ನು ನೈವೇದ್ಯ ಮಾಡಿಕೊಂಡು ಬರುತ್ತಾರೆ.

ಎರಡನೇಯ ದಿನ ನಾಗರ ಪಂಚಮಿ

ಈ ದಿನ ಎಲ್ಲರೂ ತಲೆಸ್ನಾನ ಮಾಡಿ ಈ ದಿನ ಸಹ ಹಾಲು ತುಪ್ಪವನ್ನು ಎರೆಯುತ್ತಾರೆ. ಈ ದಿನ ಎಡೆಗೆ ಹಬೆಯಲ್ಲಿ ಬೇಯಿಸಿದ ಕರಿಗೆಡಬು ಸಿಹಿ ಕಡುಬು ಮಾಡುತ್ತಾರೆ. ಮತ್ತು ಕಡ್ಲೆಬೇಳೆ, ತೊಗರಿಬೇಳೆ, ಹೆಸರು ಬೇಳೆ, ಉದ್ದಿನ ಬೇಳೆ, ಇವೆಲ್ಲವನ್ನು ನೆನೆಸಿ ಕಾರದ ಕಡುಬನ್ನು ಮಾಡಿ ನೈವೇದ್ಯ ಮಾಡುತ್ತಾರೆ. ಈ ನಾಗಪಂಚಮಿಯ ದಿನ ಮರಿ ನಾಗಪ್ಪನನ್ನು ಇಡುತ್ತಾರೆ.

ಈ ಹಬ್ಬ ನಾಡಿಗೆ ದೊಡ್ಡದು. ನಾಗರ ಪಂಚಮಿ ಎಂದು ಅಕ್ಕ, ತಂಗಿಯರನ್ನು ಮನೆ ಮಗಳು ಎಂದು ಕರೆಸಿ ಅವರಿಗೂ ಮತ್ತು ಅಳಿಯನಿಗೂ ಉಡುಗೊರೆಯನ್ನು ಕೊಟ್ಟು ಸಂಭ್ರಮದಿಂದ ಆಚರಿಸುತ್ತಾರೆ. ಈ ಹಬ್ಬ ಮುಗಿದ ಕೂಡಲೇ ಮನೆಯಲ್ಲಿ ಇಟ್ಟಿದ್ದ ನಾಗಪ್ಪನನ್ನು ಅವರು ಬಾವಿಗೆ ಬಿಟ್ಟು ಬರುತ್ತಾರೆ.

ಶ್ರಾವಣಮಾಸದ ಹಬ್ಬಗಳು

ಶ್ರಾವಣ ಮಾಸದಲ್ಲಿ ನಾಲ್ಕು ಮಂಗಳವಾರ ಮಂಗಳ ಗೌರಿ ಪೂಜೆಯನ್ನು ಆಚರಿಸುತ್ತಾರೆ.

ಸೂತಪುರಾಣಿಕ ಶೌನಕಾದಿಗಳಿಗೆ ಈ ಕಥೆಯನ್ನು ಹೇಳುತ್ತಾರೆ.

ಭಕ್ತವತ್ಸಲನಾದ ಶ್ರೀ ಕೃಷ್ಣನು ವನವಾಸದಲ್ಲಿ ಬಳಲುತ್ತಿರುವ ಪಾಂಡವರನ್ನು ಕಾಣಬೇಕೆಂದು ಕಾಡಿಗೆ ಬಂದಾಗ ಭಕ್ತಿನಮ್ರರಾದ ಪಾಂಡವರು ಪಾಂಚಾಲಿಯೊಡನೆ ಅವನ ಪಾದರವಿಂದಗಳಿಗೆ ವಂದಿಸಿ ತಮಗೆ ಪ್ರಾಪ್ತವಾದ ಕಷ್ಟವನ್ನು ನಿವೇದಿಸಿದರು.

ಪಾಂಚಾಲಿಯು ಭಗವಂತನ ಮುಂದೆ ನಿಂತು ಪ್ರಪಂಚ ಪಾಲಕನೆ ಮಾನವನ ಜೀವನದಲ್ಲಿ ಮಾಡಿದ ಕರ್ಮದಿಂದ ಪ್ರಾಪ್ತವಾದ ದುಃಖವನ್ನು ದೂರಮಾಡುವ ಯಾವುದಾದರೊಂದು ಸುಲಭವಾದ ಉಪಾಯವಿರುವದೇ? ವ್ರತವಿರುವುದೇ? ಯಾವ ಗಣ್ಯ ಪುಣ್ಯ ಕರ್ಮಾಚರಣದಿಂದ ಕಳೆದುಹೋದ ರಾಜ್ಯಸಂಪತ್ತು ತಿರುಗಿ ನಮಗೆ ದೊರೆಯುವುದು? ಅಂಥ ಯಾವುದಾದರೊಂದು ಮಾರ್ಗವಿದ್ದರೆ ಅದನ್ನು ನಮಗೆ ತಿಳಿಸಿ ನಮ್ಮನ್ನು ಕಾಪಾಡಬೇಕೆಂದು ಬೇಡಲಾಗಿ, ದ್ರೌಪದಿಯ ಭಕ್ತಿಗೆ ಶ್ರೀಹರಿಯ ಎದೆ ಕರಗಿ ದ್ರೌಪದೀ ಸಂಸಾರ ದುಃಖವನ್ನು ದೂರಮಾಡಿ ಇಷ್ಟಾರ್ಥವನ್ನು ಪೂರ್ಣ ಮಾಡುವ ಒಂದು ಮಹಾವ್ರತವಿದೆ.

ಈ ವ್ರತವನ್ನು ಯಾವ ಸ್ತ್ರೀಯರು ಆಚರಿಸುವರೋ ಅವರು, ಸಂಸಾರದಲ್ಲಿ ಎಲ್ಲ ಭೋಗ, ಭಾಗ್ಯಗಳನ್ನು ಪಡೆಯುವರು, ಸಂತಾನವಿಲ್ಲದವರು ಮಕ್ಕಳನ್ನು ಪಡೆಯುವರು, ಬಡವರು ಬಡತನವನ್ನು ದೂರಮಾಡಿಕೊಳ್ಳುವರು ಧನಧಾನ್ಯ ಸಮೃದ್ಧಿಯಿಂದ ನಿತ್ಯ ಸುಖಿಗಳಾಗುವರು, ಆ ವ್ರತವು ಭೂಲೋಕ ಕಲ್ಪತರುವಾಗಿದೆ. ಪೂರ್ವಕಾಲದಲ್ಲಿ ಸ್ತ್ರೀಯರು ಆ ವ್ರತವನ್ನು ಆಚರಿಸಿ, ತಮ್ಮ ಇಚ್ಛೆಯನ್ನು ಪೂರ್ಣಮಾಡಿಕೊಂಡರು, ಆ ವ್ರತವು ಯಾವುದೆಂದರೆ ''ಶ್ರೀಮಂಗಳಗೌರೀ ವ್ರತ''ವು, ಇದನ್ನು ಕೇಳಿ ದ್ರೌಪದಿಯ ಈ ವ್ರತವನ್ನು ಮಾಡುವುದು ಹೇಗೆ? ಪೂರ್ವದಲ್ಲಿ ಅದನ್ನು ಯಾರು ಮಾಡಿದರು? ಅದರ ನಿಯಮಗಳೇನು? ಎಲ್ಲವನ್ನು ಸರಿಯಾಗಿ ಹೇಳಿ ಎಂದಳು. ಕೃಷ್ಣನು ದ್ರೌಪದಿ ಈ ವ್ರತವನ್ನು ಶ್ರಾವಣಮಾಸ ಮಂಗಳವಾರದಲ್ಲಿ ಆಚರಿಸಬೇಕು. ಈ ವ್ರತಾಚರಣೆಯ ದಿನದಲ್ಲಿ ತಿಥಿ, ನಕ್ಷತ್ರ, ಗುರು-ಶುಕ್ರ ಅಸ್ತ ಕಾಲ ದೋಷವನ್ನು ನೋಡಕೂಡದು, ಕುಮಾರಿಯರು ಲಗ್ನವಾದ ಮೊದಲನೆಯ ವರ್ಷದಲ್ಲಿ ಈ ವ್ರತವನ್ನು ಮಾಡಬೇಕು, ದೀರ್ಘ ಸುಮಂಗಲೆಯಾಗುವರು.

ಈ ವ್ರತಕ್ಕೆ ಒಂದು ಪ್ರಾಚೀನವಾದ ಕಥೆಯಿದೆ.

ಶ್ರೀಕೃಷ್ಣನು ದ್ರೌಪದಿಗೆ ಈ ಕಥೆಯನ್ನು ಹೇಳುತ್ತಾನೆ. ದ್ರುಪದಜೌ ಕೃತಯುಗದಲ್ಲಿ ಸದ್ಗುಣಿಯೂ ಆದ ದೀಪ್ತಿ ಮಂತನೆಂಬ ರಾಜನು ಆಳುತ್ತಿದ್ದನು. ಅವನು ವಿದರ್ಭದೇಶಕ್ಕೆ ಒಡೆಯನಾಗಿದ್ದನು. ಅವನ ಪತ್ನಿಯಾದ ಸುವಿಂದಾದೇವಿ ಸುಖ ಸಂಸಾರದಲ್ಲಿ ಕಾಲ ಕಳೆಯುತ್ತಿದ್ದಳು. ಇವಳಿಗೆ ಮಕ್ಕಳಿಲ್ಲದ ಕೊರತೆ ಕಾಡುತ್ತಿತ್ತು.

ಶಿವನು ಅವಳ ಭಕ್ತಿ ಪರೀಕ್ಷೆಗಾಗಿ ಭಿಕ್ಷುಕನ ವೇಷಧರಿಸಿ ಬಿಕ್ಷೆ ಬೇಡಲು ಬಂದನು, ಅವಳು ದ್ರವ್ಯವನ್ನು ಭಿಕ್ಷೆ ನೀಡಲು ಬಂದಳು, ಆ ಭಿಕ್ಷುಕ ಸ್ವೀಕರಿಸದೇ ಹಾಗೆಯೇ ಹೋದನು. ನಾನೆಂಥಾ ಪಾಪಿ ನನ್ನ ಕೈಯಿಂದ ಆ ಮಹಾತ್ಮನು ಭಿಕ್ಷೆಯನ್ನು ತೆಗೆದುಕೊಳ್ಳದೆ ಹಾಗೇ ಹೋಗಲು ಕಾರಣವೇನು? ಎಂದು ಚಿಂತಿಸುತ್ತಾ ಭಿಕ್ಷೆಗೆ ತಂದಿದ್ದ ದುಡ್ಡನ್ನು ಒಳಗೆ ತೆಗೆದುಕೊಂಡು ಹೋಗದೆ ಬಾಗಿಲ ಮುಂದೆಯೇ ಚೆಲ್ಲಿ ಒಳಗೆ ಹೋದಳು, ಇದೇ ರೀತಿ ಪ್ರತಿದಿನ ನಡೆಯುತ್ತಿತ್ತು. ಹೊರಗೆ ಚೆಲ್ಲಿದ ಹಣ ರಾಶಿಯಾಗಿ ಬಿದ್ದಿತು. ಅವಳ ಪತಿ ಅಲ್ಲಿಗೆ ಬಂದು ರಾಶಿಯಾಗಿ ಬಿದ್ದಿರುವ ದುಡ್ಡನ್ನು ನೋಡಿ ಇದೇನೆಂದು ತನ್ನ ಸತಿಯನ್ನು ಕೇಳಿದನು. ಆಗ ಅವಳು ಪ್ರತಿದಿನ ನಡೆಯುತ್ತಿರುವ ಸಮಾಚಾರ ಹೇಳಿದಳು. ನೀನು ವ್ಯರ್ಥವಾಗಿ ಹಣ ಚೆಲ್ಲುವುದು ಸರಿಯೇ ಎಂದನು. ಭಿಕ್ಷುಕನಿಗೆ ಏಕೆ ಹಣ ತೆಗೆದುಕೊಳ್ಳುತ್ತಿಲ್ಲ ಎಂದು ಕೇಳುವುದಲ್ಲವೆ ಎಂದನು. ಅವಳು ನಾನು ಕೇಳುವಷ್ಟರಲ್ಲಿ ಆ ಸ್ಥಳದಲ್ಲಿ ಅವನು ನಿಲ್ಲುತ್ತಿರಲಿಲ್ಲ ಎಂದಳು, ದಾನಕ್ಕಾಗಿ ತಂದ ದುಡ್ಡನ್ನು ತಿರುಗಿ ತೆಗೆದುಕೊಂಡು ಒಳಗೆ ಒಯ್ದರೆ ದತ್ತಾಪಹಾರವಾದಿತೆಂಬ ಭಯದಿಂದ ಕೊಡುವುದಕ್ಕಾಗಿ ತಂದ ಹಣ ನಮ್ಮದಲ್ಲವೆಂಬ ಭಾವದಿಂದ ಅದನ್ನು ನಾನು ಹೊರಗೆ ಬಾಗಿಲಲ್ಲೆ ಚೆಲ್ಲುತ್ತಿರುವೆನೆಂದು ಹೇಳಿದಳು. ಭಿಕ್ಷುಕನು ಮತ್ತೆ ಭಿಕ್ಷೆಯನ್ನು ಬೇಡಲು ಬಂದಾಗ, ರಾಜ ಆ ಭಿಕ್ಷುಕನಿಗೆ ನೀನು ದಿನಾಲು ನಮ್ಮ ಮನೆಗೆ ಬಂದು ನನ್ನ ಪತ್ನಿಯ ಕೈಯಿಂದ ಭಿಕ್ಷೆಯನ್ನೇಕೆ ಸ್ವೀಕರಿಸುವುದಿಲ್ಲ ಕಾರಣವೇನು? ಎಂದು ಕೇಳಿದನು, ಭಿಕ್ಷುಕನು ರಾಜನೇ, ಬಂಜೆಯ ಕೈಯಿಂದ ನಾನು ಭಿಕ್ಷೆಯನ್ನು ಸ್ವೀಕರಿಸುವುದಿಲ್ಲವೆನ್ನಲಾಗಿ, ರಾಜನು ಮಕ್ಕಳಾಗುವ ಮಾರ್ಗವನ್ನು ತೋರಿಸಿ, ಯಾವ ಸತ್ಕರ್ಮ ಮಾಡುವುದರಿಂದ ಸಂತಾನ ಪ್ರಾಪ್ತಿಯಾಗುವದೆಂಬ ಸಾಧನವನ್ನು ನಮಗೆ ತಿಳಿಸಿ ಎಂದನು. ರಾಜನೇ ನಿನ್ನ ಪಟ್ಟಣದ ಪೂರ್ವದಿಗ್ಭಾಗದಲ್ಲಿ ಒಂದು ಗಣಪತಿಯ ದೇವಾಲಯವಿದೆ, ಅಲ್ಲಿ ಒಂದು ಫಲಭರಿತವಾದ ಮಾವಿನ ಮರವಿದೆ ಆ ಮರದಲ್ಲಿರುವ ಒಂದು ಹಣ್ಣು ತೆಗೆದುಕೊಂಡು ಹೋಗಿ ನಿನ್ನ ಪತ್ನಿಯ ಕೈಯಲ್ಲಿಕೊಡು, ಅವಳು ಅದನ್ನು ಸೇವಿಸಿ ಸಂತಾನ ಪಡೆಯುವಳು ಎಂದು ಹೇಳಿ ಅದೃಶ್ಯನಾಗಿ ಹೋದನು.

ಕೂಡಲೇ ಆ ಸ್ಥಳಕ್ಕೆ ರಾಜ ಹೋದನು, ಮಾವಿನ ಮರವು ಫಲಗಳಿಂದ ತುಂಬಿರುವುದನ್ನು ನೋಡಿ ಕೂಡಲೆ ಮರವನ್ನು ಏರಿ ನೂರಾರು ಹಣ್ಣುಗಳನ್ನು ನೆಲಕ್ಕೆ ಕೆಡುಹಲಾಗಿ ಎಲ್ಲ ಹಣ್ಣುಗಳು ಮಾಯವಾಗಿ ಒಂದೇ ಉಳಿದಿತ್ತು. ಇದರಂತೆ ಎಷ್ಟೋ ಸಾರಿ ಹಣ್ಣುಗಳನ್ನು ಕೆಳಗೆ ಕೆಡಹಿದರೂ ಕೊನೆಗೆ ಒಂದೇ ಉಳಿಯುತ್ತಿರುವುದನ್ನು ನೋಡಿ ಬೇಸತ್ತು ಬೆರಗಾಗಿ ನಿಂತಿರಲು, ಗುಡಿಯ ಒಳಗಿನಿಂದ ವಿಘ್ನೇಶ್ವರನು ಮಾತಾಡುತ್ತಿರುವ ಶಬ್ದಗಳು ರಾಜನ ಕಿವಿಗೆ ತಾಕಿದವು ಏಕೆ ಅಶಾಗ್ರಸ್ತನಾಗಿ ನಿನಗೆ

ಸಲ್ಲದ ಫಲಗಳನ್ನು ಭೂಮಿಗೆ ಕೆಡಹಿ ಫಲಗಳನ್ನು ಹಾಳುಮಾಡುವೆ? ಈ ಗಿಡದಿಂದ ನಿನಗೆ ಒಂದೇ ಫಲ ಸಲ್ಲುವುದು, ನಿನಗೆ ಒಂದೇ ಒಂದು ಸಂತಾನವಾಗುವುದು. ಶಿವನು ನಿನಗೆ ಹಾಗೆ ವರಪ್ರದಾನ ಮಾಡಿದ್ದಾನೆ. ಹೇಳು ನಿನಗೆ ಚಿರಾಯುಷ್ಯ ಉಳ್ಳವನಾಗಿ ವಿಧವೆಯಾಗುವ ಹೆಣ್ಣು ಮಗಳು ಬೇಕೋ? ಅಥವಾ ಬುದ್ಧಿ ಶಾಲಿಯಾಗಿ ಹದಿನಾರು ವರ್ಷ ಬಾಳುವ ಅಲ್ಪಾಯುಷ್ಯವುಳ್ಳ ಮಗನು ಬೇಕೋ ಹೇಳೆನ್ನಲಾಗಿ, ರಾಜನು ಚಿಂತಿಸಿ ದೇವನೆ ವಿಧವೆಯಾದ ಮಗಳು ಎಷ್ಟು ದಿವಸ ಬಾಳಿದರೇನು? ಬುದ್ಧಿಶಾಲಿ ಮಗನು ಅಲ್ಪಾಯುಷ್ಯವುಳ್ಳವನಾದರೂ ಚಿಂತೆಯಿಲ್ಲ. ಅಂಥ ಮಗನನ್ನೇ ದಯಪಾಲಿಸೆಂದು ಬೇಡಲಾಗಿ ವಿನಾಯಕನು ''ತಥಾಸ್ತು'' ಎಂದು ವರ ನೀಡಿದನು. ಆಗ ರಾಜನು ಮಾವಿನ ಹಣ್ಣಿನ ಸಮಾಚಾರವನ್ನು ಪತ್ನಿಗೆ ತಿಳಿಸಿ ಕೊಟ್ಟನು ಒಂದು ಗಂಡು ಕೂಸನ್ನು ಹಡೆದಳು. ಆ ಕೂಸಿಗೆ 'ಸುಬುದ್ದಿ' ಎಂದು ಹೆಸರಿಟ್ಟರು. ಆ ಮಗು ದಿನೆ ದಿನೆ ಬೆಳೆಯುತ್ತಾ ವರ್ಷ ವರ್ಷಗಳಲ್ಲಿಯೂ ಬೆಳೆಯುತ್ತಾ ೧೬ ವರ್ಷಗಳು ತುಂಬುವದಕ್ಕೆ ಒಂದು ವರ್ಷ ಮಾತ್ರ ಉಳಿಯಿತು. ಈ ವರ್ಷದ ಕೊನೆಯೇ ನನ್ನ ಮಗನ ಆಯುಷ್ಯದ ಕೊನೆ ಎಂದು ರಾಜ ಚಿಂತಿಸಿದನು.

ಇದೇ ವೇಳೆಗೆ ಸೋದರಮಾವನು ಅಳಿಯನನ್ನು ನೋಡಲು ಬಂದನು. ಅವನಿಗೆ ತಮ್ಮ ಮಗನ ಸಮಾಚಾರ ಹೇಳಿ ನಮ್ಮ ಕಣ್ಣು ಮುಂದೆ ಸತ್ತರೆ ಅದನ್ನು ನೋಡಿ ನಾವು ಸಹಿಸಲಾರೆವು, ನಿಮ್ಮ ಪಟ್ಟಣಕ್ಕೆ ಕರೆದುಕೊಂಡು ಹೋಗು ಎಂದು ಹೇಳಿದರು. ಸುಬುದ್ದಿ ತಾನಾಗಿ ಸೋದರ ಮಾವನ ಬಳಿಗೆ ಬಂದು ಮಾವಾ ನಡೆ ಕಾಶಿ ಕ್ಷೇತ್ರಕ್ಕೆ ಹೋಗೋಣ ಎಂದು ಹೊರಡಿಸಿದನು.

ಕಾಶಿಗೆ ಅವರಿಬ್ಬರೂ ಪ್ರಯಾಣ ಮಾಡುತ್ತಿರುವಾಗ ದಾರಿ ಮಧ್ಯದಲ್ಲಿ ಒಂದು ಪಟ್ಟಣದ ಹೊರಭಾಗದಲ್ಲಿ ಸುಂದರ ಬನವನ್ನು ಕಂಡು ಅಲ್ಲಿಯ ಫಲಗಳನ್ನು ಬಳಿಸಿ ತಮ್ಮ ಹಸಿವೆಯನ್ನು ಪರಿಹರಿಸಿಕೊಳ್ಳುವುದಕ್ಕೆ ಅಡಿಗೆಗಾರಂಭಿಸಿದರು. ಆ ಸಮಯದಲ್ಲಿ ಆ ಪಟ್ಟಣದ ಅರಸನ ಮಗಳು ತಾನು ಮಾಡುತ್ತಿರುವ ಶ್ರೀ ಮಂಗಳಗೌರೀ ವ್ರತ ಪೂಜೆಗಾಗಿ ಫಲಪುಷ್ಪ ಸಂಗ್ರಹಿಸಲೆಂದು ತನ್ನ ಓರಿಗೆಯ ಕನ್ಯೆಯರೊಡನೆ ಆ ಬನಕ್ಕೆ ಬಂದು, ಅಲ್ಲಿ ಅಡಿಗೆ ಮಾಡುತ್ತಿರುವ ರಾಜ ಕುಮಾರನನ್ನು ನೋಡುತ್ತ ಅಲ್ಲಿಯೇ ಸಮೀಪದಲ್ಲಿದ್ದ ಒಂದು ಬಳ್ಳಿಯನ್ನು ಬಗ್ಗಿಸಿ ಹೂವು ಕೊಯ್ಯುತ್ತಿರುವಾಗ, ಮತ್ತೊಬ್ಬಳು ಅವಳು ಕೊಯ್ಯುತ್ತಿರುವ ಕೊಲ್ಲೆಯನ್ನು ಜಗ್ಗಿದಳು ಅದಕ್ಕಾಗಿ ಅವರಿಬ್ಬರಲ್ಲಿ ಕಲಹವುಂಟಾಯಿತು. ಆಗ ಅವಳು ರಾಜ ಪುತ್ರಿಯ ಮೇಲೆ ಸಿಟ್ಟಿಗೆದ್ದು ರಂಡೆಯಾಗೆಂದು ಶಪಿಸಿದಳು ಅವಳು ಶಪಿಸಿದ್ದನ್ನು ಕೇಳಿ ರಾಜಪುತ್ರಿಯು ಎಲೇ ವಿವೇಕವಿಲ್ಲವಳೇ ನಿನ್ನ ಶಾಪದಿಂದೇನಾಗಬೇಕಾಗಿದೆ ಈ ಜಗತ್ತಿನಲ್ಲಿ ಭಕ್ತಿಯಿಂದ ಶ್ರೀ ಮಂಗಳಗೌರೀ ವ್ರತವನ್ನು ಮಾಡತಕ್ಕ ಸ್ತ್ರೀಯರೆಂದೂ ವಿಧವೆಯರಾಗಲು ಆ ವ್ರತ

ಮಾಡುವ ನಾರಿಯರು ಸ್ಥಿರ ಮುತ್ತೈದೆಯರು ಎಂದು ಅವಳನ್ನು ಬೈಯುತ್ತ, ಆ ರಾಜ ಪುತ್ರನನ್ನು ತಿರುತಿರುಗಿ ನೋಡುತ್ತ ಅರಮನೆಗೆ ತೆರಳಿದಳು.

ಇತ್ತ ಅರಮನೆಯಲ್ಲಿ ರಾಜಕುಮಾರಿಯನ್ನು ಅವಳ ಸೋದರ ಮಾವನ ಮಗನಾದ ಓರ್ವ ಹುಟ್ಟು ಕುರುಡನಿಗೆ ಕೊಟ್ಟು ಲಗ್ನ ಮಾಡಬೇಕೆಂದು ಹೊಂಚು ಹಾಕುತ್ತಿದ್ದರು. ಇದಕ್ಕೆ ಅವಳು ಒಪ್ಪುವುದಿಲ್ಲವೆಂದು ತಿಳಿದು ಒಂದು ಕುಯುಕ್ತಿಯನ್ನು ಹೂಡಿದರು. ರಾತ್ರಿಯಲ್ಲಿ ಒಬ್ಬ ಸುಂದರ ವರನನ್ನು ತಂದು ಅವಳ ಲಗ್ನ ಮಾಡಿ ಮುಂಜಾನೆ ರಾತ್ರಿ ಲಗ್ನವಾದವನು ಇವನೇ ನಿನ್ನ ಗಂಡನೆಂದು ಕುರುಡನನ್ನು ಗಂಟು ಹಾಕಿದರೆ ಅದಕ್ಕೆ ಅವಳು ಒಪ್ಪುವಳೆಂದು ಅವರು ವರ ಶೋಧಮಾಡುತ್ತ ಅಲ್ಲಿ ಅಲ್ಪಾಯುಷಿಯಾದ ಸುಬ್ಬುದ್ದಿಯನ್ನು ಕಂಡು ಅವನ ಮಾವನಿಗೆ ಹಣಕೊಟ್ಟು ಅವನನ್ನು ಕರೆದುಕೊಂಡು ಹೋದರು. ಆಗ ಅವರು ಸುಬುದ್ಧಿಯನ್ನು ಅರಮನೆಗೆ ಕರೆದೊಯ್ದು, ಗಾಂಧರ್ವ ವಿವಾಹ ವಿಧಿಯಿಂದ ರಾಜ ಕುಮಾರಿಯೊಡನೆ ಲಗ್ನ ಮಾಡಿದರು. ಏಕಾಂತ ಮಂದಿರವನ್ನು ಪ್ರವೇಶಿಸಿ ಕೆಲಹೊತ್ತು ಅವಳೊಡನೆ ಆನಂದಿಸಿ ಮಲಗಿದರು. ಆಗ ಘಟಸರ್ಪವು ಏಕಾಂತ ಮಂದಿರದಲ್ಲಿ ಬಂದಿತು. ಆಗ ಅವಳು ಭಯದಿಂದ ಮಂಗಳಗೌರಿ ಅಭಿಷೇಕ ಜಲವನ್ನು ಆ ಸರ್ಪಕ್ಕೆ ಹಾಕಿದಳು. ಅದು ಮೃತವಾಯಿತು. ಅದನ್ನು ಒಂದು ಗಡಿಗೆಯಲ್ಲಿ ಹಾಕಿ ಬಾಯಿಗೆ ಬಟ್ಟೆಯನ್ನು ಕಟ್ಟಿ ಅದನ್ನು ಒತ್ತಟ್ಟಿಗೆ ಇಟ್ಟಳು. ಗೌರೀವ್ರತ ಪ್ರಭಾವದಿಂದ ಅವನಿಗೆ ವಿಷಭಾಧೆ ಏನು ಆಗದೆ ನನಗೆ ಹಸಿವೆಯಾಗಿದೆ ಎಂದು ಹೇಳಿದನು. ಅವಳು ತುಪ್ಪದ ಉಂಡೆಯನ್ನು ಕೊಟ್ಟಳು. ಕೈ ತೊಳೆಯುವಾಗ ಉಂಗುರವು ಜಾರಿ ಆ ಪಾತ್ರೆಯಲ್ಲಿ ಬಿದ್ದದ್ದನ್ನು ನೋಡದೆ ಸತಿ ಸಂಭೋಗದಲ್ಲಿ ರಾತ್ರಿಯನ್ನು ಕಳೆದು ಬೆಳಗ್ಗೆ ಎದ್ದು ಕಾಶಿಗೆ ಅವರ ಮಾವನ ಜೊತೆ ಹೊರಟನು. ಅವನು ಜೀವಿಸಿರುವುದನ್ನು ಕಂಡು ಸಂತೋಷವಾದನು. ಬೆಳಿಗ್ಗೆ ರಾಜ ಪುತ್ರಿಗೆ ಕುರುಡನ್ನು ಕರೆತಂದು ನಿನ್ನೆ ರಾತ್ರಿ ನಿನ್ನ ಮದುವೆಯಾದವನು ಇವನೇ ಎಂದು ಹೇಳಿದರು. ಅವಳು ಇವನು ಅಲ್ಲ. ಅವನು ಬೆಳಗಾಗುವವರೆಗೆ ನನ್ನ ಏಕಾಂತದಲ್ಲಿ ಇದ್ದು ಮುಂಜಾನೆ ಎದ್ದು ಕಾಶೀಯಾತ್ರೆಗೆ ಹೋಗಿದ್ದಾನೆ. ಆದ್ದರಿಂದ ಕಾಶೀಯಾತ್ರೆಯಿಂದ ತಿರುಗಿ ಬರುವ ಯಾತ್ರಿಕರಿಗಾಗಿ ನೀನು ಈ ಪಟ್ಟಣದಲ್ಲಿ ಒಂದು ಅನ್ನ ಛತ್ರವನ್ನು ಇಡಿಸಿದಲ್ಲಿ ಅವನು ಇಲ್ಲಿಗೆ ಬರುವನೆಂದು ಹೇಳಲಾಗಿ, ರಾಜನು ಮಗಳ ಮಾತಿನಂತೆ ಅನ್ನ ಛತ್ರವನ್ನು ಇರಿಸಿದನು. ಸುಬುದ್ಧಿಯು ಕಾಶಿಯಿಂದ ಅದೇ ಮಾರ್ಗವಾಗಿ ಬಂದು ಅನ್ನ ಛತ್ರದಲ್ಲೇ ಇಳಿದನು. ರಾಜ ಕುಮಾರಿಯು ತನ್ನ ಪತಿಯನ್ನು ಗುರುತಿಸಿ ಉಂಡೆಯನ್ನು ತಿಂದು ಕೈ ತೊಳೆಯುತ್ತಿರುವಾಗ ತನ್ನ ಪತ್ನಿಯ ಉಂಗುರವು ಜಾರಿ ಬಿದ್ದುದನ್ನು ಹಾಗೂ ಮಲಗಿದಾಗ ಕಚ್ಚಲು ಬಂದ ಸರ್ಪವನ್ನು ಗಡಿಗೆಯಲ್ಲಿ ಹಾಕಿ ಇಟ್ಟಿರುವುದನ್ನು ತೋರಿಸಿ ಪ್ರತ್ಯಕ್ಷ ಸಾಕ್ಷಿಯನ್ನು ಕಂಡು ರಾಜನು ಮತ್ತೆ ಮಗಳ ಲಗ್ನವನ್ನು ವೈಭವದಿಂದ ಮಾಡಿದನು.

ಸುಬುದ್ಧಿಯು ತನ್ನ ಅತ್ತೆ, ಮಾವ, ಹೆಂಡತಿ, ಸೋದರಮಾವ, ಸೈನ್ಯ ಪರಿವಾರ ಸಮೇತ ತಂದೆಯ ಪಟ್ಟಣಕ್ಕೆ ಬಂದನು, ಆಗ ದಿಪ್ತಿಮಂತನು ಶ್ರೀ ಮಂಗಳಗೌರೀ ವ್ರತ ಪ್ರಭಾವದಿಂದ ತನ್ನ ಮಗನು ಚಿರಾಯುಷ್ಯ ಪಡೆದನೆಂದು ಪರಮ ಹರ್ಷಿತನಾಗಿ ಆ ವ್ರತವನ್ನು ತನ್ನ ರಾಜ್ಯದಲ್ಲಿ ಹೆಣ್ಣುಮಕ್ಕಳೆಲ್ಲರೂ ಆಚರಿಸುವಂತೆ ಮಾಡಿದನು.

ಈ ವ್ರತವನ್ನಾಚರಿಸಿ ಧನ-ಧಾನ್ಯ, ಸಂತಾನ ಸಮೃದ್ಧಿಯನ್ನು ಪಡೆಯಬೇಕೆನ್ನುವ ಅಕ್ಕ-ತಂಗಿಯರಲ್ಲಿ ವಿಜ್ಞಾಪನೆ ಮದುವೆಯಾದ ಬಳಿಕ ಐದು ವರ್ಷ ತಪ್ಪದೆ ಈ ವ್ರತ ಮಾಡಬೇಕು, ವಿಧಾನವನ್ನು ಅರಿತವರಿಂದ, ಈ ವ್ರತ ಆಚರಿಸಬೇಕು, ಮಂತ್ರಾರ್ಥ ತಿಳಿಯದವರಿಂದ ಈ ವಿಧಾನವನ್ನು ಮಾಡಿಸಕೊಡದು. ವ್ರತಕ್ಕಾಗಿ ಬಂದ ಮುತ್ತೈದೆಯವರಿಗೆ ಫಲ-ಪ್ರಸಾದವನ್ನು ಕೊಟ್ಟು, ಅವರ ಕಣ್ಣಿಗೆ ಕಾಡಿಗೆ ಹಚ್ಚಬೇಕು.

ಈ ಪ್ರಕಾರ ಶ್ರೀ ಕೃಷ್ಣನು ದ್ರೌಪದಿಗೆ ಶ್ರೀ ಮಂಗಲಗೌರೀ ವ್ರತ ಕಥಾ ನಿರೂಪಣಮಾಡಿ ದ್ರೌಪದೀ ಈ ವ್ರತ ಮಹಿಮೆಯಿಂದ ರಾಜಪುತ್ರನು ಮೃತ್ಯುವನ್ನು ಜಯಿಸಿದನು. ಆದ್ದರಿಂದ ಈ ವ್ರತವನ್ನು ನೀನು ಮಾಡಿದರೆ ನಿನ್ನ ಪತಿಗಳಾದ ಪಾಂಡವರು ಕಳೆದುಕೊಂಡ ರಾಜ್ಯವನ್ನು ತಿರುಗಿ ಪಡೆಯುವರೆಂದೂ, ಭೂಮಿಯಲ್ಲಿ ಯಾವ ಸ್ತ್ರೀಯರು ಈ ವ್ರತ ಮಾಡುವರೋ ಅವರು ಸಕಲ ಸಂಪತ್ತನ್ನು ಪಡೆದು ಧನ್ಯರಾಗುವರೆಂದೂ ವ್ರತ ಮಹತ್ವವನ್ನು ಭೋಧಿಸಿದರು.

ಮಂಗಳಗೌರಿ ವ್ರತ ವಿಧಾನ

ಸ್ತ್ರೀಯವರು ಈ ಮಂಗಳಗೌರಿ ವ್ರತವನ್ನು ಮಾಡಬೇಕಾದರೆ, ಆ ದಿನ ಅವರು ಸಂಭ್ರಮದಿಂದ ಬೆಳಿಗ್ಗೆ ಬೇಗ ಎದ್ದು ನಿತ್ಯಕರ್ಮಗಳನ್ನು ಮುಗಿಸಿ, ಮನೆಯನ್ನು ಗುಡಿಸಿ, ರಂಗೋಲಿಯನ್ನು ಇಟ್ಟು, ಆ ದಿನ ಉಪವಾಸವಿದ್ದು, ಮನೆಯ ಬಾಗಿಲಿಗೆ ಮಾವಿನ ತೋರಣಗಳಿಂದ ಅಲಂಕಾರ ಮಾಡುತ್ತಾರೆ. ದೇವರ ಮನೆಯನ್ನು ಸ್ವಚ್ಛಮಾಡುತ್ತಾರೆ. ಈ ಮಂಗಳಗೌರಿಯನ್ನು ದೇವರ ಮನೆಯಲ್ಲಿ ಪೂರ್ವದಿಕ್ಕಿನಲ್ಲಿ ಇಡುತ್ತಾರೆ.

ಒಂದು ಮಣೆಯನ್ನು ಇಟ್ಟು, ಆ ಮಣೆಯ ಮೇಲೆ ಅಷ್ಟದಳ ಇರುವ ಒಂದು ರಂಗೋಲಿಯನ್ನು ಹಾಕುತ್ತಾರೆ. ಅದರ ಮೇಲೆ ತಾಮ್ರ, ಬೆಳ್ಳಿಯವುದಾದರೂ ಒಂದು ತಟ್ಟೆಯನ್ನು ಇಡುತ್ತಾರೆ. ಅದರ ಮೇಲೆ ಅಕ್ಕಿಯನ್ನು ಹರಡಿ, ಅದರ ಮೇಲೆ ಬೆಳ್ಳಿ ಇಲ್ಲವೆ ತಾಮ್ರದ ಚಂಬನ್ನು ಇಡುತ್ತಾರೆ, ಆ ಚಂಬಿನಲ್ಲಿ

ನೀರನ್ನು ತುಂಬುತ್ತಾರೆ. ಚಂಬಿನ ಕಂಟಕ್ಕೆ ಐದು ಎಲೆಗಳನ್ನು ಜೋಡಿಸಿ ಅದರ ಮೇಲೆ ತೆಂಗಿನ ಕಾಯಿಯನ್ನು ಇಡಬೇಕು. ಕಾಯಿಗೆ ಯೋಗ್ಯ ಇರುವರು ಬೆಳ್ಳಿಯ ಮುಖವನ್ನು ಇಡುತ್ತಾರೆ, ಇಲ್ಲದವರು ಕಾಯಿಗೆ ಬೆಳ್ಳಿಯ ಕಣ್ಣು, ಮುತ್ತಿನ ಮೂಗುತಿ, ಹಣೆಗೆ ಕುಂಕುಮ ಹಚ್ಚುತ್ತಾರೆ. ಚಂಬಿನ ಕಂಟಕ್ಕೆ ಮಾಂಗಲ್ಯ ಸರವನ್ನು ಪೂಜೆಮಾಡುವವರೆ ಕಟ್ಟುತ್ತಾರೆ. ಹಸಿರು ಬಳೆ, ಐದು, ಕಾಲುಂಗರವನ್ನು ದಾರದಲ್ಲಿ ಇವನ್ನು ಕಟ್ಟುತ್ತಾರೆ. ಕಾಯಿಗೆ ಕಿವಿಯ ಓಲೆಯನ್ನು ಹಾಕುತ್ತಾರೆ. ಈ ರೀತಿ ಚಂಬಿಗೆ ಅಲಂಕಾರ ಮಾಡುತ್ತಾರೆ, ಚಂಬಿಗೆ ಕಣವನ್ನು ಕಟ್ಟಿರುತ್ತಾರೆ.

ಚಂಬಿನ ಮುಂದಕ್ಕೆ ಒಂದು ಅರಿಶಿನದ ಗೌರಿಯನ್ನು ಸ್ಥಾಪನೆ ಮಾಡಿಡುತ್ತಾರೆ. ಲಕ್ಷ್ಮಿಯ ಬಲಗಡೆಗೆ ಒಂದು ತಟ್ಟೆಯನ್ನು ಇಟ್ಟು ಐದು ಬಗಸೆ ಅಕ್ಕಿ, ಎರಡು ವಣಕೊಬ್ಬರಿ ಬಟ್ಟಲು, ಅರಿಶಿಣದ ಕೊನೆ, ನಿಂಬೆ ಹಣ್ಣು, ದ್ರಾಕ್ಷಿ, ಗೋಡಂಬಿ, ಎಲೆ, ಅಡಿಕೆ, ದಕ್ಷಿಣೆ ಇಡುತ್ತಾರೆ. ಎಲೆಯಲ್ಲಿ ಕಡ್ಲೆ, ಸಕ್ಕರೆ, ವಣಕೊಬ್ಬರಿಯನ್ನು ಪುಡಿಮಾಡಿ ಇಡುತ್ತಾರೆ. ಇವೆಲ್ಲವನ್ನು ಉಡಿ ತುಂಬಿರುತ್ತಾರೆ. ಲಕ್ಷ್ಮಿಯ ಮುಂಭಾಗದಲ್ಲಿ ಒಂದು ತಟ್ಟೆಯಲ್ಲಿ ಎರಡು ಸೇಬು, ಎರಡು ಸೀತಾಫಲ, ಎರಡು ಪೇರಲೇ ಹಣ್ಣು, ಬಾಳೆಹಣ್ಣು ಇಡುತ್ತಾರೆ. ಲಕ್ಷ್ಮಿಯ ಮುಂದೆ ಎರಡು ದೀಪವನ್ನು ಹಚ್ಚುತ್ತಾರೆ. ಲಕ್ಷ್ಮಿಯ ಮುಂದೆ ಒಂದು ಸಣ್ಣ ಮಣಿಹಾಕಿ ಕಳಸದ ತಟ್ಟೆಯನ್ನು ಇಡುತ್ತಾರೆ. ಅನೇಕ ತರಹದ ಹೂವಿನಿಂದ ಈ ಮಂಗಳಗೌರಿಗೆ ಅಲಂಕಾರ ಮಾಡುತ್ತಾರೆ.

ಪೂಜೆಯನ್ನು ಆರಂಭ ಮಾಡುವದಕ್ಕೂ ಮೊದಲೇ ಮುತ್ತೈದೆ ಐವರನ್ನೂ ಕರೆಯಿಸುತ್ತಾರೆ. ಒಂದು ತಟ್ಟೆಯಲ್ಲಿ ನೀರು, ಹೂ, ಅರಿಸಿನ, ಕುಂಕುಮ, ಅಕ್ಷತೆ, ಇಟ್ಟುಕೊಳ್ಳುತ್ತಾರೆ. ಪೂಜೆಮಾಡುವುದಕ್ಕೆ, ಮಂಗಳ ಆರುತಿ ಮಾಡುವುದಕ್ಕೆ ತುಪ್ಪದಲ್ಲಿ ನೆನೆಸಿದ ೧೬ ಬತ್ತಿಗಳನ್ನು ಇಟ್ಟುಕೊಂಡಿರುತ್ತಾರೆ. ಎರಡು ಎಳೆ ಗೆಜ್ಜೆವಸ್ತ್ರವನ್ನು ಮಾಡಿಕೊಂಡಿರುತ್ತಾರೆ, ಎರಡು ಕಂಕಣಗಳನ್ನು ಮಾಡಿಕೊಂಡಿರುತ್ತಾರೆ, ಅರಿಶಿಣದ ದಾರವನ್ನು ೫-೯ ಎಳೆಗಳನ್ನು ಎರಡು ಮಾಡಿಕೊಳ್ಳುತ್ತಾರೆ, ಈ ದಾರಕ್ಕೆ ಎರಡು ವೀಳೆದೆಲೆಯನ್ನು ಆ ದಾರಕ್ಕೆ ಬೆಸ ಸಂಖೆಯಲ್ಲಿ ಗಂಟುಹಾಕಿ ಇಟ್ಟುಕೊಳ್ಳುತ್ತಾರೆ. ಈ ರೀತಿ ಪೂಜೆಗೆ ತಯಾರು ಮಾಡಿಕೊಂಡು, ಐಯ್ಯನವರಿಗೆ ಕುಂಕುಮ ಹಚ್ಚಿ ಅವರಿಂದಲೆ ಪೂಜೆ ಮಾಡುವ ಮುತ್ತೈದೆ ಕಂಕಣವನ್ನು ಕಟ್ಟಿಸಿಕೊಳ್ಳುತ್ತಾರೆ, ಇನ್ನೊಂದು ಗೌರಿಯ ಮುಂದೆ ಇಡುತ್ತಾರೆ. ಪೂಜೆಯನ್ನು ಆರಂಭಿಸುತ್ತಾರೆ. ಮೊದಲಿಗೆ ಚಂಬಿಗೆ ಮತ್ತು ಅರಿಶಿಣದ ಗೌರಿಗೆ ನೀರನ್ನು ಚುಮುಕಿಸಿ, ಅರಿಶಿಣ, ಕುಂಕುಮ ಹಚ್ಚಿ, ಹೂ ಧರಿಸಿ ಅಕ್ಷತೆಯನ್ನು ಹಾಕಿ, ಕಳಸ ಬೆಳಗುತ್ತಾರೆ, ತುಪ್ಪದ ದೀಪವನ್ನು ಹಚ್ಚಿ, ಮಂಗಳಾರುತಿಯನ್ನು ಮಾಡುತ್ತಾರೆ. ಈ ಲಕ್ಷ್ಮಿಗೆ ಸಜ್ಜಕವನ್ನು ನೈವೇದ್ಯಮಾಡುತ್ತಾರೆ, ಕಾಯಿ ಹೊಡೆಯುತ್ತಾರೆ.

ನಂತರ ಕಥೆಯನ್ನು ಓದಬೇಕು, ಬಂದ ಮುತ್ತೈದೆಗೆ ಕುಂಕುಮ ಕೊಟ್ಟು ಕಣ್ಣಿಗೆ ಕಾಡಿಗೆ ಹಚ್ಚಿ, ಎಲೆ, ಅಡಿಕೆ, ಬಾಳೆಹಣ್ಣು, ಉಡಿ ತುಂಬಿ, ದಕ್ಷಿಣೆ ಇಟ್ಟು, ಒಂದು ಕಣವನ್ನು ಇಟ್ಟು, ಉಡಿ ತುಂಬುತ್ತಾರೆ. ನಂತರ ಅವರ ತಲೆಯ ಮೇಲೆ ಅಕ್ಷತೆ ಕಾಳನ್ನು ಹಾಕಿ, ಕಳಸ ಬೆಳಗಿ, ಅವರಿಗೆ ಊಟಕ್ಕೆ ನೀಡಿ ಕಳುಹಿಸುತ್ತಾರೆ. ಅಕ್ಕ ಪಕ್ಕದವರನ್ನು ಕರೆದು ಅವರಿಗೂ ಕುಂಕುಮ ಕೊಟ್ಟು, ಕಳಸ ಬೆಳಗಿ, ಉಡಿಯನ್ನು ತುಂಬುತ್ತಾರೆ.

ಪೂಜೆ ಇಳಿಸುವ ವಿಧಾನ

ಮಂಗಳಗೌರಿ ಹಬ್ಬದಲ್ಲಿ ಮೊದಲನೆ ವಾರ ಇಟ್ಟಕಾಯಿಯನ್ನು ಐದನೇ ವಾರದವರೆಗೂ ಪೂಜಿಸಿ, ಮರುದಿನ ಅದಕ್ಕೆ ನೀರನ್ನು ಚುಮುಕಿಸಿ, ಅರಿಶಿಣ, ಕುಂಕುಮ ಹಾಕಿ, ಅಕ್ಷತೆ, ಹೂ, ಹಾಕಿ, ಕಳಸವನ್ನು ಬೆಳಗುತ್ತಾರೆ. ಸಕ್ಕರೆ, ಹಾಲು, ನೈವೇದ್ಯ ಮಾಡಿ, ಎರಡು ಕೈಗಳಿಂದ ಚಂಬನ್ನು ಬಿಗಿಯಾಗಿ ಹಿಡಿದು ಐದುಸಲ ಮೇಲೆ ಕೆಳಗೆ ಎತ್ತಿಳಿಸುತ್ತಾರೆ. ಈ ರೀತಿ ಪ್ರತಿವಾರ ಮಾಡುತ್ತಾರೆ, ಕೊನೆಯವಾರದ ದಿನ ಹೋಳಿಗೆ ಮಾಡುತ್ತಾರೆ.

ವರಮಹಾಲಕ್ಷ್ಮಿ ವ್ರತ

ಲೋಕದಲ್ಲಿಯೇ ಅತ್ಯುತ್ತಮವಾದ ವ್ರತವನ್ನು ಸೂತಪುರಾಣಿಕರು ಸನಕಾದಿಗಳಿಗೆ ಹೇಳಿದ್ದಾರೆ. ಶಿವನು ವಾಸಮಾಡುವ ಕೈಲಾಸವು ಅತ್ಯಂತ ಮನೋಹರವಾಗಿಯೂ, ಅಲ್ಲಿ ನದಿಗಳು, ಅಲ, ಬೇಲ, ಅಶ್ವತ್ಥ, ಪಾದರಿ, ಹೊನ್ನೆ ಮೊದಲಾದ ದಿವ್ಯ ವೃಕ್ಷಗಳೂ, ಕಾಮಧೇನು, ಕಲ್ಪವೃಕ್ಷಗಳು, ಇವೆ. ಆ ಕೈಲಾಸವು ನವರತ್ನಮಯವಾದ ಶಿಖರದಿಂದ ಕೂಡಿದೆ. ಈ ಕೈಲಾಸದಲ್ಲಿ ಪಾರ್ವತಿ, ಪರಮೇಶ್ವರ ಸ್ವಾಮಿಯು ಲೀಲಾ ಜಾಲದಿಂದ ಇರುವಾಗ ಶಿವನು ಈ ವರಮಹಾಲಕ್ಷ್ಮಿಯ ವ್ರತದ ಬಗ್ಗೆ ಪಾರ್ವತಿಗೆ ಹೇಳುತ್ತಾನೆ.

ಈ ವ್ರತವನ್ನು ''ಶ್ರಾವಣಮಾಸದಲ್ಲಿ ಶುಕ್ಲಪಕ್ಷದ ಪೌರ್ಣಿಮಾದಿನದ ಹಿಂದಿನ ಶುಕ್ರವಾರದಲ್ಲಿ ಅಂದರೆ ಎರಡನೇ ಅಥವಾ ಮೂರನೇ ಶುಕ್ರವಾರದಲ್ಲಿ ಈ ವ್ರತವನ್ನು ಆಚರಿಸಬೇಕು'' ಶ್ರಾವಣ ಮಾಸದಲ್ಲಿ ಎರಡನೆಯ ಶುಕ್ರವಾರದ ದಿನ ಈ ವರಮಹಾಲಕ್ಷ್ಮಿ ವ್ರತವನ್ನು ಕಲ್ಪೋಕ್ತವಿಧಾನದಿಂದ ಭಕ್ತಿಪುರಸ್ಕರವಾಗಿ ಪೂಜೆಮಾಡಬೇಕು. ಅಂತವರು ಇಹದಲ್ಲಿ ಸಕಲಸಂಪತ್ತುಗಳನ್ನು ಪಡೆಯುತ್ತಾರೆ.

ಕಥಾಸಾರ

'ಕುಂಡಿನೀ' ನಗರವೆಂಬುದು ಒಂದು ಪಟ್ಟಣ, ಈ ಪಟ್ಟಣದಲ್ಲಿ ''ಚಾರುಮತಿಯೆಂಬ'' ಒಬ್ಬ ಬ್ರಾಹ್ಮಣ ಸ್ತ್ರೀಯು ಇದ್ದಳು, ಇವಳು ಪತಿವ್ರತಾ ಶಿರೋಮಣಿಯೂ ಆಗಿದ್ದಳು, ಇವಳು

ಸದ್ಗುಣಿಯಾಗಿದ್ದಳು ಇವಳ ಪತಿವ್ರತ ಧರ್ಮವನ್ನು ನೋಡಿ ವರಮಹಾಲಕ್ಷ್ಮಿಯು ರಾತ್ರಿ ಅವಳ ಕನಸಿನಲ್ಲಿ ಬಂದಳು, ಎಲೌ ಪತಿವ್ರತ ಶಿರೋಮಣಿಯೂ, ಪುಣ್ಯಶಾಲಿಯೂ, ಆಗಿರುವ ಚಾರುಮತಿಯೆ! ನಾನು ವರಮಹಾಲಕ್ಷ್ಮಿಯು, ನಾನು ನಿನಗೆ ವರಪ್ರಸಾದವನ್ನು ಮಾಡುತ್ತೇನೆ, ಶ್ರಾವಣಮಾಸದ ೨ನೇ ಶುಕ್ರವಾರ ಶುಕ್ಲಪಕ್ಷ ದಿನ ಯಾರು ನನ್ನ ಪೂಜೆಯನ್ನು ಮಾಡುತ್ತಾರೊ ಅವರಿಗೆ ಸಕಲ ಇಷ್ಟಾರ್ಥಗಳನ್ನು ನಾನು ಕೊಡುತ್ತೇನೆ. ಪುಣ್ಯಶಾಲಿಗಳಾಗಿದ್ದವರಿಗೆ ನನ್ನ ವ್ರತದಲ್ಲಿ ಭಕ್ತಿಯುಂಟಾಗುವುದೇ ಹೊರತು ಮಿಕ್ಕವರಿಗೆ ಉಂಟಾಗಲಾರದು. ಇಹದಲ್ಲಿ ನನ್ನನ್ನು ಯಾರು ಆರಾಧಿಸುವರೋ ಅವರೇ ಧನ್ಯರು, ಸಾಹಸಿಗಳು, ಯಾರು ನನ್ನ ಕಟಾಕ್ಷಕ್ಕೆ ಭಾಗಿಗಳಲ್ಲವೋ ಅವರ ಈ ಬಾಳು ವ್ಯರ್ಥವೇ ಸರಿ, ನನ್ನ ವ್ರತಾಚರಣೆಯನ್ನು ಮಾಡಿದವರಿಗೆ ಅಷ್ಟಭೋಗ ಸುಖ ಸಂತೋಷಗಳೂ, ಸಕಲ ಸಾಮ್ರಾಜ್ಯವೂ ದೊರೆಯುವುದು ಶಾಶ್ವತ ಮುಕ್ತಿಯು ಉಂಟಾಗುವುದು ಎಂದು ಕನಸು ಬಿದ್ದಾಗ, ಚಾರುಮತಿಯು ನಿದ್ರೆಯಿಂದೆದ್ದು ಈ ವಿಷಯವನ್ನು ಸಂತೋಷದಿಂದ ತನ್ನ ನೆಂಟರಿಷ್ಟರಿಗೆಲ್ಲಾ ಹೇಳಿದಳು. ಈ ವ್ರತವನ್ನು ಸರ್ವರೂ ಭಕ್ತಿಯಿಂದ ಪೂಜಿಸಿದರು. ವರಮಹಾಲಕ್ಷ್ಮಿಯ ಅನುಗ್ರಹಕ್ಕೆ ಪಾತ್ರಳಾದ ಈ ಚಾರುಮತಿಯು ಸಕಲೈಶ್ವರ್ಯ, ಪುತ್ರ ಪೌತ್ರಾದಿಗಳಿಂದ ಕೂಡಿದಳು, ಬಡವರಿಗೆ ಅನ್ನವಸ್ತ್ರಾದಿಗಳನ್ನು ಕೊಡುತ್ತಾ ಇಹಲೋಕದಲ್ಲಿ ಸಕಲ ಸುಖಗಳನ್ನೂ ಪಡೆದು, ಪರಲೋಕದಲ್ಲಿ ಉತ್ತಮ ಮುಕ್ತಿಯನ್ನು ಹೊಂದಿದಳು.

ವ್ರತ ವಿಧಾನ

ಈ ವ್ರತವನ್ನು ಸ್ತ್ರೀಯರಾಗಲಿ, ಪುರುಷರಾಗಲೀ, ಮಾಡಬಹುದು. ಮಧ್ಯಾನ ಅಭ್ಯಂಜನವನ್ನು ಮಾಡಿಕೊಂಡು ಶುದ್ಧವಸ್ತ್ರಗಳನ್ನುಟ್ಟು, ನಿತ್ಯಕರ್ಮಗಳನ್ನೆಲ್ಲಾ ತೀರಿಸಿಕೊಂಡು, ಮನೆಯನ್ನು ಮನೋಹರವಾಗಿ ಶುದ್ಧಿಮಾಡಿ, ರಂಗವಲ್ಲಿಯಿಂದ ಅಲಂಕರಿಸಿ, ದಿವ್ಯತರವಾದ ಮಂಟಪವನ್ನು ನಿರ್ಮಿಸಿ, ಅದರಲ್ಲಿ ಪಂಚವರ್ಣದಿಂದ ಕೂಡಿದ ಅಷ್ಟದಳ ಪದ್ಮವನ್ನು ಬರೆದು ಅದರಲ್ಲಿ ತಾಮ್ರಪಲ್ಲಗಳಿಂದ ಕೂಡಿದ ಕಲಶವನ್ನಿಟ್ಟು, ವರಮಹಾಲಕ್ಷ್ಮೀ ದೇವಿಯ ಪ್ರಾಣ ಪ್ರತಿಷ್ಠೆಯನ್ನು ಮಾಡಿ ಕಲ್ಪೋಕ್ತ ವಿಧಾನದಿಂದ ಆರಾಧಿಸತಕ್ಕದ್ದು, ಪದ್ಮಾಸನೆ ಎಂಬ ಮಂತ್ರಪೂರ್ವಕವಾಗಿ ದೇವಿಯನ್ನು ಸರ್ವೋಪಚಾರದಿಂದ ಸಂತಸಗೊಳಿಸಬೇಕು. ಫಲದಕ್ಷಿಣೆ ಉಪಾಯನಾದಿಗಳನ್ನು ಯೋಗ್ಯರಾದ ಬ್ರಾಹ್ಮಣರಿಗೆ ದಾನಮಾಡತಕ್ಕದ್ದು. ಸುವಾಸಿನಿಯರನ್ನು ಮಂಗಳದ್ರವ್ಯಗಳಿಂದ ಪೂಜಿಸತಕ್ಕದ್ದು. ಬ್ರಾಹ್ಮಣದಂಪತಿಗೆ ಭೋಜನವನ್ನು ಮಾಡಿಸಿ ಭೂರಿದಕ್ಷಿಣೆಗಳನ್ನು ಕೊಡಬೇಕು, ಕಥೆಯನ್ನು ಭಕ್ತಿಯಿಂದ ಕೇಳಬೇಕು, ಈ ವ್ರತವನ್ನು ಯಾರು ಭಕ್ತಿಯಿಂದ ಮಾಡುತ್ತಾರೋ ಅಂತಹವರು ಸಕಲೈಶ್ವರ್ಯವನ್ನು

ಪಡೆಯುತ್ತಾರೆ. ಈ ಕಥೆಯನ್ನು ಯಾರು ಕೇಳುತ್ತಾರೋ, ಯಾರು ಹೇಳುವರೋ ಅವರಿಗೆ ದಾರಿದ್ರ್ಯವೆಂಬುದು ಧ್ವಂಸವಾಗಿ ಶಾಶ್ವತವಾದ ಮುಕ್ತಿ ಸುಖವನ್ನು ಪಡೆಯುತ್ತಾರೆ.

ಮಾಡುವ ವಿಧಾನ

ಸ್ತ್ರೀಯರು ಈ ವರಮಹಾಲಕ್ಷ್ಮಿಯ ವ್ರತವನ್ನು ಮಾಡಬೇಕಾದರೆ. ಆದಿನ ಅವರು ಸಂಭ್ರಮದಿಂದ ಬೆಳಗ್ಗೆ ಬೇಗ ಎದ್ದು ನಿತ್ಯ ಕರ್ಮಗಳನ್ನು ಮುಗಿಸಿ ಮನೆಯನ್ನು ಗುಡಿಸಿ, ರಂಗೋಲಿಯನ್ನು ಇಟ್ಟು ತಲೆ ಸ್ನಾನವನ್ನು ಮಾಡಿ ದೇವರ ಮನೆಯನ್ನು ಸ್ವಚ್ಛಮಾಡಿಕೊಳ್ಳುತ್ತಾರೆ. ನಂತರ ಮನೆಯ ಬಾಗಿಲಿಗೆ ಮಾವಿನ ತೋರಣಗಳನ್ನು ಕಟ್ಟುತ್ತಾರೆ. ಈ ವರಮಹಾಲಕ್ಷ್ಮಿಯನ್ನು ದೇವರ ಮನೆಯಲ್ಲಿ ಪೂರ್ವದಿಕ್ಕಿನಲ್ಲಿ ಇಡುತ್ತಾರೆ. ಒಂದು ಮಣೆಯನ್ನು ಇಟ್ಟು ಆ ಮಣೆಯ ಮೇಲೆ ಅಷ್ಟದಳ ಇರುವ ಒಂದು ರಂಗೋಲಿಯನ್ನು ಹಾಕುತ್ತಾರೆ. ಅದರ ಮೇಲೆ ತಾಮ್ರ, ಬೆಳ್ಳಿಯವುದಾದರು ಒಂದು ತಟ್ಟೆಯನ್ನು ಇಡುತ್ತಾರೆ. ಅದರ ಮೇಲೆ ಅಕ್ಕಿಯನ್ನು ಹರಡಿ ಅದರ ಮೇಲೆ ಬೆಳ್ಳಿ ಇಲ್ಲವೆ ತಾಮ್ರದ ಚಂಬನ್ನು ಇಡುತ್ತಾರೆ. ಆ ಚಂಬಿನಲ್ಲಿ ಐದು ಬಗಸೆ ಅಕ್ಕಿಯನ್ನು ಹಾಕಬೇಕು. ನಂತರ ಕರ್ಕೆ, ತುಳಸಿ, ಬಿಲ್ವಪತ್ರೆ, ಮಲ್ಲಿಗೆ, ಕಣಗಲೆ, ಈ ಐದು ತರಹದ ಹೂಗಳನ್ನು ಚಂಬಿನಲ್ಲಿ ಹಾಕುತ್ತಾರೆ. ದುಂಡು ಅಡಿಕೆಯನ್ನು ಐದು ಹಾಕುತ್ತಾರೆ. ಒಂದು ರೂಪಾಯಿಯ ನಾಣ್ಯಗಳನ್ನು (೮) ಹಾಕುತ್ತಾರೆ. ಇಲ್ಲದೆ ಬೆಳ್ಳಿಯ ನಾಣ್ಯಗಳನ್ನು (೮) ಹಾಕಬಹುದು. ಚಂಬಿನಲ್ಲಿ ಅರಿಸಿಣ, ಕುಂಕುಮ ಹಾಕಿ, ಚಂಬಿನ ಕಂಟಕ್ಕೆ ಐದು ಎಲೆಗಳನ್ನು ಜೋಡಿಸಿ ಅದರ ಮೇಲೆ ತೆಂಗಿನ ಕಾಯಿಯನ್ನು ಇಡಬೇಕು. ಕಾಯಿಗೆ ಯೋಗ್ಯರಿರುವರು ಬೆಳ್ಳಿಯ ಮುಖವನ್ನು ಇಡುತ್ತಾರೆ. ಇಲ್ಲದಿದ್ದರೆ ಕಾಯಿಗೆ ಬೆಳ್ಳಿಯ ಕಣ್ಣು, ಮುತ್ತಿನ ಮೂಗುತಿ, ಹಣೆಗೆ ಕುಂಕುಮ ಹಚ್ಚುತ್ತಾರೆ. ಚಂಬಿನ ಕಂಟಕ್ಕೆ ಮಾಗಲ್ಯ ಸರವನ್ನು ಪೂಜೆ ಮಾಡುವವರೇ ಕಟ್ಟುತ್ತಾರೆ. ಹಸಿರುಬಳೆ ಐದು, ಕಾಲುಂಗರವನ್ನು ದಾರದಲ್ಲಿ ಇವನ್ನು ಕಟ್ಟುತ್ತಾರೆ. ಕಾಯಿಗೆ ಕಿವಿಯ ಓಲೆಯನ್ನು ಹಾಕುತ್ತಾರೆ. ಈ ರೀತಿ ಚಂಬಿಗೆ ಅಲಂಕಾರ ಮಾಡುತ್ತಾರೆ. ಈ ವರಮಹಾಲಕ್ಷ್ಮಿಗೆ ಕೇದಿಗೆ ಶ್ರೇಷ್ಠ ಅದ್ದರಿಂದ ಅದನ್ನು ಜಡೆಯಾಗಿ ಹೆಣೆದು ಚಂಬಿನ ಪಕ್ಕದಲ್ಲಿ ಇಡುತ್ತಾರೆ. ಚಂಬಿಗೆ ಸೀರೆ ಮತ್ತು ಕಣವನ್ನು ಇಡುತ್ತಾರೆ.

ಚಂಬಿನ ಮುಂದಕ್ಕೆ ಒಂದು ಅರಿಶಿಣದ ಗೌರಿಯನ್ನು ಸ್ಥಾಪನೆ ಮಾಡಿಡುತ್ತಾರೆ. ಲಕ್ಷ್ಮಿಯ ಬಲಗಡಿಗೆ ಒಂದು ತಟ್ಟೆಯನ್ನು ಇಟ್ಟು ಐದು ಬಗಸೆ ಅಕ್ಕಿ, ಎರಡು ವಣಕೊಬ್ಬರಿ ಬಟ್ಟಲು, ಅರಿಶಿಣದ ಕೊನೆ, ನಿಂಬೆಹಣ್ಣು ಎರಡು, ದ್ರಾಕ್ಷಿ, ಗೋಡಂಬಿ, ಎಲೆ, ಅಡಿಕೆ, ದಕ್ಷಿಣೆ ಇಡುತ್ತಾರೆ. ಎಲೆಯಲ್ಲಿ ಕಡ್ಲೆ

ಸಕ್ಕರೆ, ಒಣಕೊಬ್ಬರಿಯನ್ನು ಪುಡಿಮಾಡಿ ಇಡುತ್ತಾರೆ. ಇವೆಲ್ಲವನ್ನು ಉಡಿ ತುಂಬಿರುತ್ತಾರೆ. ಲಕ್ಷ್ಮಿಯ ಮುಂಬಾಗದಲ್ಲಿ ಒಂದು ತಟ್ಟೆಯಲ್ಲಿ ಎರಡು ಸೇಬು, ಎರಡು ದಾಳಿಂಬೆ, ಎರಡು ಸಿತಾಫಲ, ಎರಡು ಪೆರಲೇ ಹಣ್ಣು, ಹನ್ನೊಂದು ಹಣ್ಣು ಇರುವ ಬಾಳೆಹಣ್ಣನ್ನು ಇಡುತ್ತಾರೆ. ಲಕ್ಷ್ಮಿಯ ಮುಂದೆ ಎರಡು ದೀಪವನ್ನು ಹಚ್ಚುತ್ತಾರೆ. ಅದರ ಮುಂದೆ ಒಂದು ಸಣ್ಣ ಮಣಿಹಾಕಿ ಕಳಸದ ತಟ್ಟೆಯನ್ನು ಇಡುತ್ತಾರೆ. ಅನೇಕ ತರಹದ ಹೂವಿನಿಂದ ಈ ವರಮಹಾಲಕ್ಷ್ಮಿಗೆ ಅಲಂಕಾರ ಮಾಡುತ್ತಾರೆ.

ಪೂಜೆಯನ್ನು ಆರಂಭ ಮಾಡುವುದಕ್ಕೂ ಮೊದಲೇ ಮುತ್ತೈದೆ ಐನೋರನ್ನು ಕರೆಯಿಸುತ್ತಾರೆ. ಒಂದು ತಟ್ಟೆಯಲ್ಲಿ ನೀರು, ಹೂ, ಅರಿಶಿಣ, ಕುಂಕುಮ, ಓಲೆ ಇಟ್ಟುಕೊಳ್ಳುತ್ತಾರೆ. ಪೂಜೆ ಮಾಡುವುದಕ್ಕೆ ಮಂಗಳ ಆರತಿ ಮಾಡುವುದಕ್ಕೆ ತುಪ್ಪದಲ್ಲಿ ನೆನೆಸಿದ ೧೬ ಬತ್ತಿಗಳನ್ನು ಇಟ್ಟುಕೊಂಡಿರುತ್ತಾರೆ. ಎರಡು ಎಳೆ ಗೆಜ್ಜೆ ವಸ್ತ್ರವನ್ನು ಮಾಡಿಕೊಂಡಿರುತ್ತಾರೆ. ಎರಡು ಕಂಕಣಗಳನ್ನು ಮಾಡಿಕೊಂಡಿರುತ್ತಾರೆ. ಅರಿಶಿಣದ ದಾರವನ್ನು ೫, ೯ ಎಳೆಗಳನ್ನು ಎರಡು ಮಾಡಿಕೊಳ್ಳುತ್ತಾರೆ. ಈ ದಾರಕ್ಕೆ ೨ ವೀಳದೆಲೆಯನ್ನು ಆ ದಾರಕ್ಕೆ ಬೆಸ ಸಂಖ್ಯೆಯಲ್ಲಿ ಗಂಟುಹಾಕಿ ಇಟ್ಟುಕೊಳ್ಳುತ್ತಾರೆ. ಈ ರೀತಿ ಪೂಜೆಗೆ ತಯಾರು ಮಾಡಿಕೊಂಡು ಐನೋರಿಗೆ ಕುಂಕುಮ ಹಚ್ಚಿ, ಅವರಿಂದಲೇ ಪೂಜೆಮಾಡುವ ಮುತ್ತೈದೆ ಕಂಕಣವನ್ನು ಕಟ್ಟಿಸಿಕೊಳ್ಳುತ್ತಾರೆ. ಇನ್ನೊಂದು ಗೌರಿಯ ಮುಂದೆ ಇಡುತ್ತಾರೆ.

ಪೂಜೆಯನ್ನು ಆರಂಬಿಸುತ್ತಾರೆ. ಮೊದಲಿಗೆ ಚಂಬಿಗೆ ಮತ್ತು ಅರಿಶಿಣದ ಗೌರಿಗೆ ನೀರನ್ನು ಚುಮುಕಿಸಿ, ಅರಿಶಿನ, ಕುಂಕುಮ ಹಚ್ಚಿ, ಕೇದಿಗೆಯ ಹೂ ಇಟ್ಟು ಅಕ್ಷತೆಯನ್ನು ಹಾಕಿ, ಕಳಸವನ್ನು ಬೆಳಗುತ್ತಾರೆ. ತುಪ್ಪದ ದೀಪವನ್ನು ಹಚ್ಚಿ ಮಂಗಳಾರುತಿಯನ್ನು ಮಾಡುತ್ತಾರೆ. ಈ ಲಕ್ಷ್ಮಿಯ ಮುಂದೆ ನೈವೇದ್ಯಕ್ಕೆ ಐದು ಹೋಳಿಗೆ, ಐದು ಕರಿಗೆಡಬು, ಐದು ಪಟ್ಲಕಾಯಿ ಬೋಂಡ, ಐದು ತರಹದ ತರಕಾರಿ ಸೇರಿಸಿ ಮಾಡಿದ ಪಲ್ಲೆ, ಕೋಸಂಬರಿ, ಕಡ್ಲೆಪುಡಿ, ಹುಣಸೆ ಚಟ್ನಿ, ಅನ್ನ, ಸಾರು, ಹಾಲು, ಮೊಸರು, ಹಪ್ಪಳ, ಸಂಡಿಗೆ, ಇವೆಲ್ಲವನ್ನು ಬಾಳೆ ಎಲೆಯಲ್ಲಿ ಇಟ್ಟು ಕಾಯಿ ಹೊಡೆದು ನೈವೇದ್ಯವನ್ನು ಮಾಡುತ್ತಾರೆ.

ನಂತರ ವರಮಹಾಲಕ್ಷ್ಮಿಯ ಕಥೆಯನ್ನು ಓದಬೇಕು. ನಂತರ ನಮ್ಮ ಮನಸ್ಸಿನ ಇಷ್ಟಾರ್ಥವನ್ನು ಬೇಡಿಕೊಳ್ಳಬೇಕು. ಬಂದ ಮುತ್ತೈದೆಗೆ ಕುಂಕುಮ ಕೊಟ್ಟು ಕಣ್ಣಿಗೆ ಕಾಡಿಗೆ ಹಚ್ಚಿ, ಎಲೆ, ಅಡಿಕೆ, ಬಾಳೆಹಣ್ಣು, ಕಡ್ಲೆ, ಸಕ್ಕರೆ, ಒಣಕೊಬ್ಬರಿ, ದಕ್ಷಿಣೆ ಇವೆಲ್ಲವುಗಳು ಜೊತೆಗೆ ಒಂದು ಕಣವನ್ನು ಇಟ್ಟು ಉಡಿ ತುಂಬಬೇಕು. ನಂತರ ಅವರ ತಲೆಯ ಮೇಲೆ ಅಕ್ಷತೆಯನ್ನು ಹಾಕಿ ಕಳಸವನ್ನು ಬೆಳಗುತ್ತಾರೆ. ನಂತರ ಅವರಿಗೆ ಊಟಕ್ಕೆ ನೀಡಿ ಕಳುಹಿಸುತ್ತಾರೆ.

ಸಂಜೆ ಅಕ್ಕಪಕ್ಕದ ಮುತ್ತೈದೆಯರನ್ನು ಕರೆದು ಅವರಿಗೆ ಕುಂಕುಮ ಕೊಟ್ಟು, ಕಳಸ ಬೆಳಗಿ, ಉಡಿಯನ್ನು ತುಂಬುತ್ತಾರೆ. ಮನೆಯಲ್ಲಿ ನೆಂಟರು ಹಾಗೂ ಮನೆಯ ಮಗಳನ್ನು ಕರೆಯಿಸಿ ಅತ್ಯಂತ ಸಂಭ್ರಮದಿಂದ ಈ ವ್ರತವನ್ನು ಆಚರಿಸುತ್ತಾರೆ. ಚಂಬಿನ ಮೇಲೆ ಇಟ್ಟು ಕಾಯಿಯನ್ನು ಗಣೇಶ ಚೌತಿಯ ದಿನ ಹೊಡೆಯುತ್ತಾರೆ.

ಪೂಜೆ ಇಳಿಸುವ ವಿಧಾನ

ವರಮಹಾಲಕ್ಷ್ಮಿ ಹಬ್ಬ ಮುಗಿದ ಮರುದಿನ ನೀರನ್ನು ಚಿಮುಕಿಸಿ ಅರಿಶಿಣ, ಕುಂಕುಮ ಹಾಕಿ, ಅಕ್ಷತೆ, ಹೂ, ಹಾಕಿ ಕಳಸವನ್ನು ಬೆಳಗುತ್ತಾರೆ. ಸಕ್ಕರೆ, ಹಾಲು ನೈವೇಧ್ಯ ಮಾಡಿ ಎರಡು ಕೈಗಳಿಂದ ಚಂಬನ್ನು ಬಿಗಿಯಾಗಿ ಹಿಡಿದು ಐದು ಸಲ ಮೇಲೆ ಕೆಳಗೆ ಎತ್ತಿಳಿಸುತ್ತಾರೆ.

ರಕ್ಷಾ ಬಂಧನ

ಶ್ರಾವಣ ಶುದ್ದ ಹುಣ್ಣಿಮೆಯಂದು ಆಚರಿಸುವ ''ರಕ್ಷಾಬಂಧನ'' ರಾಖೀ ಹಬ್ಬವೆಂದೇ ಪ್ರಸಿದ್ದಿ ಪಡೆದಿದೆ. ಸಮಾಜದ ಸ್ತ್ರೀ-ಪುರುಷರಲ್ಲಿ ಪರಸ್ಪರ ಸೋದರತೆಯ ಪವಿತ್ರ ಸಂಬಂಧವನ್ನು ಮತ್ತಷ್ಟು ಬಲಪಡಿಸುವ ಹಬ್ಬ ಇದು, ಸಮಾಜದಲ್ಲಿರುವ ಸ್ತ್ರೀಯರೆಲ್ಲ ತನ್ನ ಅಕ್ಕ-ತಂಗಿಯರು, ಆಪತ್ಕಾಲದಲ್ಲಿ ಅವರ ಮಾನ ಪ್ರಾಣಗಳನ್ನು ರಕ್ಷಿಸುವುದು ತನ್ನ ಆದ್ಯ ಕರ್ತವ್ಯ, ಈ ಕರ್ತವ್ಯ ನಿರ್ವಹಣೆಯಲ್ಲಿ ಸಂದರ್ಭ ಬಂದರೆ ಪ್ರಾಣ ಕೊಡಲು ನಾನು ಸಿದ್ದ ಎಂಬ ಪ್ರತಿಜ್ಞೆಯ ಸಂಕೇತ ಪವಿತ್ರ ರಕ್ಷಾಬಂಧನ.

ರಕ್ಷಾಬಂಧನ ನಮ್ಮ ಜೀವನ ಯಜ್ಞದ ಕಂಕಣಬಂಧನದ ಹಬ್ಬವೂ ಹೌದು, ರಥೋತ್ಸವ, ಯಜ್ಞ, ಮದುವೆ, ಮುಂಜಿ ಮೊದಲಾದ ಉತ್ಸವಗಳು ನಿರ್ವಿಘ್ನವಾಗಿ ನಡೆಯಲೆಂದು ಶ್ರೀದೇವರನ್ನು ಪ್ರಾರ್ಥಿಸಿ, ದೀಕ್ಷೆ ತೊಟ್ಟು ಕಂಕಣಕಟ್ಟುವ ಆಚರಣೆ ನಮ್ಮಲ್ಲಿ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿದೆ. ನಮ್ಮ ಜೀವನವೂ ಒಂದು ಯಜ್ಞವಷ್ಟೆ ವರ್ಷದಲ್ಲಿ ಒಂದು ದಿನ ಪವಿತ್ರವಾದ ರಕ್ಷೆಯನ್ನು ಕಂಕಣದಂತೆ ಧರಿಸಿ, ಆ ವರ್ಷವೆಲ್ಲ ನಮ್ಮ ಕಾರ್ಯಗಳು ಅತಂಕವಿಲ್ಲದೆ ನೆಡೆಯಲಿ ಜೀವನ ಯಜ್ಞಕ್ಕೆ ದುಷ್ಟಶಕ್ತಿಗಳು ಆತಂಕವೊಡ್ಡದಿರಲಿ ಎಂದು ಭಗವಂತನನ್ನು ಪ್ರಾರ್ಥಿಸುವ ಪವಿತ್ರ ಆಚರಣೆ ಈ ರಕ್ಷಾಬಂಧನ.

ಮಾಡುವ ವಿಧಾನ

ರಕ್ಷಾಬಂಧನ ಒಂದು ಶಾಸ್ತ್ರೀಯ ಪ್ರಕ್ರಿಯೆ, ಶ್ರಾವಣ ಶುದ್ದ ಹುಣ್ಣಿಮೆಯ ದಿನ ಬ್ರಾಹ್ಮೀ ಮುಹೂರ್ತದಲ್ಲಿ ಎದ್ದು ಮಂಗಳಸ್ನಾನ ನಿತ್ಯ ಕರ್ಮಾದಿಗಳನ್ನು ಪೂರೈಸಿ ಕಳಶ ಸ್ಥಾಪನೆ ಮಾಡಬೇಕು. ಹಳದಿಯ ಬಟ್ಟೆಯಲ್ಲಿ ಸ್ವಲ್ಪ ಕುಂಕುಮ ಅಕ್ಷತೆಯನ್ನು ಕಟ್ಟಿ ಕಲಶದ ಉತ್ತರ ದಿಕ್ಕಿನಲ್ಲಿ ಇಟ್ಟು ಅದಕ್ಕೆ

ವಾಸುಕೀ ಮೊದಲಾದ ಅಭಿಮಾನಿ ದೇವತೆಗಳನ್ನು ಅವಾಹಿಸಬೇಕು. ಅನಂತರ ಧ್ಯಾನಾವಾಹನಾದಿ ಷೋಡಶೋಪಚಾರ ಮಾಡಿ ಆ ರಕ್ಷೆಯನ್ನು ಯಜಮಾನನು ಮಂತ್ರಪೂರ್ವಕವಾಗಿ ತನ್ನ ಬಲ ಮುಂಗೈಗೆ ಕಟ್ಟಿಕೊಳ್ಳುವುದಲ್ಲದೆ ಮನೆಮಂದಿಗೆ ಮತ್ತು ತನ್ನ ಆಸ್ತಿಗೆ ಕಟ್ಟುತ್ತಾರೆ.

ಮಹತ್ವ

ಸಹೋದರಿಯರು ಅಣ್ಣ ತಮ್ಮಂದಿರಿಗೆ ರಾಖಿಯನ್ನು ಕಟ್ಟಿ ತಮ್ಮ ಬಾಂಧವ್ಯದ ಮಧುರ ಸ್ಮೃತಿಯನ್ನು ಉಂಟುಮಾಡುತ್ತಾರೆ. ಭಾರತೀಯ ಸಂಸ್ಕೃತಿಯು ತನ್ನ ಸ್ವಂತ ಪತ್ನಿಯನ್ನು ಹೊರತಾಗಿ ಉಳಿದ ಎಲ್ಲ ಸ್ತ್ರೀಯರನ್ನು ಅವರವರ ವಯಸ್ಸಿಗೆ ಅನುಗುಣವಾಗಿ ತಾಯಿ ಅಥವಾ ತಂಗಿಯೆಂದು ಕಾಣಬೇಕೆಂದು ಬೋಧಿಸುತ್ತದೆ. ಬ್ರಹ್ಮಚಾರಿ, ಸನ್ಯಾಸಿ, ಯತಿಗಳಿಗಂತೂ ಎಲ್ಲ ಸ್ತ್ರೀಯರೂ ಜಗನ್ಮಾತೆಯ ಸ್ವರೂಪವೇ ಅದ್ದರಿಂದ ಮಹಿಳೆಯರು ಪುರುಷರಿಗೆ ಕಳಿಸುವ ರಾಖಿಯು 'ಈ ಪವಿತ್ರ ಭಾವನೆ ನಿಮ್ಮಲ್ಲಿ ಮೂಡಲಿ' ಎಂದು ಸಂದೇಶವನ್ನು ನೀಡುತ್ತದೆ. ಪುರುಷರು ಸೋದರಿಯರ ಪ್ರಾಣ-ಮಾನಗಳನ್ನು ರಕ್ಷಿಸುವ ಭಾರವನ್ನು ನಾವು ಹೋರುತ್ತೇವೆ ಎಂದು ಭರವಸೆ ನೀಡುತ್ತಾರೆ. ಅಕ್ಕ-ತಂಗಿಯರು ಅಣ್ಣ-ತಮ್ಮಂದಿರಿಗೆ ಆರತಿಯನ್ನು ಮಾಡಿ ರಾಖಿಯನ್ನು ಕಟ್ಟಿದಾಗ ಅಣ್ಣಂದಿರು ಅವಳಿಗೆ ಉಡುಗೊರೆಯನ್ನು ಕೊಡುತ್ತಾರೆ.

ರಕ್ಷಾಬಂಧನದ ಕುರಿತು ಅನೇಕ ಐತಿಹಾಸಿಕ ಘಟನೆಗಳನ್ನು ಹೇಳಲಾಗುತ್ತದೆ. ಕೆಲವು ರಾಜರು ಮೊದಲು ಶತ್ರುರಾಜರನ್ನು ಸದೆಬಡಿದು ಅನಂತರ ಅ ಶತ್ರುರಾಜರ ಹೆಣ್ಣು ಮಕ್ಕಳ ಕೈಯಿಂದ ರಾಖಿಯನ್ನು ಕಟ್ಟಿಸಿಕೊಂಡು ಹಿಂದಿನ ವೈರವನ್ನೇ ಮರೆತು ಅವರೊಂದಿಗೆ ಸಹಜ ಮಿತ್ರರಾಗುತ್ತಿದ್ದರಂತೆ ರಾಖಿಯನ್ನು ಕಟ್ಟಿದ ಸಹೋದರಿಗಾಗಿ ಪ್ರಾಣವನ್ನೇ ಅರ್ಪಿಸಿದ ಅನೇಕ ಮುಸಲ್ಮಾನ ರಾಜರ ಕಥೆಗಳೂ ಪ್ರಚಲಿತವಿದೆ.

ದೇವತೆಗಳಿಗೂ ದೈತ್ಯರಿಗೂ ಅನೇಕ ವರ್ಷಗಳ ಕಾಲ ಯುದ್ಧ ನಡೆದು ದೈತ್ಯರ ಕೈ ಮೇಲಾಯಿತು. ಆಗ ಇಂದ್ರನ ಪತ್ನಿ ಶಚೀದೇವಿ ರಕ್ಷಾಬಂಧನ ವ್ರತಮಾಡಿ, ಇಂದ್ರನ ಕೈಗೆ ರಾಖಿ ಕಟ್ಟಿದಳು. ಯುದ್ಧದಲ್ಲಿ ಆಮೇಲೆ ಇಂದ್ರನು ವಿಜಯಶಾಲಿಯಾದನು. ಇದು ರಾಖಿಯ ಮಹಿಮೆ. ಕುಂತಿದೇವಿಯ ವ್ರತಮಾಡಿ ತನ್ನ ಮಕ್ಕಳಿಗೆ ಕಟ್ಟಿದ ರಕ್ಷೆಯಿಂದಾಗಿ ಅವರು ಕುರುಕ್ಷೇತ್ರದಲ್ಲಿ ಜಯಗಳಿಸಿದರು.

ಶ್ರೀ ಶುಕ್ರವಾರ ಗೌರಿವ್ರತ

ಆದಿ ಕಾಲದಲ್ಲಿ ಸುಪ್ರಸಿದ್ಧವಾದ ಒಂದು ಪಟ್ಟಣವಿತ್ತು. ಅಲ್ಲಿ ಧನಶೆಟ್ಟಿ ಎಂಬ ಆಗರ್ಭ ಶ್ರೀಮಂತ ಇದ್ದನು. ಇವನು ಭಕ್ತಿವಂತನು, ಧರ್ಮನಿಷ್ಠಿಯು ಆಗಿದ್ದನು. ಇವನಿಗೆ ಸುಂದರಿಯಾದ, ಮಹಾ ಸಾಧ್ವಿಯಾದ ಹೆಂಡತಿ ಇದ್ದಳು. ಇವರಿಗೆ 'ಜಯಚಂದ' ಎಂಬ ಸುಂದರ ಮಗ ಇದ್ದನು. ಇವನ

ಜಾತಕದಲ್ಲಿ ಹದಿನೈದು ವರ್ಷ ಮಾತ್ರ ಬದುಕುತ್ತಾನೆ ಎಂದು ಜೋಯಿಸರು ಹೇಳಿದ್ದರು. ಇವರಿಗೆ ಮತ್ತೆ ಮಕ್ಕಳ ಭಾಗ್ಯ ಇಲ್ಲವೆಂದು ಹೇಳಿದ್ದರು. ಇದರಿಂದ ಅವರು ತಮ್ಮ ಒಬ್ಬ ಮಗನನ್ನು ಉಳಿಸಿಕೊಳ್ಳಲು ತಮ್ಮಲ್ಲಿ ಇರುವ ಶ್ರೀಮಂತಿಕೆಯನ್ನು ತ್ಯಜಿಸಲು ಅವರು ತಯಾರು ಇದ್ದರು. ಒಬ್ಬ ಮುನೀಶ್ವರನನ್ನು ಕಂಡು ತಮ್ಮ ದುಃಖ ಹೇಳಿಕೊಂಡರು. ತಮ್ಮ ಮಗನನ್ನು ಉಳಿಸಿಕೊಳ್ಳಲಿಕ್ಕೆ ಅವರು ಯಾವ ತ್ಯಾಗಕ್ಕೂ ಸಿದ್ದರಾಗಿದ್ದರು. ಆಗ ಮುನೀಶ್ವರರು ತನ್ನ ಮನ ಕರಗಿಸಿಕೊಂಡು ನಿಮ್ಮ ಮಗ ಉಳಿಯ ಬೇಕೆಂದರೆ ಒಂದು ಮಾರ್ಗವಿದೆ, ಅದರಂತೆ ನೆಡೆದರೆ ಅವನು ಧೈರ್ಯವಂತನು, ಬಲವಂತನು, ಚಿರಾಯುಷ್ಯನು ಆಗುವನು ಎಂದು ಹೇಳಿದರು. ನೀವು ಹೇಳಿದಂತೆ ನೆಡೆದುಕೊಳ್ಳುತ್ತೇವೆ ಎಂದು ಹೇಳಿದರು.

ಮುನೀಶ್ವರನು ಕೇಳಿರಿ ಶ್ರಾವಣ ಮಾಸದಲ್ಲಿ ಶ್ರೀ ಶುಕ್ರವಾರ ಸಂಪತ್ತ ಗೌರಿವ್ರತ ಕೈಗೊಳ್ಳಬೇಕು ಅಂದರೆ ನಿಮಗೆ ಸುಖವಾಗುವದು. ಮಗನು ಮೃತ್ಯುವಿನಿಂದ ಪಾರಾಗುವನೆಂದು ಹೇಳಿದನು.

ವ್ರತ ವಿಧಾನ

ಶ್ರಾವಣಮಾಸ ಶುಕ್ರವಾರ ಮನೆಯನ್ನು ಗೋವಿನ ಮಲದಿಂದ ಸಾರಿಣಿಗೆಯ ಮಾಡಿ ವ್ರತ ನೆರವೇರಿಸುವ ಹೆಣ್ಣು ಮಕ್ಕಳು ಬಾಯಿಯಲ್ಲಿ ಒಂದು ಹನಿ ನೀರು ಸಹ ಹಾಕಿಕೊಳ್ಳದೆ ಉಪವಾಸ ಮಾಡಬೇಕು. ಮನೆಯಲ್ಲಿ ಬಾಳೆಯಕಂಬ, ಮಾವಿನ ತಳಿರುಗಳಿಂದ ಅಲಂಕರಿಸಿ ಪೂಜಾ ಮಂಟಪದಲ್ಲಿ ಮಣಿ ಇಟ್ಟು ಅದರ ಮೇಲೆ ಅಕ್ಕಿಯ ಸಾಸಕ್ಕಿ ಹೊಯ್ದು ಅದರ ಮೇಲೆ ಮುತ್ತುಗದ ಎಲೆಯನ್ನು ಹರವಿ ಅದರಲ್ಲಿ ಬಂಗಾರದ ಇಲ್ಲವೆ, ಬೆಳ್ಳಿಯ ಇಲ್ಲವೆ ಅರಿಶಿಣದ ಶ್ರೀ ಗೌರೀ ಮೂರ್ತಿಯನ್ನು ಪ್ರತಿಷ್ಠಾಪಿಸಿ ಚಿತ್ರ ವಸ್ತ್ರಾದಿಗಳಿಂದ ಸಿಂಗರಿಸಿ ಮುತ್ತೈದೆಯರಿಗೆ ಕುಂಕುಮ ಕೊಟ್ಟು ಕಂಕಣಗಳನ್ನು ಕಟ್ಟಬೇಕು, ಉಡಿ ತುಂಬ ಬೇಕು, ಪೂಜಿಸಿದ ಮಂಟಪಕ್ಕೆ ಐದುಸಾರಿ ಪ್ರದಕ್ಷಿಣೆ ಹಾಕಬೇಕಾದರೆ ಒಂದು ಮಂತ್ರವನ್ನು ಹೇಳಬೇಕು.

ಅಧ್ಯವೆಂ ಸಫಲಂ ಜ್ಮಂ ಅಧ್ಯಮೇ ಸಫಲಂತಪ ಅದ್ಯಮೇ

ಫಲಿತಂ ಪುಣ್ಯ ಪೂಜಾಯಾಂತೆ ಮಹೇಶ್ವರಿ ಪ್ರದಕ್ಷಣಂ ಕರೋಮಿ

ಪೂಜೆ ಮುಗಿದ ನಂತರ ತುಪ್ಪದ ದೀಪದಿಂದ ಮಂಗಳಾರುತಿ ಮಾಡಿ ಅದಕ್ಕೆ ಕಪ್ಪು ಹಿಡಿದು, ಬಂದಿರುವ ಮುತ್ತೈದೆಯರಿಗೆ ಕುಂಕುಮ ಕೊಟ್ಟು, ಉಡಿ ತುಂಬಿ, ಆರತಿ ಮಾಡಿ ಕಪ್ಪನ್ನು ಹಚ್ಚಬೇಕು.

ಈ ವ್ರತವನ್ನು ಮುನಿಶ್ವರನು ಧನಶೆಟ್ಟಿಗೆ ಹೇಳಿ ತಮ್ಮ ಮಗನನ್ನು ಕಾಶೀ ಪುಣ್ಯಕ್ಷೇತ್ರಕ್ಕೆ ಕಳುಹಿಸಿ ಗಂಗಾ ಸ್ನಾನ ಮಾಡಿ ದಾನ ಧರ್ಮಮಾಡಿ ಬರಬೇಕು. ಇದರಿಂದ ನಿಮ್ಮ ಮಗ ಚಿರಾಯುಷ್ಯನಾಗುವನು

ಎಂದು ಹೇಳಿದನು. ಇದರಂತೆ ಆ ದಂಪತಿಗಳು ಶ್ರಾವಣ ಮಾಸದಲ್ಲಿ ವಿಜ್ರಂಭಣೆಯಿಂದ ಈ ಪೂಜೆಯನ್ನು ಮಾಡಿದರು. ತಂದೆ ತಾಯಿಗಳು ದುಃಖದಿಂದ ಇರುವುದನ್ನು ಕಂಡು ಜಯಚಂದನು ಕಾರಣ ಕೇಳಿದನು, ಆಗ ತಾಯಿಯು ಒಂದು ಮುಪ್ಪಾದ ಮುದುಕಿಯು ಮನೆಗೆ ಬಂದು ಭಿಕ್ಷೆ ಕೇಳಿದಳು ನೀಡಲು ಹೋದಾಗ ನಿನಗೆ ಮಕ್ಕಳೆಷ್ಟು ಎಂದು ಕೇಳಿದಳು. ಬಂಜೆಯಾಗಿದ್ದರಿಂದ ಅವಳು ಒಂದು ಉಪಾಯ ಹೇಳಿದಳು. ಊರ ಹೊರಗೆ ಇರುವ ಮಾರುತಿ ದೇವಾಲಯದಲ್ಲಿ ಬಿಲ್ವಪತ್ರಿ ಗಿಡವುಂಟು, ಶ್ರಾವಣಮಾಸ ಶುಕ್ರವಾರ ಗೌರೀಪೂಜೆಯನ್ನು ಮಾಡಿ ಆ ಹಣ್ಣನ್ನು ಸೇವಿಸು ಎಂದು ಹೇಳಿದಳು. ನಿನ್ನ ಜಾತಕ ಬರೆಸಿದ ಮೇಲೆ ನೀನು ೧೫ ವರ್ಷ ಮಾತ್ರ ಬದುಕುವುದೆಂದು ತಿಳಿಯಿತು. ಅದಕ್ಕೆ ಈ ವ್ರತ ಮಾಡುತ್ತಿದ್ದೇವೆ ಎಂದು ಹೇಳಿದರು. ಮಗನು ನಾನು ಕಾಶಿ ಕ್ಷೇತ್ರಕ್ಕೆ ಹೋಗುತ್ತೇನೆ ಎಂದು ಒಪ್ಪಿಕೊಂಡನು ಭಕ್ತಿಯಿಂದ ಪೂಜಿಸಿದನು ಆಗ ಕಾಶಿ ವಿಶ್ವನಾಥನು ಮಗು ನಿನ್ನ ತಂದೆ-ತಾಯಿ ನನ್ನ ಪ್ರೀತಿಯ ಭಕ್ತರು ಆದ್ದರಿಂದ ನೀವು ಮನೆಯಲ್ಲಿ ಶ್ರಾವಣ ಮಾಸದ ಶ್ರೀ ಶುಕ್ರವಾರ ಮಹಾಲಕ್ಷ್ಮಿಯ ಪೂಜೆ ಮಾಡಿ ಕಾಪಾಡುವಳು ಎಂದು ಪ್ರತಿಧ್ವನಿ ಕೇಳಿಸಿತು. ತಂದೆ-ತಾಯಿಗೆ ವಿಷಯ ತಿಳಿಸಿದನು ಹದಿನೈದು ವರ್ಷ ಕಳೆಯಿತು, ಮಗನು ಉಳಿದಿದ್ದರಿಂದ ಈ ವ್ರತವನ್ನು ಪ್ರತಿ ವರ್ಷ ವಿಜೃಂಭಣೆಯಿಂದ ಮಾಡಿಕೊಂಡು ಬಂದರು.

ಶ್ರೀ ಸಣ್ಣ ಗೌರೀ ವ್ರತ

ಒಮ್ಮೆ ಕೈಲಾಸದಲ್ಲಿ ಪರಶಿವನು ಪಾರ್ವತಿಯೊಂದಿಗೆ ಯಕ್ಷ, ಕಿನ್ನರ, ಗಂಧರ್ವರಿಂದಲೂ, ನಾರದ ತುಂಬುರರ ವೀಣಾಗಾನದಿಂದಲೂ, ನಂದಿ ಮೊದಲಾದ ಪ್ರಮಥರಿಂದಲೂ ವೀರಭದ್ರ ಮೊದಲಾದ ಪ್ರಮಥಗಣಗಳಿಂದಲೂ ಸ್ತೋತ್ರ, ಸ್ತುತಿ, ಸಂಕೀರ್ತನೆಯಲ್ಲಿ ಆನಂದದಿಂದ ಇರುವಾಗ ಸುಬ್ರಹ್ಮಣ್ಯನು ತಂದೆಯಾದ ಶಿವನನ್ನು ಲೋಕ ಕಲ್ಯಾಣಾರ್ಥವಾಗಿ ಈ ರೀತಿ ಕೇಳಿದನು. ''ಹೇ ಸ್ವಾಮಿಯೇ ಲೋಕದಲ್ಲಿ ಯಾರು ಯಾವ ವ್ರತ ಮಾಡುವುದರಿಂದ ಸಮಸ್ತವಾದ ಇಷ್ಟಾರ್ಥಗಳನ್ನು ಹೊಂದಿ ಸಂತೋಷದಿಂದ ಪುತ್ರ ಕ್ಷೇತ್ರಾಭಿವೃದ್ಧಿಯನ್ನು ಯಾವ ನ್ಯೂನತೆಯೂ ಇಲ್ಲದೆ ಪಡೆಯಬಹುದೆಂದು ವಿಧಾನವನ್ನು ತಿಳಿಸಿರಿ'' ಎಂದು ಕೇಳಿದಾಗ.

ಶಿವನು ಸಂತೋಷದಿಂದ ''ಸುಬ್ರಹ್ಮಣ್ಯನೇ ಲೋಕದಲ್ಲಿ ಆಚರಿಸತಕ್ಕ ವ್ರತಗಳಲ್ಲಿ ಅತ್ಯಂತ ಶ್ರೇಷ್ಠವಾದ ಸ್ವರ್ಣಗೌರಿ ವ್ರತ ಎಂಬ ಪೂಜೆ ಇದೆ. ಈ ವ್ರತವು ಸಕಲ ಇಷ್ಟಾರ್ಥ ಮನೋಕಾಮನೆಗಳನ್ನು ಈಡೇರಿಸುವ ಪೂಜೆ ಇದೆ. ಈ ವ್ರತವು ಸಕಲ ಇಷ್ಟಾರ್ಥ ಮನೋಕಾಮನೆಗಳನ್ನು ಕೊಡತಕ್ಕದ್ದು ಹಾಗೂ ಮಹಾ ಪುಣ್ಯಕರವಾದದ್ದು'' ಎಂದು ಹೇಳಿದನು.

'ಸುಬ್ರಹ್ಮಣ್ಯನು' ತಂದೆಯೇ ಈ ವ್ರತವನ್ನು ಹಿಂದೆ ಯಾರು ಆಚರಿಸಿದ್ದರೆಂದು ಪ್ರಶ್ನಿಸಲು

ಅದಕ್ಕೆ ಶಿವನು ಇದಕ್ಕಾಗಿ ಒಂದು ಇತಿಹಾವಿದೆ ಹೇಳುವೆನು ಕೇಳು ಪೂರ್ವಕಾಲದಲ್ಲಿ ಸರಸ್ವತಿ ನದೀ ತೀರದಲ್ಲಿ ವಿಮಲಾಪುರಿ ಎಂದು ಒಂದು ಪಟ್ಟಣ ವಿದ್ದಿತು. ಆ ಪಟ್ಟಣವನ್ನು ಚಂದ್ರ ಪ್ರಭನೆಂಬ ಅರಸನು ನ್ಯಾಯ ನೀತಿಯಿಂದ ಪರಿಪಾಲಿಸುತ್ತಿದ್ದನು.

ಆತನಿಗೆ ಸುಂದರಿಯಾದ ಇಬ್ಬರು ಪತ್ನಿಯರು ಇದ್ದರು ಆದರೆ ಚಂದ್ರಪ್ರಭನಿಗೆ ಹಿರಿಯ ಪತ್ನಿಯಲ್ಲಿ ಅತಿಯಾದ ಪ್ರೀತಿ ಇತ್ತು.

ಒಂದು ಸಾರಿ ವನಪಾಲಕರು ದ್ಹೊರೆಗೆ ಅರಣ್ಯದಲ್ಲಿ ಕ್ರೂರಮೃಗಗಳು ಅಧಿಕವಾಗಿರುವ ವಿಚಾರ ತಿಳಿಸಿದರು. ಆಗ ದೊರೆಯು ವನ್ಯಕ್ರೂರ ಮೃಗಗಳ ನಿಯಂತ್ರಣಕ್ಕೆ ಬೇಟೆಯಾಡಲು ಕಾಡಿಗೆ ಹೊರಟನು. ಅಲ್ಲಿ ಕ್ರೂರ ಮೃಗಗಳನ್ನು ಬೇಟೆಯಾಡಿ ಹುಲಿ, ಕರಡಿ, ಸಿಂಹ, ಚಿರತೆ, ಕಾಡೆಮ್ಮೆಗಳನ್ನು ಕೊಂದನು. ಬೇಟೆಯಾಡಿ ಬಳಲಿದಾಗ ವಿಶ್ರಾಂತಿಗಾಗಿ ಆಯಾಸ ಪರಿಹಾರ ಮಾಡಿಕೊಳ್ಳಲು ಸ್ಥಳವನ್ನು ಹುಡುಕಿಕೊಂಡು ಹೊರಟಾಗ ಬಹಳ ದೂರ ಹೋದ ಮೇಲೆ ಆತನಿಗೆ ಒಂದು ಸರೋವರವು ಗೋಚರವಾಯಿತು. ಆ ಸರೋವರವು ಸ್ಪಟಿಕದಂತೆ ಶುಭ್ರವಾಗಿದ್ದು ಅಲ್ಲಿ ಅನೇಕ ಅಪ್ಸರೆಯರಿಂದ ಕೂಡಿ ಹೆಚ್ಚು ಪ್ರಕಾಶಮಾನವಾಗಿ ಕಂಡಿತು. ಆ ಸರೋವರದ ತೀರದಲ್ಲಿ ಅಪ್ಸರೆಯರು ಯಾವುದೋ ಪೂಜೆಯಲ್ಲಿ ಮಗ್ನರಾಗಿದ್ದನ್ನು ನೋಡಿದ ರಾಜನು ಅಪ್ಸರೆಯರನ್ನು ನೋಡಿ ಬುದ್ಧಿಸ್ಥಿಮಿತ ಇಲ್ಲದವನಂತೆ ಸಮೀಪ ಬಂದನು. ಆ ಪೂಜೆ ನೋಡಿದ ಮಾತ್ರದಿಂದಲೋ ಅಪ್ಸರೆಯರ ದರ್ಶನದಿಂದಲೋ ಆಯಾಸ ಪರಿಹಾರನಾಗಿ ಆತನಲ್ಲಿ ಲವಲವಿಕೆ ಉಂಟಾಗಲು ಆಶ್ಚರ್ಯ ಚಕಿತನಾದ ರಾಜನು, ಆ ಅಪ್ಸರ ದೇವತೆಗಳ ಬಳಿ ಬಂದು ''ಅಮ್ಮಾ ಸೌಭಾಗ್ಯವತಿಯರೇ, ನೀವು ಮಾಡುತ್ತಿರುವ ಪೂಜೆ ಯಾವುದು''? ಎಂದು ಪ್ರಶ್ನಿಸಿದನು.

ಅದಕ್ಕೆ ಅವರು ''ರಾಜನೇ! ನಾವು ಸ್ವರ್ಣಗೌರಿ ವ್ರತ ಮಾಡುತ್ತಿದ್ದೇವೆ'' ಎಂದು ಹೇಳಿದರು. ಇದನ್ನು ಕೇಳಿದ ರಾಜನು ಆಶ್ಚರ್ಯದಿಂದ ''ಅಪ್ಸರೆಯರೇ ಈ ವ್ರತ ಮಾಡುವ ಬಗೆ ಹೇಗೆ? ಇದರಿಂದ ಯಾವ ವಿಧವಾದ ಫಲ ಸಿಗುವುದು''? ಸವಿಸ್ತಾರವಾಗಿ ತಿಳಿಸಿ ಎನ್ನಲು.

ಆಗ ಆ ಅಪ್ಸರ ಮಾತೆಯರು ''ಎಲೈ ರಾಜನೇ ಈ ವ್ರತವನ್ನು ಭಾದ್ರಪದ ಶುದ್ಧತದಿಗೆ ದಿನದಲ್ಲಿ ಮಾಡಬೇಕು, ಹದಿನಾರು ವರ್ಷಗಳು ಕ್ರಮವಾಗಿ ಈ ವ್ರತವನ್ನಾಚರಿಸಿ ಅಂತ್ಯದಲ್ಲಿ ಉದ್ಯಾಪನೆಯನ್ನು ಮಾಡಬೇಕು'' ಎಂದು ಹೇಳಿದರು.

ಆ ಅಪ್ಸರ ಮಾತೆಯರು ಹೇಳಿದ ಮಾತನ್ನು ಕೇಳಿದ ರಾಜನು ಜಿತೇಂದ್ರಿಯನಾಗಿ ಸ್ವರ್ಣಗೌರಿ ವ್ರತವನ್ನು

ಆ ಸರೋವರ ತೀರದಲ್ಲೇ ಆಚರಿಸಿ ದೋರಬಂಧನವನ್ನು ಮಾಡಿಕೊಂಡು ಅರಮನೆಗೆ ಬಂದು ತನ್ನ ಪತ್ನಿಯರಿಗೆ ವ್ರತದ ಬಗ್ಗೆ ಹೇಳಿ ಈ ವ್ರತವನ್ನು ಮಾಡಿಸಲು ಪ್ರಯತ್ನಿಸಿದನು.

ಹಿರಿಯ ಪತ್ನಿಯು ರಾಜನ ಮಾತನ್ನು ಕೇಳುತ್ತಲೇ ಅತ್ಯಂತ ಕೋಪದಿಂದ ಪತಿಯ ಕೈಯಲ್ಲಿ ಧರಿಸಿದ್ದ ವ್ರತ ದಾರವನ್ನು ಕಿತ್ತು ಅರಮನೆಯ ಹಿಂದೆ ಇದ್ದ ಒಂದು ಒಣಗಿದ್ದ ಗಿಡದ ಮೇಲೆ ಬೀಳುವಂತೆ ಎಸೆದಳು. ಆಗ ರಾಜನು ಇದು ಸರಿಯಲ್ಲವೆಂದು ಎಷ್ಟು ತಿಳಿ ಹೇಳಿದರು ಕೇಳದೆ ಹೋದಳು. ಹಿರಿಯ ರಾಣಿಯು ತಿಳಿಯದೆ ಎಸೆದಿದ್ದ ದಾರವು ಬಿದ್ದ ಒಣಗಿದ ಗಿಡವು ಆ ವ್ರತದಾರದ ಪ್ರಭಾವದಿಂದ ಚಿಗುರಿ ಹೂವು ಬಿಟ್ಟು ಹಣ್ಣು ತುಂಬಿಕೊಂಡು ನಿಂತಿತು. ಇದನ್ನು ಕಿರಿಯ ರಾಣಿಯು ನೋಡಲು ವ್ರತದ ದಾರವನ್ನು ತೆಗೆದುಕೊಂಡು ಹೋಗಿ ರಾಜನಿಗೆ ಪ್ರೀತಿಪಾತ್ರಳಾಗಿ ರಾಜನು ಹೇಳಿದಂತೆ ಸ್ವರ್ಣಗೌರಿ ವ್ರತ ಮಾಡಿ ಬೇಕಾದ ಮನೋ ಇಚ್ಛೆಗಳನ್ನು ಹೊಂದಿದಳು. ರಾಜನ ವಿಶ್ವಾಸಗಳಿಸಿದಳು.

ಹಿರಿಯ ಹೆಂಡತಿಯು ಈ ವ್ರತವನ್ನು ಕಡೆಗಣಿಸಿದ್ದರಿಂದ ಅನ್ಯರ ಪತಿಯ ವ್ರತದಾರವನ್ನು ಕಿತ್ತು ವ್ರತ ಭಂಗ ಮಾಡಿದ್ದರಿಂದ ಈ ಪಾತಕದಿಂದ ಅತ್ಯಂತ ತೊಂದರೆ, ಕಷ್ಟ, ನಷ್ಟಗಳನ್ನು ಅನುಭವಿಸಲು ಅರಮನೆ ಬಿಟ್ಟು ಅರಣ್ಯಕ್ಕೆ ಹೋಗಿ ಅಲ್ಲಿರುವ ಋಷಿಗಳ ಆಶ್ರಮಕ್ಕೆ ಹೋದರೂ ಅವರು ಆಕೆಯನ್ನು ಆಶ್ರಮವನ್ನು ಪ್ರವೇಶಿಸಲು ಅನುಮತಿಸಲಿಲ್ಲ. ಇದರಿಂದ ಮನನೊಂದ ರಾಜನ ಹಿರಿಯ ಪತ್ನಿಯು ಪಶ್ಚಾತ್ತಾಪದಿಂದ ಸ್ವರ್ಣಗೌರಿಯನ್ನೇ ನೆನೆದು ಉಪವಾಸ ಪ್ರಾರಂಭಿಸಿದಳು. ಹೀಗೆ ಅನೇಕ ದಿನಗಳು ಕಳೆದ ಮೇಲೆ ಒಂದು ದಿನ ಸ್ವರ್ಣಗೌರಿಯು ಪ್ರತ್ಯಕ್ಷಳಾದಳು.

ಆಗ ರಾಜನ ಹಿರಿಯ ಪತ್ನಿಯು ಅತ್ಯಂತ ಸಂತೋಷದಿಂದ ಶ್ರದ್ಧಾ ಭಕ್ತಿಗಳಿಂದಲೂ ಆಕೆಗೆ ಸಾಷ್ಟಾಂಗ ನಮಸ್ಕಾರಗಳನ್ನು ಮಾಡಿ ಸ್ತೋತ್ರ ಮಾಡಿದಳು. ಆಕೆಯು ಮಾಡಿದ ಸ್ತೋತ್ರದಿಂದ ಸಂತುಷ್ಟಳಾದ ಪಾರ್ವತಿಯು ಆಕೆಗೆ ಅನುಗ್ರಹಿಸಿ ಆಕೆಯ ಇಷ್ಟಾರ್ಥಗಳನ್ನು ಕೊಟ್ಟಳು.

ರಾಜನ ಪತ್ನಿಯು ಪುನಃ ಅರಮನೆಗೆ ಬಂದು ಪತಿಯೊಡನೆ ಸೇರಿ ಸ್ವರ್ಣಗೌರಿ ವ್ರತ ಮಾಡಿ ಸೌಭಾಗ್ಯ, ಪುತ್ರ ಸಂತಾನವನ್ನು ಪಡೆದು ವ್ರತಾಚರಣೆಯಿಂದ ಸಕಲ ಕಾಮ್ಯಗಳನ್ನು ಪಡೆದು ಪತಿಯೊಡನೆ ಅನೇಕ ವರ್ಷಗಳ ಕಾಲ ಸುಖವಾಗಿದ್ದು ಪತಿಸಹಿತ ಶಿವ ಸಾಯುಜ್ಯವನ್ನು ಪಡೆದಳು.

ಆದ್ದರಿಂದ ಯಾರು ಈ ವ್ರತವನ್ನು ಶ್ರದ್ಧೆ ಭಕ್ತಿ ಪೂರ್ವಕ ಮಾಡುತ್ತಾರೋ ಅವರಿಗೆ ಸ್ವರ್ಣಗೌರಿಯ ಅನುಗ್ರಹದಿಂದ ಇಷ್ಟಾರ್ಥಗಳು ಸಿದ್ಧಿಸುವುವು, ಎಂದು ಶಿವನು ಸುಬ್ರಹ್ಮಣ್ಯನಿಗೆ ಹೇಳಿದನೆಂಬಲ್ಲಿಗೆ ಸ್ಕಂದ ಪುರಾಣದ ಶ್ರೀ ಸ್ವರ್ಣಗೌರಿ ವ್ರತಕಥೆಯು ಸಂಪೂರ್ಣವಾಯಿತು.

ಸ್ವರ್ಣಗೌರಿ ವ್ರತ ಮಾಡುವ ಆಚರಣೆ

ಸ್ತ್ರೀಯರು ಬೆಳಿಗ್ಗೆ ಎದ್ದು ಸ್ನಾನ ಮಾಡಿ ಮಡಿ ಬಟ್ಟೆಯನ್ನುಟ್ಟುಕೊಂಡು ಪೂಜೆ ಸಾಮಾನು ತೆಗೆದುಕೊಂಡು ಭಾವಿ, ಅಥವ ಬೋರ್‌ವೆಲ್‌ನ ಹತ್ತಿರ ಗಂಗಾಪೂಜೆ ಮಾಡಿಕೊಂಡು ತಂದುವೆ ವರಮನೆಯಲ್ಲಿಡಬೇಕು. ಒಂದು ಮರದ ಕುರ್ಚಿಗೆ ಬಾಳೆಕಂಬಗಳನ್ನು ಕಟ್ಟಿ ಅಲಂಕಾರ ಮಾಡಬೇಕು. ಇಲ್ಲವೆ ಮರದ ಮಂಟಪ ಇದ್ದವರು ಅದಕ್ಕೂ ಅಲಂಕಾರ ಮಾಡಬಹುದು, ಮಂಟಪದ ಮಧ್ಯದಲ್ಲಿ ಒಂದು ಕೊನೆ ಬಾಳೆದೆಲೆಯನ್ನು ಹಾಸಿ ಅದರ ಮೇಲೆ ಒಂದು ತಟ್ಟೆಯಲ್ಲಿ ಅಕ್ಕಿಯನ್ನು ಹಾಕಬೇಕು, ಅದರಲ್ಲಿ ಒಂದು ರೂ ನಾಣ್ಯವನ್ನು ಹಾಕಬೇಕು, ತಂದಿಟ್ಟ ಗಂಗೆಯನ್ನು ಅದರ ಮೇಲೆ ಇಡಬೇಕು ಮಣ್ಣಿನಿಂದ ಮಾಡಿದಂತಹ ಸ್ವರ್ಣಗೌರಿ ಪ್ರತಿಮೆ ಅಂಗಡಿಯಲ್ಲಿ ಸಿಗುತ್ತದೆ ಅದನ್ನು ಹಿಂದಿನ ದಿನ ರಾತ್ರಿ ತಂದಿಟ್ಟುಕೊಂಡಿರಬೇಕು ಒಬ್ಬರು ಸ್ವಾಮಿಯವರನ್ನು ಕರೆಸಿ ಅವರಿಂದ ಪೂಜೆಯನ್ನು ಮಂತ್ರದಿಂದ ಮಾಡಿಸುತ್ತಾರೆ.

ಬಾಗಣ ತಯಾರಿಕೆ

ಹಿಂದಿನ ದಿನವೆ ಎರಡು ಜೊತೆ ಮರಗಳನ್ನು ತಂದು ತೊಳೆದು ಅದಕ್ಕೆ ಅರಿಷಿಣ ಪಟ್ಟೆಹಚ್ಚಿ ಮರದೊಳಗೆ ಕುಡಿ ಬಾಳೆ ಎಲೆ ಹಾಸಿ ಅದರ ಮೇಲೆ ಒಂದು ಬೊಗಸೆ ಅಕ್ಕಿ ಹಾಕಿ ಒಂದು ರೂ ನಾಣ್ಯ ಇಡಬೇಕು ನಂತರ ಮರದ ತುಂಬಾ ಕೆಲವು ಸಾಮಾನುಗಳನ್ನು ಇಡಬೇಕು ಅವು ಯಾವುವೆಂದರೆ, ಒಂದು ಕಣ, ತೆಂಗಿನ ಕಾಯಿ, ಒಂದು ಲೋಟ ತೊಗರಿಬೇಳೆ, ಒಂದು ಲೋಟ ಕಡ್ಲೇಬೇಳೆ, ಒಂದು ಲೋಟ ಹೆಸರುಬೇಳೆ, ಒಂದು ಲೋಟ ಅಕ್ಕಿ, ಒಂದು ಅಚ್ಚು ಬೆಲ್ಲ, ಗೋಧಿ, ಇವುಗಳನ್ನು ಕವರ್‌ಗಳಲ್ಲಿ ಬೇರೆ ಬೇರೆ ಹಾಕಿಡಬೇಕು, ಒಂದು ಸೌತೆಕಾಯಿ, ೨ ಎಲೆ ಅಡಿಕೆ , ಐದು ಬಾಳೆಹಣ್ಣು, ಅರಿಷಿಣ, ಕುಂಕುಮದ ಪ್ಯಾಕು, ನಾಲ್ಕು ಬಳೆ, ಚಿಗಳಿ, ತಂಬಿಟ್ಟು, ಚಿಕ್ಕದು ಒಂದು ಕನ್ನಡಿ, ಬಾಚಣಿಕೆ, ಎರಡು ಚಕ್ಕಲಿ, ಎರಡು ಕರ್ಜಿಕಾಯಿ, ಎರಡು ಮರಗಳಿಗೆ ಇವೆಲ್ಲವನ್ನು ಇಟ್ಟು ಪೂಜೆ ಮಾಡಿ ಆ ಎರಡೂ ಮರ ಇನ್ನೆರಡು ಮರಗಳಿಂದ ಮುಚ್ಚಬೇಕು, ಸ್ವಾಮಿಯವರು ಕಥೆ ಓದುತ್ತಾರೆ. ಪೂಜೆಮಾಡುವ ಮುತ್ತೈದೆಯು ತುಪ್ಪದ ದೀಪವನ್ನು ಹಚ್ಚಿ ಅದಕ್ಕೆ ಒಂದು ಸ್ಪೂನ್ ಇಟ್ಟು ಕಾಸಿ ಕಪ್ಪನ್ನು ತೆಗೆಯುತ್ತಾಳೆ. ಕಥೆ ಓದಿ ಮುಗಿಸುವವರೆಗೂ ಅದನ್ನು ಹಿಡಿದು ಕೊಂಡಿರುತ್ತಾಳೆ. ನಂತರ ಭಾಗಣವನ್ನು ಸ್ವರ್ಣಗೌರಿಗೆ ತೋರಿಸಿ ನಾವು ಇಟ್ಟುಕೊಳ್ಳುತ್ತೇವೆ. ಇನ್ನೊಂದು ಭಾಗಣವನ್ನು ಮುತ್ತೈದೆಗೆ ಕೊಡುವಾಗ ಅರಿಷಿಣ ಧಾರಕ್ಕೆ ೧೬

ಗಂಟುಗಳನ್ನು ಹಾಕಿ ಒಂದು ಶಾವಂತಿಗೆ ಹೂವನ್ನು ಕಟ್ಟಿರುತ್ತಾರೆ. ಈ ರೀತಿ ಎರಡು ದಾರ ತಯಾರಿಸಿರುತ್ತಾರೆ. ಒಂದನ್ನು ಪೂಜೆ ಮಾಡಿದವರು, ಇನ್ನೊಂದು ಮುತ್ತೈದೆ ಸ್ವಾಮಿಯವರು ಕಟ್ಟಿಕೊಳ್ಳುತ್ತಾರೆ. ಕುಂಕುಮ ಕೊಟ್ಟು ಉಡಿ ತುಂಬಿ ಭಾಗಣದ ಮರದ ಮೇಲೆ ಸೀರೆ ಸೆರಗನ್ನು ಮುಚ್ಚಿ ಭಾಗಣ ಕೊಟ್ಟು ಕಾಡಿಗೆ ಹಚ್ಚುತ್ತಾರೆ. ಕಳಸ ಬೆಳಗುತ್ತಾರೆ. ಸ್ವರ್ಣಗೌರಿಗೆ ಐದು ಹಿಡಿ ಮಡ್ಲಕ್ಕಿ ಹಾಕುತ್ತಾರೆ. ದೇವರಿಗೆ ನೈವೇದ್ಯ ಮಾಡಿ. ಸ್ವಾಮಿಯವರಿಗೆ ಊಟಕ್ಕೆ ನೀಡಿ ಅವರು ಹೊರಟನಂತರ ಮನೆಯವರೆಲ್ಲರೂ ಊಟಮಾಡುತ್ತಾರೆ. ಮೂರು ದಿನ ದೇವರನ್ನು ಇಟ್ಟು ಆಮೇಲೆ ಬಾವಿಗೆ ಕಳಿಸಿ ಬರುತ್ತಾರೆ.

ಗಣಪತಿ ಹಬ್ಬ

ಹಿಂದೂ ಪದ್ಧತಿಯಲ್ಲಿ ಪೂಜೆಗೊಳ್ಳುವ ಎಲ್ಲ ದೇವರ ಪೈಕಿ ಅಗ್ರಪೂಜೆ ಸಲ್ಲುವುದು ಗಣಪತಿಗೆ. ಎಲ್ಲ ದೇವ- ದೇವತೆಗಳಿಗೂ ಪೂಜೆ ನಡೆಯುವುದಾದರೂ ಎಲ್ಲಕ್ಕಿಂತ ಭಿನ್ನವಾಗಿ, ವ್ಯಾಪಕ ಪ್ರಮಾಣದಲ್ಲಿ ಉತ್ಸವ ನಡೆಯುವುದು ಗಣಪತಿಗೆ ಮಾತ್ರ. ಏಕೆಂದರೆ ಗಣೇಶ ಪೃಥ್ವೀಸ್ವರೂಪ, ಅಂದರೆ ಪೃಥ್ವೀತತ್ವದವನು, ಪೃಥ್ವೀ ಅಂದರೆ ಭೂಮಿ, ಗಣೇಶ ಭೂಮಿಯ ಅಂಶದವನು. ಆದ್ದರಿಂದ ಭೂಮಿಯ ಮೇಲೆ ಜನಿಸಿದ ಚರಾಚರ ಪ್ರಾಣಿಗಳು ಸುಖವಾಗಿ ಬದುಕಿರಬೇಕಾದರೆ ಪೃಥ್ವಿಸ್ವರೂಪನಾದ ಗಣಪತಿಗೆ ಪೂಜೆ ಸಲ್ಲಿಸಬೇಕು ಎಂಬುದು ಶಾಸ್ತ್ರೋಕ್ತ ನಂಬಿಕೆ. ಹಾಗಾಗಿಯೇ ಪುಟ್ಟ ಮಕ್ಕಳಿಂದ ಹಿಡಿದು ವಯಸ್ಕರ ವರೆಗೆ ಎಲ್ಲರೂ ತಮ್ಮ ತಮ್ಮ ನಂಬಿಕೆ, ಶಕ್ತಿಗೆ ಅನುಗುಣವಾಗಿ ಮನೆ-ಮನೆಗಳಲ್ಲೂ ಗಣೇಶನಿಗೆ ಮೊದಲ ಪೂಜೆ ಸಲ್ಲಿಸಿಯೇ ತಮ್ಮ ಕಾರ್ಯ ಆರಂಭಿಸುತ್ತಾರೆ.

ಉತ್ಸವ ರೂಪದಲ್ಲಿ ಗಣೇಶನ ಪೂಜೆ ನಡೆಸಲು ಭಾದ್ರಪದ ಮಾಸವನ್ನೇ ಏಕೆ ಆರಿಸಲಾಗಿದೆ ಎಂಬುದಕ್ಕೆ ಕಾರಣವಿದೆ. ಭಾದ್ರಪದ ಮಾಸದ ವೇಳೆಗೆ ಬಹುತೇಕ ಕಡೆ ನಾಟಿ-ಬಿತ್ತನೆಯಂಥ ಕೆಲಸಗಳು ಮುಗಿದಿರುತ್ತವೆ. ಆ ಪೈರು-ಪಚ್ಚೆ ಸಮೃದ್ಧವಾಗಿ ಬೆಳೆಯಲಿ ಎಂಬ ಹರಕೆಯೊಂದಿಗೆ ಪೃಥ್ವೀಸ್ವರೂಪದ ಗಣಪತಿಗೆ ಪೂಜೆ ಸಲ್ಲಿಸಲಾಗುತ್ತದೆ. ಚೌತಿ ಗಣೇಶನಿಗೆ ವಿಶೇಷ, ಆದ್ದರಿಂದ ಶ್ರಾವಣ ಕಳೆದ ಅನಂತರ ಬರುವ ಭಾದ್ರಪದ ಮಾಸದ ಚತುರ್ಥಿಯ ದಿನವೇ ಗಣೇಶನನ್ನು ಪೂಜಿಸುವ ಪರಿಪಾಟ ಬೆಳೆದುಬಂದಿದೆ.

ಭಾರತೀಯರೆಲ್ಲರಿಗೂ ತುಂಬಾ ಆಪ್ತನಾದ ಈ ಗಣಪತಿಯನ್ನು ವೇದ, ಶಾಸ್ತ್ರ, ಪುರಾಣ, ಆಗಮ ಮೊದಲಾದ ಗ್ರಂಥಗಳು ಬಗೆಬಗೆಯಾಗಿ ಕೊಂಡಾಡಿವೆ. ಸಂಗೀತ, ಶಿಲ್ಪ, ಶಾಸನ, ಮುಂತಾದವುಗಳಲ್ಲೂ ಗಣಪತಿ ಒಂದಲ್ಲ ಒಂದು ರೀತಿ ಕಾಣಿಸಿಕೊಳ್ಳುತ್ತಾನೆ.

ಸ್ಯಮಂತಕೋಪಾಖ್ಯಾನ

ಪೂರ್ವಕಾಲದಲ್ಲಿ, ಪಶ್ಚಿಮ ಸಮುದ್ರದಲ್ಲಿ ಸುವರ್ಣದಿಂದ ರಚಿತವಾದ ಮತ್ತು ಸಕಲೈಶ್ವರ್ಯಗಳಿಂದ ಕೂಡಿ ಮೆರೆವ ದ್ವಾರಕಾ ಎಂಬ ನಗರವು ಪ್ರಸಿದ್ಧವಾಗಿದ್ದಿತು. ಈ ಮಹಾನಗರದಲ್ಲಿ ಶ್ರೀ ಕೃಷ್ಣಪರಮಾತ್ಮನು ಸಕಲ ಯಾದವರೊಂದಿಗೆ ವಾಸವಾಗಿದ್ದನು. ಮತ್ತು ಆತನು ದುಷ್ಟ ನಿಗ್ರಹ ಶಿಷ್ಟಪರಿಪಾಲನ ಎಂಬ ತನ್ನ ಅವತಾರ ಕಾರ್ಯವನ್ನು ಯಥಾ ಕ್ರಮವಾಗಿ ಸಾಗಿಸುತ್ತಲಿದ್ದನು. ಆ ದ್ವಾರಕಾ ನಗರದಲ್ಲಿ ಸಕಲಯಾದವರೂ ಉಳಿದ ನಾಗರಿಕರೂ ಯಾವ ಮನಸ್ತಾಪವಿಲ್ಲದೆ ಅತ್ಯಂತ ಸೌಖ್ಯದಿಂದ ಮತ್ತು ವೈಭವದಿಂದ ಬಾಳುವವರಾಗಿದ್ದರು.

ಅಲ್ಲಿ ಯಾದವ ಕುಲದ ಉಗ್ರನೆಂಬ ಪ್ರಮುಖನಿಗೆ ಸತ್ರಾಜಿತ, ಪ್ರಸೇನ ಎಂಬ ಈರ್ವರು ವೀರರಾದ ಪುತ್ರರಿದ್ದರು. ಅವರಲ್ಲಿ ಹಿರಿಯವನಾದ ಸತ್ರಾಜಿತನು ಶ್ರೀ ಸೂರ್ಯನಾರಾಯಣನನ್ನು ಪ್ರಸನ್ನೀಕರಿಸಿಕೊಳ್ಳಬೇಕೆಂಬ ಉದ್ದೇಶದಿಂದ ಸಮುದ್ರ ತೀರದಲ್ಲಿ ಏಕಾಗ್ರಚಿತ್ತದಿಂದ ತಪಸ್ಸನ್ನು ಆಚರಿಸುವವನಾದನು. ಸತ್ರಾಜಿತನ ಭಕ್ತಿಗೆ ಶ್ರೀ ಸೂರ್ಯದೇವನು ಪ್ರಸನ್ನನಾದನು. ಮತ್ತು ಭಕ್ತನ ಅಪೇಕ್ಷೆಯಂತೆ ತನ್ನಲ್ಲಿಯ ಸ್ಯಮಂತಕ ಮಣಿಯನ್ನು ವರವಾಗಿಕೊಟ್ಟನು. ಸತ್ರಾಜಿತನು ಆ ಮಣಿಯನ್ನು ಕೊರಳಲ್ಲಿ ಧರಿಸಿ ಸಂತೋಷದಿಂದ ದ್ವಾರಕಾನಗರವನ್ನು ಪ್ರವೇಶಿಸಿದನು. ಆ ಸ್ಯಮಂತಕ ಮಣಿಯ ಮಹಿಮೆಯು ಅದ್ಭುತವಾಗಿದ್ದಿತು. ಅದು ಪ್ರತಿದಿನ ಒಂದುನೂರಾ ಅರವತ್ತು ಸುವರ್ಣವನ್ನು ಕೊಡುವಂಥದೂ ಕ್ಷಣ ಮಾತ್ರ ಧರಿಸಿದವನಿಗೆ ಮನಸ್ಸಿನ ಪಾಪಗಳನ್ನು ಕಳೆಯುವಂಥದೂ ಆಗಿದ್ದಿತು. ಇಂಥ ಸ್ಯಮಂತಕ ಮಣಿಯನ್ನು ಧರಿಸಿಕೊಂಡ ಸತ್ರಾಜಿತನು ಅತ್ಯಂತ ಸುಂದರನೂ ತೇಜಸ್ವಿಯೂ ಆಗಿ ತೋರಿದನು. ಜನರು ಪ್ರತ್ಯಕ್ಷ ಸೂರ್ಯನೇ ಶ್ರೀ ಕಷ್ಣನನ್ನು ಕಾಣಲು ಬಂದನೆಂದು ಭಾವಿಸಿದರು. ಶ್ರೀಕೃಷ್ಣನು ಸ್ಯಮಂತಕ ಮಣಿಯಿಂದ ಪ್ರಭಾವಿತನಾದ ಸತ್ರಾಜಿತನನ್ನು ಕಂಡು ಅವನಲ್ಲಿ ಆ ಸ್ಯಮಂತಕ ಮಣಿಯನ್ನು ಬೇಡಿದನು. ಆದರೆ ಸತ್ರಾಜಿತನು ಕೊಡಲಿಲ್ಲ. ಶ್ರೀಕೃಷ್ಣನು ಅಷ್ಟಕ್ಕೆ ಸುಮ್ಮನಾದನು. ಸತ್ರಾಜಿತನು ಆ ಮಣಿಯನ್ನು ತನ್ನ ಮಂದಿರದಲ್ಲಿ ಇರಿಸಿ ಅದನ್ನು ಭಕ್ತಿಯಿಂದ ಪೂಜಿಸಹತ್ತಿದನು. ಆದರೂ ಸತ್ರಾಜಿತನ ಮನಸ್ಸು ಕದಡಿತು. ಅವನು ಇದಕ್ಕುಪಾಯವೆಂದು ಆ ಸ್ಯಮಂತಕ ಮಣಿಯನ್ನು ತಮ್ಮನಾದ ಪ್ರಸೇನನಿಗೆ ಕೊಟ್ಟು ಪವಿತ್ರನಾಗಿದ್ದು ಈ ಮಣಿಯನ್ನು ಧರಿಸು ಎಂದು ಹೇಳಿದನು.

ಮುಂದೆ ಒಂದಾನೊಂದು ದಿನ ಪ್ರಸೇನನು ಆ ಸ್ಯಮಂತಕ ಮಣಿಯನ್ನು ಕೊರಳಲ್ಲಿ ಧರಿಸಿಕೊಂಡು ಬೇಟೆಯಾಡುವದಕ್ಕಾಗಿ ಶ್ರೀಕೃಷ್ಣನೊಂದಿಗೆ ಅರಣ್ಯಕ್ಕೆ ತೆರಳಿದನು. ಅಲ್ಲಿ ಬೇಟೆಗಾಗಿ ಸಂಚರಿಸುತ್ತಿರುವಾಗ ಪ್ರಸೇನನು ಶ್ರೀಕೃಷ್ಣನಿಂದ ಅಗಲಿದನು. ಪ್ರಸೇನನು ಒಂಟಿಗನಾಗಿರುವ ಸಮಯದಲ್ಲಿ ಒಂದು

ಬಲಿಷ್ಠವಾದ ಸಿಂಹವು ಅವನನ್ನು ಎದುರಿಸಿತು. ಪ್ರಸೇನ ಆ ಸಿಂಹದೊಡನೆ ಸಾಹಸದಿಂದ ಹೋರಾಡಿ ಕೊನೆಗೆ ಅದರಿಂದ ಹತನಾದನು. ಬಳಿಕ ಆ ಸಿಂಹವು ಪ್ರಸೇನನ ಕೊರಳೊಳಗಿದ್ದ ಆ ದಿವ್ಯ ಮಣಿಯನ್ನು ಕಿತ್ತುಕೊಂಡು ಬಾಯಲ್ಲಿ ಕಚ್ಚಿಕೊಂಡು ತನ್ನ ಗವಿಯತ್ತ ನಡೆಯಿತು. ಅಷ್ಟರಲ್ಲಿ ಸಿಂಹಕ್ಕಿಂತಲೂ ಸಮರ್ಥನಾದ ಜಾಂಬವಂತನು ಅದನ್ನು ಎದುರಿಸಿಕೊಂಡು ಸ್ಯಮಂತಕ ಮಣಿಯನ್ನು ತೆಗೆದುಕೊಂಡು ತನ್ನ ನಿವಾಸಸ್ಥಾನಕ್ಕೆ ತೆರಳಿದನು. ಮತ್ತು ಆ ಮಣಿಯನ್ನು ತನ್ನ ಮಗುವಿನ ತೊಟ್ಟಿಲ ಚಟ್ಟಿನಲ್ಲಿ ಅಂದವಾಗಿ ಇರಿಸಿದನು. ಇತ್ತ ಪ್ರಸೇನನಿಂದ ಮೊದಲೇ ಅಗಲಿದ್ದ ಶ್ರೀಕೃಷ್ಣನು ತನ್ನ ಸಂಗಡಿಗರೊಂದಿಗೆ ನಗರವನ್ನು ಪ್ರವೇಶಿಸಿದನು.

ಪ್ರಸೇನನು ಅರಣ್ಯದಿಂದ ಮರಳಿ ಬಾರದಿರಲು ಸತ್ರಾಜಿತನು ಅತ್ಯಂತ ದುಃಖಿತನಾದನು. ಶ್ರೀಕೃಷ್ಣನ ಬಗೆಗೆ ಮೊದಲೇ ವಿಮನಸ್ಕನಾಗಿದ್ದ ಸತ್ರಾಜಿತನು ಕೃಷ್ಣನೇ ಮಣಿಯ ಆಸೆಯಿಂದ ಪ್ರಸೇನನನ್ನು ಕೊಂದು ಅದನ್ನು ಅಪಹರಿಸಿದನು! ಎಂದು ನುಡಿದನು. ಈ ವರ್ತಮಾನವು ಕೂಡಲೆ ನಗರದಲ್ಲೆಲ್ಲ ಹರಡಿತು. ಶ್ರೀಕೃಷ್ಣನು ನಿಷ್ಕಾರಣವಾಗಿ ತನ್ನ ಮೇಲೆ ಹೊರಿಸಲ್ಪಟ್ಟ ಅಪವಾದಕ್ಕಾಗಿ ಚಿಂತೆಗೊಳಗಾದನು. ಮತ್ತು ಈ ಅಪವಾದದ ನಿವಾರಣಕ್ಕಾಗಿ ಪ್ರಸೇನನ ಪರಿಸ್ಥಿತಿಯ ನಿಜವಾದ ಕಾರಣವನ್ನು ಶೋಧಿಸಲು ದ್ವಾರಕೆಯಿಂದ ಹೊರಟನು.

ಬಳಿಕ ಶ್ರೀಕೃಷ್ಣನು ಅನೇಕ ಯಾದವರೊಂದಿಗೆ ಪ್ರಸೇನನು ಬೇಟೆಗಾಗಿ ತೆರಳಿದ್ದ ಅರಣ್ಯವನ್ನು ಪ್ರವೇಶಿಸಿದನು. ಕೆಲವು ಹೊತ್ತು ಅತ್ತಿತ್ತ ಸಂಚರಿಸುತ್ತಿರಲು ಒಂದೆಡೆಯಲ್ಲಿ ಸಿಂಹನಿಂದ ಹತನಾಗಿ ಬಿದ್ದಿರುವ ಪ್ರಸೇನನನ್ನು ಕಂಡನು ಮತ್ತು ಆ ಸಿಂಹದ ಹೆಜ್ಜೆಯನ್ನು ಹಿಡಿದು ಮುಂದಕ್ಕೆಸಾಗಿದನು. ಕೆಲಹೊತ್ತಿನ ಮೇಲೆ ಆ ಸಿಂಹವು ಕೂಡ ಜಾಂಬವಂತನೆಂಬ ಮಹಾ ಬಲಶಾಲಿಯ ಉಗುರುಗಳ ಗಾಯದಿಂದ ಮೃತವಾಗಿ ಬಿದ್ದಿರುವದು ಕಂಡು ಬಂದಿತು. ಶ್ರೀಕೃಷ್ಣನ ಸಂಗಡಿಗರಿಗೆ ಗವಿಯನ್ನು ಸೇರಲು ಧೈರ್ಯವಿರಲಿಲ್ಲ. ಆದರೂ ಶ್ರೀ ಕೃಷ್ಣನೊಬ್ಬನೇ ಗವಿಯನ್ನು ಪ್ರವೇಶಿಸಿದನು. ಮತ್ತು ತನ್ನ ತೇಜಸ್ಸಿನಿಂದ ಅಲ್ಲಿಯ ಘೋರ ಅಂಧಃಕಾರವನ್ನು ನಾಶಗೊಳಿಸುತ್ತ ಜಾಂಬವಂತನ ಮಂದಿರಕ್ಕೆ ಬಂದನು. ಆ ಮಂದಿರವು ಅತ್ಯಂತ ಸುಂದರವಾಗಿದ್ದಿತ್ತು. ಶ್ರೀಕೃಷ್ಣನು ಒಳಗೆ ಹೋಗಿ ನೋಡುತ್ತಾನೆ. ಅಂದವಾದ ತೊಟ್ಟಿಲಿನಲ್ಲಿ ತೇಜಸ್ವಿಯಾದ ಜಾಂಬವಂತ ಕುಮಾರನು ಚಕ್ಕಂದವಾಡುತ್ತಿದ್ದನು. ಸ್ಯಮಂತಕವು ತೊಟ್ಟಿಲ ಮೇಲೆ ತೂಗುತಲಿದ್ದಿತು. ಆ ತೊಟ್ಟಿಲಲ್ಲಿ ಜಾಂಬವಂತನ ಮಗಳಾದ ಜಾಂಬವತಿಯು ತೂಗುತ್ತಿದ್ದಳು. ಆಕೆಯು ''ಸಿಂಹವು ಪ್ರಸೇನನನ್ನು ಕೊಂದಿತು. ಆ ಸಿಂಹವನ್ನು ಜಾಂಬವಂತನು ಕೊಂದನು. ಕುಮಾರನೇ ಅಳಬೇಡ ಈ ಸ್ಯಮಂತಕ ಮಣಿಯು ನಿನ್ನದೇ ಇದೆ. ಎಂಬರ್ಥದ ಹಾಡನ್ನು ಸುಸ್ವರದಿಂದ ಹಾಡುತ್ತಿದ್ದಳು.

ಇದನ್ನೆಲ್ಲ ನೋಡಿ ಶ್ರೀ ಕೃಷನು ಆಶ್ಚರ್ಯ ಚಕಿತನಾದನು ಜಾಂಬವತಿಯು ಕೂಡ ಶ್ರೀ ಕೃಷ್ಣನ ರೂಪವನ್ನು ನೋಡಿ ಮೋಹಿತಳಾಗಿ ತಂದೆ ಜಾಂಬವಂತನು ಮಲಗಿರುವನು ಆದುದರಿಂದ ಈ ಸ್ಯಮಂತಕ ಮಣಿ ಸಹಿತವಾಗಿ ಇಲ್ಲಿಂದ ಬೇಗನೇ ಬಿಡುವದು ಒಳ್ಳೆಯದು'' ಎಂದಳು. ಶ್ರೀ ಕೃಷ್ಣನು ನಸುನಗುತ್ತ ಶಂಖವನ್ನು ಊದಿದನು ಜಾಂಬವಂತನಿಗೆ ಎಚ್ಚರವಾಯಿತು. ಅವನು ಶ್ರೀ ಕೃಷ್ಣನ ಮೇಲೆ ಏರಿಹೋದನು ಇಬ್ಬರಿಗೂ ಮಲ್ಲಯುದ್ಧವು ಆರಂಭವಾಯಿತು.

ಇತ್ತ ಗವಿಯ ಬಾಗಿಲಲ್ಲಿದ್ದ ಯಾದವರು ಪ್ರಸೇನನು ಸಿಂಹನಿಂದ ಹತನಾಗಿರುವನು ಸತ್ರಾಜಿತನು ಶ್ರೀ ಕೃಷ್ಣನ ಮೇಲೆ ಅಪವಾದವನ್ನು ಹೋರಿಸಿದ್ದು ಶುದ್ದ ಅನ್ಯಾಯ ಈಗ ಶ್ರೀ ಕೃಷ್ಣನೂ ಮರಳಿ ಬರುವ ಆಶೆಯಿಲ್ಲ, ಅವನೂ ಹತನಾದನು ಎಂದು ತಿಳಿದುಕೊಂಡು ದ್ವಾರಕೆಗೆ ಹೋದರು. ದ್ವಾರಕಾ ನಗರವೆಲ್ಲ ಶ್ರೀ ಕೃಷ್ಣನ ಚಿರ ವಿರಹಕ್ಕಾಗಿ ಮರಮರನೆ ಮರುಗಿತು. ಸಂಬಂಧಿಕರು ಪ್ರಸೇನನ ಮತ್ತು ಶ್ರೀಕೃಷ್ಣನ ಉತ್ತರ ಕ್ರಿಯೆಗಳನ್ನು ಕೂಡ ಮುಗಿಸಿ ದುಃಖದಿಂದ ಕಾಲ ಕಳೆಯುತ್ತಲಿದ್ದರು.

ಅತ್ತ ಗವಿಯಲ್ಲಿ ಮಲ್ಲಯುದ್ಧವು ಹಾಗೇ ಸಾಗಿತು. ಅದು ಒಂದಲ್ಲ ಎರಡಲ್ಲ ಇಪ್ಪತ್ತೆಂಟು ದಿನಗಳವರೆಗೆ ಸಾಗಿತು. ಕಡೆಗೆ ತಾನು ಅಜಿಂಕ್ಯನೆಂದು ಗರ್ವವಹಿಸುತ್ತಿದ್ದ ಜಾಂಬವಂತನು ಸೋತನು. ಅವನು ಮನಸ್ಸಿನಲ್ಲಿ ನೆನೆದನು ನನ್ನನ್ನು ಸೋಲಿಸಿದ ಇವನಲ್ಲಿ ಮಹಾವಿಷ್ಣುವಿನ ತೇಜವಿರಲೇಬೇಕು. ಇಲ್ಲದಿದ್ದರೆ ನನಗೆ ಸೋಲು ಬರುವದು ಶಕ್ಯವೇ ಇರಲಿಲ್ಲ ಎಂದು ಈಗ ಶ್ರೀ ಕೃಷ್ಣನು ಜಾಂಬವಂತನ ಭಕ್ತಿಗೆ ಮೆಚ್ಚಿ ಪ್ರಸನ್ನವಾದನು. ಜಾಂಬವಂತನು ಆಗ್ರಹ ಪೂರ್ವಕವಾಗಿ ಶ್ರೀಕೃಷ್ಣನಿಗೆ ಜಾಂಬವತಿಯನ್ನು ಧಾರೆಯೆರೆದು ಕೊಟ್ಟನು. ಮತ್ತು ಸ್ಯಮಂತಕ ಮಣಿಯನ್ನು ಮೆಚ್ಚಿಕೊಟ್ಟು ಅವರನ್ನು ಸಂಭ್ರಮದಿಂದ ಬೀಳ್ಕೊಟ್ಟನು. ದ್ವಾರಕೆಯನ್ನು ಬಿಟ್ಟುಹೋದ ನಾಲ್ಕುವಾರಗಳ ಮೇಲೆ ಅವನು ಜಾಂಬವತಿ ಮತ್ತು ಸ್ಯಮಂತಕ ಮಣಿ ಸಹಿತ ಮುರಳಿ ಪ್ರವೇಶಿಸಿದನು. ನಗರವೆಲ್ಲ ಆನಂದ ಸಾಗರದಲ್ಲಿ ತೇಲಾಡಿತು. ಶ್ರೀಕೃಷ್ಣನ ಮಹಿಮೆಯನ್ನು ಎಲ್ಲರೂ ಕೊಂಡಾಡುವವರಾದರು. ಮರುದಿನ ದೊಡ್ಡ ಸಭೆ ಕೂಡಿತು. ಯಾದವರೆಲ್ಲರೂ ಸಂಭ್ರಮದಿಂದ ನೆರೆದರು. ಶ್ರೀಕೃಷ್ಣನು ಸ್ಯಮಂತಕ ಮಣಿಯ ಬಗೆಗೆ ವರ್ಣಿಸಿದ ಘಟನೆಗಳನ್ನು ವಿವರಿಸಿದನು. ಮತ್ತು ಸತ್ರಾಜಿತನನ್ನು ಬರಮಾಡಿಕೊಂಡು ತಾನು ಜಾಂಬವಂತನಿಂದ ತಂದ ಸ್ಯಮಂತಕ ಮಣಿಯನ್ನು ಆತನಿಗೆ ಒಪ್ಪಿಸಿದನು. ಸತ್ರಾಜಿತನಾದರೂ ಶ್ರೀ ಕೃಷ್ಣನನ್ನು ಅಭಿನಂದಿಸಿ ತನ್ನ ಮಗಳಾದ ಸತ್ಯಭಾಮೆಯನ್ನು ಲಗ್ನಮಾಡಿಕೊಟ್ಟನು.

ಮುಂದೆ ಕೆಲಕಾಲವು ಗತಿಸುತ್ತಿರಲು ಶತಧನ್ವ ಮೊದಲಾದ ಯಾದವರು ಶತ್ರಾಜಿತನನ್ನು ಕೊಂದು ಸ್ಯಮಂತಕ ಮಣಿಯನ್ನು ಅಪಹರಿಸಿದರು. ಆಗ ಶ್ರೀ ಕೃಷ್ಣನು ಬಲರಾಮನಿಗೆ ಶತಧನ್ವನನ್ನು ಕೊಲ್ಲಲು

ನಮ್ಮ ಸ್ಯವಂತಕ ಮಣಿಯು ನಮಗೆ ದೊರೆಯುವದು ನಿಶ್ಚಿತ ಎಂದು ಹೇಳಿದನು. ಈ ಒಳಸಂಚು ಶತಧನ್ವನಿಗೆ ಗೊತ್ತಾಯಿತು. ಅವನು ಹೆದರಿ ಆ ಸ್ಯಮಂತಕ ಮಣಿಯನ್ನು ಅಕ್ರೂರನಿಗೆ ಒಪ್ಪಿಸಿ, ಕುದುರೆಯನ್ನೇರಿ ದಕ್ಷಿಣಮಾರ್ಗವಾಗಿ ಓಡಿಹೋದನು. ಕೂಡಲೆ ರಾಮ ಕೃಷ್ಣರು ಅವನನ್ನು ರಥದಲ್ಲಿ ಕುಳಿತು ಬೆನ್ನಟ್ಟಿದರು. ಬಹುದೂರ ಹೋದ ಮೇಲೆ ಶತಧನ್ವನ ಕುದುರೆ ಮಡಿಯಿತು. ಕೂಡಲೆ ಶ್ರೀ ಕೃಷ್ಣನು ರಥದಿಂದಿಳಿದು ಅವನನ್ನು ತಡೆದು ಕೊಂದನು. ಆದರೆ ಅವನಲ್ಲಿ ಮಣಿಯು ಇರಲ್ಲಿಲ್ಲ. ಈ ವರ್ತಮಾನವನ್ನು ಶ್ರೀಕೃಷ್ಣನು ಅಣ್ಣ ಬಲರಾಮನಿಗೆ ಹೇಳಿದನು. ಬಲರಾಮನಿಗೆ ಕೋಪವುಂಟಾಯಿತು. ಅವನು ಶ್ರೀಕೃಷ್ಣನನ್ನು ಬಹಳವಾಗಿ ಹೀಯಾಳಿಸಿ ಅಲ್ಲಿಂದಲೇ ವಿದರ್ಭದೇಶಕ್ಕೆ ಹೋರಟು ಹೋದನು. ಶ್ರೀಕೃಷ್ಣನು ಖಿನ್ನವಾಗಿ ದ್ವಾರಕೆಗೆ ಬಂದನು.

ಶ್ರೀ ಕೃಷ್ಣನ ಮನಸ್ಸಿಗೆ ಸಮಾಧಾನವಿರಲಿಲ್ಲ. ದ್ವಾರಕಾನಿವಾಸಿಗಳೂ ಕೃಷ್ಣನು ಅನುಚಿತವನ್ನೆಸಗಿದನು. ಸ್ಯಮಂತಕದ ಆಶೆಯಿಂದ ಅಣ್ಣನನ್ನು ದ್ವಾರಕೆಯಿಂದ ಅಗಲಿಸಿದನು'' ಎಂದು ನಿಂದಿಸತೊಡಗಿದರು. ಬರಬರುತ್ತ ಶ್ರೀ ಕೃಷ್ಣನ ಮನಸ್ಸು ಹೆಚ್ಚು ಹೆಚ್ಚು ಚಿಂತಾಕ್ರಾಂತವಾಗ ಹತ್ತಿತ್ತು. ಹೀಗಿರಲು ಒಂದು ದಿನ ನಾರದರು ಶ್ರೀ ಕೃಷ್ಣನನ್ನು ಕಾಣಲು ಬಂದರು. ಶ್ರೀಕೃಷ್ಣನು ಅವರನ್ನು ಸತ್ಕರಿಸಿ ಸುಖಾಸನದಲ್ಲಿ ಕುಳ್ಳಿರಿಸಿದರು. ಆಗ ನಾರದರು ``ದೇವಾ! ನೀನೇಕೋ ಖಿನ್ನ ಮನಸ್ಕನಾಗಿರುವಿ!! ಚಿಂತೆಗೊಳಗಾಗಲು ಅದಾವ ಕಾರಣವುಂಟಾಯಿತು'' ಎಂದು ಕೇಳಿದರು. ಶ್ರೀಕೃಷ್ಣನು ನಡೆದ ವೃತ್ತಾಂತವನ್ನೆಲ್ಲ ಅರುಹಿದನು. ಮತ್ತು ನನಗೆ ಅಪವಾದ ಪರಂಪರೆಗಳು ಯಾವ ಕಾರಣದಿಂದ ಉಂಟಾದವು? ಎಂದು ಪ್ರಶ್ನೆ ಮಾಡಿದನು. ಆಗ ನಾರದರು ದೇವಾ! ನಿನಗೆ ಅಪವಾದಗಳುಂಟಾದುದರ ಕಾರಣವನ್ನು ನಾನು ಬಲ್ಲೆನು. ``ಹಿಂದೆ ಭಾದ್ರಪದ ಶುಕ್ಲ ಚತುರ್ಥಿಯ ದಿನ, ಗಜಾನನನಿಂದ ಶಾಸಿತನಾದ ಚಂದ್ರನ ದರ್ಶನವು ನಿನಗಾಗಿದೆ. ಇದೇ ಆ ಅಪವಾದಗಳುಂಟಾದುದರ ಕಾರಣವು'' ಎಂದು ಆಗ ಶ್ರೀಕೃಷ್ಣನು ಚಂದ್ರನು ಅಮೃತಮಯ ನಾಗಿರಲು ಅವನಿಗೆ ಗಣಪತಿಯು ಶಾಪಕೊಟ್ಟ ಕಾರಣವೇನು? ಈ ಅಖ್ಯಾನವನ್ನು ವಿವರವಾಗಿ ತಿಳುಹಿಸಲು ನೀವೇ ಯೋಗ್ಯರು, ದಯವಿಟ್ಟು ಅದನ್ನು ಅರುಹಬೇಕು. ಎಂದನು.

ಶ್ರೀಕೃಷ್ಣನ ಅಪೇಕ್ಷೆಯಂತೆ ನಾರದರು ನುಡಿಯತೊಡಗಿದರು. ದೇವಾ ಪೂರ್ವ ಕಾಲದಲ್ಲಿ ಬ್ರಹ್ಮನೂ ಶಂಕರನೂ ಕೂಡಿಕೊಂಡು ಗುಣಗಳ ಅಧಿಪತ್ಯವನ್ನು ಗಣಪತಿಗೆ ಕೊಟ್ಟರು. ಮತ್ತು ಅಣಿಮಾ, ಮಹಿಮಾ, ಲಘಿಮಾ, ಗರಿಮಾ, ಪ್ರಾಪ್ತಿ, ಪ್ರಾಕಾಮ್ಯಾ, ಈಶಿತ್ವ, ವಶಿತ್ವ, ಈ ಅಷ್ಟ ಸಿದ್ಧಿಗಳನ್ನು ಎಂಟುಜನ ಸ್ತ್ರೀಯರನ್ನಾಗಿ ನಿರ್ಮಿಸಿ ಗಣಪತಿಗೆ ಕೊಟ್ಟರು. ಆ ಮೇಲೆ ಬ್ರಹ್ಮದೇವನು ಭಕ್ತಿಯಿಂದ ಗಣಪತಿಯನ್ನು ಪೂಜಿಸಿದನು. ಮತ್ತು ``ಗಜಾನನಾ, ಗಣಪತೇ, ಲಂಬೋದರನೇ, ವರದಾಯಕನೇ ನಿನ್ನನ್ನು ಭಕ್ತಿಯಿಂದ

ಪೂಜಿಸಿಯೇ ವಿಷ್ಣು ಸೃಷ್ಟಿಯನ್ನು ಪಾಲಿಸಲು ಸಮರ್ಥನಾದನು. ರುದ್ರನು ಕೂಡ ನಿನ್ನ ಮೇಲಿನ ಭಕ್ತಿಯಿಂದಲೇ ಸಂಹಾರ ಕಾರ್ಯವನ್ನು ಸಾಗಿಸುವಲ್ಲಿ ಸಮರ್ಥನಾದೆನು'', ಎಂದು ಸ್ತುತಿಸಿದನು. ಬ್ರಹ್ಮದೇವನ ಸುತ್ತಿಯಿಂದ ಗಜಾನನನು ಸಂತುಷ್ಟನಾದನು. ಮತ್ತು ಆತನ ಬೇಡಿಕೆಯಂತೆ ಸೃಷ್ಟಿಕಾರ್ಯವು ನಿರ್ವಿಘ್ನವಾಗಿ ಸಾಗಲಿ ಎಂದು ವರವನ್ನು ಕೊಟ್ಟು ಮೋದಕಗಳನ್ನು ಕೈಯಲ್ಲಿ ತೆಗೆದುಕೊಂಡು ಸತ್ಯಲೋಕದಿಂದ ಹೊರಟು ಆಕಾಶಮಾರ್ಗವಾಗಿ ಸಾಗುತ್ತ ಚಂದ್ರ ಲೋಕಕ್ಕೆ ಬಂದನು, ಗಜಾನನು ಅಕಸ್ಮಾತ್ತಾಗಿ ಅಲ್ಲಿ ಎಡವಿದನು. ಆಗ, ತಾನು ಸುರೂಪಿ ಎಂಬ ಗರ್ವದಿಂದ ಪ್ರೇರಿತನಾದ ಚಂದ್ರನು ಗಜಾನನನನ್ನು ಅಪಹಾಸ್ಯದ ನಗೆಯಿಂದ ಅವಮಾನಗೊಳಿಸಿದನು, ಗಜಾನನು ಬಹಳ ಕೋಪಗೊಂಡು ''ಎಲೋ ಚಂದ್ರನೇ ! ನಿನ್ನಲ್ಲಿ ನಾನು ಸುರೂಪಿಯು, ನಾನು ಸುಂದರನು, ಎಂಬ ಅಹಂಕಾರವು ಹೆಚ್ಚಾಗಿದೇಯಲ್ಲವೇ'', ಇವರ ಪರಿಣಾಮವನ್ನು ತೀವ್ರವೇ ಅನುಭವಿಸುವೆ, ಇಂದಿನಿಂದ ಪಾಪಿಯಾದ ನಿನ್ನನ್ನು ಯಾರು ನೋಡುವರೋ ಅವರು ಮಿಥ್ಯಾಪವಾದದಿಂದ ಯುಕ್ತರಾಗುವರು. ಇದರಲ್ಲಿ ಸಂದೇಹವಿಲ್ಲ ಎಂದು ಶಾಪಕೊಟ್ಟನು. ಕೂಡಲೆ ಎಲ್ಲೆಲ್ಲಿಯೂ ಹಾಹಾಕಾರವುಂಟಾಯಿತು. ಚಂದ್ರನು ಭಯಂಕರವಾದ ಈ ಶಾಪವನ್ನು ಕೇಳಿ ಕಳೆಗುಂದಿದವನಾಗಿ ಜಲರಾಶಿಯನ್ನು ಸೇರಿ ಕಮಲದಲ್ಲಿ ಅಡಗಿಕೊಂಡಿದ್ದನು.

ದೇವ-ಋಷಿ-ಗಂಧರ್ವರು ನಿರಾಶರೂ ದುಃಖಿತರೂ ಆಗಿ ಇಂದ್ರನನ್ನು ಮುಂದುವರಿಸಿ ಬ್ರಹ್ಮದೇವನಲ್ಲಿ ಹೋದರು. ಮತ್ತು ಚಂದ್ರನ ಪರಿಸ್ಥಿತಿಯನ್ನೂ ಗಣಪತಿಯು ಅವನಿಗೆ ಶಾಪಕೊಟ್ಟ ಸಂಗತಿಯನ್ನು ಕಳವಳದಿಂದ ನಿವೇದಿಸಿದರು. ಆಗ ಬ್ರಹ್ಮದೇವನು ''ಈ ಶಾಪವನ್ನು ಮರಳಿಸುವದು ಯಾರಿಂದಲೂ ಆಗದು. ಅದುದರಿಂದ ನೀವು ದೇವಾಧಿದೇವನಾದ ಆ ಗಣಪತಿಗೆ ಶರಣು ಹೋಗಿರಿ. ಅವನೇ ನಿಶ್ಚಯವಾಗಿ ಚಂದ್ರನನ್ನು ಶಾಪದಿಂದ ಮುಕ್ತಗೊಳಿಸುವನು ಎಂದನು''.

ಆಗ ದೇವತೆಗಳು ಬೃಹಸ್ಪತಿಯನ್ನು ಚಂದ್ರನ ಬಳಿಗೆ ಕಳುಹಿಸಿದರು. ಬೃಹಸ್ಪತಿಯು ಚಂದ್ರನಿಗೆ ಗಣಪತಿ ಪೂಜೆಯ ವ್ರತವನ್ನು ಆಚರಿಸಲು ಹೇಳಿದನು. ಚಂದ್ರನು ಭಕ್ತಿಯುತವಾಗಿ ಸಂಕಷ್ಟ ಚತುರ್ಥಿಯ ವ್ರತವನ್ನು ಆಚರಿಸಲು ಗಣಪತಿಯು ಪ್ರಸನ್ನನಾದನು. ಆಗ ಚಂದ್ರನು ಗಣಪತಿಯನ್ನು ಉದ್ದೇಶಿಸಿ ಹೇ ವಿಭೋ, ಗಜಾನನಾ ನೀನು ಎಲ್ಲರ ಆದಿ ಕಾರಣನಿರುವಿ, ಸರ್ವಜ್ಞನಿರುವಿ, ನಾನು ಗರ್ವದಿಂದ ಅಜ್ಞಾನದಿಂದ ಮಾಡಿದ ಅಪರಾಧವನ್ನು ಕ್ಷಮಿಸು ಎಂದು ಪ್ರಾರ್ಥಿಸಿದನು, ಅದೇ ಸಮಯದಲ್ಲಿ ದೇವತೆಗಳೂ ಅಲ್ಲಿಗೆ ಬಂದು ಹೇ ಗಣಪತೇ, ಚಂದ್ರನ ಅಪರಾಧವನ್ನು ಕ್ಷಮಿಸಿ ಆತನನ್ನು ಶಾಪದಿಂದ ಮುಕ್ತನನ್ನಾಗಿ ಮಾಡು ಎಂದು ಪ್ರಾರ್ಥಿಸಿದರು. ಆಗ ಗಣಪತಿಯು ಬ್ರಹ್ಮದೇವನ ಗೌರವಾರ್ಥವಾಗಿ

ಚಂದ್ರನನ್ನು ಶಾಪದಿಂದ ಮುಕ್ತಗೊಳಿಸಿದನು. ಮತ್ತು ಆತನು ''ಶುಕ್ಲ ಪಕ್ಷದ ಚತುರ್ಥಿಯ ದಿನ ನಿನ್ನನ್ನು ನೋಡಿದವರಿಗೆ ಮಿಥ್ಯಾಪವಾದದ ದೋಷವು ಉಂಟಾಗುವುದು. ಆದರೆ ಶುಕ್ಲ ಪಕ್ಷದ ಬಿದಿಗೆಯ ದಿನ ನಿನ್ನ ದರ್ಶನವಾಗಿದ್ದವರಿಗೆ ಈ ದೋಷವಿಲ್ಲ'', ಎಂದು ನುಡಿದನು. ಕೂಡಲೇ ಚಂದ್ರನು ''ಗಣಪತಿಯೇ, ನೀನು ಯಾವ ಉಪಾಯದಿಂದ ಸಂತುಷ್ಟನಾಗುವಿ. ಅದನ್ನು ದಯವಿಟ್ಟು ಹೇಳಬೇಕು'' ಎಂದು ಪ್ರಾರ್ಥಿಸಿದನು. ಅದಕ್ಕೆ ಗಣಪತಿಯು ''ಪ್ರತಿಯೊಂದು ಕೃಷ್ಣ ಚತುರ್ಥಿಯ ದಿನ ಮೋದಕಾದಿ ಸಾಧನಗಳಿಂದ ಯುಕ್ತರಾಗಿ ನಿನ್ನನ್ನು ಪೂಜಿಸಿ, ರೋಹಿಣೀ ಸಹಿತನಾದ ನಿನ್ನನ್ನೂ ಪೂಜಿಸಿ, ಯಥಾ ಶಕ್ತಿ ಸಿದ್ಧಪಡಿಸಿದ ಪ್ರತಿಮೆಯನ್ನು ದಾನಮಾಡಿ ವಿಧಿಯುಕ್ತವಾಗಿ ಕಥೆಯನ್ನು ಶ್ರವಣಮಾಡುವವರ ಸಂಕಟಗಳನ್ನು ನಾನು ಪರಿಹರಿಸುವೆನು. ಮತ್ತು ಭಾದ್ರಪದ ಶುಕ್ಲ ಚತುರ್ಥಿಯ ದಿನ ಸುವರ್ಣದ ಇಲ್ಲವೆ ಮೃತ್ತಿಕೆಯ ಉತ್ತಮವಾದ ಪ್ರತಿಮೆಯನ್ನು ಸಿದ್ಧಪಡಿಸಿ ನಾನಾ ಪ್ರಕಾರದ ಪುಷ್ಪಗಳಿಂದ ವಿಧಿ ಪೂರ್ವಕವಾಗಿ ನನ್ನನ್ನು ಪೂಜಿಸಬೇಕು. ಅಲ್ಲದೆ ಬ್ರಾಹ್ಮಣರಿಗೆ ಭೋಜನ ಮಾಡಿಸಿ ಜಾಗರಣೆ ಮಾಡಬೇಕು.

ಇದಲ್ಲದೆ ಮತ್ತೂ ಒಂದು ವ್ರತವಿರುವುದು. ಧಾನ್ಯದ ಮೇಲೆ ಅವಿದ್ರವಾದ ಕುಂಭವನ್ನು ಸ್ಥಾಪಿಸಿ ಅದರ ಮೇಲೆ ಸಾಧ್ಯವಿರುವ ರೀತಿಯಲ್ಲಿ ಸಿದ್ಧಪಡಿಸಿದ ಪ್ರತಿಮೆಯನ್ನು ಇರಿಸಬೇಕು. ಕೆಂಪು ವಸ್ತ್ರವನ್ನುಟ್ಟು ಬ್ರಹ್ಮಚರ್ಯದಿಂದಿದ್ದು ಕೆಂಪು ವಸ್ತ್ರ ಮೋದಕಾದಿ ಸಾಧನಗಳಿಂದ ಪೂಜಿಸಬೇಕು ಶಿವಪ್ರಿಯಾಯ ನಮಃ , ಗಣಾಧಿಪಾಯ ನಮಃ, ಲಂಬೋದರಾಯ ನಮಃ, ಸಿದ್ಧಿಪ್ರಿಯಾಯ ನಮಃ, ಗಜಮುಖಾಯ ನಮಃ, ಮೂಷಕ ವಾಹನಾಯ ನಮಃ, ವಿಪ್ರನಾಥಾಯ ನಮಃ, ಸರ್ವಾರ್ಥಸಿದ್ಧಿದಾಯ ನಮಃ, ಕಾಮ ರೂಪಾಯ ನಮಃ, ಧನದಾಯ ನಮಃ ಈ ಮಂತ್ರಗಳಿಂದ ಅನುಕ್ರಮವಾಗಿ ವಸ್ತ್ರ, ಉಪವಸ್ತ್ರ, ಗಂಧ, ಪುಷ್ಪ, ಧೂಪ, ದೀಪ, ನೈವೇದ್ಯ, ಫಲ, ತಾಂಬುಲ, ದಕ್ಷಿಣೆ ಇವುಗಳನ್ನು ಸಮರ್ಪಿಸಬೇಕು. ಬಳಿಕ ಗಣಪತಿಯ ನಾಮೋಚ್ಚಾರ ಪೂರ್ವಕವಾಗಿ ಕಬ್ಬು ಮತ್ತು ಮೋದಕಗಳ ಹೋಮವನ್ನು ಮಾಡಬೇಕು. ಕೊನೆಯಲ್ಲಿ ಸರ್ವಸಿದ್ಧಿ ಪ್ರದನಾದ ಗಣಪತಿಯ ವಿಸರ್ಜನೆ ಮಾಡಬೇಕು. ಮತ್ತು ಕತೆಯನ್ನು ಶ್ರವಣಮಾಡಿದ ಬಳಿಕ ಪ್ರತಿಮೆ ಮೊದಲಾದವನ್ನು ಬ್ರಾಹ್ಮಣರಿಗೆ ದಾನ ಮಾಡಿ ಮೌನವಾಗಿದ್ದು ಎಲ್ಲರಿಂದೊಡಗೂಡಿ ಭೋಜನವನ್ನು ಮಾಡಬೇಕು. ಈ ವ್ರತವನ್ನಾಚರಿಸುವವರಿಗೆ ನನ್ನ ಕೃಪೆಯಿಂದ ಜಯ, ಸಿದ್ಧಿ, ಧನಧಾನ್ಯಾದಿಗಳು ಲಭಿಸುವವು ಎಂದು ಹೇಳಿ ಗಣಪತಿಯು ಗುಪ್ತನಾದನು.

ನಾರದರು ಶ್ರೀಕೃಷ್ಣನಿಗೆ ಗಣಪತಿಯ ವ್ರತವನ್ನು ಆಚರಿಸಿ ಸಿದ್ಧಿಯನ್ನು ಪಡೆಯುವವನಾಗು ಎಂದು ಹೇಳಿದರು.

ಮಾಡುವ ವಿಧಾನ

ಭಾದ್ರಪದ ಶುದ್ಧ ಚತುರ್ಥಿ ಹಿಂದುಗಳು ಗಣಪತಿಯ ಹಬ್ಬವನ್ನು ಅತ್ಯಂತ ವಿಶೇಷವಾಗಿ ಪೂಜೆ ಮಾಡುತ್ತಾರೆ. ಈ ಗಣಪತಿ ಹಬ್ಬದ ಹಿಂದಿನ ದಿನ ಸ್ವರ್ಣಗೌರೀ ಪೂಜೆಯನ್ನು ಮಾಡುತ್ತಾರೆ. ಮರುದಿನ ಮಣ್ಣಿನಿಂದ ಅಲಂಕರಿಸಿದ ಬಣ್ಣ ಬಣ್ಣದ ಗಣಪತಿಯನ್ನು ತಂದು ಪೂಜಿಸುತ್ತಾರೆ. ಬೆಳಗ್ಗೆ ಬೇಗನೆ ಎದ್ದು ಸ್ನಾನಮಾಡಿ ಮನೆಗೆ ಮಾವಿನ ತೋರಣಗಳನ್ನು ಕಟ್ಟಿ ರಂಗೋಲಿಯನ್ನು ಹಾಕಿ ಮನೆಯನ್ನು ಅಲಂಕರಿಸುತ್ತಾರೆ. ಮನೆಯಲ್ಲಿ ಸಂದರವಾದ ಮಂಟಪವನ್ನು ಕಟ್ಟಿ ಅದಕ್ಕೆ ಹೂವಿನಿಂದ ಅಲಂಕರಿಸಿ, ಗಣಪತಿಯ ಮುಂದೆ ಐದು ತರಹದ ಹಣ್ಣುಗಳನ್ನು ಇಡುತ್ತಾರೆ. ಅಲ್ಲದೆ ಆ ಗಣಪತಿಗೆ ೨೧ ಕರ್ಕಿ, ೨೧ ಮಾವಿನ ಎಲೆಗಳನ್ನು ಜೋಡಿಸಿ ದಾರದಿಂದ ಕಟ್ಟಿ ಗಣಪತಿಗೆ ಇಡುತ್ತಾರೆ. ವಿಬೂತಿ, ಗಂದ, ಕುಂಕುಮ ಹಚ್ಚಿ, ಕಾಯಿ ಹೊಡೆದು ಮಂಗಳಾರುತಿಯನ್ನು ಮಾಡುತ್ತಾರೆ. ೨೧ (ಮಾದಕ) ಕಡುಬು, ೨೧ ಪಂಚ ಕಜ್ಜಾಯಗಳನ್ನು ನೈವೇದ್ಯ ಮಾಡುತ್ತಾರೆ. ಈ ಗಣಪತಿಯನ್ನು ಕೆಲವು ಮನೆಗಳಲ್ಲಿ ೩ ದಿನ, ೫ ದಿನ, ೧೧ ದಿನ, ೨೧ ದಿನ ಇಡುತ್ತಾರೆ. ಅವರು ಎಷ್ಟು ದಿನ ಇಡುತ್ತಾರೆಯೋ ದಿನಲೂ ಬೇರೆ ಬೇರೆಯ ತರಹದ ಸಿಹಿಯನ್ನು ಮಾಡಿ ನೈವೇದ್ಯೆ ಮಾಡುತ್ತಾರೆ. ಈ ಗಣಪತಿಯ ಮುಂದೆ ಎಲೆ, ಅಡಿಕೆ, ದಕ್ಷಿಣೆ, ಉಡಿಯನ್ನು ಇಟ್ಟಿರುತ್ತಾರೆ.

ಈ ಸಂಡೂರಿನಲ್ಲಿ ಇರುವಂತಹ ಕನ್ನಿಕಾ ಪರಮೇಶ್ವರಿ ದೇವಸ್ಥಾನ, ವೀರಭದ್ರ ದೇವಸ್ಥಾನ, ಕಾಳಮ್ಮನ ದೇವಸ್ಥಾನ, ಇನ್ನು ಹಲವು ದೇವಸ್ಥಾನಗಳಲ್ಲಿ ಈ ಗಣಪತಿಯನ್ನು ಇಡುತ್ತಾರೆ. ಅದರಲ್ಲಿಯೂ ಒಂದೊಂದು ದೇವಸ್ಥಾನದಲ್ಲಿ ಒಂದೊಂದು ತರಹದ ಮಣ್ಣಿನ ಗಣಪತಿಯನ್ನು ತರುತ್ತಾರೆ. ನೃತ್ಯ ಹಾಡುತ್ತಿರುವುದು, ನಿಂತಿರುವ ಗಣಪ, ತಬಲ, ವೀಣೆಗಳನ್ನು ನುಡಿಸುತ್ತಿರುವ ಗಣಪ, ಕಮಲದಲ್ಲಿ ಕುಳಿತಿರುವ ಗಣಪ, ಹೀಗೆ ಹಲವು ಅಲಂಕಾರಗಳಿಂದ ರಚಿಸಿದ ಗಣಪತಿಯನ್ನು ದೊಡ್ಡ ದೊಡ್ಡದಾಗಿರುವಂತಹವನ್ನು ತರುತ್ತಾರೆ. ದೇವಸ್ಥಾನದ ಮುಖ್ಯಸ್ಥರು, ಆ ವಠಾರದ ಜನರು ಸೇರಿ ಊರಿನಲ್ಲಿ ಗಣಪತಿ ಪಟ್ಟಿ ಎಂದು ಎತ್ತಿ ಆ ದುಡ್ಡಿನಿಂದ ಗಣಪತಿಯನ್ನು ದೇವಸ್ಥಾನಕ್ಕೆ ತರುತ್ತಾರೆ. ದೇವಸ್ಥಾನಕ್ಕೆ ಸುಣ್ಣ ಬಣ್ಣಗಳನ್ನು ಹಚ್ಚಿ, ಬಣ್ಣದ ಪೇಪರ್‌ನಿಂದ ಅಲಂಕಾರಮಾಡಿ ವಿದ್ಯುತ್ ದ್ವೀಪಗಳಿಂದ ಅಲಂಕರಿಸಿ ಪೆಂಡಾಲ್‌ಗಳನ್ನು ನಿರ್ಮಿಸುತ್ತಾರೆ. ಆ ಗಣಪತಿಯ ಮುಂದೆ ಹಣ್ಣುಗಳನ್ನು ಇಟ್ಟು, ಪಂಚಕಜ್ಜಾಯ, ಹಾಗೂ ಮಾದಕಗಳನ್ನು ನೈವೇದ್ಯೆಮಾಡಿ ಬಂದ ಭಕ್ತಾದಿಗಳಿಗೆ ಕಡ್ಲೆ ಪುರಿಯನ್ನು ಕೊಡುತ್ತಾರೆ.

ಆ ದೇವಸ್ಥಾನದ ಮುಂದೆ ಅನೇಕ ಮನೋರಂಜನೆಯ ಕಾರ್ಯಕ್ರಮಗಳನ್ನು ಮಾಡುತ್ತಾರೆ. ರಂಗೋಲಿಯ ಸ್ಪರ್ದೆಗಳನ್ನು ಇಡುತ್ತಾರೆ. ಯಾವ ದೇವಸ್ಥಾನದಲ್ಲಿ ಅತ್ಯಂತ ಸುಂದರವಾಗಿ ಅಲಂಕರಿಸಿ, ಗಣಪತಿ ಹಬ್ಬ ಆಚರಿಸುತ್ತಾರೆಯೋ ಆ ದೇವಸ್ಥಾನಗಳಿಗೆ ಪ್ರಥಮ, ದ್ವಿತಿಯ ಎಂದು ಪ್ರಶಸ್ತಿಯನ್ನು ಕೊಡುತ್ತಾರೆ ಊರಿನ ಎಂ.ಎಲ್.ಎ. ಅವರು. ಈ ಗಣಪತಿಯನ್ನು ಮನೆಯಲ್ಲಿಯೆ ಆಗಲಿ ಇಲ್ಲವೆ ದೇವಸ್ಥಾನಗಳಲ್ಲಿಯೇ ಆಗಲಿ ಎಷ್ಟು ದಿನ ಇಡುತ್ತಾರೆಯೋ ಆದಿನ ಕೊನೆಯ ದಿನದಲ್ಲಿ ಆ ಗಣಪತಿಯನ್ನು ರಾತ್ರಿ ಬಾವಿಗೆ ಹಾಕಿ ಬರುತ್ತಾರೆ. ಗಣಪತಿಯನ್ನು ವಯ್ಯುವಾಗ ಜನರು ''ಗಣಪ್ಪ ಗಣಪ್ಪ ಮೂರಯ್ಯ ಮುಂದಿನ ವರ್ಷಕ್ಕೆ ಬಾರಯ್ಯ'' ಎಂದು ಕೂಗುತ್ತಾ ಬಾವಿಗೆ ಬಿಡುತ್ತಾರೆ.

ಭಾರತ ದೇಶವನ್ನು ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಒಂದುಗೂಡಿಸಿದ ಶ್ರೇಯಸ್ಸು ನಮ್ಮ ದೇವತೆಗಳಿಗೆ ಸಲ್ಲುತ್ತದೆ. ಶತ ಶತಮಾನಗಳಿಂದ ಮನ ಮನಗಳನ್ನು ಬೆಸೆದ ರಾಷ್ಟ್ರೀಯ ದೇವತೆ ಮಹಾಗಣಪತಿ ಅವನು ಯೋಗಿಗಳಿಗೆ ಪರಬ್ರಹ್ಮ, ಬಾಲಕರಿಗೆ ಬಾಲಗಣಪತಿ, ಕವಿಕಲಾವಿದರಿಗೆ ಪ್ರಿಯದೇವ, ಕಷ್ಟದಲ್ಲಿ ಸಿಲುಕಿದವರಿಗೆ ಸಂಕಟಹರ, ಶ್ರೀ ಸಾಮಾನ್ಯನಿಗೆ ವಿಘ್ನ ನಿವಾರಕ ಹಾಗೂ ಸರ್ವಸಿದ್ಧಿ ಪ್ರದಾಯಕನಾಗಿದ್ದಾನೆ. ಭಾರತ ದೇಶದ ಪ್ರತಿ ಗ್ರಾಮಕ್ಕೂ ಮುಖ್ಯ ದೇವತೆ ನಮ್ಮ ದೇಶದಲ್ಲಿ ಬಹುಷಹ ಗಣಪತಿಯ ಗುಡಿ ಇಲ್ಲದ ಗ್ರಾಮವಿಲ್ಲ, ಗಣೇಶ ವಿಲ್ಲದ ಗೃಹವಿಲ್ಲ, ಬಾಲಗಂಗಾಧರ ತಿಲಕ್‌ರವರು ರಾಷ್ಟ್ರೀಯ ಸಂಘಟನೆಗಾಗಿ ಗಣಪತಿ ಹಬ್ಬವನ್ನು ಬಳಸಿಕೊಂಡು ಸಾರ್ವಜನಿಕ ಗಣೇಶೋತ್ಸವವನ್ನು ಜಾರಿಗೆ ತಂದರು. ಹೀಗೆ ಗಣಪತಿಯು ವಿಘ್ನ ನಿವಾರಕ ಸಿದ್ದಿ ಬುದ್ದಿದಾಯಕನಷ್ಟೆ ಅಲ್ಲ ಸಮಾಜ ಸಂಘಟನೆಯ ಮೂಲ ಪುರುಷನು ಹೌದು. ಆದ್ದರಿಂದ ಎಲ್ಲಾ ಶುಭ ಕಾರ್ಯಗಳಲ್ಲೂ ಎಲ್ಲಾ ದೇವತೆಗಳ ಪೂಜೆಯ ಆರಂಭದಲ್ಲಿ ಗಣಪತಿಗೆ ಪ್ರಥಮ ಪೂಜೆ ಸಲ್ಲುತ್ತದೆ. ವಿದ್ಯೆ ಆರಂಭಿಸುವಾಗ, ವಿವಾಹದಲ್ಲಿ, ಹೊಸಮನೆ ಪ್ರವೇಶಿಸುವಾಗ ಪ್ರವಾಸಕ್ಕೆ ಹೊರಡುವಾಗ ಗಣಪತಿಯನ್ನು ಸ್ಮರಿಸಿ ಹೋದರೆ ಅವರಿಗೆ ಯಾವುದೇ ವಿಘ್ನ ಬರಲಾರದು.

ನಾಡಹಬ್ಬ ನವರಾತ್ರಿ (ದಸರಾ)

ರನ್ನನ ಕಾವ್ಯದ ಕೊಂಬನು ಊದಿ
ದೇಹದಲ್ಲೆಲ್ಲ ಶೌರ್ಯವ ತುಂಬಿ
ಪಂಪನ ಹೆಸರನು ಸೊಂಟಕೆ ಸುತ್ತಿ

ರನ್ನನ ಭೀಮನ ಗದೆಯನು ಎತ್ತಿ

ಹಕ್ಕನ ಬುಕ್ಕನ ಶಸ್ತ್ರವ ಹೂಡಿ

ವಿದ್ಯಾರಣ್ಯದ ಚರಿತೆಯ ಹಾಡಿ

ದಸರೆಯ ಹಬ್ಬವ ಹಬ್ಬಿಸಿರಿ

ಕನ್ನಡನಾಡನು ಹಿಗ್ಗಿಸಿರಿ

ದಸರಾ, ರಾಮಲೀಲಾ, ದುರ್ಗಾಪೂಜೆ, ದೇವಿಪೂಜೆ, ನಾಡಹಬ್ಬ ಎಂದೆಲ್ಲ ಪ್ರಸಿದ್ಧಿ ಪಡೆದ ನವರಾತ್ರಿ ಆರಂಭವಾಗುವುದು ಆಶ್ವಯುಜ ಶುಕ್ಲ ಪಾಡ್ಯದಂದು ನವಮಿಯವರೆಗೆ. ಇದರ ವ್ಯಾಪ್ತಿ ಶರತ್ಕಾಲದಲ್ಲಿಯ ಶಕ್ತ್ಯಾರಾಧನಾರೂಪವಾದ ವ್ರತ ಇದು ಒಂಬತ್ತು (ನವ) ರಾತ್ರಿ ಎಂಬುದು ಇದರ ವಾಸ್ತವ ಅರ್ಥವಲ್ಲ. ಈ ವ್ರತವನ್ನು ಅಶ್ವಯುಜ ಶುಕ್ಲ ಪ್ರತಿಪದೆಯಿಂದ ಆರಂಭಿಸಿ ನವಮಿಯ ವರೆಗೆ ಒಂಬತ್ತು ದಿನ, ತದಿಗೆಯಿಂದ ಪ್ರಾರಂಭಮಾಡಿ ಏಳುದಿನ, ಪಂಚಮಿಯಿಂದ ಐದು ದಿನ, ಸಪ್ತಮಿಯಿಂದ ಮೂರುದಿನ ಅಷ್ಟಮಿ ಮೊದಲ್ಗೊಂಡು ಎರಡು ದಿನ ಅಥವಾ ಅಷ್ಟಮಿ-ನವಮಿ ಇವುಗಳಲ್ಲಿ ಒಂದು ದಿನ ಆಚರಿಸಬಹುದು ಎಂಬುದು ಶಾಸ್ತ್ರಗಳ ಆದೇಶ.

ನವರಾತ್ರಿಯಲ್ಲಿ ದುರ್ಗಾಪೂಜೆ, ಸಪ್ತಶತೀ ಪಾರಾಯಣ ಮತ್ತು ಕುಮಾರೀ ಪೂಜೆಗೆ ವಿಶೇಷ ಮಹತ್ವ ದುಷ್ಟ ಶಕ್ತಿಯ ನಿವಾರಣೆಗಾಗಿ ಬ್ರಹ್ಮ, ವಿಷ್ಣು, ಮಹೇಶ್ವರ ಹಾಗೂ ದೇವತೆಗಳ ತೇಜಸ್ಸಿನಿಂದ ಉದ್ಭವಿಸಿದ ಮತ್ತು ಅವರಿಂದ ವಿವಿಧ ಆಯುಧ ಪಡೆದ ದೈತ್ಯ ಸಂಹಾರಿಣಿ ದುರ್ಗೆಯನ್ನು ಒಂದೊಂದು ದಿನ ಒಂದೊಂದು ಹೆಸರಿನಿಂದ ಪೂಜಿಸಲಾಗುತ್ತದೆ. ಮಧು-ಕೈಟಭರನ್ನು ಕೊಂದ ಮಹಾಕಾಳಿ, ಮಹಿಷಾಸುರ ಮರ್ದಿನಿಯಾದ ದುರ್ಗೆ, ಚಂಡ ಮುಂಡರನ್ನು ಸಂಹರಿಸಿದ ಚಾಮುಂಡಿ, ರಕ್ತಬೀಜಾಂತಕಳಾದ ಕಾಳಿ, ನಂದನ ಪುತ್ರಿಯಾಗಿ ಕಂಸನ ಮರಣ ಸೂಚಕಳಾದ ನಂದಾ, ಭಯಂಕರ ರಾಕ್ಷಸ ಸಂಹಾರಿಣಿಯಾದ ರಕ್ತದಂತಿಕಾ, ಕ್ಷಾಮನಿವಾರಕಳಾದ ಶಾಕಂಬರೀ, ದುರ್ಗನೆಂಬ ರಾಕ್ಷಸನನ್ನು ಕೊಂದು ಭಯವನ್ನು ಹೋಗಲಾಡಿಸಿದ ದುರ್ಗಾ, ಅರುಣಾಸುರನನ್ನು ಸಂಹರಿಸಿದ ಭ್ರಾಮರೀ ಎಂಬ ನವದುರ್ಗೆಯರನ್ನು ಈ ಒಂಬತ್ತು ದಿನಗಳಲ್ಲಿ ನವೋತ್ಸಾಹದಿಂದ ಪೂಜಿಸಲಾಗುತ್ತದೆ.

ಸಂಡೂರಿನಲ್ಲಿ ಇರುವ ಲಕ್ಷ್ಮೀಪುರದಲ್ಲಿ ಉಡಿಸ್ಲಮ್ಮನ ದೇವಸ್ಥಾನದಲ್ಲಿ ಈ ನವರಾತ್ರಿಯಲ್ಲಿ ಒಂದೊಂದು ದಿನ ಒಂದು ವಿಶೇಷವಾದ ಪೂಜೆಯನ್ನು ಮಾಡುತ್ತಾರೆ. ಮೊದಲನೆಯ ದಿನ ಕುಂಕುಮ,

ಅರಿಶಿಣದ ಪೂಜೆ, ೨ನೇ ದಿನ ಹೂವಿನ ಪೂಜೆ, ೩ನೇ ದಿನ ಬುತ್ತಿ ಪೂಜೆ, ೪ನೇ ದಿನ ನವದಾನ್ಯಗಳು ಪೂಜೆ, ೫ನೇ ದಿನ ದ್ರಾಕ್ಷಿ ಗೋಡಂಬಿಗಳು ಪೂಜೆ, ೬ನೇ ದಿನ ಉತ್ತುತ್ತಿ ಪೂಜೆ, ೭ನೇ ದಿನ ಹಸಿರು ದ್ರಾಕ್ಷಿ, ಸೇಬು ಹಣ್ಣಿನ ಪೂಜೆ, ೮ನೇ ದಿನ ಕರ್ಜೂರದ ಪೂಜೆ, ೯ನೇ ದಿನ ಗಂಧದ ಪೂಜೆ ಹೀಗೆ ೯ ದಿನ ಆ ಉಡಿಸ್ಲಮ್ಮಗೆ ಅಲಂಕಾರಮಾಡಿ ಪೂಜಿಸುತ್ತಾರೆ.

ಈ ನವರಾತ್ರಿಯಲ್ಲಿ ಒಂಬತ್ತುದಿನ ಮಹಿಳೆಯರು ಬೆಳಗ್ಗೆ ಬೇಗನೇ ಎದ್ದು ಸ್ನಾನ ಮಾಡಿ ಮನೆಯನ್ನು ಸ್ವಚ್ಚಮಾಡಿ, ರಂಗೂಲಿಯನ್ನು ಇಟ್ಟು, ಮನೆಯಲ್ಲಿ ಇರುವ ದೇವರಿಗೆ ಮೊದಲು ಪೂಜೆ ಮಾಡಿ ನಂತರ ಬನ್ನಿ ಮರಕ್ಕೆ ಹೋಗಿ ಪೂಜೆ ಮಾಡಿಕೊಂಡು ಬರುತ್ತಾರೆ. ಸೂರ್ಯ ಉದಯ ಆಗುವುದೊರಳಗೆ ಈ ಪೂಜೆ ಮುಗಿಸುತ್ತಾರೆ. ಒಂದು ತಟ್ಟೆಯಲ್ಲಿ ನೀರು, ಗಂಧ, ವಿಭೂತಿ, ಕುಂಕುಮ, ಅರಿಶಿಣ, ಹೂ, ಊದಿನ ಕಡ್ಡಿ, ತುಪ್ಪದ ಬತ್ತಿ, ಅಕ್ಷತೆ, ಇವೆಲ್ಲವುಗಳಿಂದ ಬನ್ನಿ ಮರಕ್ಕೆ ಪೂಜೆ ಮಾಡಿ, ನಂತರ ಮಂಗಳವಾರ ಇಲ್ಲವೆ ಶುಕ್ರವಾರ ಬಂದಾಗ ಆ ಬನ್ನಿ ಮರಕ್ಕೆ ಉಡಿ ತುಂಬುತ್ತಾರೆ. ಕಣ, ಅಕ್ಕಿ, ಎಲೆ, ಅಡಿಕೆ, ವಣಕೊಬ್ಬರಿ ಬಟ್ಟಲು, ಉತ್ತುತ್ತಿ, ಐದು ಹಸಿರು ಬಳೆ, ಅರಿಶಿಣದ ಕೊಂಬು, ಇವೆಲ್ಲವನ್ನು ಆ ಬನ್ನಿ ಮರಕ್ಕೆ ಇಟ್ಟು ಕಾಯಿ ಹೊಡೆದುಕೊಂಡು ಬರುತ್ತಾರೆ. ಅಲ್ಲದೆ ಬಿಳಿದಾರದಿಂದ ಆ ಬನ್ನಿ ಮರಕ್ಕೆ ೫ ಎಳೆ ಸುತ್ತುತ್ತಾರೆ. ಹೀಗೆ ಮಹಿಳೆಯರು ಬೆಳಗ್ಗೆ ಬೇಗ ಎದ್ದು ಬನ್ನಿಮರದ ಪೂಜೆಯನ್ನು ೯ದಿನ ಮಾಡುತ್ತಾರೆ. ಈ ಬನ್ನಿ ಮರಕ್ಕೆ ಪೂಜೆ ಮಾಡಿದರೆ ನಮ್ಮ ಇಷ್ಟಾರ್ಥಗಳು ನೆರವೇರುತ್ತವೆ.

ಹಿನ್ನೆಲೆ

ಪಾಂಡವರು ವನವಾಸದಲ್ಲಿ ಇದ್ದಾಗ ತಮ್ಮ ಶಸ್ತ್ರಾಸ್ತ್ರಗಳನ್ನು ಬನ್ನಿ ಮರದಲ್ಲಿ ಇಟ್ಟು ಪೂಜಿಸಿದ್ದರು ಅವುಗಳನ್ನು ಯುದ್ದಕ್ಕೆ ತೆಗೆದುಕೊಂಡು ಹೋಗಿ ಜಯಗೊಳಿಸಿದರು. ಹೀಗೆ ೯ದಿನ ಅವರು ಬನ್ನಿಮರದಲ್ಲಿ ಇಟ್ಟು ೧೦ನೇ ದಿನಕ್ಕೆ ಅವರು ವಿಜಯಗೊಳಿಸಿದರು.

ಅಶ್ವಯುಜ ಶುದ್ಧ ದಶಮಿ ವಿಜಯದಶಮಿ ತ್ರೇತಾಯುಗದಲ್ಲಿ ಶ್ರೀರಾಮಚಂದ್ರ ದುಷ್ಟರಾಕ್ಷಸ ರಾವಣನನ್ನು ವಧಿಸಿದ ದಿನ ಇದು, ಸೀತಾಪಹಾರಕನಾದ ರಾವಣನೊಂದಿಗೆ ಶ್ರೀರಾಮನು ತಮ್ಮ ಲಕ್ಷ್ಮಣ ಮತ್ತು ಕಪಿ ಸೇನೆಯ ಸಹಾಯದೊಂದಿಗೆ ಯುದ್ಧ ಮಾಡುವಾಗ ಒಂಬತ್ತು ದಿನಗಳು ಕಾಲ ದುರ್ಗೆಯನ್ನು ಪೂಜಿಸಿದನಂತೆ. ದುಷ್ಟ ಸಂಹಾರಿಣಿಯಾದ ಆಕೆಯ ಅನುಗ್ರಹದಿಂದ ಹತ್ತನೆಯ ದಿನದ ಯುದ್ಧದಲ್ಲಿ ರಾವಣ ಧರೆಗುರುಳಿದ ಶ್ರೀರಾಮ ವಿಜಯ ಸಾಧಿಸಿದ. ಕೆಟ್ಟುದರ ಮೇಲೆ ಒಳ್ಳೆಯದರ ಜಯದ ಸಂಕೇತವೇ ವಿಜಯದಶಮಿ. ದುರ್ಗಾ ಪೂಜೆಯನ್ನು ನೆಡೆಸಿದ ಅನೇಕ ದೇವಸ್ಥಾನಗಳಲ್ಲಿ ಈ ದೇವಿಯ ಬಗ್ಗೆ ಪುರಾಣಗಳನ್ನು ರಾತ್ರಿಯಲ್ಲಿ ಹೇಳುತ್ತಾರೆ. ಇದಕ್ಕೆ ವಿಶೇಷತೆ ಇದೆ.

ದೀಪಾವಳಿ ಹಬ್ಬ

ದೇಶಾದ್ಯಂತ ಆಚರಣೆಯಲ್ಲಿರುವ ದೀಪಾವಳಿ ಒಂದು ರಾಷ್ಟ್ರೀಯ ಹಬ್ಬ. ದಿವಾಲೀ, ದೀಪಾಲಿಕಾ, ದೀವಾವಳಿ ಇವೆಲ್ಲ ಇದರ ನಾಮಾಂತರಗಳು. ದೀಪಾವಳಿ ಬಹಳ ಪುರಾತನ ಹಬ್ಬವೂ ಹೌದು. ಪ್ರಾಚೀನ ಶಿಲಾಶಾಸನಗಳಲ್ಲಿ ಈ ಹಬ್ಬದ ಉಲ್ಲೇಖವಿದೆ. ಕತ್ತಲೆಗೂ ಬೆಳಕಿಗೂ ಯುಗ ಯುಗಗಳ ಸಂಘರ್ಷ, ನಿರಂತರ ಹೋರಾಟ, ಕತ್ತಲೊಡನೆ ಜಗಳಾಗಿ ಬೆಳಕು ಗೆಲ್ಲುವುದರ ಸಂಕೇತ, ದೀಪಾವಳಿ ಬೆಳಕು ಎಲ್ಲ ಚೇತನಗಳ ಅಧಿಷ್ಠಾನ, ಆಧಾರ, ಕ್ರಿಯಾಶಕ್ತಿ ಬೆಳಕೇ ಬದುಕು. ಆ ಕರುಣಾಳು ಬೆಳಕಿನ ಆರಾಧನೆಯ ಹಬ್ಬ ಈ ದೀಪಾವಳಿ.

ದೀಪಗಳ ಅವಲಿ (ಸಾಲು) ದೀಪಾವಳಿ ಈ ಹಬ್ಬದ ದಿನಗಳಲ್ಲಿ ಎಲ್ಲೆಲ್ಲೂ ದೀಪಗಳ ಸಾಲು, ಮನೆ ಮನೆಗಳಲ್ಲಿ ಲಕ್ಷದೀಪೋತ್ಸವ. ಶರತ್ಕಾಲದ ಶುಭ್ರ ಆಕಾಶದಲ್ಲೂ ದೀಪದ ಬುಟ್ಟಿ, ಆಕಾಶದೀಪ, ಗೂಡುದೀಪ, ಎಲ್ಲೆಡೆ ದೀಪ ಪ್ರದೀಪಗಳು.

ಭಾರತೀಯ ಪರಂಪರೆಯಲ್ಲಿ ದೀಪಕ್ಕೆ ಮಹತ್ವದ ಸ್ಥಾನ. ಅದು ಪರಬ್ರಹ್ಮದ ಸಂಕೇತ. ಏಕೆಂದರೆ ಸ್ವತಃ ಪರಬ್ರಹ್ಮನೇ ಒಂದು ಪರಂಜ್ಯೋತಿ, ಸೂರ್ಯನನ್ನು ಕಂಡಾಗ, ಮನೆಯ ದೀಪಗಳ ಗುಂಡಿ ಒತ್ತಿದಾಗ ವಾಹನಗಳ ಸಿರೋದೀಪಗಳು ಬೆಳಗಿದಾಗ, ಹೋದ ವಿದ್ಯುದ್ದೀಪ ಮರಳಿ ಬಂದಾಗ ಭಾರತೀಯರ ಮುಖಗಳು ಅರಳುತ್ತವೆ. ಶುಭ ಸಂದರ್ಭದಲ್ಲಿ ದೀಪ ಆರಿದರೆ ಮುಖ ಬಾಡುತ್ತದೆ. ದೀಪ ಆರುವುದು ಭಾರತೀಯರ ದೃಷ್ಟಿಯಲ್ಲಿ ಮಹಾ ಅಶುಭ.

ದೀಪ ಜ್ಞಾನದ ಪ್ರತೀತವೂ ಹೌದು, ಭಾರತೀಯರ ಬದುಕಿನ ತಿಣುಕಾಟ ಹೋರಾಟಗಳೆಲ್ಲ ಜ್ಞಾನದ ಪ್ರಾಪ್ತಿಗಾಗಿ ಅಜ್ಞಾನದ ನಿವಾರಣೆಗಾಗಿ ಅವರ ದಿನನಿತ್ಯದ ಪ್ರಾರ್ಥನೆಯೇ 'ತಮಸೋಮಾ ಜೋತಿರ್ಗಮಯ' ಓ ದೇವಾ! ನನ್ನನ್ನು ಕತ್ತಲಿನಿಂದ ಬೆಳಕಿನೆಡೆಗೆ ಕೊಂಡೊಯ್ಯು ಎಂದು ಆದ್ದರಿಂದ ಬೆಳಕಿನ ಆರಾಧಕರಾದ ಭಾರತೀಯರಿಗೆ ದೀಪಗಳು ಈ ಹಬ್ಬವಾಗಿದೆ.

ಮಾಡುವ ವಿಧಾನ

ಈ ದೀಪಾವಳಿ ಹಬ್ಬವನ್ನು ನಮ್ಮ ಭಾರತದಲ್ಲಿ ಮೂರುದಿನ ಆಚರಿಸುತ್ತಾರೆ. ಮೊದಲನೇ ದಿನ ನರಕಚತುರ್ದಶಿ, ಎರಡನೆಯ ದಿನ ಅಮವಾಸ್ಯೆ, ಮೂರನೆಯ ದಿನ ಬಲಿಪಾಡ್ಯ ಎಂದು

ನರಕಚತುರ್ದಶಿ (ನೀರು ಹಬ್ಬ)

ಆಶ್ವಯುಜ ಬಹುಳ ತ್ರಯೋದಶಿಯ ಸಂಜೆಯೇ ಅಪರೂಪದ ನೆಂಟನಂತೆ ಈ ಹಬ್ಬದ

ದೀಪಾವಳಿ ಹಬ್ಬ

ದೇಶಾದ್ಯಂತ ಆಚರಣೆಯಲ್ಲಿರುವ ದೀಪಾವಳಿ ಒಂದು ರಾಷ್ಟ್ರೀಯ ಹಬ್ಬ. ದಿವಾಲೀ, ದೀಪಾಲಿಕಾ, ದೀವಾವಳಿ ಇವೆಲ್ಲ ಇದರ ನಾಮಾಂತರಗಳು. ದೀಪಾವಳಿ ಬಹಳ ಪುರಾತನ ಹಬ್ಬವೂ ಹೌದು. ಪ್ರಾಚೀನ ಶಿಲಾಶಾಸನಗಳಲ್ಲಿ ಈ ಹಬ್ಬದ ಉಲ್ಲೇಖವಿದೆ. ಕತ್ತಲೆಗೂ ಬೆಳಕಿಗೂ ಯುಗ ಯುಗಗಳ ಸಂಘರ್ಷ, ನಿರಂತರ ಹೋರಾಟ, ಕತ್ತಲೊಡನೆ ಜಗಳಾಗಿ ಬೆಳಕು ಗೆಲ್ಲುವುದರ ಸಂಕೇತ, ದೀಪಾವಳಿ ಬೆಳಕು ಎಲ್ಲ ಚೇತನಗಳ ಅಧಿಷ್ಠಾನ, ಆಧಾರ, ಕ್ರಿಯಾಶಕ್ತಿ ಬೆಳಕೇ ಬದುಕು. ಆ ಕರುಣಾಳು ಬೆಳಕಿನ ಆರಾಧನೆಯ ಹಬ್ಬ ಈ ದೀಪಾವಳಿ.

ದೀಪಗಳ ಅವಲಿ (ಸಾಲು) ದೀಪಾವಳಿ ಈ ಹಬ್ಬದ ದಿನಗಳಲ್ಲಿ ಎಲ್ಲೆಲ್ಲೂ ದೀಪಗಳ ಸಾಲು, ಮನೆ ಮನೆಗಳಲ್ಲಿ ಲಕ್ಷದೀಪೋತ್ಸವ. ಶರತ್ಕಾಲದ ಶುಭ್ರ ಆಕಾಶದಲ್ಲೂ ದೀಪದ ಬುಟ್ಟಿ, ಆಕಾಶದೀಪ, ಗೂಡುದೀಪ, ಎಲ್ಲೆಡೆ ದೀಪ ಪ್ರದೀಪಗಳು.

ಭಾರತೀಯ ಪರಂಪರೆಯಲ್ಲಿ ದೀಪಕ್ಕೆ ಮಹತ್ವದ ಸ್ಥಾನ. ಅದು ಪರಬ್ರಹ್ಮದ ಸಂಕೇತ. ಏಕೆಂದರೆ ಸ್ವತಃ ಪರಬ್ರಹ್ಮನೇ ಒಂದು ಪರಂಜ್ಯೋತಿ, ಸೂರ್ಯನನ್ನು ಕಂಡಾಗ, ಮನೆಯ ದೀಪಗಳ ಗುಂಡಿ ಒತ್ತಿದಾಗ ವಾಹನಗಳ ಸಿರೋದೀಪಗಳು ಬೆಳಗಿದಾಗ, ಹೋದ ವಿದ್ಯುದ್ದೀಪ ಮರಳಿ ಬಂದಾಗ ಭಾರತೀಯರ ಮುಖಗಳು ಅರಳುತ್ತವೆ. ಶುಭ ಸಂದರ್ಭದಲ್ಲಿ ದೀಪ ಆರಿದರೆ ಮುಖ ಬಾಡುತ್ತದೆ. ದೀಪ ಆರುವುದು ಭಾರತೀಯರ ದೃಷ್ಟಿಯಲ್ಲಿ ಮಹಾ ಅಶುಭ.

ದೀಪ ಜ್ಞಾನದ ಪ್ರತೀತವೂ ಹೌದು, ಭಾರತೀಯರ ಬದುಕಿನ ತಿಣುಕಾಟ ಹೋರಾಟಗಳೆಲ್ಲ ಜ್ಞಾನದ ಪ್ರಾಪ್ತಿಗಾಗಿ ಅಜ್ಞಾನದ ನಿವಾರಣೆಗಾಗಿ ಅವರ ದಿನನಿತ್ಯದ ಪ್ರಾರ್ಥನೆಯೇ 'ತಮಸೋಮಾ ಜೋತಿರ್ಗಮಯ' ಓ ದೇವಾ! ನನ್ನನ್ನು ಕತ್ತಲಿನಿಂದ ಬೆಳಕಿನೆಡೆಗೆ ಕೊಂಡೊಯ್ಯು ಎಂದು ಆದ್ದರಿಂದ ಬೆಳಕಿನ ಆರಾಧಕರಾದ ಭಾರತೀಯರಿಗೆ ದೀಪಗಳು ಈ ಹಬ್ಬವಾಗಿದೆ.

ಮಾಡುವ ವಿಧಾನ

ಈ ದೀಪಾವಳಿ ಹಬ್ಬವನ್ನು ನಮ್ಮ ಭಾರತದಲ್ಲಿ ಮೂರುದಿನ ಆಚರಿಸುತ್ತಾರೆ. ಮೊದಲನೇ ದಿನ ನರಕಚತುರ್ದಶಿ, ಎರಡನೆಯ ದಿನ ಅಮವಾಸ್ಯೆ, ಮೂರನೆಯ ದಿನ ಬಲಿಪಾಡ್ಯ ಎಂದು

ನರಕಚತುರ್ದಶಿ (ನೀರು ಹಬ್ಬ)

ಆಶ್ವಯುಜ ಬಹುಳ ತ್ರಯೋದಶಿಯ ಸಂಜೆಯೇ ಅಪರೂಪದ ನೆಂಟನಂತೆ ಈ ಹಬ್ಬದ

ಹಿನ್ನೆಲೆ

ದಂಪತಿಗಳು ಒಂದು ಪುಟ್ಟ ಅಂಗಡಿಯನ್ನು ಇಟ್ಟಿದ್ದರು ಅವರಿಗೆ ವ್ಯಾಪಾರ ಸರಿಯಾಗಿ ನಡೆಯುತ್ತಿರಲಿಲ್ಲ. ದಿನಾಲು ವ್ಯಾಪಾರ ಸರಿಯಾಗಿ ನಡೆಯಲಿ ಎಂದು ಕೊರಗುತ್ತಿದ್ದರು. ಆಗ ಲಕ್ಷ್ಮಿಯು ಬೇರೆ ರೂಪವನ್ನು ತಾಳಿ ಅವನ ಅಂಗಡಿಗೆ ಬಂದು ಕುಳಿತಳು, ಆಗ ಜನರು ಬಂದು ವ್ಯಾಪಾರ ಮಾಡತೊಡಗಿದರು. ಇದನ್ನು ಕಂಡು ಆಶ್ಚರ್ಯದಿಂದ ಗಂಡನು ಈ ರೀತಿ ನಡೆದ ವಿಷಯವನ್ನು ತನ್ನ ಹೆಂಡತಿಗೆ ಹೇಳಿದನು. ಆಗ ಅವಳು ಅಂಗಡಿಗೆ ಬಂದು ಅವಳನ್ನು ನೋಡಿ ಇವಳೇ ಲಕ್ಷ್ಮಿ ಇರಬಹುದು ಎಂದು ಊಹಿಸಿ ತನ್ನ ಗಂಡನಿಗೆ ಇವಳನ್ನು ಎಲ್ಲಿಯೂ ಕಳುಹಿಸ ಬೇಡಿ, ನಾನು ಬರುವವರೆಗೂ ಇವಳು ಇಲ್ಲಿಯೇ ಕುಳಿತಿರಲಿ ಎಂದು ಗಂಡನಿಗೆ ಹೇಳಿ ಮನೆಯ ಹಿಂದೆ ಇರುವ ಬಾವಿಗೆ ಅವಳು ಹಾರಿ ಪ್ರಾಣವನ್ನು ಕಳೆದುಕೊಳ್ಳುತ್ತಾಳೆ. ಇದರಿಂದ ಲಕ್ಷ್ಮಿಯು ಅವರ ಮನೆಯಲ್ಲಿಯೇ ಶಾಶ್ವತವಾಗಿ ಉಳಿದಳು. ಅವನು ಹೆಚ್ಚು ಶ್ರೀಮಂತನಾದನು, ಇದರಿಂದ ಅಂಗಡಿಗಳಲ್ಲಿ ಹೆಚ್ಚು ವ್ಯಾಪಾರವಾಗಿ ಲಾಭ ಬರಲಿ ಎಂದು ಲಕ್ಷ್ಮೀ ಪೂಜೆಯನ್ನು ಅಮವಾಸ್ಸೆಯ ದಿನ ಹೆಚ್ಚು ಆಡಂಬರದಿಂದ ಪೂಜೆಯನ್ನು ಮಾಡುತ್ತಾರೆ.

ಲಕ್ಷ್ಮಿ ಪೂಜೆ ಮಾಡುವ ವಿಧಾನ

ಅಂಗಡಿಗೆ ಅನೇಕ ವಿದ್ಯುತ್ ದ್ವೀಪಗಳಿಂದ, ಮಾವಿನತೋರಣಗಳಿಂದ, ಹಾಗೂ ಹೂವಿನಿಂದ ಅಲಂಕಾರಮಾಡಿರುತ್ತಾರೆ. ಅಂಗಡಿಯಲ್ಲಿ ಒಂದು ಮೇಜನ್ನು ಇಟ್ಟು ಅದರ ಮಧ್ಯದಲ್ಲಿ ಒಂದು ತಟ್ಟೆ ಇಲ್ಲವೆ ಬಾಳೆದೆಲೆಯನ್ನು ಇಟ್ಟು ಅದರಲ್ಲಿ ಅಕ್ಕಿಯನ್ನು ಹಾಕಿ, ಅದರ ಮೇಲೆ ಒಂದು ಬಿಂದಿಗೆಯನ್ನು ಇಟ್ಟು ನೀರನ್ನು ಹಾಕಿ, ವೀಳೆದೆಲೆ ಇಟ್ಟು, ಅದರ ಮೇಲೆ ಕಾಯಿಯನ್ನು ಇಟ್ಟು, ಅದಕ್ಕೆ ಬೆಳ್ಳಿ ಇಲ್ಲವೆ ಬಂಗಾರದಿಂದ ಮಾಡಿದ ಕಣ್ಣು, ಮೂಗುತಿ, ಮಾಂಗಲ್ಯ ಸರ, ಸೀರೆ, ಕಣ, ಇಲ್ಲವೆ ಕಣ ಇವುಗಳನ್ನು ಇಟ್ಟು ಅಲಂಕಾರ ಮಾಡುತ್ತಾರೆ. ಅನೇಕ ಹೂವಿನಿಂದ ಅಲಂಕಾರ ಮಾಡಿ, ಗಂಧ, ಕುಂಕುಮ, ಅರಿಶಿಣ ಹಚ್ಚಿ, ಊದುಬತ್ತಿಯನ್ನು ಬೆಳಗಿ, ಮಂಗಳಾರತಿಯನ್ನು ಮಾಡಿ, ಕಾಯಿ ಹೊಡೆಯುತ್ತಾರೆ. ಲಕ್ಷ್ಮಿಯ ಮುಂದೆ ಐದು ತರಹದ ಹಣ್ಣುಗಳನ್ನು ಇಟ್ಟಿರುತ್ತಾರೆ. ದುಡ್ಡುಗಳನ್ನು ಇಟ್ಟಿರುತ್ತಾರೆ. ನೈವೇದ್ಯಕ್ಕೆ ಹೋಳಿಗೆಯನ್ನು ಮಾಡಿರುತ್ತಾರೆ. ಆತ್ಮೀಯರೆಲ್ಲರೂ ಬಂದು ಪೂಜೆಯನ್ನು ನೋಡುತ್ತಾರೆ. ಮಕ್ಕಳು ಅಂಗಡಿಯ ಮುಂದೆ ಪಠಾಕಿಗಳನ್ನು ಹಚ್ಚುತ್ತಾ ಆನಂದದಿಂದ ಕಾಲ ಕಳೆಯುತ್ತಾರೆ. ಅಂಗಡಿಯ ಮಾಲಿಕರು ಹಾಗೂ ಸ್ನೇಹಿತರು ಎಲ್ಲರು ಸೇರಿ ಅಂದು ರಾತ್ರಿ ನಿದ್ರೆಗೆಟ್ಟು ಜೂಜಾಟಗಳನ್ನು ಆಡುತ್ತಾರೆ.

ಹಿನ್ನೆಲೆ

ದಂಪತಿಗಳು ಒಂದು ಪುಟ್ಟ ಅಂಗಡಿಯನ್ನು ಇಟ್ಟಿದ್ದರು ಅವರಿಗೆ ವ್ಯಾಪಾರ ಸರಿಯಾಗಿ ನಡೆಯುತ್ತಿರಲಿಲ್ಲ. ದಿನಾಲು ವ್ಯಾಪಾರ ಸರಿಯಾಗಿ ನಡೆಯಲಿ ಎಂದು ಕೊರಗುತ್ತಿದ್ದರು. ಆಗ ಲಕ್ಷ್ಮಿಯು ಬೇರೆ ರೂಪವನ್ನು ತಾಳಿ ಅವನ ಅಂಗಡಿಗೆ ಬಂದು ಕುಳಿತಳು, ಆಗ ಜನರು ಬಂದು ವ್ಯಾಪಾರ ಮಾಡತೊಡಗಿದರು. ಇದನ್ನು ಕಂಡು ಆಶ್ಚರ್ಯದಿಂದ ಗಂಡನು ಈ ರೀತಿ ನಡೆದ ವಿಷಯವನ್ನು ತನ್ನ ಹೆಂಡತಿಗೆ ಹೇಳಿದನು. ಆಗ ಅವಳು ಅಂಗಡಿಗೆ ಬಂದು ಅವಳನ್ನು ನೋಡಿ ಇವಳೇ ಲಕ್ಷ್ಮಿ ಇರಬಹುದು ಎಂದು ಊಹಿಸಿ ತನ್ನ ಗಂಡನಿಗೆ ಇವಳನ್ನು ಎಲ್ಲಿಯೂ ಕಳುಹಿಸ ಬೇಡಿ, ನಾನು ಬರುವವರೆಗೂ ಇವಳು ಇಲ್ಲಿಯೇ ಕುಳಿತಿರಲಿ ಎಂದು ಗಂಡನಿಗೆ ಹೇಳಿ ಮನೆಯ ಹಿಂದೆ ಇರುವ ಬಾವಿಗೆ ಅವಳು ಹಾರಿ ಪ್ರಾಣವನ್ನು ಕಳೆದುಕೊಳ್ಳುತ್ತಾಳೆ. ಇದರಿಂದ ಲಕ್ಷ್ಮಿಯು ಅವರ ಮನೆಯಲ್ಲಿಯೇ ಶಾಶ್ವತವಾಗಿ ಉಳಿದಳು. ಅವನು ಹೆಚ್ಚು ಶ್ರೀಮಂತನಾದನು, ಇದರಿಂದ ಅಂಗಡಿಗಳಲ್ಲಿ ಹೆಚ್ಚು ವ್ಯಾಪಾರವಾಗಿ ಲಾಭ ಬರಲಿ ಎಂದು ಲಕ್ಷ್ಮೀ ಪೂಜೆಯನ್ನು ಅಮವಾಸ್ಸೆಯ ದಿನ ಹೆಚ್ಚು ಆಡಂಬರದಿಂದ ಪೂಜೆಯನ್ನು ಮಾಡುತ್ತಾರೆ.

ಲಕ್ಷ್ಮಿ ಪೂಜೆ ಮಾಡುವ ವಿಧಾನ

ಅಂಗಡಿಗೆ ಅನೇಕ ವಿದ್ಯುತ್ ದ್ವೀಪಗಳಿಂದ, ಮಾವಿನತೋರಣಗಳಿಂದ, ಹಾಗೂ ಹೂವಿನಿಂದ ಅಲಂಕಾರಮಾಡಿರುತ್ತಾರೆ. ಅಂಗಡಿಯಲ್ಲಿ ಒಂದು ಮೇಜನ್ನು ಇಟ್ಟು ಅದರ ಮಧ್ಯದಲ್ಲಿ ಒಂದು ತಟ್ಟೆ ಇಲ್ಲವೆ ಬಾಳೆದೆಲೆಯನ್ನು ಇಟ್ಟು ಅದರಲ್ಲಿ ಅಕ್ಕಿಯನ್ನು ಹಾಕಿ, ಅದರ ಮೇಲೆ ಒಂದು ಬಿಂದಿಗೆಯನ್ನು ಇಟ್ಟು ನೀರನ್ನು ಹಾಕಿ, ವೀಳೆದೆಲೆ ಇಟ್ಟು, ಅದರ ಮೇಲೆ ಕಾಯಿಯನ್ನು ಇಟ್ಟು, ಅದಕ್ಕೆ ಬೆಳ್ಳಿ ಇಲ್ಲವೆ ಬಂಗಾರದಿಂದ ಮಾಡಿದ ಕಣ್ಣು, ಮೂಗುತಿ, ಮಾಂಗಲ್ಯ ಸರ, ಸೀರೆ, ಕಣ, ಇಲ್ಲವೆ ಕಣ ಇವುಗಳನ್ನು ಇಟ್ಟು ಅಲಂಕಾರ ಮಾಡುತ್ತಾರೆ. ಅನೇಕ ಹೂವಿನಿಂದ ಅಲಂಕಾರ ಮಾಡಿ, ಗಂಧ, ಕುಂಕುಮ, ಅರಿಶಿಣ ಹಚ್ಚಿ, ಊದುಬತ್ತಿಯನ್ನು ಬೆಳಗಿ, ಮಂಗಳಾರತಿಯನ್ನು ಮಾಡಿ, ಕಾಯಿ ಹೊಡೆಯುತ್ತಾರೆ. ಲಕ್ಷ್ಮಿಯ ಮುಂದೆ ಐದು ತರಹದ ಹಣ್ಣುಗಳನ್ನು ಇಟ್ಟಿರುತ್ತಾರೆ. ದುಡ್ಡುಗಳನ್ನು ಇಟ್ಟಿರುತ್ತಾರೆ. ನೈವೇದ್ಯಕ್ಕೆ ಹೋಳಿಗೆಯನ್ನು ಮಾಡಿರುತ್ತಾರೆ. ಆತ್ಮೀಯರೆಲ್ಲರೂ ಬಂದು ಪೂಜೆಯನ್ನು ನೋಡುತ್ತಾರೆ. ಮಕ್ಕಳು ಅಂಗಡಿಯ ಮುಂದೆ ಪಟಾಕಿಗಳನ್ನು ಹಚ್ಚುತ್ತಾ ಆನಂದದಿಂದ ಕಾಲ ಕಳೆಯುತ್ತಾರೆ. ಅಂಗಡಿಯ ಮಾಲಿಕರು ಹಾಗೂ ಸ್ನೇಹಿತರು ಎಲ್ಲರು ಸೇರಿ ಅಂದು ರಾತ್ರಿ ನಿದ್ರೆಗೆಟ್ಟು ಜೂಜಾಟಗಳನ್ನು ಆಡುತ್ತಾರೆ.

ಸಂಕ್ರಾಂತಿ (ಸೂರ್ಯನ ಚಲನೆಯ ಹಬ್ಬ)

ಸಂಕ್ರಾಂತಿ-ಸಂಕ್ರಮಣ

ಜಗತ್ತಿಗೇ ಕಣ್ಣಾದ ಇಂತಹ ಸೂರ್ಯನ ಚಲನೆಯ ಹಬ್ಬ, ಸಂಕ್ರಮಣ ಅಥವಾ ಸಂಕ್ರಾಂತಿ. ಸಂಸ್ಕೃತದಲ್ಲಿ 'ಕ್ರಮಣ' ಎಂದರೆ ಹೆಜ್ಜೆ ಇಡುವಿಕೆ ಎಂದರ್ಥ. 'ಸಂಕ್ರಮಣ' ಎಂದರೆ ಚೆನ್ನಾಗಿ ಹಜ್ಜೆ ಇಡುವಿಕೆ, ಸೂರ್ಯನು ಒಂದು ರಾಶಿಯಲ್ಲಿ ತನ್ನ ಇರುವನ್ನು ಮುಗಿಸಿ ಇನ್ನೊಂದು ರಾಶಿಗೆ ಹೆಜ್ಜೆ ಇಡುವುದೇ ಸಂಕ್ರಮಣ ಅಥವಾ ಸಂಕ್ರಾಂತಿ, ಆದ್ದರಿಂದ ಸೂರ್ಯನ ಚಲನೆಯ ಹಬ್ಬ, ಈ ಸಂಕ್ರಾಂತಿ, ವರ್ಷಕ್ಕೆ ಹನ್ನೆರಡು ಸಂಕ್ರಾಂತಿ ಅಥವಾ ಸಂಕ್ರಮಣಗಳು, (ಏಕೆಂದರೆ ರಾಶಿಗಳು ಹನ್ನೆರಡು, ಸೌರಮಾಸಗಳು ಹನ್ನೆರಡು) ಆದರೆ ಇವುಗಳಲ್ಲಿ ಪ್ರಮುಖವಾದವು ಎರಡು ಮಾತ್ರ. ಸೂರ್ಯನು ಮಿಥುನ ರಾಶಿಯನ್ನು ಬಿಟ್ಟು ಕರ್ಕಾಟಕ ರಾಶಿಯನ್ನು ಪ್ರವೇಶಿಸುವ 'ಕರ್ಕಾಟಕ ಸಂಕ್ರಮಣ' ಮತ್ತು ಧನು ರಾಶಿಯನ್ನು ಬಿಟ್ಟು ಮಕರ ರಾಶಿಯನ್ನು ಸಂಕ್ರಮಿಸುವ 'ಮಕರ ಸಂಕ್ರಮಣ' ಇವು ಸೂರ್ಯನ ಪಯಣಕ್ಕೆ ಸಂಬಂಧಿಸಿದ 'ದಕ್ಷಿಣಾಯನ' ಮತ್ತು 'ಉತ್ತರಾಯಣ'ವನ್ನು ಸೂಚಿಸುವದರಿಂದ ಇವೆರಡಕ್ಕೆ ಹೆಚ್ಚಿನ ಮಹತ್ವ. ಉತ್ತರಾಯಣವನ್ನು 'ದೇವಯಾನ' ಮತ್ತು ದಕ್ಷಿಣಾಯಾನವನ್ನು 'ಪಿತೃಯಾನ' ಎಂದು ವೇದಗಳ ಕರೆದಿವೆ.

ಆಚರಣೆ

ಈ ಹಬ್ಬವನ್ನು ಎರಡುದಿನ ಆಚರಿಸುತ್ತಾರೆ. ಸ್ತ್ರೀಯರು ಬೆಳಿಗ್ಗೆ ಬೇಗನೇ ಎದ್ದು ಮನೆಯನ್ನು ಸ್ವಚ್ಚಗೊಳಿಸಿ, ನಂತರ ಮಾವಿನ ತೋರಣವನ್ನು ಮನೆಯ ಬಾಗಿಲಿಗೆ ಕಟ್ಟಿ, ರಂಗೋಲಿಯನ್ನು ಹಾಕಿ, ಮನೆಯನ್ನು ಶೃಂಗರಿಸುತ್ತಾರೆ. ಈ ಹಬ್ಬದ ಮೊದಲನೆಯದಿನ ವಿಶೇಷವೆಂದರೆ ಸ್ನಾನ ಮಾಡದೆ ಮರದಲ್ಲಿ ಧಾನ್ಯಗಳನ್ನು ಜೋಡಿಸಿ, ಈ ಭೋಗಿ ಹಬ್ಬದ ದಿನ ಬ್ರಾಹ್ಮಣರಿಗೆ ದಾನಮಾಡುತ್ತಾರೆ, ನಂತರ ಸ್ನಾನ ಮಾಡುವ ನೀರಿನಲ್ಲಿ ಕರಿ ಎಳ್ಳನ್ನು ಹಾಕಿಕೊಂಡು ಸ್ನಾನ ಮಾಡುತ್ತಾರೆ.

ಬಾಗಣದಲ್ಲಿ ಇಡುವ ಸಾಮಗ್ರಿಗಳು

ಅಕ್ಕಿ, ಗೋಧಿ, ಬೇಳೆ, ಬೆಲ್ಲ, ಎಳ್ಳು, ಹೆಸರುಕಾಳು, ಜೋಳ, ಸಜ್ಜೆ, ಕಡ್ಲೆಕಾಳು, ಮೆಂತೆಸೊಪ್ಪು, ಕುಂಬಳಕಾಯಿ, ಗೆಣಸು, ಗೆಜ್ಜರಿ, ಇವೆಲ್ಲವನ್ನು ಒಂದು ಮರದಲ್ಲಿ ಜೋಡಿಸಿ, ಅದಕ್ಕೆ ಇನ್ನೊಂದು ಮರ ಮುಚ್ಚಿ ಬ್ರಾಹ್ಮಣರಿಗೆ ಕುಂಕುಮ ಕೊಟ್ಟು ಮನೆಗೆ ಕರೆಸಿ ಆ ದಿನ ಇದನ್ನು ದಾನವಾಗಿ ಕೊಡುತ್ತಾರೆ. ಎಲೆ, ಅಡಿಕೆ, ದಕ್ಷಿಣೆ ಕೊಟ್ಟು ಮನೆಯವರೆಲ್ಲರೂ ಅವರ ಆಶೀರ್ವಾದ ತೆಗೆದು ಕೊಳ್ಳುತ್ತಾರೆ. ನಂತರ ಸ್ನಾನ ಮಾಡುತ್ತಾರೆ. ನಂತರ ದೇವಸ್ಥಾನಕ್ಕೆ ಹೋಗಿ ಬರುತ್ತಾರೆ.

ಸಂಕ್ರಾಂತಿ (ಸೂರ್ಯನ ಚಲನೆಯ ಹಬ್ಬ)

ಸಂಕ್ರಾಂತಿ-ಸಂಕ್ರಮಣ

ಜಗತ್ತಿಗೇ ಕಣ್ಣಾದ ಇಂತಹ ಸೂರ್ಯನ ಚಲನೆಯ ಹಬ್ಬ, ಸಂಕ್ರಮಣ ಅಥವಾ ಸಂಕ್ರಾಂತಿ. ಸಂಸ್ಕೃತದಲ್ಲಿ 'ಕ್ರಮಣ' ಎಂದರೆ ಹೆಜ್ಜೆ ಇಡುವಿಕೆ ಎಂದರ್ಥ. 'ಸಂಕ್ರಮಣ' ಎಂದರೆ ಚೆನ್ನಾಗಿ ಹಜ್ಜೆ ಇಡುವಿಕೆ, ಸೂರ್ಯನು ಒಂದು ರಾಶಿಯಲ್ಲಿ ತನ್ನ ಇರುವನ್ನು ಮುಗಿಸಿ ಇನ್ನೊಂದು ರಾಶಿಗೆ ಹೆಜ್ಜೆ ಇಡುವುದೇ ಸಂಕ್ರಮಣ ಅಥವಾ ಸಂಕ್ರಾಂತಿ, ಆದ್ದರಿಂದ ಸೂರ್ಯನ ಚಲನೆಯ ಹಬ್ಬ, ಈ ಸಂಕ್ರಾಂತಿ, ವರ್ಷಕ್ಕೆ ಹನ್ನೆರಡು ಸಂಕ್ರಾಂತಿ ಅಥವಾ ಸಂಕ್ರಮಣಗಳು, (ಏಕೆಂದರೆ ರಾಶಿಗಳು ಹನ್ನೆರಡು, ಸೌರಮಾಸಗಳು ಹನ್ನೆರಡು) ಆದರೆ ಇವುಗಳಲ್ಲಿ ಪ್ರಮುಖವಾದವು ಎರಡು ಮಾತ್ರ. ಸೂರ್ಯನು ಮಿಥುನ ರಾಶಿಯನ್ನು ಬಿಟ್ಟು ಕರ್ಕಾಟಕ ರಾಶಿಯನ್ನು ಪ್ರವೇಶಿಸುವ 'ಕರ್ಕಾಟಕ ಸಂಕ್ರಮಣ' ಮತ್ತು ಧನು ರಾಶಿಯನ್ನು ಬಿಟ್ಟು ಮಕರ ರಾಶಿಯನ್ನು ಸಂಕ್ರಮಿಸುವ 'ಮಕರ ಸಂಕ್ರಮಣ' ಇವು ಸೂರ್ಯನ ಪಯಣಕ್ಕೆ ಸಂಬಂಧಿಸಿದ 'ದಕ್ಷಿಣಾಯನ' ಮತ್ತು 'ಉತ್ತರಾಯಣ'ವನ್ನು ಸೂಚಿಸುವದರಿಂದ ಇವೆರಡಕ್ಕೆ ಹೆಚ್ಚಿನ ಮಹತ್ವ. ಉತ್ತರಾಯಣವನ್ನು 'ದೇವಯಾನ' ಮತ್ತು ದಕ್ಷಿಣಾಯಾನವನ್ನು 'ಪಿತೃಯಾನ' ಎಂದು ವೇದಗಳ ಕರೆದಿವೆ.

ಆಚರಣೆ

ಈ ಹಬ್ಬವನ್ನು ಎರಡುದಿನ ಆಚರಿಸುತ್ತಾರೆ. ಸ್ತ್ರೀಯರು ಬೆಳಿಗ್ಗೆ ಬೇಗನೇ ಎದ್ದು ಮನೆಯನ್ನು ಸ್ವಚ್ಛಗೊಳಿಸಿ, ನಂತರ ಮಾವಿನ ತೋರಣವನ್ನು ಮನೆಯ ಬಾಗಿಲಿಗೆ ಕಟ್ಟಿ, ರಂಗೋಲಿಯನ್ನು ಹಾಕಿ, ಮನೆಯನ್ನು ಶೃಂಗರಿಸುತ್ತಾರೆ. ಈ ಹಬ್ಬದ ಮೊದಲನೆಯದಿನ ವಿಶೇಷವೆಂದರೆ ಸ್ನಾನ ಮಾಡದೆ ಮರದಲ್ಲಿ ಧಾನ್ಯಗಳನ್ನು ಜೋಡಿಸಿ, ಈ ಭೋಗಿ ಹಬ್ಬದ ದಿನ ಬ್ರಾಹ್ಮಣರಿಗೆ ದಾನಮಾಡುತ್ತಾರೆ, ನಂತರ ಸ್ನಾನ ಮಾಡುವ ನೀರಿನಲ್ಲಿ ಕರಿ ಎಳ್ಳನ್ನು ಹಾಕಿಕೊಂಡು ಸ್ನಾನ ಮಾಡುತ್ತಾರೆ.

ಬಾಗಣದಲ್ಲಿ ಇಡುವ ಸಾಮಗ್ರಿಗಳು

ಅಕ್ಕಿ, ಗೋಧಿ, ಬೇಳೆ, ಬೆಲ್ಲ, ಎಳ್ಳು, ಹೆಸರುಕಾಳು, ಜೋಳ, ಸಜ್ಜೆ, ಕಡ್ಲೆಕಾಳು, ಮೆಂತೆಸೊಪ್ಪು, ಕುಂಬಳಕಾಯಿ, ಗೆಣಸು, ಗೆಜ್ಜರಿ, ಇವೆಲ್ಲವನ್ನು ಒಂದು ಮರದಲ್ಲಿ ಜೋಡಿಸಿ, ಅದಕ್ಕೆ ಇನ್ನೊಂದು ಮರ ಮುಚ್ಚಿ ಬ್ರಾಹ್ಮಣರಿಗೆ ಕುಂಕುಮ ಕೊಟ್ಟು ಮನೆಗೆ ಕರೆಸಿ ಆ ದಿನ ಇದನ್ನು ದಾನವಾಗಿ ಕೊಡುತ್ತಾರೆ. ಎಲೆ, ಅಡಿಕೆ, ದಕ್ಷಿಣೆ ಕೊಟ್ಟು ಮನೆಯವರೆಲ್ಲರೂ ಅವರ ಆಶೀರ್ವಾದ ತೆಗೆದು ಕೊಳ್ಳುತ್ತಾರೆ. ನಂತರ ಸ್ನಾನ ಮಾಡುತ್ತಾರೆ. ನಂತರ ದೇವಸ್ಥಾನಕ್ಕೆ ಹೋಗಿ ಬರುತ್ತಾರೆ.

ಸಾಯಂಕಾಲದವರೆಗೆ ಉಪವಾಸ ಮಾಡಿ ಸೂರ್ಯಾಸ್ತ ಸಮಯದಲ್ಲಿ ಸ್ನಾನಮಾಡಿ ಲಿಂಗವನ್ನು ಪೂಜಿಸುತ್ತಾರೆ. ಶಿವಯೋಗದಲ್ಲಿ ಶಿವನೇ ತಾನಾಗುವ ರಾತ್ರಿ ಹೀಗೆ ಶಿವಭಕ್ತಿಯಿಂದ ಶಿವಯೋಗದಲ್ಲಿ ಜಾಗೃತರಾಗಿದ್ದು ಶಿವನ ಅಪಾರವಾದ ಮಹಿಮೆಯ ಕಥಾ ಶ್ರವಣದಲ್ಲಿ ಯಾರು ಬೆಳಗು ಕಾಣುವರೋ ಅವರ ಪುಣ್ಯಕ್ಕೆ ಎಣೆಯಿಲ್ಲ. ಯಾರು ಸಂಪೂರ್ಣ ಶಿವರಾತ್ರಿಯಲ್ಲಿ ಎಚ್ಚರನಾಗಿದ್ದು. ಚಿತ್ತೈ ನಿಷ್ಠೆಯಿಂದ ಶಿವಪೂಜೆಯಲ್ಲಿ ರಾತ್ರಿಯನ್ನು ಕಳೆಯುವರೋ ಅವರು ಮಾಡಿದ ಪಾಪಗಳೆಲ್ಲ ಸುಟ್ಟು ಬೂದಿಯಾಗುವವು. ಅಲ್ಲದೇ ಸಾವಿರ ವರ್ಷಗಳವರೆಗೆ ಮಾಡಿದ ತಪಸ್ಸಿನ ಫಲವನ್ನು ಪಡೆಯುವರು.

ಶಿವರಾತ್ರಿ ಶಿವನ ಆರಾಧನೆಯ ರಾತ್ರಿ, ಶಿವಯೋಗದ ರಾತ್ರಿ, ಈ ರಾತ್ರಿ ಶಿವನಿಗೆ ಅತ್ಯಂತ ಪ್ರಿಯವಾದ ರಾತ್ರಿಯೆಂದರಿತು, ಅಖಿಲ ಮನುಪುನಿ ನರಸುರ ಗಂಧರ್ವರು ಈ ರಾತ್ರಿಯಲ್ಲಿಯೇ ಶಿವನನ್ನು ಪೂಜಿಸಿ ಶಿವನ ಕೃಪೆ ಪಡೆದರೆಂಬುದಾಗಿ ಪುರಾಣ ಪುಣ್ಯ ಕಥೆಗಳು ಸಾರುತ್ತವೆ. ಈ ಪೂಜಾ ಸಂಭ್ರಮವು ಭಾರತ ಖಂಡದ ಎಲ್ಲ ದೇಶಗಳಲ್ಲಿ ನಡೆಯುವ ಸಂಪ್ರದಾಯವು ಬಹು ಕಾಲದಿಂದ ನಡೆದು ಬಂದಿದೆ. ವ್ಯಾಸ, ವಸಿಷ್ಟ, ವಿಶ್ವಮಿತ್ರ, ಇಂದ್ರ, ಯಮ, ಮೊದಲಾದ ಅಷ್ಟದಿಕ್ಪಾಲಿಕರೂ, ಈ ರಾತ್ರಿಯಲ್ಲಿ ಬೇಡಿದ ಫಲವನ್ನು ಕೊಡುವ ಭಕ್ತ ವತ್ಸಲನಾದ ಶಿವನನ್ನು ಪೂಜಿಸಿ ತಮ್ಮ ಇಚ್ಚಿತ ಫಲವನ್ನು ಪಡೆದು ಧನ್ಯರಾಗಿದ್ದಾರೆ. ಅಂತೆ ಮಾಘ, ಕೃಷ್ಣ ಚತುರ್ದಶಿಯ ರಾತ್ರಿಯು ಮಹಾಶಿವರಾತ್ರಿ ಎಂಬುದಾಗಿ ಲೋಕಾಚರಣೆಯಲ್ಲಿ ಬಂದು ಬಿಟ್ಟಿದೆ.

ಈ ಮಹಾ ಶಿವರಾತ್ರಿಯಲ್ಲಿ ಯಾರು ಶಿವಲಿಂಗಕ್ಕೆ ಅಷ್ಟೋತ್ತರ ಶತ ಶಿವನಾಮಗಳಿಂದ ೧೦೮ ಬಿಲ್ವ ದಳಗಳನ್ನು ಅರ್ಪಿಸುವರೋ ಸಹಸ್ರನಾಮಾವಳಿಗಳಿಂದ ಸಹಸ್ರ ಬಿಲ್ವ ದಳಗಳನ್ನು ಧರಿಸುವರೋ ಅವರು ಇಹ ಪರಭೋಗ ಭಾಗ್ಯಗಳನ್ನು ಪಡೆದು ಧನ್ಯರಾಗುವರು. ಶಿವರಾತ್ರಿಯಲ್ಲಿ ಬಿಲ್ವ ದಳಗಳಿಂದಲೇ ಪೂಜೆ ಮಾಡಬೇಕು. ಕರವೀರ, ಪುನ್ನಾಗ, ಸಂಪಿಗೆ, ಸುರಗಿ, ತುಂಬಿ, ಮಲ್ಲಿಗೆ, ಗುಲಾಬಿ ಮೊದಲಾದ ಸುಮಗಳು ಶಿವರಾತ್ರಿಯ ಶಿವನ ಪೂಜೆಗೆ ಯೋಗ್ಯವಾಗಿದ್ದರು ಶಿವನು ಎಲ್ಲ ಪುಷ್ಪಗಳಿಂದಲೂ ಬಿಲ್ವ ಪತ್ರವನ್ನು ವಿಶೇಷವಾಗಿ ಪ್ರೀತಿಸುವನು. ಮೂರು ದಳಗಳು ಅರ್ಪಣವು ಮೂರು ಜನ್ಮದಲ್ಲಿ ಮಾಡಿದ ಪಾಪವನ್ನು ದೂರಮಾಡುವುದು. ಅಂತೇ ಇಂದಿನ ಶಿವ ರಾತ್ರಿಯಲ್ಲಿ ಬಿಲ್ವ ದಳಗಳಿಂದ ಶಿವಾರ್ಚನವನ್ನು ಸಂತುಷ್ಟರಾದ ತಮ್ಮೆಲ್ಲರ ಮುಂದೆ ಬಿಲ್ವಾರ್ಚನದ ಮಹತ್ವದ ಬಗ್ಗೆ ಪುರಾಣೋಕ್ತವಾದ ಒಂದು ಚರಿತ್ರೆ ಇದೆ. ಆ ಕಥೆಯನ್ನು ಶ್ರಾವಣ ಮಾಸದಲ್ಲಿ ಕೇಳಿ ಪುಣ್ಯ ಭಾಗಿಗಳಾಗಬೇಕು.

ಶಿವರಾತ್ರಿಯ ಕಥೆ

ಶಿವಲೀಲಾಮೃತದಲ್ಲಿ ಬರುವ ಶಿವಾರಾತ್ರಿಯ ಕಥೆಯನ್ನು ಸ್ವತಃ ಶಿವನೇ ಪಾರ್ವತಿಗೆ ಹೇಳಿದ್ದಾನಂತೆ.

ಪ್ರತ್ಯಂತವೆಂಬ ದೇಶದಲ್ಲಿ ಸದಾ ಬೇಟೆಯಾಡಿ ಜೀವಿಸುವ ಒಬ್ಬ ಬೇಡನಿದ್ದ, ಒಂದು ದಿನ ಹಗಲೆಲ್ಲ ಅಲೆದರೂ ಅವನಿಗೆ ಬೇಟೆ ಸಿಗಲಿಲ್ಲ, ರಾತ್ರಿ ಸರೋವರವೊಂದರ ಬಳಿ ಇದ್ದ ಬಿಲ್ವ ವೃಕ್ಷವನ್ನೇರಿ ಅಲ್ಲಿಗೆ ನೀರು ಕುಡಿಯಲು ಬರುವ ಪ್ರಾಣಿಯನ್ನು ಕೊಲ್ಲಲ್ಲು ಹೊಂಚುಹಾಕುತ್ತಿದ್ದ, ಅಂದು ಶಿವರಾತ್ರಿಯಾಗಿತ್ತು. ಆದರೆ ಬೇಡನಿಗೆ ತಿಧಿ-ಮಿತಿಗಳು ಪರಿವೇ ಇಲ್ಲ. ಬಿಲ್ವವೃಕ್ಷ ದಡಿಯಲ್ಲಿಯೇ ಒಂದು ಬಯಲು ಲಿಂಗವಿದ್ದುದರ ಅರಿವೂ ಅವನಿಗಿಲ್ಲ, ಅವನಿಗೆ ಅರಿವಿಲ್ಲದಂತೆ ದೃಷ್ಟಿಗೆ ಅಡ್ಡಬಂತೆಂದು ಕಿತ್ತು ಬಿಸಾಡಿದ ಬಿಲ್ವ ಪತ್ರೆಗಳು ಮರದಡಿಯಲ್ಲಿದ್ದ ಲಿಂಗವನ್ನು ಮುಚ್ಚಿದವು.

ಆ ಸಮಯಕ್ಕೆ ಒಂದು ತುಂಬು ಗರ್ಭಿಣಿಯಾದ ಜಿಂಕೆ ನೀರು ಕುಡಿಯಲು ಬಂದಿತು, ಬೇಡ ಬಾಣ ಬಿಡಲು ಸನ್ನದ್ಧನಾದಾಗ ಅದು ''ತುಂಬು ಗರ್ಭಿಣಿಯಾದ ನನ್ನನ್ನು ಕೊಂದು ಭ್ರೂಣಹತ್ಯಾ ಪಾಪಕ್ಕೆ ಗುರಿಯಾಗಬೇಡ. ಸ್ವಲ್ಪ ಸಮಯದಲ್ಲೇ ಪ್ರಸವಿಸಿದ ಬಳಿಕ ನಾನಾಗಿ ಇಲ್ಲಿಗೆ ಬಂದು ದೇಹ ಅರ್ಪಿಸುವೆ ಶಿವನಾಣೆ, ಶಿವನಾಣೆ ಎಂದಿತು. ಬೇಡನು 'ಶಿವ' ಶಬ್ದ ಕೇಳಿದಾಗ ಜಿಂಕೆಯ ಮೇಲೆ ಕರುಣೆ ಹುಟ್ಟಿ ಅದನ್ನು ಬಿಟ್ಟು ಬಿಟ್ಟನು. ನಿದ್ರೆ ತಡೆಗೋಸ್ಕರ ಬಿಲ್ವಪತ್ರೆಗಳನ್ನು ಕಿತ್ತು ಎಸೆಯುತ್ತಲೇ ಇದ್ದನು, ಎರಡನೇ ಯಾಮದಲ್ಲಿ ಇನ್ನೊಂದು ಹರಿಣಿ ಮೂರು ಮರಿಗಳೊಂದಿಗೆ ನೀರು ಕುಡಿಯಲು ಓಡೋಡಿ ಬಂದಿತು, ಅದು ಸಹ ಬೇಡನನ್ನು ಕುರಿತು ಈ ಮರಿಗಳನ್ನು ನನ್ನ ಪತಿಯಿದ್ದಲ್ಲಿಗೆ ಬಿಟ್ಟು ಬರುವ ತನಕ ಸೈರಿಸು. ಇಲ್ಲವಾದರೆ ಅವು ಅನಾಥವಾಗುತ್ತವೆ''. ಎಂದಾಗ ಮರುಕ ಹುಟ್ಟಿ ಅದನ್ನು ಬಿಟ್ಟ, ಅನಂತರ ಒಂದು ಗಂಡು ಜಿಂಕೆ ಬಂದಿತು, ಅದಕ್ಕೆ ಬಾಣಹೂಡಿದಾಗ ಅದು 'ಶಿವ' ಶಿವಾ! ನನ್ನನ್ನೇಕೆ ಕೊಲ್ಲುವೆ? ಮೊದಲೂ ನೀನು ದಯೆತೋರಿ ಬಿಟ್ಟ ಎರಡೂ ಜಿಂಕೆಗಳು, ನನಗಾಗಿ ಕಾಯುತ್ತಿವೆ. ಅವುಗಳೊಂದಿಗೆ ಇಲ್ಲಿಗೆ ತಪ್ಪದೆ ಬರುತ್ತೇನೆ. ಶಿವನಾಣೆ ಎಂದಾಗ ಬೇಡ ಅದನ್ನು ಬಿಟ್ಟುಕೊಟ್ಟ.

ಕೊಟ್ಟ ಮಾತಿನಂತೆ ಬೆಳಗಿನ ಜಾವಕ್ಕೆ ಎಲ್ಲ ಜಿಂಕೆಗಳು, ಮರಿಗಳು ಬಂದು 'ಈಗ ಕೊಲ್ಲು' ಎಂದವು ಉಷಃಕಾಲ ಸಮೀಪಿಸಿತು, ಬೇಡನ ಮನಸ್ಸಿನಲ್ಲಿ ಪರಿವರ್ತನೆಯಾಗಿತ್ತು. ಈಗ ಅವನು 'ಶಿವ' ಶಿವಾ! ನಿಮ್ಮನ್ನು ಕೊಂದು ನಾನಾವ ನರಕಕ್ಕೆ ಹೋಗಲಿ? ಎಂದು ಹೇಳಿ ಬಿಲ್ಲು ಬಾಣಗಳನ್ನು ಸರೋವರಕ್ಕೆ ಎಸೆದ.

ಆ ದಿನ ಬೇಡನಿಗರಿವಿಲ್ಲದಂತೆ ನಿರಾಹಾರ, ಲಿಂಗಾರ್ಚನೆ, ಜಾಗರಣೆ, ಶಿವನಾಮಸ್ಮರಣೆ ಎಲ್ಲ ಆಗಿ ಶಿವರಾತ್ರಿಯ ಕಟ್ಟಾ ಆಚರಣೆ ನಡೆದಿತ್ತು, ಶಿವನು ಅವನ ಬಗ್ಗೆ ಪ್ರಸನ್ನನಾಗಿದ್ದು ಕೂಡಲೇ ಅಲ್ಲಿಗೆ ಬಂದ ಶಿವಗಣಗಳು ವಿಮಾನದಲ್ಲಿ ಜಿಂಕೆಗಳೊಂದಿಗೆ ಕುಟುಂಬ ಸಹಿತ ಬೇಡನನ್ನು ಕೂಡಿಸಿಕೊಂಡು ಕೈಲಾಸಕ್ಕೆ ಕರೆದೊಯ್ದರು. ಅವನನ್ನು ಬರಮಾಡಿಕೊಂಡ ಶಿವನು ''ನಿನಗಷ್ಟೇ ಇಲ್ಲ ನಿನ್ನ ಕಥೆ

ಕೇಳಿದವರಿಗೂ, ಶಿವರಾತ್ರಿಯಂದು ಮರಣ ಹೊಂದಿದವರಿಗೂ ಕೈಲಾಸಪದವಿ ಖಚಿತ'' ಎಂದು ಭೂಲೋಕಕ್ಕೆ ಆಶ್ವಾಸನೆಯಿತ್ತನು.

ಮಾಡುವ ವಿಧಾನ

ಶಿವರಾತ್ರಿಯ ದಿನ ಅರುಣೋದಯಕ್ಕೆ ಎದ್ದು, ಸ್ನಾನಮಾಡಿ, ಶುಭ್ರವಸ್ತ್ರವನ್ನುಟ್ಟು, ಸಮಸ್ತ ಪಾಪನಿವಾರಣೆಗಾಗಿ, ಜ್ಞಾನಮೋಕ್ಷ ಪ್ರಾಪ್ತಿಗಾಗಿ ಶಿವರಾತ್ರಿ ವ್ರತ ಆಚರಿಸುತ್ತಾರೆ. ವರ್ಷಕ್ಕೊಂದು ದಿನ ಬರುವದು ಶಿವರಾತ್ರಿ ಸರ್ವ ಮಾಸಗಳಲ್ಲಿ ಸರ್ವೋತ್ತಮ ಹಾಗೂ ಶಿವ ಪೂಜಾ ಯೋಗ್ಯವಾದ ಮಾಸವೆಂದರೆ ಮಾಘಮಾಸ. ಈ ಮಾಸದಲ್ಲಿ ಕೃಷ್ಣ ಪಕ್ಷ ಚತುರ್ದಶಿಯ ರಾತ್ರಿಯೇ ಶಿವರಾತ್ರಿ ಸರ್ವ ವೃತ್ತಗಳಲ್ಲಿ ಇಂದಿನ ಶಿವರಾತ್ರಿಯು ಉಪವಾಸ ವ್ರತವೇ ಶ್ರೇಷ್ಠ. ಈ ರಾತ್ರಿಯಲ್ಲಿ ಹಣ್ಣು, ಹಾಲು, ಸಕ್ಕರೆ ಮಾತ್ರ ಸೇವಿಸಿ ಲಘು ಆಹಾರದಿಂದ ಬರುವ ನಿದ್ರೆಯನ್ನು ತಡೆದು, ಜಾಗರಣೆ ಮಾಡಿ ಕಥೆಯನ್ನು ಓದುವರು.

ಪೂಜೆಮಾಡುವ ವಿಧಾನ

ಬೆಳಗಿನಿಂದ ಉಪವಾಸವಿದ್ದು ಸಂಜೆ ಸ್ನಾನಮಾಡಿ, ಮನೆಯವರೆಲ್ಲರೂ ಲಿಂಗ ಪೂಜೆಯನ್ನು ಮಾಡಿಕೊಳ್ಳುತ್ತಾರೆ.

ಪೂಜೆಮಾಡುವ ಸಾಮಗ್ರಿಗಳು

ಪಂಚಾಮೃತ, ಎಳ್ಳುನೀರು, ಹಾಲು, ಮೊಸರು, ತುಪ್ಪ, ಜೇನುತುಪ್ಪ, ಬಾಳೆಹಣ್ಣು ಇವೆಲ್ಲವನ್ನು ಹಾಕಿ ಕಲಿಸಿ ಇಟ್ಟುಕೊಳ್ಳುತ್ತಾರೆ.

ಒಂದು ತಟ್ಟೆಯಲ್ಲಿ ಐದು ತರಹದ ಹಣ್ಣುಗಳನ್ನು ಇಟ್ಟುಕೊಳ್ಳುತ್ತಾರೆ. ಬಾಳೆಹಣ್ಣು, ದ್ರಾಕ್ಷಿ, ಸೇಬು, ಕರ್ಜೂರ, ಕಲ್ಲಂಗಡಿ.

ಗಂಧ, ವಿಭೂತಿ, ಕುಂಕುಮ, ಅರಿಶಿಣ, ಅಕ್ಷತೆ, ಬಿಲ್ವಪತ್ರೆ, ಊದಿನ ಕಡ್ಡಿ, ಉತ್ರಾಣಿ ಕಡ್ಡಿ ಇದಕ್ಕೆ ಹತ್ತಿಯನ್ನು ಸುತ್ತಿ ಎಣ್ಣೆಯಲ್ಲಿ ಇಟ್ಟಿರುತ್ತಾರೆ. ನೀರು, ಗಂಟೆ ಇವೆಲ್ಲವನ್ನು ಪೂಜೆಗೆ ಕುಳಿತುಕೊಳ್ಳುವ ಮೊದಲು ಜೋಡಿಸಿಕೊಳ್ಳಬೇಕು.

ಎಲ್ಲರೂ ಪೂಜೆಗೆ ಕುಳಿತುಕೊಂಡ ಮೇಲೆ ಮೊದಲಿಗೆ ಲಿಂಗವನ್ನು ಎಡಗೈ ಅಂಗೈ ಮೇಲೆ ಇಟ್ಟುಕೊಳ್ಳಬೇಕು. ಮೊದಲಿಗೆ ನೀರು ಹಾಕಿ ತೊಳೆದುಕೊಳ್ಳಬೇಕು. ನಂತರ ಪಂಚಾಮೃತದಿಂದ

ಅಭಿಷೇಕ ಮಾಡಿಕೊಂಡು ನೀರಿನಿಂದ ಅಭಿಷೇಕ ಮಾಡುತ್ತಾರೆ. ಅದಕ್ಕೆ ವಿಭೂತಿ, ಗಂಧ, ಅರಿಶಿಣ, ಕುಂಕುಮ, ಬಿಲ್ವಪತ್ರೆ, ಅಕ್ಷತೆಯನ್ನು ಹಾಕಿ ಊದಿನಕಡ್ಡಿ ಬೆಳಗಿ ಉತ್ರಾಣಿಕಡ್ಡಿಯಲ್ಲಿ ಮಂಗಳಾರತಿಯನ್ನು ಮಾಡಿ ಗಂಟೆಯನ್ನು ಬಾರಿಸಿ ಕರ್ಜೂರವನ್ನು ನೈವೇದ್ಯಮಾಡಿ ನಮಸ್ಕರಿಸಿ ನಮ್ಮ ಇಷ್ಟಾರ್ಥಗಳನ್ನು ಬೇಡಿಕೊಳ್ಳಬೇಕು. ಇದೇ ತರಹ ಐದು ಬಾರಿ ಪೂಜೆ ಮಾಡಿಕೊಳ್ಳಬೇಕು.

ನಂತರ ದೇವಸ್ಥಾನಕ್ಕೆ ಶಿವನ ದರ್ಶನ ಮಾಡಿಕೊಂಡು ಬಂದು ಲಘು ಪಲಹಾರ ಸೇವಿಸಿ ಜಾಗರಣೆಯನ್ನು ಮಾಡಿ ಬೆಳಗಾದನಂತರ ಸ್ನಾನ ಮಾಡಿ ದೇವಸ್ಥಾನಕ್ಕೆ ಹೋಗಿ ಬರಬೇಕು. ಆದಿನ ಸಿಹಿ ಅಡಿಗೆ ಮಾಡಿ ದೇವರಿಗೆ ನೈವೇದ್ಯೆಮಾಡಿ ಊಟ ಮಾಡುತ್ತಾರೆ. ಸಂಜೆಯವರೆಗೂ ಮಲಗದೆ ಇದ್ದು ರಾತ್ರಿ ನಕ್ಷತ್ರ ದರ್ಶನ ಮಾಡಿ ಮಲಗಬೇಕು.

ಮಹಾ ಶಿವರಾತ್ರಿಯಂದು ನಡುರಾತ್ರಿ ಜಗತ್ತಿನ ತಂದೆಯೆನಿಸಿದ ಪರಶಿವನು ಸ್ವಯಂಭುವಾಗಿ ಲಿಂಗರೂಪದಿಂದ ಉದ್ಭವಿಸಿದನೆಂದು ಹೇಳುತ್ತಾರೆ. ಇದಲ್ಲದೆ ಶಿವರಾತ್ರಿ ಶಿವನು ಹಾಲಾಹಲ ವಿಷ ಕುಡಿದ ದಿನವೆಂತಲೂ, ತಾಂಡವನೃತ್ಯ ಮಾಡಿದ ದಿನವೆಂದೂ ಪ್ರತೀತಿ ಇದೆ. ಅಂತೂ ಶಿವನಿಗೆ ಅತ್ಯಂತ ಪ್ರಿಯವಾದ ದಿನ. ಈ ಮಹಾಶಿವರಾತ್ರಿ ಅಂದು ಶಿವಾಲಯಗಳಲ್ಲಿ, ದ್ವಾದಶ ಜ್ಯೋತಿರ್ಲಿಂಗ ಕ್ಷೇತ್ರಗಳಲ್ಲಿ, ಗೋಕರ್ಣ, ಯಾಣ, ಕಾಶೀ, ರಾಮೇಶ್ವರ ಮುಂತಾದ ತೀರ್ಥಕ್ಷೇತ್ರಗಳಲ್ಲಿ ಲಕ್ಷ ಲಕ್ಷ ಜನರು ಪೂಜೆ ಪುರಸ್ಕಾರಗಳಲ್ಲಿ ಮಗ್ನರಾಗಿರುತ್ತಾರೆ. ಕರ್ನಾಟಕದಲ್ಲಿ ಪ್ರಸಿದ್ಧವಾದ ಹುಬ್ಬಳ್ಳಿಯ ಶಿವಾರೂಢ ಜಾತ್ರೆ, ಗೋಕರ್ಣದ ಮಹಾಬಲೇಶ್ವರ ರಥೋತ್ಸವ ಇವೆಲ್ಲ ನಡೆಯುವುದು ಶಿವರಾತ್ರಿಯಂದೇ.

ಶಿವ ಶಿವ-ಎಂದರೆ ಸಿಡಿಲೆಲ್ಲ ಬಯಲಾಗಿ!

ಕಲ್ಲು ಬಂದೆರಗಿ ಕಡೆಗಾಗಿ! ಎಲೆ ಮನವೆ!

ಶಿವನೆಂಬ ಶಬುದ ಬಿಡಬ್ಯಾಡ||

ಎಂಬಂತೆ ಶಿವಧ್ಯಾನ ನಿರತರಾಗಿದ್ದರೆ ಯಾವ ವಿಪತ್ತೂ ಬರಲಾರದು ಎಂಬುದು ನಮ್ಮ ಪ್ರಾಚೀನರ ನಂಬಿಕೆ.

ಕಾಮುದಹನದ ಹೋಳಿಹಬ್ಬ

ಆನೆಗಂಬರಿ ಚಂದ ಕುದುರಿಗೆ ಥಡಿ ಚಂದ|

ಸದರೀಗೆ ಚಂದ ಕಾಮಣ್ಣ| ಬಗಲೀಗ

ರೂಪಕ ಚಂದ ರತೀದೇವಿ||

ಹೀಗೆ ಭಾರತೀಯರ ದೃಷ್ಟಿಯಲ್ಲಿ ರತಿ-ಕಾಮರು ಸೌಂದರ್ಯದ ಪ್ರತೀಕ, ಸೊಗಸಿತ ಪರಾಕಾಷ್ಠೆ, ಮದನ, ಮಾರ, ಕಂದರ್ಪ, ಮೀನಕೇತನ, ಮನಸಿಜ, ಇವೆಲ್ಲ ಈ ಮನ್ಮಥನ ಹೆಸರುಗಳು, ಮನಸ್ಸನ್ನು ಮಥಿಸುವ ಈ ಮನ್ಮಥನ ಉಗಮ ಗಂಡು ಹೆಣ್ಣುಗಳು ಮನಸ್ಸಿನಲ್ಲಿ, ಮನಸಿಜನ ಲೀಲೆಗೆ ಗುರಿಯಾಗದ ಮನಸ್ಸಿಲ್ಲ ಪ್ರಕೃತಿಯ ಯಾವುದೇ ಭಾಗವಿಲ್ಲ. ಗೃಹ-ತಾರೆಗಳು, ಭೂಮ್ಯಾಕಾಶಗಳು, ಪಶುಪಕ್ಷಿಗಳು, ಗಿಡಮರಬಳ್ಳಿಗಳು ಹೀಗೆ ನಿಸರ್ಗದ ಲೀಲೆಯೆಲ್ಲ ಪ್ರಣಯಲೀಲೆ, ಕಾಮನಾಟ

ಹೋಳಿಹಬ್ಬದ ಪ್ರಾಚೀನತೆ

ಹೋಳಿ ಹಬ್ಬದ ಆಚರಣೆ ಭಾಗವತ ಪುರಾಣದಷ್ಟು ಪ್ರಾಚೀನ, ಕೃಷ್ಣ ರಾಧೆಯರು ಬಣ್ಣದ ಓಕುಳಿ ಆಡುತ್ತಿದ್ದ ಉಲ್ಲೇಖ ಭಾಗವತದಲ್ಲಿದೆ. ಕ್ರಿ.ಶ.ಏಳನೇ ಶತಮಾನದ ಶ್ರೀಹರ್ಷನ 'ನಾಗಾನಂದ' ನಾಟಕದಲ್ಲಿ ಹೋಳಿಹಬ್ಬದ ಪ್ರಸ್ತಾಪವಿದೆ. ಬಂಗಾಲದಲ್ಲಿ ಅದಕ್ಕೂ ಹಿಂದೆಯೇ ಈ ಹಬ್ಬವನ್ನು ಆಚರಿಸುತ್ತಿದ್ದರೆಂದು ಹೇಳುತ್ತಾರೆ. ೧೬ನೇ ಶ.ದ. ವರೆಗೂ ಈ ಹಬ್ಬವನ್ನು ಪ್ರೇಮದೇವತೆಯ ಉತ್ಸವವಾಗಿ ಆಚರಿಸುತ್ತಿದ್ದರು. ಬಂಗಾಲದ ಚೈತನ್ಯ ದೇವನು ಈ ಹಬ್ಬಕ್ಕೊಂದು ಹೊಸ ರೂಪ ನೀಡಿ ಪ್ರೀತಿಯ ದ್ಯೋತಕವಾಗಿ 'ಕಾಮನಹಬ್ಬ' ಆಚರಿಸಲು ಸೂಚಿಸಿದ. ಕವಿ ರವೀಂದ್ರನಾಥ ಠಾಗೂರರು ಅದಕ್ಕೆ ಮತ್ತೊಂದು ಆಯಾಮ ನೀಡಿ ಸ್ತ್ರೀ ಪುರುಷರೆಲ್ಲರೂ ಸಾಮೂಹಿಕವಾಗಿ ಓಕಳಿ ನೃತ್ಯವಾಡುವ ಸಂಪ್ರದಾಯವನ್ನು ರೂಢಿಗೆ ತಂದರು. ಉಚ್ಚ, ನೀಚ, ಬಡವ, ಬಲ್ಲಿದ ಎಂಬ ಯಾವುದೇ ಬೇದವಿಲ್ಲದೆ ಎಲ್ಲಾರೂ ಹರ್ಷೋಲ್ಲಾಸದಿಂದ ಭಾಗವಹಿಸುವ ಹಬ್ಬ ಇದಾಗಿದೆ. ಈ ಹಬ್ಬ ಇಂದಿಗೂ ಉತ್ತರ ಭಾರತ ಬಂಗಾಳದಲ್ಲಿ ಸಂಭ್ರಮದ ಹಬ್ಬ ಆಗಿದೆ.

ಹಿನ್ನೆಲೆ

ನಾರದ ಪುರಾಣದಲ್ಲಿ ಹೋಳಿ ಹಬ್ಬದ ಸುಳಿವು ಇದೆ. ಹಿರಣ್ಯ ಕಶಿಪುವಿಗೆ ಪೋಲಿಕಾ ಎಂಬ ತಂಗಿ ಇದ್ದಳು, ಅವಳಿಗೆ ಅಗ್ನಿಯಿಂದ ಮರಣವೆಂದು ಶಾಪವಿತ್ತು. ಹಿರಣ್ಯಕಶಿಪುವಿನ ಮಗ ಪ್ರಹ್ಲಾದನು ಅನನ್ಯ ಹರಿಭಕ್ತ, ಅಸುರೀ ವೃತ್ತಿಯ ಹಿರಣ್ಯಕಶಿಪುವಿಗೆ ಹರಿ ಎಂದರೆ ಆಗದು ಮಗ ಪ್ರಹ್ಲಾದನು ಹರಿನಾಮಸ್ಮರಣೆ ತಂದೆ ಹಿರಣ್ಯಕಶಿಪುವಿಗೆ ಹಿಡಿಸಲಿಲ್ಲ ಎಷ್ಟು ಬೇಡವೆಂದು ಹೇಳಿದರೂ ಕೇಳದೆ ಹೋದ ಪ್ರಹ್ಲಾದನನ್ನು ಬೆಂಕಿಯಲ್ಲಿ ಹಾರಿ ಸುಡಲು ತಂಗಿಗೆ ಹೇಳಿದಾಗ, ಅವನ ಜತೆ ಅವಳೂ ಅಗ್ನಿಯಲ್ಲಿ ಹಾರಿ ಪ್ರಾಣ ನೀಗುವಳು. ಪ್ರಹ್ಲಾದನು ಮಾತ್ರ ಹರಿನಾಮದ ಬಲದಿಂದಾಗಿ ಬದುಕಿ ಉಳಿದ, ಆ ಪೋಲಿಕಾದಹನದ ನೆನಪಿನ ಫಾಲ್ಗುಣ ಶುದ್ಧ ಹುಣ್ಣಿಮೆ, ಹೋಳಿ ಹುಣ್ಣಿಮೆ ಅಂದು ಎಲ್ಲೆಡೆ ಹೋಳಿ ಹಬ್ಬದ ಆಚರಣೆ.

ಪುರಾಣದ ಈ ಕಥೆ ರೂಢಿಯಲ್ಲಿ ಮತ್ತೊಂದು ತಿರುವು ಪಡೆದಿದೆ. ಅಯೋಧ್ಯೆಯ ಬಳಿಯ ಅರಣ್ಯದಲ್ಲಿ ಹೋಲಿಕಾ ಎಂಬ ರಕ್ಕಸಿವಾಸವಾಗಿದ್ದಳು. ಸುತ್ತಮುತ್ತಲಿನ ಜನರಿಗೆ ಆಕೆ ಕೊಡುತ್ತಿದ್ದ ಕಾಟ ಅಷ್ಟಿಷ್ಟಲ್ಲ ಅವಳನ್ನು ಸಂಹರಿಸಲು ಆ ನಾಡಿನ ದೊರೆ ಮುಂದಾದಾಗ, ರಕ್ಕಸಿ ಹೋಲಿಕಾ ಅವನಿಗೆ ಶರಣಾಗಿ, ನನ್ನನ್ನು ನೋಡಿದ ಕೂಡಲೆ ಜನ ಧಾರಾಳವಾಗಿ ಅಶ್ಲೀಲ ಮಾತುಗಳನ್ನಾಡಿ, ಬಾಯಿ ಬಡಿದುಕೊಳ್ಳಲಿ ಆಗ ನಾನು ಅಲ್ಲಿ ನಿಲ್ಲದೆ ದೂರ ಓಡುತ್ತೇನೆ ಎಂದು ಮಾತುಕೊಟ್ಟಳಂತೆ, ಜನ ಅದರಂತೆ ಮಾಡತೊಡಗಿದರು. ಹಾಗೆ ಮಾಡಿದಾಗ ಆ ರಕ್ಕಸಿ ದೂರ ಸರಿಯುತ್ತಿದ್ದಳು, ಕ್ರಮೇಣ ಆಕೆ ಕೊಟ್ಟ ಮಾತನ್ನು ಮರೆತಳು, ಅವಳ ಉಪಟಳ ದಿನೇ ದಿನೇ ಹೆಚ್ಚಾಗುತ್ತಾ ಬಂತು. ಕೆರಳಿದ ಜನ ಒಟ್ಟುಸೇರಿ ಆಕೆಯನ್ನು ಸುಟ್ಟು ಹಾಕಿದರಂತೆ.

ಕಾಮದಹನ

ಶಿವಪುರಾಣ, ವಿಷ್ಣುಪುರಾಣ, ಕಾಳಿದಾಸನ ಕುಮಾರಸಂಭವ, ಹರಿಹರನ ಗಿರಿಜಾಕಲ್ಯಾಣ, ವಿರೂಪಾಕ್ಷನ, 'ಚೆನ್ನಬಸವ ಪುರಾಣ' ಇಲ್ಲೆಲ್ಲ ಫಾಲ್ಗುಣ ಶುದ್ಧ ಹುಣ್ಣಿಮೆಯ ಕಾಮದಹನ ವೃತ್ತಾಂತವಿದೆ. ತಾರಕಾಸುರ ಬ್ರಹ್ಮನಿಂದ ವರಪಡೆದು ಸ್ವರ್ಗ-ಮರ್ತ್ಯ-ಪಾತಾಳಗಳಲ್ಲಿ ಸುರ-ನರ-ಉರಗಗಳಿಗೆಲ್ಲ ಉಪಟಳ ಕೊಡುತ್ತಿದ್ದ ಇದನ್ನು ಸಹಿಸಲಾರದ ದೇವತೆಗಳು ಲೋಕದ ಸ್ಥಿತಿಕರ್ತನಾದ ವಿಷ್ಣುವಿಗೆ ಶರಣಾದರು. ಶಿವ-ಪಾರ್ವತಿಯರ ಸಂಗಮದಿಂದ ಜನಿಸಿದ ಏಳು ದಿನದ ಮಗು ಷಣ್ಮುಖ ತಾರಕನ ಸಂಹಾರ ಮಾಡುತ್ತದೆಂದು ವಿಷ್ಣು ಅನುಗ್ರಹಿಸಿದ. ಆದರೆ ಆಗ ಶಿವ ಗಾಢವಾದ ತಪಸ್ಸಿನಲ್ಲಿ ಮಗ್ನನಾಗಿದ್ದ, ಪಾರ್ವತಿಯೂ ವ್ರತನಿರತಳಾಗಿದ್ದಳು. ಶಿವನ ಧ್ಯಾನಭಂಗ ಮಾಡಲು ಯಾರಿಗೂ ಧೈರ್ಯ ಸಾಲದು, ಆಗ ದೇವತೆಗಳಿಂದ ಪ್ರೇರೇಪಿತನಾದ ಕಾಮ ಲೋಕಕಲ್ಯಾಣಾರ್ಥವಾಗಿ ಶಿವನ ತಪೋಭಂಗ ಮಾಡಲು ಪ್ರಯತ್ನಿಸಿ, ತನ್ನ ಹೂ ಬಾಣವನ್ನು ಶಿವನ ಮೇಲೆ ಪ್ರಯೋಗಿಸಿದ. ವಿಚಲಿತನಾದ ಶಿವ ಕ್ಷಣಕಾಲ ಕಾಮವಿಕಾರಕ್ಕೆ ತುತ್ತಾಗಿ ಹಣೆಗಣ್ಣು ತೆರೆದ. ಅಗ್ನಿರೂಪದ ಆ ಫಾಲಾಕ್ಷವನ ಉರಿಗಣ್ಣು ತೆರೆದದ್ದೇ ತಡ, ಮನ್ಮಥ ಬೂದಿರಾಶಿಯಾಗಿ ಧರೆಗುರುಳಿದ ಕಾಮ ಅನಂಗನಾದ, ಅವನ ಸ್ಮರಣೆಗಾಗಿ ಫಾಲ್ಗುಣ ಶುದ್ಧ ಹುಣ್ಣಿಮೆಯೆಂದು 'ಕಾಮದಹನ' ಮಾಡುವ ರೂಢಿ ಕೆಲವೆಡೆ ಬಳಕೆಯಲ್ಲಿದೆ.

ಆಚರಣೆ

ಈ ಹಬ್ಬದಲ್ಲಿ ಜನ ಸಗಣಿಯ ಬೆರಣಿ ಕಟ್ಟಿಗೆಗಳನ್ನು ರಾಶಿಹಾಕಿ ಕಾಮನನ್ನು ಸುಡುತ್ತಾರೆ. ಆ ಬೂದಿಯನ್ನು ಭೂಮಿಗೆ ಸೇರಿಸಿದರೆ ಸಮೃದ್ಧ ಬೆಳೆ ಬರುವುದೆಂದು ರೈತರ ನಂಬಿಕೆ. ಕೆಲವು ಕಡೆ 'ಕಾಮದಹನ'ದ ಬೂದಿಯನ್ನು ಮನೆಗೆ ತಂದು ಅದನ್ನು ಬಿತ್ತುವ ಬೀಜಗಳೆಲ್ಲ ಬೆರೆಸಿ ಇಡುತ್ತಾರೆ.

ಒಬ್ಬ ಜಾನಪದ ಕವಿ ಈ ಹಬ್ಬದ ಸಂಭ್ರಮವನ್ನು ಗೀತೆಯ ಮೂಲಕ ತಿಳಿಸಿದ್ದಾರೆ.

''ಹೋಳಿ ಮಾಡದ ನಾಡು, ನಾಳನದೆ ಕಾಡಾತೊ|
ಗೋಳಾತೊ ಜನಕ ಬಯಲಾತೊ! ಮಳೆಹೋಗಿ
ಹಾಳಾತೊ ಪಿಡುಗೆದ್ದು ದಿನ-ದಿನಕೂ||

ಓಕುಳಿಯಾಟ ಹೋಳಿಹಬ್ಬದ ಮತ್ತೊಂದು ಸಂಭ್ರಮ ರಂಗು-ರಂಗಿನ ಓಕುಳಿ ನೀರ ಈ ಎರಚಾಟಕ್ಕೆ ಪೌರಾಣಿಕ ಹಾಗೂ ಐತಿಹಾಸಿಕ ಹಿನ್ನೆಲೆ ಇದೆ. ಕೃಷ್ಣ-ಗೋಪಿಕೆಯರ ಸರಸ ಕ್ರೀಡೆಗಳಲ್ಲಿ ಈ ರಂಗಿನಾಟ ಅಮರತ್ವ ಪಡೆದಿದೆ. ಚೆಂಬಣ್ಣದ ಓಕುಳಿ ನೀರು ಪ್ರೀತಿಯ ಸಂಕೇತ ಹೋಳಿ ದಿನದಂದು ಹೋಳಿಗೆ ಊಟಮಾಡುವ ರೂಢಿ ಕೆಲವೆಡೆ ಪ್ರಚಲಿತದಲ್ಲಿದೆ. 'ಹೊಯ್ಕೊಂಡ ಬಾಯಿಗೆ ಹೋಳಿಗೆ ತುಪ್ಪ' ಎಂದು ಒಂದು ಗಾದೆಮಾತೇ ಇದೆ ಈ ಹಬ್ಬ ವಸಂತಮಾಸದ ರಂಗ ಪಂಚಮಿಯವರೆಗೂ ನಡೆದು ಹಬ್ಬದ ಸಡರ ಹೆಚ್ಚಿದೆ.

ಬೆಳಿಗ್ಗೆ ಬೇಗನೆ ಎದ್ದು ಮಕ್ಕಳು, ದೊಡ್ಡವರು ಹಾಗೂ ಇದರಲ್ಲಿ ಸ್ತ್ರೀ-ಪುರುಷರೆಂಬ ಯಾವುದೇ ಬೇದವಿಲ್ಲ. ಯಾವ ಜಾತಿಯ ಬೇದವಿಲ್ಲದೆ ಅಕ್ಕ-ಪಕ್ಕದವರು ಎಲ್ಲಾರು ಸೇರಿ ಕೆಂಪು, ಬಿಳಿ, ಹಸಿರು, ಹಳದಿ ಮೊದಲಾದ ಬಣ್ಣಗಳನ್ನು ಎರಚಿಕೊಳ್ಳುತ್ತಾರೆ. ಅಲ್ಲದೆ ಗಂಡಸರೆಲ್ಲರು ಸೇರಿ ಬಣ್ಣದ ನೀರನ್ನು ಕಲಿಸಿ ಅದನ್ನು ಡ್ರಮ್ಮಿನಲ್ಲಿ ತುಂಬಿಕೊಂಡು ಬಂಡಿಯಲ್ಲಿ ಮೆರವಣಿಗೆ ಮಾಡುತ್ತಾ ಆ ನೀರನ್ನು ಊರಿನ ತುಂಬಾ ಎರಚುತ್ತಾರೆ. ಈ ರಂಗಿನ ನೋಟವನ್ನು ನೋಡಲು ಬಹಳ ಸುಂದರವಾಗಿರುತ್ತದೆ.

೪.೩ : ನಂಬಿಕೆ ವಿಧಿ ನಿಷೇದಗಳು

ನಮ್ಮ ಭೌತಿಕ ಜಗತ್ತು ವಿವಿಧ ರೀತಿಯ ವಸ್ತುಗಳಿಂದ ಆಗಿದೆ. ವಿಜ್ಞಾನವನ್ನು ಅಧ್ಯಯನ ಮಾಡುವಾಗ ಮೂಲ ವಸ್ತುಗಳು ಮೂಲ ಆಧಾರವಾಗುತ್ತವೆ. ಈ ಮೂಲ ವಸ್ತುಗಳು ಇಲ್ಲದಿದ್ದರೆ ಭೌತಿಕ ಜಗತ್ತು ಕುಸಿದು ಬೀಳುತ್ತದೆ. ಇದೆ ರೀತಿಯಲ್ಲಿ ಸಮಾಜ ವಿಜ್ಞಾನಗಳ ಅಧ್ಯಯನಕ್ಕೆ ಇರುವ ಮೂಲವಸ್ತು ನಂಬಿಕೆ. ಮಾನವ ಸಮಾಜದ ಅಸ್ಥಿತ್ವಕ್ಕೆ ಈ ನಂಬಿಕೆ ಮೂಲವಸ್ತು ಈ ನಂಬಿಕ್ಕೆಯನ್ನು ಆಧಾರವಾಗಿಟ್ಟುಕೊಂಡು ಮಾನವ ಸಮಾಜದ ಇತರ ಅಂಶಗಳನ್ನು ಅಧ್ಯಯನ ಮಾಡಬೇಕಾಗುತ್ತದೆ. ನಂಬಿಕೆಯಲ್ಲಿ ಒಳ್ಳೆಯದು ಕೆಟ್ಟದ್ದು ಎನ್ನುವ ಆಲೋಚನೆ ಚಾರಿತ್ರಿಕ ಪರಿಣಾಮ ಬಾಳಿಗೊಂದು ನಂಬಿಕೆ ಬೇಕು ಎನ್ನುವ ಅಂಶ ಯಾವಾಗಲೂ ಸ್ಪಷ್ಟ. ಮನುಷ್ಯ ಹೇಗೆ ದೈಹಿಕವಾಗಿ ಚಲಿಸುತ್ತಾನೆಯೋ

ಮಾನಸಿಕವಾಗಿಯೂ ಚಲಿಸುತ್ತಾನೆ. ಈ ಕಾರಣದಿಂದ ಅನೇಕ ನಂಬಿಕೆಗಳು ಹುಟ್ಟುತ್ತವೆ. ತಾನು ನೆಲೆನಿಂತು ಬದುಕುವಕಾರಣಕ್ಕಾಗಿ ಸಮಾಜವನ್ನು ಕಟ್ಟಿಕೊಳ್ಳಬಯಸುತ್ತಾನೆ. ಅದಕ್ಕಾಗಿ ಒಂದು ಪ್ರದೇಶದಲ್ಲಿ ನೆಲೆ ನಿಲ್ಲುತ್ತಾನೆ. ಅವನಿಗೆ ನಾನು, ನನ್ನದು, ನನ್ನ ಬಳಗ, ನನ್ನ ಜನರು ಮತ್ತು ನನ್ನ ಸಮಾಜ ಎಂಬ ನಂಬಿಕೆ ಹುಟ್ಟಿಕೊಳ್ಳುತ್ತದೆ.

ನಂಬಿಕೆ ಮಾನವ ಬದುಕಿನ ಮೂಲ ದ್ರವ್ಯ ಎಂದಾಗ ಅದು ಯಾವಾಗ ಮನುಷ್ಯನನ್ನು ಉಳಿಸಿ ಕೊಳ್ಳುತ್ತದೆ ಮತ್ತು ಯಾವಾಗ ಮನುಷ್ಯನನ್ನು ಕಳೆದು ಹಾಕುತ್ತದೆ ಎಂಬುದನ್ನು ಆಲೋಚಿಸಬೇಕಾಗುತ್ತದೆ. ಜಾತಿ ಕೇವಲ ನಂಬಿಕೆ ಯಾಗುವತ್ತ ನಡೆದಿದೆ. ಹಿಂದೆ ಜಾತಿ ಒಂದು ಭೇದದ ನಂಬಿಕೆಯಾಗಿತ್ತು. ಈಗ ಅದು ಅವಕಾಶಗಳನ್ನು ಹಂಚಿಕೊಳ್ಳುವ ಒಂದು ನಂಬಿಕೆಯಾಗಿದೆ. ಇದನ್ನು ಅರಿಯದ ಪ್ರಾಕೃತ ಸ್ವಭಾವದ ಮನುಷ್ಯರು ಅಥವಾ ಪ್ರಾಕೃತ ನಂಬಿಕೆಗಳನ್ನೇ ಗಟ್ಟಿಯಾಗಿದ್ದುಕೊಂಡ ಮನುಷ್ಯರು ಕ್ರೂರಿಗಳು ಎನಿಸಿಕೊಳ್ಳುತ್ತಾರೆ. ಹೀಗೆ ನಂಬಿಕೆ ಮನುಷ್ಯನನ್ನು ಸ್ವೀಕರಿಸುವ ಮತ್ತು ನಿರಾಕರಿಸುವ ಕೆಲಸ ಮಾಡುತ್ತಿದೆ.

ಈ ನಂಬಿಕೆ ಎನ್ನುವುದು ಒಬ್ಬ ವ್ಯಕ್ತಿಗೆ ಮಾತ್ರ ಸೀಮಿತವಾಗಿದ್ದರೆ ಅವನನ್ನು ಅವನ ನಂಬಿಕೆಯನ್ನು ಸುಲಭವಾಗಿ ತಿರಸ್ಕರಿಸಬಹುದಿತ್ತು. ಆದರೆ ನಂಬಿಕೆ ಒಂದು ಕುಟುಂಬ, ಒಂದು ಸಮಾಜ, ಒಂದು ಜನಾಂಗ, ಒಂದು ಸಂಸ್ಥಾನ ಹಾಗೂ ಒಂದು ದೇಶದ್ದಾಗಿದೆ. ಇವೆಲ್ಲವು ನಂಬಿಕೆ ಮತ್ತು ಅದರ ಕಾರ್ಯಾಚರಣೆ ಮೇಲೆ ನಿಂತಿದೆ. ನಂಬಿಕೆ ನಮಗೆ ಕೇವಲ ನಂಬಿಕೆಯಾಗಿಲ್ಲ. ನಮ್ಮ ನಡವಳಿಕೆ ಮತ್ತು ಆಚಾರ ವಿಚಾರಗಳನ್ನು ಕೂಡಾ ಬೆಳಸಿಕೊಟ್ಟಿದೆ. ಹಾಗೂ ಕ್ರಿಯಾತ್ಮಕಗೊಳಿಸಿದೆ. ಇವುಗಳನ್ನು ಕಳೆದುಕೊಂಡ ತಕ್ಷಣವೇ ಮನುಷ್ಯನನ್ನು ಮನುಷ್ಯ ಅಲ್ಲ ಎಂದು ಕರೆಯುವ ಪರಿಸ್ಥಿತಿಯುಂಟಾಗುತ್ತದೆ. ಒಬ್ಬ ನಡವಳಿಕೆ ಇಲ್ಲದ ಮನುಷ್ಯನನ್ನು ನಡವಳಿಕೆ ಇರುವ ಮನುಷ್ಯ ಹೇಗೆ ನಂಬುವುದಿಲ್ಲವೋ ಹಾಗೆ ನಂಬಿಕೆ ಮನುಷ್ಯನನ್ನು ಗುರುತಿಸುವ ಅಳತೆಯಾಗಿದೆ.

ನಂಬಿಕೆಗಳು ಜನತೆಯ ಜೀವನವನ್ನು ನೇರವಾಗಿ ಚಿತ್ರಿಸುತ್ತವೆ. ಹಾಗಾಗಿ ಜೀವನಕ್ಕೂ ನಂಬಿಕೆಗೂ ನಿಕಟವಾದ ಸಂಬಂಧವಿದ್ದು ಅವೆರಡೂ ಹಾಸು ಹೊಕ್ಕಾಗಿ ಸೇರಿಕೊಂಡಿವೆ. ನಂಬಿಕೆಗಳು ಮಾನವ ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ವ್ಯಾಪಿಸಿವೆ. ಜಾತಿ, ವೃತ್ತಿ, ಅಂತಃಸ್ತುಗಳ ಬೇದವಿಲ್ಲದೆ ಎಲ್ಲರ ಜೀವನದಲ್ಲಿ ಸೇರಿಕೊಂಡಿವೆ.

ನಂಬಿಕೆ ಎಂಬ ಪದವನ್ನು ಒಂದು ಪರಿಕಲ್ಪನೆಯಾಗಿ, ಪಾರಿಭಾಷಿಕ ಪದವಾಗಿ ಪರಿಗಣಿಸುವಾಗ ಹಲವಾರು ತೊಂದರೆಗಳು ಎದುರಾಗುತ್ತವೆ. ದಿನ ನಿತ್ಯದ ಬಳಕೆಯಲ್ಲಿ ನಂಬಿಕೆ ಹಲವಾರು ಬಗೆಯ ಅರ್ಥಗಳಲ್ಲಿ ಬಳಕೆಯಾಗುತ್ತದೆ. ಇದು ಹೆಚ್ಚು ಪ್ರಚಾರದಲ್ಲಿರುವ ಪದವಾದ್ದರಿಂದಲೇ ವೈಜ್ಞಾನಿಕ

ವಿವರಣೆಯಲ್ಲೆ ಅಸ್ಪಷ್ಟತೆ, ಸಂಧಿಗ್ಧತೆಗಳು ಎದುರಾಗುತ್ತವೆ. ನಂಬಿಕೆ ಎಂಬ ಪದವು ಮೂಢನಂಬಿಕೆ, ಅಭಿಪ್ರಾಯ, ಸಂಪ್ರದಾಯ, ಪರಂಪರೆ, ತೀರ್ಮಾನ, ಪರಿಕಲ್ಪನೆ, ತತ್ವ, ಸಿದ್ಧಾಂತ, ವಿಶ್ವಾಸ ಈ ಎಲ್ಲಾ ಅರ್ಥಗಳಲ್ಲೂ ಒಂದಲ್ಲ ಒಂದು ಬಾರಿ ಬಳಕೆಯಾಗುತ್ತದೆ.

ಈ ನಂಬಿಕೆಗಳು ಹೇಗೆ ಹುಟ್ಟಿದವು, ಎಲ್ಲಿ ಹುಟ್ಟಿದವು ಮತ್ತು ಏಕೆ ಹುಟ್ಟಿದವು ಎಂದು ಹೇಳಲು ಸಾಧ್ಯವಾಗದೇ ಹೋಗಬಹುದು. ಅದರೂ ಸಹ ಭದ್ರತೆಯನ್ನು ಕಾಪಾಡುವ ಸಲುವಾಗಿ ಸಂಘಟಿತ ಸಮಾಜದಲ್ಲಿ ನಂಬಿಕೆಗಳು ಹಾಗೂ ವ್ಯವಸ್ಥೆಗಳು ರೂಢಿ ಗೊಳ್ಳುತ್ತವೆ. ಹೀಗೆ ರೂಢಿಗೊಳ್ಳುವ ವ್ಯವಸ್ಥೆಗಳು ಹಾಗೂ ನಂಬಿಕೆಗಳು ಎಲ್ಲ ಕಾಲಕ್ಕೂ ಒಂದೇ ಬಗೆಯಲ್ಲಿರುವುದು ಸಾದ್ಯವಾಗುವುದೇ ಇಲ್ಲ.

ನಂಬಿಕೆ ಎನ್ನುವುದು ಒಂದು ಮಾನಸಿಕ ಒಪ್ಪಿಗೆಯಾಗಿದ್ದು ಜನರು ಅದನ್ನು ನಂಬಿ ಅದರಂತೆ ನಡೆದುಕೊಂಡು ಬಂದಿರುವ ಭಾವರೂಪ. ಇದು ಸೂಚನೆ, ಆದೇಶ, ನಿರ್ದೇಶನ ಆಗ್ರಹ ಮತ್ತು ನಿಷೇಧ ರೂಪದ ಒಂದು ಹೇಳಿಕೆ ನಂಬಿಕೆಗಳು ಕ್ರಿಯೆಗಿಳಿದು ಒಬ್ಬರಿಂದ ಇನ್ನೊಬ್ಬರಲ್ಲಿ ಬಾಯಿಂದ ಬಾಯಿಗೆ ಕಿವಿಯಿಂದ ಕಿವಿಗೆ ಕೇಳಿದ ಜನರು ನಡೆಯಲ್ಲಿ ತಂದರು.

ನಂಬಿಕೆಗಳು ಭಯ ಮತ್ತು ಭಾವಾತ್ಮಕತೆಯ ಹಿನ್ನಲೆಯಲ್ಲಿ ಬಂದಿರಬಹುದು ಎಂದೋ ನಡೆದಿರುವ ಘಟನೆಗಳಾಗಿರಬಹುದು, ಕಲ್ಪನೆಯ ಕತೆಗಳ ಮೇಲೆ ಹುಟ್ಟಿರಬಹುದು ಅಥವಾ ನೈಸರ್ಗಿಕ ಚೇಷ್ಟೆಗಳ ಬಗೆಗೆ ತಳೆದ ಮನೋಭಾವ ಅಥವಾ ಘಟನೆಗಳ ಪುನರಾವರ್ತನೆಯಿಂದಾಗಿರಬಹುದು. ಕನಸುಗಳು ಸಹ ಇವುಗಳ ಹುಟ್ಟಿಗೆ ಕಾರಣವಾಗಿರಬಹುದು. ಇದರ ಜೊತೆಗೆ ಭಯ, ಭರವಸೆ, ಪೂರ್ವಾಗ್ರಹ, ಭಾವೋದ್ರೇಕ, ಅನುಕರಣೆ, ಜಾತಿ, ಅಥವಾ ವರ್ಗದ ಒತ್ತಾಯದ ಭಾಗವಹಿಸುವಿಕೆಯ ಮುಖಾಂತರ ಹೀಗೆ ನಂಬಿಕೆಗಳು ಉತ್ಪನ್ನಗೊಳ್ಳಬಹುದು.

ನಂಬಿಕೆ ನಿಜವಾಗಿರಬಹುದು, ಅಥವಾ ಸುಳ್ಳಾಗಿರಬಹುದು, ಅದು ನಂಬುವವರನ್ನು ಆಧರಿಸಿದ ಕಲ್ಪನೆ ಇದು ಮನಸ್ಸಿನ ಒಂದು ಬಾವನೆಯಾಗಿದೆ. ಅಂದರೆ ನಂಬಿಕೆಯನ್ನು ನಂಬಿ ಅದರ ಹಾಗೆ ನಡೆದುಕೊಳ್ಳುವವರ ವರ್ತನೆಯಾಗಿದೆ. ನಂಬಿಕೆ ಜ್ಞಾನಕ್ಕಿಂತ ಭಿನ್ನವಾಗಿದೆ. ಇದನ್ನು ಮಾನವನ ಸರ್ವ ಕ್ಷೇತ್ರಗಳಲ್ಲಿ ಕಾಣಬಹುದು. ಒಬ್ಬ ವ್ಯಕ್ತಿತಾಳುವ ಬುದ್ಧಿಯ ಕಸರತ್ತು ಎಂದೂ ನಂಬಿಕೆಯ ಬಗ್ಗೆ ವಿಶ್ಲೇಷಿಸಬಹುದು. ಈ ನಂಬಿಕೆಗಳು ಜನರ ಜೀವನದಲ್ಲಿ ನಡೆದಾಡುವ ನಾಣ್ಯಗಳಿದ್ದಂತೆ. ಈ ನಂಬಿಕೆಯೆಂಬುದು ಮನುಷ್ಯನ ಸದುದ್ದೇಶದಿಂದ ತನ್ನ ಮಾನವೀಯ ಮೌಲ್ಯಗಳೊಂದಿಗೆ ಸ್ವಇಚ್ಛೆಯಿಂದ ನಡೆಸುವ ಆತ್ಮಶೋಧ ಹಾಗೂ ಒಂದು ಜೂಟಾಟ ಎಂದು ಹೇಳಬಹುದು. ನಂಬಿಕೆಗಳು ಆಯಾ ಸಂಸ್ಕೃತಿಯ ಮೌಲ್ಯ, ನೈತಿಕತೆ, ಆದರ್ಶ, ಆಸಕ್ತಿ, ನಿಷ್ಠೆ, ಪೌರಾಣಿಕ ಕಲ್ಪನೆಯ

ಅಭಿವ್ಯಕ್ತಿಗಳಾಗಿರಬಹುದು. ಇವುಗಳ ಜೊತೆಗೆ ಭಯ, ಮತ್ತು ಭಾವಾತ್ಮಕತೆಯ ಹಿನ್ನೆಲೆಯಿಂದ ಬಂದಿರಬಹುದು.

ಕೆಲವು ನಂಬಿಕೆಗಳಲ್ಲಿ ನಿರ್ಧಿಷ್ಟ ಪ್ರಾದೇಶಿಕತೆಯನ್ನು ಗುರುತಿಸಬಹುದು, ಅವು ಅಲ್ಲಿನ ಪ್ರಾದೇಶಿಕ ಪ್ರಾಭಾವದಿಂದಾಗಿ ಅಥವಾ ಪರಿಸರದ ಪರಿಸ್ಥಿತಿಯ ಒತ್ತಡದಿಂದಾಗಿ ಭಿನ್ನತೆಯನ್ನು ಪಡೆದು ಕೊಂಡಿರುತ್ತವೆ. ಇದಕ್ಕೆಲ್ಲ ಆಯಾ ಪ್ರದೇಶದ ಸಂಸ್ಕೃತಿಯ ಚೌಕಟ್ಟು ಸಾಕಷ್ಟು ನೀರೆರೆದಿರಬಹುದು.

ಉದಾ|| ''ಅಮವಾಸ್ಯೆ'' ತೆಲುಗರು ಮತ್ತು ಕನ್ನಡಿಗರಿಗೆ ಕೆಟ್ಟದಿನವಾದರೆ ತಮಿಳರಿಗೆ ಒಳ್ಳೆಯದಿನ. ಆಷಾಡದ ದಿನಗಳು ಕನ್ನಡಿಗರಿಗೆ ಒಳ್ಳೆಯದಿನಗಳಲ್ಲ. ಮುಸ್ಲಿಮರಿಗೆ ಅವು ಒಳ್ಳೆಯದಿನಗಳು ಈ ನಂಬಿಕೆಗಳ ಮೂಲ ಉದ್ದೇಶ ಮಾತ್ರ ಮಾನವರಿಗೆ ಸಮಾನವಾದುದು.

ಯಾವುದೇ 'ಧರ್ಮವಾದರೂ' ತನ್ನದೇ ಆದ ನಂಬಿಕೆಗಳನ್ನು ರೂಢಿಸಿಕೊಂಡು ಅದಕ್ಕೆ ತಕ್ಕ ಆಚರಣೆಗಳನ್ನು ನೆರವೇರಿಸುತ್ತಾ ಬಂದಿದೆ. ಧರ್ಮವನ್ನು ಒಂದು ರೀತಿಯಲ್ಲಿ ನಂಬಿಕೆಗಳ ಸಮೂಹ ಎಂತಲೂ ಕರೆಯಬಹುದು. ಹಲವು ಶಕ್ತಿಗಳನ್ನು ದೇವರು ಎಂದು ನಂಬಿ ಪೂಜಿಸಲು ಪ್ರಾರಂಭಿಸಿ ಒಲಿಸಿಕೊಳ್ಳಲು ಪ್ರಯತ್ನಿಸುವುದರ ಜೊತೆಗೆ ಅವುಗಳ ವಿರುದ್ಧವಾಗಿ 'ದೆವ್ವ'ಗಳ ಭಯವೂ ಅಧಿಕವಾಯಿತು. ಇವುಗಳಿಂದ ರಕ್ಷಣೆ ಪಡೆಯಲು ಬಾಳಿನಲ್ಲಿ ನೆಮ್ಮದಿಯನ್ನು ಕಂಡುಕೊಳ್ಳಲು ಮತ್ತೆ ಕೆಲವು ನಂಬಿಕೆಗಳು ರೂಪಗೊಂಡವು.

ಉದಾ|| 'ದೆವ್ವ' ಬಿಡಿಸಲು ಕಬ್ಬಿಣವನ್ನು ಚೆನ್ನಾಗಿ ಕಾಸಿ ಅಂಗಾಂಗಗಳಿಗೆ ಇಡುತ್ತಾರೆ.

ನಂಬಿಕೆ ವಿಧಿ ನಿಷೇದಗಳು

೦೧. ಮನೆಯ ಮೇಲೆ 'ಕಾಗೆ' ಕೂಗಿದರೆ ನೆಂಟರು ಬರುತ್ತಾರೆ.

೦೨. ಮನೆಯ ಮೆಲೆ 'ಗೂಬೆ ಕೂಗಬಾರದು ಒಳ್ಳೆಯದಲ್ಲ.

೦೩. ಒಳ್ಳೆಯ ಕಾರ್ಯಕ್ಕೆ ಹೋಗುವಾಗ 'ಬಳೆ ಮಲ್ಲಾರೆ' 'ತುಂಬಿದ ಬಿಂದಿಗೆ' 'ಹಾಲುಮಾರುವವ' 'ಮುಸಲ್ಮಾನ ಜನರು.' ಇವರೆಲ್ಲ ಎದುರಿಗೆ ಬಂದರೆ ಇವು ಒಳ್ಳೆಯ ಶಕುನಗಳು.

೦೪. ಮನೆಯಲ್ಲಿ 'ಬೆಕ್ಕು ಜಗಳ' ಆಡಿದರೆ ಮತ್ತು 'ಬಿಲಕ ಅಲ್ಲಾಡಿಸಿದರೆ' ಇದು ಒಳ್ಳೆಯದಲ್ಲ ಜಗಳ ಆಡುತ್ತಾರೆ.

೦೫. ಮನೆಯಲ್ಲಿ 'ಕಪ್ಪು ಇರುವೆ' ತತ್ತಿ ಕಟ್ಟಿಕೊಂಡು ಸಾಲಾಗಿ ಹೋದರೆ 'ಅಮೃತಗಳಿಗೆ' ಎನ್ನುವರು.

೦೬. ರಾತ್ರಿ ವೇಳೆ 'ಕಸಗುಡಿಸಿ' ಹೊರಗೆ ಹಾಕಬಾರದು.

೦೭. 'ಹಿಮ್ಮಡಿ' ತೊಳೆಯದೆ ಒಳಗೆ ಬರಬಾರದು.

೦೮. ದೇವರ ಮೇಲಿನ 'ಹೂ ಬಲಕ್ಕೆ ಬಿದ್ದರೆ' ಒಳ್ಳೆಯದು, 'ಎಡಕ್ಕೆ ಬಿದ್ದರೆ' ಕೆಟ್ಟದು.

೦೯. 'ಆರು ಬೆರಳಿದ್ದರೆ' ಪುಣ್ಯವಂತರು.

೧೦. 'ಮೂರು ಹೆಣ್ಣಿನ' ಹಿಂದೆ ಒಂದು ಗಂಡು ಹುಟ್ಟಿದರೆ ಮನೆಗೆ ದೆಸೆ.

೧೧. 'ಗುಬ್ಬಿ' ಮಣ್ಣಿನ ಸ್ನಾನ ಮಾಡಿದರೆ ಮಳೆ ಬರುತ್ತದೆ.

೧೨. ಮದುವೆಯಲ್ಲಿ 'ಬಾಸಿಂಗ' ಮುರಿದರೆ ಅಪಶಕುನ.

೧೩. ಪಿತೃ ಪಕ್ಷದ ದಿನ ರಂಗೋಲಿ ಬಿಡಬಾರದು.

೧೪. ಕಾಶಿಯಲ್ಲಿ ಸತ್ತರೆ ನೆಟ್ಟಗೆ ಸ್ವರ್ಗಕ್ಕೆ ಹೋಗುತ್ತಾರೆ.

೧೫. ಪಾತ್ರೆ ಒರೆಸುವ ಮಹಿಳೆಯ ಕೈಯಿಂದ ಬಟ್ಟೆ ಬಿದ್ದರೆ ಅತಿಥಿಗಳು ಬರುತ್ತಾರೆ.

೧೬. ರೇಷ್ಮೆ ಗೂಡುಗಳು ಇರುವ ಜಾಗದಲ್ಲಿ ಮುಟ್ಟಾದ ಸ್ತ್ರೀ ಹೋಗಬಾರದು.

೧೭. ರಾಹುಕಾಲದಲ್ಲಿ ಯಾವ ಕೆಲಸವನ್ನು ಮಾಡಬಾರದು.

೧೮. ಮಂಗಳವಾರ ಮತ್ತು ಅಮವಾಸ್ಯೆ ದಿವಸಗಳಲ್ಲಿ ಹೊಸ ಕೆಲಸಗಳನ್ನು ಮಾಡಬಾರದು.

೧೯. ಅಮವಾಸ್ಯೆಯ ದಿನ ಹುಟ್ಟಿದ ಮಕ್ಕಳು ಕಳ್ಳರಾಗುತ್ತಾರೆ.

೨೦. ಒಂಟಿ ಬ್ರಾಹ್ಮಣ ವಿಧವೆಯನ್ನು ನೋಡಿದರೆ ಅಶುಭವೆಂದು.

೨೧. ಬೆಳಿಗ್ಗೆ ಏಳುವಾಗ ಬಲ ಮಗ್ಗಲಿಗೆ ಏಳಬೇಕು. ಮಲಗುವಾಗ ಎಡ ಮಗ್ಗಲಿಗೆ ಮಲಗಬೇಕು.

೨೨. ಮಕ್ಕಳಿಗೆ ದೃಷ್ಟಿಯಾಗಬಾರದೆಂದು ಇಳಿತೆಗೆಯುವುದು.

೨೩. ಸತ್ತವರಿಗೆ ತಿಥಿ ಮಾಡದೆ ಹೋದರೆ ದೆವ್ವಗಳಾಗಿ ಕಾಡುತ್ತಾರೆ.

೨೪. 'ಬೆಕ್ಕು' ಎಡದಿಂದ ಬಲಕ್ಕೆ ದಾಟಿದರೆ ಹೆಂಗಸರಿಗೆ ಒಳ್ಳೆಯದು.

೨೫. ಎಡಗಣ್ಣು ಅದುರಿದರೆ ಗಂಡಸಿಗೆ ಕೆಡುಕು.

೨೬. ಒಂಟಿ ಸೀನು ಸೀನಿದರೆ ಕೆಡುಕು.

೨೭. ಮನೆ ಬಿಟ್ಟಾಗ ಯಾರಾದರು ಎಲ್ಲಿಗೆ ಎಂದು ಕೇಳಿ ಬಿಟ್ಟರೆ ಹೋದ ಕೆಲಸಕ್ಕೆ ಕೇಡು.

೨೮. ಮೂರು ಜನ ಯಾವ ಕೆಲಸಕ್ಕೆ ಹೋಗಲಿ ಅದು ಕೇಡು.

೨೯. ಹಾಲು ಹುಕ್ಕಿದರೆ ಒಳ್ಳೆಯದು.

೩೦. ಮೆಟ್ಟಿನ ಕಾಲಿನಲ್ಲಿ ಗಂಗೆಯೊಳಗೆ ಇಳಿಯಬಾರದು.

೩೧. ಹೊರಗಡೆಯಾದ ಹೆಂಗಸರು ಹೂ, ಬಳ್ಳಿಗಳನ್ನು, ಫಲ ಬಿಡುವ ಮರ ಗಿಡಗಳನ್ನು ಮುಟ್ಟಬಾರದು.

ಅಧ್ಯಾಯ - ೫

ಆಧುನಿಕ ಜಗತ್ತು ಮತ್ತು ವೀರಶೈವ ಸಮುದಾಯ

ನಮ್ಮ ಸಮಾಜದಲ್ಲಿ ಆಚರಣೆಯಲ್ಲಿರುವ ನಾನಾ ಸಂಸ್ಕಾರಗಳು ಹಬ್ಬಗಳು, ವಿಧಿ-ವಿಧಾನಗಳು ಹೇಗೆ ಹುಟ್ಟಿಕೊಂಡವು ಎಂಬುದನ್ನು ತಿಳಿಯಬೇಕಾದರೆ ನಾವು ಜಾನಪದವನ್ನು ಮೊರೆ ಹೋಗಬೇಕು. ಏಕೆಂದರೆ ಜನಪದರು ತಮ್ಮ ಎಲ್ಲಾ ಆಚರಣೆಗಳನ್ನು, ನಂಬಿಕೆಗಳನ್ನು ಬಿಟ್ಟು ಬಿಡದ ಹಾಗೆ ಆಚರಿಸುತ್ತಿದ್ದಾರೆ. ಕಾಲ ಕ್ರಮೇಣ ಈ ಆಚರಣೆಗಳು ಕುಂಠಿತವಾಗುತ್ತಾ ಬಂದವು.

ಆಧುನಿಕ ಜಗತ್ತು ವಿಸ್ತಾರವಾದಂತೆಲ್ಲಾ ಹೊಸ ಹೊಸ ಆವಿಷ್ಕಾರಗಳು ನಡೆಯುತ್ತಲೆ ಇವೆ. ಈ ಆಧುನಿಕ ಪ್ರಕ್ರಿಯೆ ನಿರಂತರವಾಗಿ ನಡೆಯುತ್ತಿರುತ್ತದೆ. ಅದು ಜನಪದರ ಮೇಲೆ ಗಾಢ ಪರಿಣಾಮ ಬೀರುತ್ತಾ ಹೋಗುತ್ತದೆ. ಆಧುನಿಕ ಜೀವನ ವಿಧಿ-ವಿಧಾನಗಳಿಂದಾಗಿ ಮಾನವೀಯತೆ, ಅಹಿಂಸೆ, ಅನುಕಂಪ, ಪ್ರೀತಿ-ವಾತ್ಸಲ್ಯ, ಕೌಟುಂಬಿಕ ಸಂಬಂಧಗಳ ಮೌಲ್ಯವೆಲ್ಲ ಕುಸಿಯುತ್ತಿದ್ದು ಅವಿಭಕ್ತ ಕುಟುಂಬಗಳೆಲ್ಲಾ ವಿಭಕ್ತ ಕುಟುಂಬಗಳಾಗಿ ಪರಿವರ್ತನೆಯಾಗುತ್ತಿವೆ.

ಸಾಮಾಜಿಕ ಜನ ಜೀವನ ಬದಲಾವಣೆಯ ಜೊತೆ ಜೊತೆಗೆ ನೂರಾರು ವರ್ಷಗಳಿಂದ ರೂಢಿಸಿಕೊಂಡು ಬಂದಿರುವಂತಹ ಸಂಪ್ರದಾಯ, ನಂಬಿಕೆ ಜನಪದ ಕಲೆಗಳು ಮುಂದುವರಿಕೆ ಒಂದು ಭಾಗವಾಗಿ ನಡೆಯುತ್ತವೆ. ಕೆಲವು ನಂಬಿಕೆ, ಆಚರಣೆ ಮತ್ತು ಸಂಪ್ರದಾಯಗಳು ತಮ್ಮ ಜೀವಂತಿಕೆಯನ್ನು ಪಡೆದಿದ್ದವು. ಆದರೆ ಇಂದು ಆಧುನಿಕತೆಯ ಗಾಳಿ ಎಲ್ಲ ಸಮುದಾಯಗಳ ಮೆಲೆ ತನ್ನ ಪ್ರಭಾವವನ್ನು ಬೀರುತ್ತಿರುತ್ತವೆ. ಆದ್ದರಿಂದ ಪ್ರತಿಯೊಂದು ಸಮುದಾಯ ರೂಢಿಸಿಕೊಂಡು ಬಂದಿರುವ ಕಲೆಗಳು ಕೂಡ ಮಾರಕವಾಗಿ ಪರಿಣಮಿಸುತ್ತದೆ. ಸಾಮಾನ್ಯವಾಗಿ ಎಲ್ಲ ಜನಪದ ಕಲೆ ಕೂಡ ಇಂದು ನಿರ್ನಾಮದ ಹಂತವನ್ನು ತಲುಪಿವೆ. ಒಂದು ಸಮುದಾಯ ರೂಢಿಸಿಕೊಂಡು ಬಂದಿರುವ ಕಲೆಯನ್ನು ಉಳಿಸಿಕೊಳ್ಳಲು ಆಗದಂತೆ ಪರಿಸ್ಥಿತಿ ಬಂದೊದಗಿದೆ. ಹಬ್ಬ ಹರಿದಿನಗಳು ಕೂಡ ಇಂದು ನಾಮಕಾವಸ್ಥೆಗೆ ಮಾತ್ರ ಎಂಬ ಭಾವನೆ ಜನಪದರಿಗೆ ತಲೆದೋರಿದೆ.

ಈಗಿನ ಯುವಪೀಳಿಗೆ ಆಧುನಿಕತೆ ಮತ್ತು ಜಾಗತಿಕರಣದ ಅಬ್ಬರಕ್ಕೆಸಿಲುಕಿ ಸಮಯವನ್ನು ವ್ಯಯಮಾಡಲು ಸಮಯವಿಲ್ಲದೆ ತಮ್ಮ ಸಾಂಸ್ಕೃತಿಕ ಆಚರಣೆ, ಸಂಪ್ರದಾಯ, ಮುಂತಾದವುಗಳನ್ನು

ನೆಪಮಾತ್ರಕ್ಕೆ ಮಾಡುವ ಕ್ರಿಯೆಗೆ ಒಳಗಾಗಿದ್ದಾರೆ. ಮದುವೆ ಎನ್ನುವ ಉದಾಹರಣೆಯನ್ನು ತೆಗೆದುಕೊಂಡರೆ ಕುಟುಂಬ ಪರಿವಾರ ಸಮೇತರಾಗಿ ಮೂರು ದಿನ ನಮ್ಮ ಮನೆಯಲ್ಲಿ ನಡೆಯುವ ಕಾರ್ಯಕಲಾಪಗಳ ಬಗ್ಗೆ ಮುತುವರ್ಜಿವಹಿಸಿ, ಇದು ನಿಮ್ಮ ಮನೆ ಎಂದು ಭಾವಿಸಿ ಎಂದು ಕರೆಯುವ ಪದ್ಧತಿ ಇತ್ತು. ಆದರೆ ಇತ್ತೀಚೆಗೆ ಬದುಕು ಕ್ಲಿಷ್ಟವಾದಂತೆ ಮತ್ತು ಅನುಕೂಲತೆಗಳು ಹೆಚ್ಚಾದಂತೆ ಕರೆಯುವ ಪದ್ಧತಿಯಲ್ಲೂ ಅನೇಕ ಸ್ಥಿತ್ಯಂತರಗಳಾಗಿವೆ. ಈ ಹಿನ್ನೆಲೆಯಲ್ಲಿ ಅನೇಕ ಆಚರಣೆಗಳು ಗೌಣವಾಗುತ್ತಿವೆ. ಕೆಲವು ಕಡೆ ದೈವದವರಿಗೂ ಕೂಡ ಊಟೋಪಚಾರದ ವ್ಯವಸ್ಥೆಯನ್ನು ಮಾಡದೇ ದೈವಕ್ಕೆ ನಿಗದಿಪಡಿಸಿದ ಹಣವನ್ನು ಕಟ್ಟುವವರೂ ಇದ್ದಾರೆ. ಏಕೆಂದರೆ ಇತ್ತೀಚಿನ ಪೀಳಿಗೆ ಶ್ರಮಪಡದೇ ಕಾರ್ಯವನ್ನು ನೆರವೇರಿಸಬೇಕೆಂದು ಪರಿಪಾಠ ರೂಢಿಸಿಕೊಳ್ಳುತ್ತಿವೆ. ಹಾಗೂ ಇತ್ತೀಚಿನ ಬೆಳವಣಿಗೆಯಲ್ಲಿ ಸಮಯಕ್ಕೆ ಮಹತ್ವವಿರುವುದರಿಂದ ಹಾಗೂ ಸೌಲಭ್ಯಗಳು ಹೆಚ್ಚಾಗಿರುವುದರಿಂದ ಮೂರುದಿನಗಟ್ಟಲೆ ನಡೆಯುವ ಮದುವೆ ಕಾರ್ಯಗಳು ಮೂರು ತಾಸಿಗೆ ಬಂದಿರುವುದು ಇಂದಿನ ಬೆಳವಣಿಗೆ, ಇಷ್ಟೇ ಅಲ್ಲದೆ ನಗರ ಮತ್ತು ಮಹಾ ನಗರಗಳಲ್ಲಿ ಅಂತರ್ಜಾತಿ ವಿವಾಹಗಳು ಹೆಚ್ಚಾಗುತ್ತಿವೆ. ಹಳ್ಳಿಗಳಲ್ಲಿ ಅಂತರ್ಜಾತಿ ವಿವಾಹಗಳು ಆಗುವುದೇ ಇಲ್ಲವೆಂದಲ್ಲ. ಆದರೆ ಸಂಖ್ಯೆಗೆ ಹೋಲಿಸಿದಾಗ ಹಳ್ಳಿಗಳಲ್ಲಿ ಕಡಿಮೆ ಎಂದು ಹೇಳಬಹುದಷ್ಟೆ, ಒಂದೆ ಜಾತಿಯ ಎರಡು ಗಂಡು ಹೆಣ್ಣೆ ಪ್ರೇಮಿಸಿ ಮದುವೆಯಾಗುವಲ್ಲಿ ವಿರೋಧಗಳೇನಾದರೂ ಬರದಿದ್ದಲ್ಲಿ ಗಂಡಿನ ಕಡೆಯ ಸಂಪ್ರದಾಯ ಒಮ್ಮೊಮ್ಮೆ ಇಂತಹ ವಿವಾಹಗಳು ಹೆಚ್ಚಾಗಿ ದೇವಸ್ಥಾನದಲ್ಲಿ ಸರಳವಾಗಿ ನಡೆಯುತ್ತಿವೆ.

ವಿದ್ಯಾವಂತರಾದ ಯುವಕರು ನಂಬಿಕೆ, ಆಚರಣೆ, ಸಂಪ್ರದಾಯಗಳನ್ನು ಹಳೆಯ ಗೊಡ್ಡು ಸಂಪ್ರದಾಯಗಳೆಂದು ಮೂಗುಮುರಿಯುತ್ತಿರುವ ಸಂದರ್ಭ ಒಂದೆಡೆಯಾದರೆ ಜಾಗತಿಕರಣ ಸಂಸ್ಕೃತಿಯು ವ್ಯಾಲೆಂಟೆಂಟ್ಸ್‌ಡೆ, ಫ್ರೆಂಡ್‌ಶಿಫ್‌ಡೆ, ಮದರ್ಸ್‌ಡೆ, ಎಂಬಂತಹ ಚಿತ್ರವಿಚಿತ್ರವಾದ ಈ ಸಂಸ್ಕೃತಿಗೆ ವಗ್ಗದ ಆಚರಣೆಗಳನ್ನು ಒಂದೆಡೆ ತನ್ನ ಪ್ರಚಾರ ಮಾಧ್ಯಮಗಳಿಂದ ಹಬ್ಬಿಸುತ್ತಿದೆ. ಈಗಿನ ಜನ ಸಮೂಹ ಯಾವುದು ನಮ್ಮ ಸಂಸ್ಕೃತಿ ಯಾವುದು ನಮ್ಮ ಸಂಸ್ಕೃತಿಯಲ್ಲಿ ಎನ್ನುವ ಜಿಜ್ಞಾಸೆಗೆ ಒಳಗಾಗಿದ್ದಾರೆ. ಹಾಗೆಯೆ ಸಂಡೂರಿನ ವೀರಶೈವ ಸಮುದಾಯವು ಅಲ್ಲಿಯ ಗಣಿಗಾರಿಕೆಯಿಂದ ಜಾಗತೀಕರಣದ ಯಲ್ಲಾ ಸವಲತ್ತುಗಳು ದೊರಕುವುದರಿಂದಾಗಿ ತನ್ನ ಮೂಲಸಂಸ್ಕೃತಿಯಲ್ಲಿ ಅಲ್ಪ ಸ್ವಲ್ಪ ಬದಲಾವಣೆಗೆ ಒಳಗಾಗುತ್ತಿರುವುದನ್ನು ಕಾಣಬಹುದು. ಸಂಡೂರಿನ ವೀರಶೈವ ಸಮುದಾಯವು ತನ್ನು ಉಡುಪು, ವಸ್ತ್ರಾಲಂಕಾರಗಳಲ್ಲಿ ಬದಲಾವಣೆಗೆ ಒಳಗಾಗಿರುವದನ್ನು ಕಾಣಬಹುದು. ಒಂದು ಕಾಲದಲ್ಲಿ ಪುರುಷರು ಪಂಚೆ, ತುಂಬುದೂಳಿನ ಅಂಗಿಗಳನ್ನು ಧರಿಸಿ ತಲೆಯ ಮೇಲೆ ಟವಲಗಳನ್ನು ಸುತ್ತಿಕೊಂಡು ಅಥವಾ ಟವಲಗಳನ್ನು ಹೆಗಲ ಮೇಲೆ ಹಾಕಿಕೊಂಡು ಇರುತ್ತಿದ್ದರು. ಹಾಗೆಯೇ ಸ್ಥಳೀಯ ಕುಶಲ ಕರ್ಮಿಗಳಿಂದ

ಚರ್ಮದಿಂದ ತಯಾರಾದ ಚಪ್ಪಲಿಗಳನ್ನು ಧರಿಸುತ್ತಿದ್ದರು. ಇಂದು ಪ್ಯಾಂಟು, ಶರಟು, ಶೂಗಳು ಎದ್ದು ಕಾಣುತ್ತಿವೆ. ಹಾಗೆಯೆ ಹೆಣ್ಣು ಮಕ್ಕಳ ವಸ್ತ್ರಾಲಂಕಾರಗಳಲ್ಲಿಯೂ ಗಣನೀಯವಾದ ಬದಲಾವಣೆಗಳಾಗಿ, ಸಂಡೂರಿನಲ್ಲಿ ಬ್ಯೂಟಿಪಾರ್ಲರ್‌ಗಳು ಎದ್ದಿವೆ.

ಇನ್ನು ಆಚರಣೆಗಳಿಗೆ ಸಂಬಂಧಪಟ್ಟಂತೆ ಹೇಳುವುದಾದರೆ ಜಾಗತೀಕರಣದಿಂದ ಮೊದಲೆ ಗೊಂದಲಕ್ಕೆ ಒಳಗಾಗಿ ತಮ್ಮ ಮೂಲ ಸಂಸ್ಕೃತಿಯಾವುದು ಏರಿಕೆಯ ಸಂಸ್ಕೃತಿ ಯಾವುದು ಎಂದು ತಿಳಿಯದಿರುವ ಪರಿಸ್ಥಿತಿಯಲ್ಲಿದ್ದಾರೆ. ಜಾಗತೀಕರಣದ ಸಂಸ್ಕೃತಿಯಿಂದಾಗಿ ಈ ನೆಲದ ವೀರಶೈವ ಸಂಸ್ಕೃತಿಯು ಒಂದು ರೀತಿಯಲ್ಲಿ ಅವಹಳನಕ್ಕೆ ಒಳಗಾಗಿದೆ. ಹಾಗಾಗಿ ಈ ಸಂಸ್ಕೃತಿಗೆ ಸಂಬಂಧಿಸಿದ ಹಬ್ಬ, ಆಚರಣೆಗಳು, ಈಗಿನ ಪೀಳಿಗೆಗೆ ಒಂದು ರೀತಿಯಲ್ಲಿ ಇವುಗಳನ್ನು ಆಚರಿಸುವುದು ಅವಮಾನವೆನ್ನುವ ಮನೋಭಾವವನ್ನು ಸೃಷ್ಟಿಮಾಡಿದೆ. ಅದೆ ಸಂದರ್ಭದಲ್ಲಿ ಇವುಗಳನ್ನು ಬಿಟ್ಟರೆ ಏನಾದರೂ ಆಗಬಹುದೆಂಬ ಸಣ್ಣ ಅಳುಕು ಇವರ ಮನಸ್ಸಿನಲ್ಲಿದೆ. ಹಾಗಾಗಿ ಆಚರಣೆಗಳನ್ನು ಒಂದು ರೀತಿಯಲ್ಲಿ ಬಹುಪಾಲು ಜನರು ಕಾಟಾಚಾರಕ್ಕೆ ಆಚರಿಸುವುದನ್ನು ಕಾಣಬಹುದು. ಹಾಗೆಯೆ ಆಹಾರ ಪದ್ಧತಿ ಉಟೋಪಚಾರ ಮುಂತಾದವುಗಳಲ್ಲಿಯೂ ಬದಲಾವಣೆಗೆ ಒಳಗಾಗಿರುವುದನ್ನು ಗಮನಿಸಬಹುದು.

ತೀವ್ರಗತಿಯಲ್ಲಿ ಬದಲಾಗುತ್ತಿರುವ ಸಂಡೂರಿನಲ್ಲಿ ಸಮುದಾಯಗಳು ಸಹ ಬದಲಾವಣೆಗೆ ಒಳಗಾಗುತ್ತಿವೆ. ಆದರೆ ಸಂಡೂರಿನ ನಾಗರಿಕ ಸೌಲಭ್ಯಗಳು ಮಾತ್ರ ಹಲವಾರು ಶತಮಾನಗಳು ಇಂದಿವೆ. ಬದಲಾವಣೆಗೆ ಒಳಗಾಗುತ್ತಿರುವ ವೀರಶೈವ ಸಮುದಾಯವು ತನ್ನ ಉಡುಗೆ ತೊಡುಗೆ, ನಂಬಿಕೆ, ಆಚರಣೆ, ಸಂಪ್ರದಾಯ, ಎಲ್ಲಾವುಗಳಲ್ಲು ಸಹ ಬದಲಾವಣೆ ತರುವುದರ ಜೊತೆಗೆ ಅಲ್ಪ ಸ್ವಲ್ಪ ಮೂಲದ ಅಂಶಗಳನ್ನು ಉಳಿಸಿಕೊಂಡಿದ್ದಾರೆ. ಹಾಗಿದ್ದಾಗಲು ಇನ್ನೊಂದು ರೀತಿಯಲ್ಲಿ ವೈದಿಕ ಸಂಸ್ಕೃತಿಯನ್ನು ಸಹ ಅಲ್ಲಲ್ಲಿ ಅಳವಡಿಸಿಕೊಳ್ಳುವುದನ್ನು ಕಾಣಬಹುದು. ಉದಾ: ಸತ್ಯನಾರಾಯಣ ಪೂಜೆ ಮಾಡಿಸುವುದು, ರಾಘವೇಂದ್ರಸ್ವಾಮಿ ಮಠಕ್ಕೆ ಹೋಗುವುದು, ಮುಂತಾದವುಗಳನ್ನು ಕಾಣಬಹುದು.

ಅಧ್ಯಾಯ - ೬

ಸಮಾರೋಪ

ಇಂಡಿಯಾದ ಈ ನೆಲ ತನ್ನ ಸಾವಿರಾರು ವರ್ಷಗಳ ಚರಿತ್ರೆಯಲ್ಲಿ ಹಲವು ಜನಾಂಗಗಳ, ಸಂಸ್ಕೃತಿಗಳ ಧರ್ಮ, ಪಂಥಗಳ ಉದಯಕ್ಕೆ ಕಾರಣವಾಗಿದೆ. ಹಾಗೆಯೇ ಸಂಘರ್ಷ ಮತ್ತು ಪತನಗಳ ಪ್ರಕ್ರಿಯೆಯಲ್ಲಿ ಉದಯಿಸಿದ ಹೊಸ ಮಾರ್ಗವೊಂದನ್ನು ಒಪ್ಪಿಕೊಳ್ಳುತ್ತಾ ಬಂದಿವೆ. ಒಪ್ಪಿಕೊಂಡ ಮಾರ್ಗವು ಹಲವು ಮಾರ್ಗಗಳನ್ನು ಪೋಷಿಸುತ್ತಾ ಬಂದಿದೆ. ಆ ಮೂಲಕ ಇಡೀ ಇಂಡಿಯಾ ಅತ್ಯಂತ ಸಂಕೀರ್ಣವಾದ ಸಾಂಸ್ಕೃತಿಕ ನಾಡಾಗುವಂತೆ, ಹಲವು ಪ್ರಕ್ರಿಯೆಗಳಿಗೆ ಒಳಗಾಗಿದೆ.

ಇಂತಹ ಸಾಂಸ್ಕೃತಿಕ ಭಾಗವಾಗಿರುವ ಸಂಡೂರಿನ ವೀರಶೈವ ಸಮುದಾಯದ ಆಚರಣೆಗಳು ಬಹುಮುಖ್ಯವಾದುದಾಗಿದೆ. ವಲಸೆ ಬಂದವರೆಂದು ಹೇಳಲಾದ ಆರ್ಯರು, ಇದೇ ನೆಲದ ಮೂಲ ನಿವಾಸಿಗಳೆಂದು ಹೇಳಲಾಗಿರುವ ದ್ರಾವಿಡರು ಮತ್ತು ಈ ಎರಡು ಜನಾಂಗಗಳ ನಡುವಿನ ಸಂಘರ್ಷ ಹಾಗೂ ಸಮ್ಮಿಲನದಿಂದಾಗಿ ಹುಟ್ಟಿಕೊಂಡ ಹೊಸ ಮಾರ್ಗವನ್ನು ನೋಡಬೇಕಾಗುತ್ತದೆ.

ಹೊಸ ಮೌಲ್ಯಗಳನ್ನು ಪಡೆದಂತಹ ಜನಾಂಗಗಳು ಅವುಗಳನ್ನು ಬಳಸಿಕೊಳ್ಳಲು ಮತ್ತು ಪ್ರಸಾರ ಮಾಡಲು ತೊಡಗಿದ ಸಂದರ್ಭದಲ್ಲಿ ಸಂಘರ್ಷಗಳುಂಟಾಗಿವೆ. ಹೀಗೆ ಉಂಟಾಯಿತೆನ್ನಲಾದ ಸಂಘರ್ಷಗಳ ಹಿನ್ನೆಲೆ ಯಲ್ಲಿ ಕರ್ನಾಟಕದ ಸಂದರ್ಭ ಹಾಗೂ ಸಮುದಾಯವನ್ನು ಹೆಚ್ಚು ಆಸಕ್ತಿಯಿಂದ ನೋಡಬೇಕಾದ ಅವಶ್ಯಕತೆಯಿದೆ. ವೀರಶೈವ ಸಮುದಾಯದವರು ಮೂಲದಲ್ಲಿ ವೀರಭದ್ರನ ಆರಾಧನೆಗೆ ಒಳಗಾದವರು. ವೀರಭದ್ರ ಆರ್ಯರ ಯಜ್ಞ ಕಲ್ಪನೆಯನ್ನು ನಾಶಮಾಡಿದವರು ಮೂಲದಲ್ಲಿ ವೀರಭದ್ರ ಶೈವನಾದರು ಮತ್ತೆ ಅದೆ ಆರ್ಯರ ಪುರೋಹಿತ ಶಾಹಿಯನ್ನು ಬೆಳೆಸಿಕೊಂಡು ಬಂದು ವೀರಶೈವರ ಆರಾಧ್ಯ ದೈವನಾಗಿ ಇಂದು ನಮಗೆ ಕಾಣಿಸುತ್ತಾನೆ. ಸಂಡೂರಿನ ವೀರಶೈವ ಸಮುದಾಯದ ಬಹುಪಾಲು ಆಚರಣೆಗಳು ನೇರವಾಗಿ ಅಲ್ಲದಿದ್ದರು ವೀರಭದ್ರನ ಸಂಪ್ರದಾಯಕ್ಕೆ ಸಂಬಂಧ ಪಟ್ಟವುಗಳಾಗಿರುವುದನ್ನು ಮೇಲ್ ನೋಟಕ್ಕೆ ಕಾಣಬಹುದು. ಇಲ್ಲಿಯ ಆಚರಣೆಗಳನ್ನು ತುಂಬಾ ಕಟ್ಟುನಿಟ್ಟಾದ ವಿಧಿ-ನೀಷೆದಗಳಿರುವುದನ್ನು ಗುರುತಿಸಬಹುದು. ಆಧುನಿಕ ಜಗತ್ತಿನ ತೀವ್ರ ಒತ್ತಡ ಕಡಿಮೆಯಾಗುತ್ತಿರುವ ಧಾರ್ಮಿಕ ಶ್ರದ್ಧಾ ಭಾವನೆಯಿಂದಾಗಿ ಆಚರಣೆಗಳನ್ನು ನೆಡೆಸುವುದನ್ನು ಕಡಿಮೆಮಾಡುತ್ತಿದ್ದಾರೆ. ಜೊತೆಗೆ

ಬೇರೆ ಬೇರೆ ರೀತಿಯ ಆಚರಣೆ ಸಂಪ್ರದಾಯಗಳನ್ನು ಅಳವಡಿಸಿ ಕೊಳ್ಳುತ್ತಿದ್ದಾರೆ.

ಪ್ರಸ್ತುತ ಅಧ್ಯಯನದಲ್ಲಿ ಈ ಎಲ್ಲಾ ಅಂಶಗಳನ್ನು ಗಮನದಲ್ಲಿ ಇಟ್ಟುಕೊಂಡು ಅಧ್ಯಯನವನ್ನು ನೆಡೆಸಿದ್ದೆನೆ. ಅಧ್ಯಯನಕ್ಕೆ ಸಂಬಂಧಪಟ್ಟಂತೆ ಒಟ್ಟು ಆರು ಅಧ್ಯಯಗಳಾಗಿ ವರ್ಗೀಕರಣ ಮಾಡಿ ಕೊಂಡಿದ್ದೆನೆ. ಮೊದಲನೆಯ ಅಧ್ಯಯನದಲ್ಲಿ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ ಇದ್ದು, ಅಧ್ಯಯನವನ್ನು ಮಾಡಲು ಕಾರಣವೇನು, ಅಧ್ಯಯನಕ್ಕೆ ಬಳಸಿಕೊಂಡ ವಿಧಾನ, ಅಧ್ಯಯನದ ವ್ಯಾಪ್ತಿಯನ್ನು ಚರ್ಚಿಸಲಾಗಿದೆ.

ಅಧ್ಯಾಯ ಎರಡರಲ್ಲಿ ಸಂಡೂರಿನ ಪರಿಚಯವಿದ್ದು ಸಂಡೂರು ಎಂಬ ಹೆಸರು ಬರಲು ಕಾರಣವೇನು, ತನ್ನ ಬೆಳವಣಿಗೆಯಲ್ಲಿ ಅಂದರೆ ಕ್ರಿ.ಶ.ಪೂ. ದಿಂದ ಇಂದಿನ ವರೆಗೆ ಪಡೆದುಕೊಂಡ ಮಾರ್ಪಾಡುಗಳು ಗತಿಸಿಹೊದ ಘಟನೆಗಳು ಇರುವ ಸ್ಥಿತಿಗತಿಗಳನ್ನು ಕುರಿತು ಚರ್ಚಿಸಲಾಗಿದೆ.

ಅಧ್ಯಾಯ ಮೂರರಲ್ಲಿ ವೀರಶೈವ ಧರ್ಮದ ಬಗೆಗೆ ಚರ್ಚಿಸಲಾಗಿದೆ. ಇಲ್ಲಿ ವೀರಶೈವ ಧರ್ಮದ ಮೂಲ ಉದ್ದೇಶ, ಧರ್ಮದಲ್ಲಿ ಇರುವ ಶರಣರು, ವೀರಶೈವ ಧರ್ಮದ ಮೌಲ್ಯ ಮಾಪನ ಅಷ್ಟಾವರಣಗಳು, ಲಿಂಗ, ಗುರು, ಜಂಗಮ, ವಿಭೂತಿ, ರುದ್ರಾಕ್ಷಿ, ಮಂತ್ರ ಮುಂತಾದವುಗಳನ್ನು ಕುರಿತು ವಿವರವಾಗಿ ಹೇಳಲಾಗಿದೆ. ಅಧ್ಯಾಯ ನಾಲ್ಕರಲ್ಲಿ ವೀರಶೈವ ಸಮುದಾಯದ ಜೀವನಾವರ್ತನ ಹಾಗೂ ವಾರ್ಷಿಕಾವರ್ತನದ ಆಚರಣೆಗಳನ್ನು ದೀರ್ಘವಾಗಿ ಚರ್ಚೆಗೆ ವಿಶ್ಲೇಷಿಸಲಾಗಿದೆ. ಹಾಗೆಯೆ ವಿರಶೈವ ಸಮುದಾಯದ ನಂಬಿಕೆ, ವಿಧಿ-ನಿಷೇಧಗಳನ್ನು ಕುರಿತು ಹೇಳಲಾಗಿದೆ.

ಅಧ್ಯಾಯ ಐದು-ಆರರಲ್ಲಿ ವೀರಶೈವ ಸಮುದಾಯದ ಆಚರಣೆಗಳು ಆಧುನಿಕ ಜಗತ್ತಿನ ತಲ್ಲಣದಿಂದ ಹೇಗೆ ಮಾರ್ಪಾಡುಗಳಿಗೆ ಒಳಗಾಗುತ್ತಿವೆ ಎಂಬುದನ್ನು ಕುರಿತು ಸೂಧಾಹರಣವಾಗಿ ಹೇಳಲಾಗಿದೆ. ಹಾಗೆಯೆ ಉಪಸಂಹಾರ ಭಾಗದಲ್ಲಿ ಪ್ರಬಂಧದಲ್ಲಿ ಇದುವರೆಗೆ ಏನು ಮಾಡಲಾಗಿದೆ ಎಂಬುದರ ಬಗೆಗೆ ವಿವರಿಸಲಾಗಿದೆ. ಅನು ಬಂದದಲ್ಲಿ ಛಾಯಚಿತ್ರ, ಮಾತೃವಿವರ ಮತ್ತು ಗ್ರಂಥ ಸೂಚಿಗಳಿವೆ.

ಆಧಾರ ಗ್ರಂಥಗಳು

ಕ್ರ.ಸಂ	ಗ್ರಂಥಗಳ ಹೆಸರು	ಲೇಖಕರು	ಇಸವಿ	ಪ್ರಕಾಶನ
೦೧.	ವೀರಶೈವ ನವರತ್ನ	ಎಚ್.ಟಿ.ಮಹಾಂತೇಶ ಶಾಸ್ತ್ರಿಗಳು	೧೯೬೭	ಎಮ್.ಎಸ್.ಶಾಬಾದಿಮಠ ಗದಗ (ಧಾರವಾಡ ಜಿಲ್ಲೆ)
೦೨.	ಲಿಂಗಾಯತ ಧರ್ಮ ಒಂದು ಅಧ್ಯಯನ	ಹಿರೇಮಲ್ಲೂರು ಈಶ್ವರನ್	೧೯೯೭	ಪ್ರಿಯದರ್ಶಿನಿ ಪ್ರಕಾಶನ ಬೆಂಗಳೂರು-೪೦
೦೩.	ಬಸವಣ್ಣ ಹಾಗೂ ಲಿಂಗಾಯತ ಧರ್ಮ	ಹಿರೇಮಲ್ಲೂರು ಈಶ್ವರನ್	೧೯೯೭	ಪ್ರಿಯದರ್ಶಿನಿ ಪ್ರಕಾಶನ ಬೆಂಗಳೂರು-೪೦
೦೪.	ವೀರಶೈವ ದರ್ಮದ ಸ್ವಯಂ ಪುರೋಹಿತ	ಬ್ರ||ಶ್ರೀ ಸಿದ್ಧಾಂತಿ ರುದ್ರಾರಾಧ್ಯ ಶಾಸ್ತ್ರಿಗಳು	೧೯೯೬	ಕಲ್ಯಾಣ ಕರ್ನಾಟಕ ಮುದ್ರಣಾಲಯ ಗುಲಬರ್ಗಾ
೦೫.	ವೀರಶೈವ ಧರ್ಮ ಪರಂಪರೆ	ಎಂ.ಎಸ್ ಕಲ್ಲಪ್ಪ	೧೯೯೬	ಸುಬಿ ಪ್ರಕಾಶನ ಬೆಂಗಳೂರು
೦೬.	ಲಿಂಗಾಯತ ಧರ್ಮ ಕೈಪಿಡಿ	ಜಗದ್ಗುರು ಮಾತೆಮಹಾದೇವಿ	೧೯೭೪	ಸಂಯುಕ್ತ ಕರ್ನಾಟಕ ಪ್ರೆಸ್ಸ್ ಬೆಂಗಳೂರು
೦೭.	ವೀರಶೈವ ಇತಿಹಾಸ ಮತ್ತು ಭೂಗೋಲ	ಎಂ.ಎಂ.ಕಲಬುರ್ಗಿ	೨೦೦೫	ಶ್ರೀ ಸರಸ್ವತಿ ಆಫ್‌ಸೆಟ್ ಪ್ರಿಂಟರ್ಸ್ ಧಾರವಾಡ
೦೮.	ಅಂತ್ಯ ಸಂಸ್ಕಾರ ವಿಧಾನ	ವೇ.ಬಸವಯ್ಯ ಶಾಸ್ತ್ರಿಗಳು ಹೀರೇಮಠ	೨೦೦೫	ಮೆ|| ಪಿ.ಸಿ. ಶಾಬಾದಿಮಠ ಬುಕ್,ಡಿಪೋ, ಗದಗ
೦೯.	ಲಿಂಗಾಯತರು ಹಿಂದೂಗಳಲ್ಲ	ಎನ್.ಜಿ.ಮಹಾದೇವಪ್ಪ	೨೦೦೫	ಸರಸ್ವತಿ ಆಫ್‌ಸೆಟ್ ಪ್ರಿಂಟರ್ಸ್ ಧಾರವಾಡ-೦೧
೧೦.	ವಚನ ಶೋಧ-೨	ಡಾ.ಎಂ.ಚಿದಾನಂದ ಮೂರ್ತಿ	೧೯೯೮	ಪ್ರಿಯದರ್ಶಿನಿ ಪ್ರಕಾಶನ ಬೆಂಗಳೂರು-೪೦
೧೧.	ವೀರಶೈವ ಸಾಹಿತ್ಯ	ಡಾ.ಎಸ್.ಎಂ.ಹಿರೇಮಠ	೧೯೯೬	ಸ್ನೇಹಾ ಪ್ರಿಂಟರ್ಸ್, ಬೆಂಗಳೂರು
೧೨.	ಬಸವಣ್ಣನವರು ಲಿಂಗಾಯತ ಧರ್ಮ ಸ್ಥಾಪಕರು	ಪ್ರೊ.ವೀ.ವೀ.ಸಂಗಮದ	೧೯೯೬	ಬಸವ ಬಳಗ, ದಾವಣಗೆರೆ
೧೩.	ಅಷ್ಟಾವರಣ ವಿವೇಕ	ಪಂಡಿತ ವೈ, ನಾಗೇಶಶಾಸ್ತ್ರಿ	೧೯೫೨	ಶ್ರೀ ಜಗದ್ಗುರು ಜಯವಿಭವ ಮುರುಘ ರಾಜೇಂದ್ರ, ಧಾರವಾಡ-೬

೧೪.	ಲಿಂಗವಂತಧರ್ಮ ಸಂಸ್ಕಾರಗಳು	ಶ್ರೀ ವೀರಭದ್ರಯ್ಯ ಬಸವಲಿಂಗಯ್ಯ ಪತ್ರಿಮಠ	೨೦೦೧	ಚಿತ್ತರಗಿ ಶ್ರೀವಿಜಯ ಮಹಾಂತೇಶ್ವರ ಧರ್ಮಪ್ರಸಾರಕ ಮಂಡಲ, ಇಳಕಲ್
೧೫.	ಪ್ರಭು ಪ್ರಕಾಶ	ಡಾ.ಮೃತ್ಯುಂಜಯ ಹೊರಕೇರಿ	೧೯೯೪	ಶ್ರೀ ಪ್ರಭುದೇವರ ಸಂಸ್ಥಾನ ವಿರಕ್ತಮಠ, ಸಂಡೂರು
೧೬.	ನಮ್ಮ ಹಬ್ಬಗಳು	ಡಾ.ಎಚ್.ವಿ.ನಂಸಿಂಹಮೂರ್ತಿ	೨೦೦೨	
೧೭.	ಬಸವ ಧರ್ಮದ ಸಂಸ್ಕಾರಗಳು	ಜಗದ್ಗುರ ಮಾತೆಮಹಾದೇವಿ	೧೯೯೫	ವಿಶ್ವಕಲ್ಯಾಣ ಮಿಷನ್, ಬಸವ ಮಂಟಪ, ಬೆಂಗಳೂರು

ವಕ್ತೃಗಳ ವಿವರ

ಕ್ರ.ಸಂ	ಹೆಸರು	ವಯಸ್ಸು	ವೃತ್ತಿ	ಊರು	ಜಾತಿ	ಉಪಜಾತಿ
೦೧	ಪ್ರಭುದೇವ ಸ್ವಾಮಿಗಳು	೪೫	ಸಮಾಜ ಸೇವೆ	ಸಂಡೂರು		
೦೨.	ಎಂ.ಬಿ.ಚಂದ್ರಶೇಖರ್	೭೩	ಸ್ವಾತಂತ್ರಹೋರಾಟ	ಬೀರೂರು	ಲಿಂಗಾಯತ	ಬಣಜಿಗರು
೦೩.	ಎಂ.ಸಿ.ಜಯಮ್ಮ	೬೪	ಗೃಹಿಣಿ	ಬೀರೂರು	ಲಿಂಗಾಯತ	ಬಣಜಿಗರು
೦೪.	ಜಿ.ಚನ್ನಬಸವಪ್ಪ	೫೭	ಉಪಲೆಕ್ಕಾಧಿಕಾರಿ	ಸಂಡೂರು	ಲಿಂಗಾಯತ	ಬಣಜಿಗರು
೦೫.	ಜಿ.ಸಿ.ಪ್ರಮೀಳ	೪೫	ಗೃಹಿಣಿ	ಸಂಡೂರು	ಲಿಂಗಾಯತ	ಬಣಜಿಗರು
೦೬.	ನಾಗರಾಜ್	೩೧	ಇಂಜಿನಿಯರ್	ಬೆಂಗಳೂರು	ಲಿಂಗಾಯತ	ಬಣಜಿಗರು
೦೭.	ಶಿವಪ್ರಕಾಶ್	೪೬	ವಿದ್ಯುತ್ ಶಾಖೆ	ಮೈಸೂರು	ಲಿಂಗಾಯತ	ಬಣಜಿಗರು
೦೮.	ಸರೋಜ	೪೦	ಗೃಹಿಣಿ	ಮೈಸೂರು	ಲಿಂಗಾಯತ	ಬಣಜಿಗರು
೦೯.	ಪರಪ್ಪಗದ್ದೆ	೬೫	ಜಮೀನುದಾರರು	ಕಾರಟಗಿ	ಲಿಂಗಾಯತ	ಬಣಜಿಗರು
೧೦.	ಕೊಟ್ರೇಶ್.ಎಸ್	೨೬	ಸಂಶೋಧನ ವಿದ್ಯಾರ್ಥಿ	ಬಂಡ್ರಿ	ವೈಶ್ಯರು	
೧೧	ರುದ್ರೇಶ್ ಎಂ.ಸಿ.	೩೮	ವ್ಯಾಪಾರಿ	ಬೀರೂರು	ಲಿಂಗಾಯತ	ಬಣಜಿಗರು
೧೨.	ಎಂ.ಆರ್. ಕಲಾ	೩೩	ಗೃಹಿಣಿ	ಬೀರೂರು	ಲಿಂಗಾಯತ	ಬಣಜಿಗರು
೧೩.	ಲತಾ ಎಂ.ಎಸ್.	೩೨	ಗೃಹಿಣಿ	ಅರಸಿಕೇರೆ	ಲಿಂಗಾಯತ	ಬಣಜಿಗರು
೧೪.	ಸರ್ವೇಶ್ ಎಂ.ಆರ್	೩೮	ವಕೀಲರು	ಅರಸಿಕೇರೆ	ಲಿಂಗಾಯತ	ಬಣಜಿಗರು
೧೫.	ಬಿಂದು ಎಂ.ಜಿ.	೩೫	ಗೃಹಿಣಿ	ಬೆಂಗಳೂರು	ಲಿಂಗಾಯತ	ಬಣಜಿಗರು
೧೬.	ಗಿರೀಶ್ ಎಂ.ಸಿ.	೩೬	ಇಂಜಿನಿಯರ್	ಬೆಂಗಳೂರು	ಲಿಂಗಾಯತ	ಬಣಜಿಗರು
೧೭.	ಶೀಮತಿ ವಿಜಯಮ್ಮ	೪೫	ಗೃಹಿಣಿ	ಬೀರೂರು	ಲಿಂಗಾಯತ	ಬಣಜಿಗರು
೧೮.	ಶಿವಕುಮಾರ್ ಬಾಬು	೫೦	ಗುತ್ತಿಗೆದಾರರು	ಬೀರೂರು	ಲಿಂಗಾಯತ	ಬಣಜಿಗರು
೧೯.	ಸಿದ್ರಾಮಪ್ಪ	೬೦	ನಿವೃತ್ತಿ	ಸಂಡೂರು	ಗೌಳೆರು	
೨೦.	ಕುಮಾರಸ್ವಾಮಿ ಉಗ್ರಾಣ	೫೬	(ಗಣಿ) ಕಾರ್ಮಿಕರು	ಸಂಡೂರು	ಲಿಂಗಾಯತ	ಪಂಚಾಚಾರ್ಯರು
೨೧.	ಗಡಿಗಿ ಕುಮಾರಸ್ವಾಮಿ	೬೧	ನಿವೃತ್ತಿ ಅಧಿಕಾರಿ	ಸಂಡೂರು	ಲಿಂಗಾಯತ	ಬಣಜಿಗರು
೨೨.	ನವೀನ್‌ರಾಜ್ ಹಿರೇಮಠ್	೩೫	ಶಾಸ್ತ್ರಗಾರರು	ಬೀರೂರು		
೨೩.	ವೇದಮೂರ್ತಿ	೪೫	ಹೈಸ್ಕೂಲ್ ಮಾಸ್ಟರ್	ಬೀರೂರು	ವೀರಶೈವರು	
೨೪.	ಶ್ರೀಮತಿ ಚರಣಾಂಬ ಲಿಂಗದಳ್ಳಿ	೩೦	ಜಮೀನುದಾರರು	ಬೀರೂರು	ವೀರಶೈವರು	

೨೫. ನಾಗರತ್ನಮ್ಮ	೫೫	ಎಲೆಕ್ಟ್ರಿಕಲ್ ಕಾನ್‌ಟ್ರ್ಯಾಕ್ಟ್	ಕಡೂರು	ವೀರಶೈವರು
೨೬. ಶ್ರೀಮತಿ ಹೇಮ ಬ್ಯಾಹಟ್ಟಿ	೫೦	ತಾಹಸೀಲ್ದಾದರು	ಬಾಗಲಕೋಟೆ	ವೀರಶೈವರು
೨೭. ಜ್ಯೋತಿ ಅನಂತ್	೩೫	ಟಿ.ವಿ. ಸೇಲ್ಸ್	ಬೀರೂರು	ವೀರಶೈವರು
೨೮. ಶ್ರೀಮತಿ ಶಾರದಮ್ಮ ವೀರಭದ್ರರಾದ್ಯ	೬೫	ಹಿಂದಿ ಮಾಸ್ಟರ್	ಬೀರೂರು	ವೀರಶೈವರು
೨೯. ಶಾರದ	೪೫		ಹೊಸದುರ್ಗ	ಲಿಂಗಾಯತ



ನಾಮಕರಣ



ಋತುಮತಿ

ನಿಶ್ಚಿತಾರ್ಥ





ಮಧುಮಗ
(ವರ)

ಗಂಗಮ್ಮನ ಪೂಜೆ



ಬಳೆ ತೊಡಿಸುವ ಶಾಸ್ತ್ರ



ಮಾಂಗಲ್ಯಧಾರಣೆ



ಶ್ರೀಮಂತ್ರಕಾರ್ಯ



ಶ್ರೀ ಪ್ರಭು ಚೇತನ ಸ್ವಾಮಿಗಳು



ಪ್ರಕಾಶಕರ ಶ್ರೀಮಂತ ದಂಪತಿಗಳು



ಶ್ರೀ. [illegible]

